ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

# ಎಚ್.ವಿ.ಕೌಜಲಗಿ



ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

# ಎಚ್.ವಿ.ಕೌಜಲಗಿ

ಡಾ. ಡಿ.ಎಸ್. ಜಯಪ್ಪಗೌಡ

ಪ್ರಕಟಣೆ
ಕರ್ನಾಟಕ ವಿಧಾನ ಮಂಡಲದ ಗ್ರಂಥಾಲಯ ಸಮಿತಿ
ವಿಧಾನಸೌಧ, ಬೆಂಗಳೂರು

**H.V. KOUJALAGI**
Eminent Parlimentarian Series
Written by **DR. D.S. JAYAPPA GOWDA**
Kuvempu Kannada Adhyana Samsathe.
Manasa Gangothri. Mysore-560 006
**Published** by
Karnataka Legislature Library Committee
Vidhana Soudha, Bangalore-560001.
Page: 192 + x Price: 20-00 Rs.
© **Chairman,** Karnataka Legislative Council
& **Speaker,** Karnataka Legislative Assembly
First Edition: 2008 Copies: 2000
**Printed & Designed by**
Government Press, Bangalore.

**ಎಚ್.ವಿ. ಕೌಜಲಗಿ**
ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ
**ಲೇಖಕರು: ಡಾ. ಡಿ.ಎಸ್. ಜಯಪ್ಪಗೌಡ**
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸಗಂಗೋತ್ರಿ, ಮೈಸೂರು-570 006
**ಪ್ರಕಾಶನ**
**ಗ್ರಂಥಾಲಯ ಸಮಿತಿ**
ಕರ್ನಾಟಕ ವಿಧಾನ ಮಂಡಲ
ವಿಧಾನಸೌಧ, ಬೆಂಗಳೂರು-560 001.
ಪುಟ: 192 + x ಬೆಲೆ: 20-00 ರೂ.
© **ಸಭಾಪತಿಗಳು:** ಕರ್ನಾಟಕ ವಿಧಾನ ಪರಿಷತ್
**ಸಭಾಧ್ಯಕ್ಷರು:** ಕರ್ನಾಟಕ ವಿಧಾನ ಸಭೆ
ಮೊದಲ ಮುದ್ರಣ: 2008 ಪ್ರತಿಗಳು: 2,000
**ಮುದ್ರಣ ಮತ್ತು ವಿನ್ಯಾಸ**
ಸರ್ಕಾರಿ ಮುದ್ರಣಾಲಯ, ಬೆಂಗಳೂರು-560 001.

# ವಿಧಾನ ಮಂಡಲ ಗ್ರಂಥಾಲಯ ಸಮಿತಿ
# 2008–2009

ಅಧ್ಯಕ್ಷರು

**ಶ್ರೀ ವೀರಣ್ಣ ಮತ್ತಿಕಟ್ಟಿ**

ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರು

**ಶ್ರೀ ಜಗದೀಶ ಶೆಟ್ಟರ್**

ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ

**ಶ್ರೀ ಎಂ. ನಾರಾಯಣಸ್ವಾಮಿ**

ವಿಧಾನಸಭಾ ಸದಸ್ಯರು ಹಾಗೂ ಉಪ ಸಮಿತಿಯ ಅಧ್ಯಕ್ಷರು

**ಶ್ರೀ ಕೆ. ಲಕ್ಷ್ಮೀನಾರಾಯಣ**

ವಿಧಾನಸಭಾ ಸದಸ್ಯರು

**ಶ್ರೀ ಎಸ್.ವಿ. ರಾಮಚಂದ್ರ**

ವಿಧಾನಸಭಾ ಸದಸ್ಯರು

**ಶ್ರೀ ಎನ್.ಎ. ಹ್ಯಾರೀಸ್**

ವಿಧಾನಸಭಾ ಸದಸ್ಯರು

**ಶ್ರೀ ಹೆಚ್.ಎಸ್. ಪ್ರಕಾಶ್**

ವಿಧಾನಸಭಾ ಸದಸ್ಯರು

**ಡಾ॥ ಚಂದ್ರಶೇಖರ ಬಿ.ಕಂಬಾರ**

ವಿಧಾನ ಪರಿಷತ್ ಸದಸ್ಯರು

**ಶ್ರೀ ಮುಖ್ಯಮಂತ್ರಿ ಚಂದ್ರು**

ವಿಧಾನ ಪರಿಷತ್ ಸದಸ್ಯರು

**ಡಾ॥ ಶ್ರೀನಾಥ್**

ವಿಧಾನ ಪರಿಷತ್ ಸದಸ್ಯರು

# ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

## ಅಧಿಕಾರಿ – ಸಂಪಾದಕ ವರ್ಗ

## ಕರ್ನಾಟಕ ವಿಧಾನಸಭೆ ಸಚಿವಾಲಯ

| | |
|---|---|
| ಎಸ್.ಬಿ. ಪಾಟೀಲ್ | ಕಾರ್ಯದರ್ಶಿ |
| ಟಿ.ಎನ್. ಧ್ರುವಕುಮಾರ್ | ಅಪರ ಕಾರ್ಯದರ್ಶಿ (ಪ್ರ) |
| ಎಂ. ಗುರುರಾಜ | ಉಪ ಕಾರ್ಯದರ್ಶಿ |
| ಮುನೀರುನ್ನಿಸಾ | ಅಧೀನ ಕಾರ್ಯದರ್ಶಿ (ಪ್ರ) |

## ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

| | |
|---|---|
| ವಿ. ಶ್ರೀಶ್ | ಕಾರ್ಯದರ್ಶಿ |
| ಟಿ. ಕೃಷ್ಣೆಗೌಡ | ಅಪರ ಕಾರ್ಯದರ್ಶಿ |

# ಮುನ್ನುಡಿ

22 ನವೆಂಬರ್ 2008

ಸುವರ್ಣ ಮಹೋತ್ಸವದ ಆಚರಣೆಯ ಅಂಗವಾಗಿ ಈ ದೇಶಕ್ಕಾಗಿ ದುಡಿದ, ಅಗ್ರಮಾನ್ಯ ಸಂಸದೀಯ ಪಟುಗಳಾಗಿ ಕೊಡುಗೆಯನ್ನು ನೀಡಿದ ಮಹನೀಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಪ್ರತಿಭಾವಂತ ಸಂಸದೀಯ ಪಟುಗಳ ಬಗ್ಗೆ ಅನೇಕ ಹೊತ್ತಿಗೆಗಳನ್ನು ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ ಹೊರತಂದಿರುತ್ತಾರೆ. ಅವುಗಳಲ್ಲಿ ಡಾ|| ರಾಮಮನೋಹರ ಲೋಹಿಯಾ, ಡಾ|| ಬಿ.ಆರ್. ಅಂಬೇಡ್ಕರ್, ಡಾ|| ಶಾಂಪ್ರಸಾದ್ ಮುಖರ್ಜಿ, ಡಾ|| ರಾಜೇಂದ್ರ ಪ್ರಸಾದ್ ಮೊದಲಾದ ಗಣ್ಯರ ಪುಸ್ತಕಗಳನ್ನು ನಾವು ಕನ್ನಡದಲ್ಲಿ ಭಾಷಾಂತರಿಸಿ ಹೊರತಂದಿರುವ ಸಂತೋಷಕರ ವಿಷಯವನ್ನು ಉಲ್ಲೇಖಿಸಬಯಸುತ್ತೇವೆ.

ರಾಜ್ಯದ ಸಂಸದೀಯ ಪಟುಗಳಾದ ಅನೇಕ ಮಹನೀಯರನ್ನು ಕುರಿತು ಹೊತ್ತಿಗೆಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆಯನ್ನು ಕರ್ನಾಟಕ ವಿಧಾನ ಮಂಡಲವು ಹಮ್ಮಿಕೊಂಡಿದ್ದು, ವಿಧಾನ ಮಂಡಲದ ಗ್ರಂಥಾಲಯ ಸಮಿತಿಯು ಈಗಾಗಲೇ ಪ್ರಕಟಿಸುತ್ತಿದೆ. ಈ ಉಪ ಸಮಿತಿಯು ಕಾರ್ಯಪ್ರವೃತ್ತವಾಗಿ ರಾಜ್ಯದ ಲೇಖಕರ, ವಿದ್ವಾಂಸರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ನಮ್ಮ ನಾಡಿನ ಪ್ರಗತಿಪರ ಚಿಂತಕರು, ರಾಜಕೀಯ ಮುತ್ಸದ್ದಿಗಳ ಆಶಯಗಳನ್ನು ದಾಖಲಿಸಿ ಈ ಮೂಲಕ ಅವರ ಜೀವನ ಚಿತ್ರಣವನ್ನು ಪುಸ್ತಕ ರೂಪದಲ್ಲಿ ತರುತ್ತಿದೆ.

ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಈಗಾಗಲೇ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಶಾಂತವೇರಿ ಗೋಪಾಲಗೌಡ, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಕೆ.ಸಿ. ರೆಡ್ಡಿ, ಶ್ರೀ ಡಿ. ದೇವರಾಜ ಅರಸು, ಶ್ರೀ ಜೆ.ಹೆಚ್. ಪಟೇಲ್, ಶ್ರೀ ಟಿ.ಆರ್. ಶಾಮಣ್ಣ, ಶ್ರೀ ಎಸ್.ಡಿ. ಗಾಂವಕರ್, ಶ್ರೀಮತಿ ಬಿ.ಎಲ್. ಸುಬ್ಬಮ್ಮ, ಡಾ॥ ಲಂಕಾ ಸುಂದರಂ, ಸರದಾರ ಶರಣಗೌಡ ಇನಾಂದಾರ್, ಕೆ.ಹೆಚ್. ರಂಗನಾಥ್ ಮತ್ತಿತರ ಹಲವು ಗಣ್ಯರ ಬಗೆಗಿನ ಪುಸ್ತಕಗಳನ್ನು ಹೊರತರಲಾಗಿದೆ.

ಶ್ರೀ **ಡಾ. ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ ರಾಜ್ಯದ ಹಿರಿಯ ಸಂಸದೀಯ ಪಟುವಾಗಿದ್ದ **ಎಚ್.ವಿ. ಕೌಜಲಗಿ** ಅವರ ಬಗೆಗಿನ ಈ ಪುಸ್ತಕವನ್ನು ತಮ್ಮ ಮುಂದಿಡಲು ಹೆಮ್ಮೆಯೆನಿಸುತ್ತದೆ. ಇವರ ಸದನದ ಭಾಷಣಗಳು ಸಾಮಾಜಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ನಾಡಿನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಶಯಗಳನ್ನು ಬಿಂಬಿಸುತ್ತವೆ.

ಈ ಪುಸ್ತಕವನ್ನು ರಚಿಸಿದ ಲೇಖಕರಿಗೆ ಹಾಗೂ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೆ ಹಾಗೂ ಉಪ ಸಮಿತಿಯ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳ ಬಗೆಗಿನ ಈ ಪುಸ್ತಕವು ಮಾನ್ಯ ಸದಸ್ಯರುಗಳಿಗೆ, ಸಂಶೋಧಕರಿಗೆ ಹಾಗೂ ಸಾಮಾನ್ಯ ಓದುಗರಿಗೆ ಸಂಸದೀಯ ವಿಷಯಗಳಲ್ಲಿ ಹೆಚ್ಚಿನ ಅನುಭವ ನೀಡುತ್ತದೆ ಮತ್ತು ಉಪಯುಕ್ತವಾಗುತ್ತದೆಂದು ಭಾವಿಸುತ್ತೇವೆ.

**ವೀರಣ್ಣ ಮತ್ತಿಕಟ್ಟಿ**
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

**ಜಗದೀಶ್ ಶೆಟ್ಟರ್**
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ

# ಲೇಖಕರ ಮಾತು

ಕರ್ನಾಟಕ ರಾಜ್ಯದ ವಿಧಾನ ಸಭೆ ಸಚಿವಾಲಯವು ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳನ್ನು ಕುರಿತು ಬದುಕು ಬರಹ ಮಾಲಿಕೆಯಲ್ಲಿ ಕಿರುಹೊತ್ತಗೆಗಳನ್ನು ಪ್ರಕಟಿಸುತ್ತಿರುವುದು ಶ್ಲಾಘನೀಯೂ ಉಪಯುಕ್ತವೂ ಆದ ಕಾರ್ಯವಾಗಿದೆ. ಈ ಯೋಜನೆಯಂತೆ ಶ್ರಿ ಎಚ್.ವಿ. ಕೌಜಲಗಿಯವರನ್ನು ಕುರಿತು ಕಿರುಹೊತ್ತಗೆ ರಚಿಸಿಕೊಡುವ ಹೊಣೆಯು ನನ್ನ ಪಾಲಿಗೆ ಬಂದಿತು.

ಶ್ರೀ ಎಚ್.ವಿ. ಕೌಜಲಗಿಯವರು ಮುಂಬಯಿ ಕರ್ನಾಟಕ ಭಾಗದ ಪ್ರತಿಭಾವಂತ ಸಂಸದೀಯ ಪಟುಗಳಲ್ಲೊಬ್ಬರು. ಅವರು ಸ್ಥಳೀಯ ಸಂಸ್ಥೆಗಳಿಂದ ಹಿಡಿದು ವಿಧಾನಸಭೆ, ಲೋಕಸಭೆಗಳವರೆಗೂ ಪ್ರತಿನಿಧಿಸಿ ಅಪಾರವಾದ ಸಂಸದೀಯ ಅನುಭವ ಮತ್ತು ಜ್ಞಾನ ಸಂಪತ್ತನ್ನು ಪಡೆದಿದ್ದರು. ಕೌಜಲಗಿಯವರು ಕಾನೂನು ತಜ್ಞರಾಗಿದ್ದುದಲ್ಲದೆ ಆಡಳಿತದ ಎಲ್ಲ ಹಂತಗಳಲ್ಲೂ ಜನಪ್ರತಿನಿಧಿಯಾಗಿ ವಾಸ್ತವ ಅನುಭವ ಸಂಪನ್ನರಾಗಿದ್ದು ಅವರು ವಿಧಾನಸಭೆಯಲ್ಲಿ ಶಾಸಕರಾಗಿ ಆಡಿದ ಮಾತುಗಳು ಮತ್ತು ಸಚಿವರಾಗಿ ಮಾಡಿದ ಕೆಲಸಗಳು ಹೆಚ್ಚು ಶ್ರೇಷ್ಠತರವಾಗಿದ್ದುದು ಕಂಡುಬರುತ್ತದೆ. ಗಾಂಧಿಯುಗದ ಸೃಷ್ಟಿಯಾದ ಕೌಜಲಗಿಯವರು ವ್ಯಕ್ತಿಗತವಾಗಿಯೂ ಪರಿಶುದ್ಧವಾದ ಚಿಂತನೆ, ಕ್ರಿಯೆ ಮತ್ತು ದೂರ ದೃಷ್ಟಿಯನ್ನಿಟ್ಟುಕೊಂಡಿದ್ದ ಅಪರೂಪದ ಮಹನೀಯರು. ಈ ಕಿರುಹೊತ್ತಗೆ ಶಾಸಕರಿಗೂ ಸಾಮಾನ್ಯ ಓದುಗರಿಗೂ ಉಪಯುಕ್ತವಾಗುತ್ತದೆಂದು ನನ್ನ ನಂಬುಗೆ.

ಈ ಹೊತ್ತಗೆ ರಚನೆಗೆ ಅನುವು ಮಾಡಿಕೊಟ್ಟ ಕರ್ನಾಟಕ ವಿಧಾನಮಂಡಲದ ಗ್ರಂಥಾಲಯ ಉಪಸಮಿತಿಗೆ ಹಾಗೂ ವಿಧಾನಸಭೆ ಸಚಿವಾಲಯದ ಎಲ್ಲ ಧಿಕಾರ ವರ್ಗದವರಿಗೆ ಹಾಗೂ ವಿಶೇಷವಾಗಿ ಅವರ ಕಾರ್ಯದರ್ಶಿಗಳಾದ ಶ್ರೀ ಎಸ್.ವಿ. ಪಾಟೀಲರಿಗೆ ಮತ್ತು ಉಪ ಕಾರ್ಯದರ್ಶಿಗಳಾದ ಶ್ರೀ ಬಸವರಾಜ್ ಅವರಿಗೂ ಈ ಕೃತಿ ರಚನೆಗೆ ಅಗತ್ಯವಾದ ಮಾಹಿತಿಗಳನ್ನು ನೀಡಿ ಸಹಕರಿಸಿದ ಎಚ್.ವಿ. ಕೌಜಲಗಿಯವರ ಪುತ್ರರೂ ಮಾಜಿ ಸಚಿವರೂ ಆದ ಶ್ರೀ ಶಿವಾನಂದ ಕೌಜಲಗಿಯವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಮೈಸೂರು
ದಿನಾಂಕ:4.1.2007

**ಡಾ. ಡಿ.ಎಸ್. ಜಯಪ್ಪಗೌಡ**
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-570 006

# ಪರಿವಿಡಿ


ಮುನ್ನುಡಿ V
ಲೇಖಕರ ಮಾತು VII

**ಭಾಗ – ೧**

**ಜೀವನ ಮತ್ತು ಸಾಧನೆ**

- ಮೊದಲಿಗೆ – 3

**ಭಾಗ – ೨**

**ಮುಂಬಯಿ ಪ್ರಾಂತ್ಯದ ಶಾಸಕಾಂಗ ಕಲಾಪ**

- ಆಯವ್ಯಯ 1954–55 – 31
- ಆಯವ್ಯಯ 1955–56 – 38
- ವ್ಯವಸಾಯ ಸುಧಾರಣೆ ಕುರಿತು – 42
- ಅನಕ್ಷರತೆ ನಿವಾರಣೆ – 46
- ಸಾಮಾನ್ಯ ಆಡಳಿತದ ಬಗ್ಗೆ – 49
- ಎರಡನೆ ಪಂಚವಾರ್ಷಿಕ ಯೋಜನೆ ಕರಡು ಮಸೂದೆ – 53
  ಸ್ಥಳೀಯ ಮಂಡಲಿ ಮತ್ತು ಗ್ರಾಮ ಪಂಚಾಯಿತಿಗಳ (ತಿದ್ದುಪಡಿ) ಮಸೂದೆ – 59
- ಕೃಷಿ ಇಲಾಖೆ ಬೇಡಿಕೆ ಕುರಿತು – 62
- ಶಿಕ್ಷಣದ ಅಭಿವೃದ್ಧಿ ಬಗ್ಗೆ – 66
- ರಾಜ್ಯಗಳ ಪುನರ್ವಿಂಗಡನಾ ಮಸೂದೆ ಕುರಿತ ಚರ್ಚೆ – 71

## ಭಾಗ – ೩

## ಕರ್ನಾಟಕ ರಾಜ್ಯದ ವಿಧಾನ ಸಭಾ ಕಲಾಪ


- ಪಶುವೈದ್ಯ ಶಾಲೆಗಳ ಸ್ಥಾಪನೆ ಕುರಿತು – 75
- ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಳಿಗಳ ಮಸೂದೆ – 78
- ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ – 92
- ಮುನ್ಸಿಫರ ನೇಮಕ – 94
- ಮುಂಬಯಿ ಕರ್ನಾಟಕದ ಜಿಲ್ಲೆಗಳಿಗೆ ಶಾಲಾ ಶಿಕ್ಷಕರ ನೇಮಕ 1961 – 107
- ಪಾಳು ಜಮೀನನ್ನು ಸಾಗುವಳಿಗೆ ಬಳಸುವ ಬಗ್ಗೆ – 115
- ರಿಟ್ ಅರ್ಜಿಗಳ ಕುರಿತು – 118
- ಖಾತಾ ಪುನರ್ ಊರ್ಜಿತ ಪ್ರಕರಣಗಳು – 121
- ಕೊಡಗಿನ ತಲಕಾವೇರಿ ಕೊಳದ ಬಗ್ಗೆ – 123
- ನೀರಾವರಿ ಬಾವಿಗಳು – 125
- ಮೋಜಣಿದಾರರ ನೇಮಕ ಕುರಿತು – 126
- ಭೂ ಕಂದಾಯ ರದ್ಧತಿ – 132
- ಬಾಡಿಗೆ ಮುಂಗಡ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಡುವುದು – 135
- ಭೂ ಮಾಲೀಕರ ಸಮಾವೇಶ ಕುರಿತು – 136
- ಗ್ರಾಮಲೆಕ್ಕಿಗರು ಮತ್ತು ಪಂಚಾಯತಿ ಕಾರ್ಯದರ್ಶಿಗಳ ನೇಮಕ – 140
- ಬೂಕಿನ ಕೆರೆ ಭೂ ಸ್ವಾಧೀನ – 145

- ಭೂ ಸುಧಾರಣಾ ನ್ಯಾಯಾಧಿಕರಣ ಕುರಿತು – 147
- ಭೂರಹಿತ ರೈತರಿಗೆ ವಿತರಿಸಲು ಲಭ್ಯವಿರುವ ಭೂಮಿ – 152
- ಭೂ ಸುಧಾರಣಾ ಅಧಿನಿಯಮ ಅನುಷ್ಠಾನ ಕುರಿತು ಚರ್ಚೆ – 162
- ಕೋಲಾರ ಜಿಲ್ಲೆಯಲ್ಲಿ ಭೂಕಂದಾಯ ಮಾಫಿ – 175
- ಭೂ ಕಂದಾಯ ನಿಗದಿ ಕುರಿತು – 176

ಭಾಗ – ೪

- ಎಚ್.ವಿ. ಕೌಜಲಗಿರವರ ಸಂಕ್ಷಿಪ್ತ ಛಾಯಾಚಿತ್ರಗಳು – 185

ಭಾಗ-1

# ಎಚ್.ವಿ. ಕೌಜಲಗಿ

## ಜೀವನ ಮತ್ತು ಸಾಧನೆ

**ಮೊದಲಿಗೆ:**

ಎಚ್.ವಿ. ಕೌಜಲಗಿಯವರ ಪೂರ್ಣ ಹೆಸರು ಹೇಮಪ್ಪ ವೀರಭದ್ರಪ್ಪ ಕೌಜಲಗಿ. ಬೆಳಗಾವಿ ಜಿಲ್ಲೆ ಇವರ ಕಾರ್ಯಕ್ಷೇತ್ರ. ಇವರು ವಕೀಲರಾಗಿ ವೃತ್ತಿ ಆರಂಭಿಸಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ, ಪುರುಸಭಾ ಅಧ್ಯಕ್ಷರಾಗಿ, ಶಾಸಕರಾಗಿ, ಲೋಕಸಭಾ ಸದಸ್ಯರಾಗಿ, ಸಚಿವರಾಗಿ, ಸಾಮಾಜಿಕ ಸೇವಾಕರ್ತರಾಗಿ ಮಾಡಿದ ಹಲವಾರು ಕಾರ್ಯಸಾಧನೆಗಳು ಅವರ ಹಿರಿದಾದ ವ್ಯಕ್ತಿತ್ವಕ್ಕೆ ಮೆರಗು ನೀಡಿವೆ. ಅವರು ಶಾಸನ ಸಭೆ ಮತ್ತು ಲೋಕಸಭೆ ಕಲಾಪಗಳಲ್ಲಿ ಅವಿರತವಾದ ನಾಲ್ಕು ದಶಕಗಳು ಸಾರ್ವಜನಿಕ ಜೀವನ ರಾಜ್ಯ ಮತ್ತು ಸಮಾಜಕ್ಕೆ ಅಮೂಲ್ಯವಾದ ಕೊಡುಗೆಯಾಗಿದೆ.

ಉತ್ತರ ಕರ್ನಾಟಕ ಭಾಗದ ಇತರ ಕೆಲವು ಬೆಳಗಾವಿ ಜಿಲ್ಲೆ ಗೌಡ, ದೇಸಾಯಿ, ಜಹಗೀರುದಾರ, ಸುಬೇದಾರರ ವ್ಯವಸ್ಥೆ ಮೇಲೆ ನಿಂತಿದ್ದ ಆಡಳಿತದಿಂದ ಕೂಡಿದ್ದಿತು. ಈ ಜಮೀನ್ದಾರಿ ಹುದ್ದೆಗಳು ಗ್ರಾಮೀಣ ಪ್ರದೇಶದಲ್ಲಿ ಅತ್ಯಂತ ಪ್ರಭಾವಶಾಲೆಯಾಗಿದ್ದವು. ಅವರು ಸ್ಥಳೀಯರಾಗಿ ಸಣ್ಣ ಸರ್ಕಾರವನ್ನೇ ನಡೆಸುವಂತಹ ಕಂದಾಯ, ಪೋಲೀಸ್ ಮತ್ತು ನ್ಯಾಯವಿತರಣಾ ಅಧಿಕಾರಗಳನ್ನು ಹೊಂದಿದ್ದರು. ಇದರಿಂದಾಗಿ ಸುತ್ತಲ ಜನರಿಗೆ ಈ ದೇಸಾಯಿಗಳು ಸಣ್ಣ ದೊರೆಗಳಂತೆಯೇ ಕಾಣುತ್ತಿದ್ದರು. ಇಂತಹ ವ್ಯವಸ್ಥೆಯಲ್ಲಿ ಭಯದೊಂದಿಗೆ ಶಿಸ್ತು, ಸಂಯಮ, ವಿನಯ, ಶ್ರದ್ಧೆಗಳು ತಾವಾಗಿಯೇ ಮೈಗೂಡುತ್ತಿದ್ದವು. ಪೂರ್ವ ಪರಂಪರೆಗಳೂ ಹಾಗೆಯೇ ಮುಂದುವರಿಯುತ್ತಿದ್ದವು. ಈ ದೇಸಾಯಿಗಳಲ್ಲೂ ದೇಶಪ್ರೇಮಿಗಳೂ ಜನಾದಾರಣೀಯರೂ ಇರುತ್ತಿದ್ದರು. ಕೌಜಲಗಿಯಲ್ಲಿ ಇಂತಹ ಒಂದು ದೇಸಾಯಿ ಮನೆತನವಿದ್ದಿತು. ಈ ಮನೆತನದ ನಾರಾಯಣರಾವ್ ಮುತಾಲಿಕ ದೇಸಾಯಿಯವರು ಪ್ರಭಾವಶಾಲಿಗಳೂ ಸೇವಾಪರರೂ ಆಗಿದ್ದು ದೇಸಾಯಿಯವರ ಒಕ್ಕೂಟದ ಪರವಾದ ಕಾರ್ಯಭಾರಿಗಳಾಗಿದ್ದರು. ಅವರ ಕಾರ್ಯತತ್ಪರತೆ ಮತ್ತು ಸೇವಾ ಮನೋಭಾವವನ್ನು ಕಂಡು ಬ್ರಿಟಿಷ್ ಸರ್ಕಾರ ಅವರಿಗೆ "ರಾವ್ ಬಹದ್ದೂರ್" ಬಿರುದು ನೀಡಿದ್ದಿತು. ಅವರು ಊರಿನಲ್ಲಿ ಶಾಲೆಗಳನ್ನು ಕಟ್ಟಿಸಿ ಜನರಿಗೆ ವಿದ್ಯೆ ದೊರಕುವಂತೆ ಮಾಡಿದ ಮಹಾನುಭಾವರು. ಅಲ್ಲಿನ ಶಿಕ್ಷಕ ವೃಂದವೂ ಪ್ರತಿಭಾಪೂರ್ಣ ವ್ಯಕ್ತಿಗಳಿಂದ ಕೂಡಿದ್ದಿತು. ಈ ಪರಂಪರೆಯ ಊರಿಗೆ ಸೇರಿದವರು ಹೆಚ್.ವಿ. ಕೌಜಲಗಿಯವರ ಪೂರ್ವಿಕರು.

ಬೆಳಗಾವಿ ಜಿಲ್ಲೆ ಹೋರಾಟಗಾರರ, ಸಾಹಸಿಗಳ ಜಿಲ್ಲೆ. ಬೆಳವಾಡಿ ಮಲ್ಲಮ್ಮ, ಕಿತ್ತೂರು ಚೆನ್ನಮ್ಮರಂತಹ ಸ್ತ್ರೀಯರು ಶೌರ್ಯ, ಸ್ಥೈರ್ಯದ ಪ್ರತೀಕ. ಸಂಗೊಳ್ಳಿ ರಾಯಣ್ಣ ಮತ್ತು ಹಲವಾರು ದೇಸಾಯಿ ಮನೆತನದವರು ದೇಶಕ್ಕಾಗಿ, ಸ್ವಾಭಿಮಾನಕ್ಕಾಗಿ ಹೋರಾಡಿದ ನಾಡಿದು. ಗೋಕಾಕ ಪಟ್ಟಣ ಕೇವಲ ಒಂದು ತಾಲ್ಲೂಕು ಕೇಂದ್ರವಲ್ಲ. ಅದು ಆಧುನಿಕ ಕಾಲದ ಪ್ರಜ್ಞಾವಂತಿಕೆಗೂ ಕೇಂದ್ರವೆನಿಸಿದೆ. ಅಲ್ಲಿನ ಆಡಳಿತಗಾರರ ದೂರದೃಷ್ಟಿಯ ಫಲವಾಗಿ 1858 ರಷ್ಟು ಹಿಂದೆ ಅಲ್ಲಿ ಪ್ರಾಥಮಿಕ ಶಾಲೆ ಸ್ಥಾಪನೆಯಾಯಿತು. 1878ರಲ್ಲಿ ಇನ್ನೆರಡು ಶಾಲೆಗಳು ಪ್ರಾರಂಭವಾದವು. ಇದರಿಂದ ಇಪ್ಪತ್ತನೆ ಶತಮಾನದ ಪ್ರಾರಂಭದ ಹೊತ್ತಿಗೆ ಗೋಕಾಕದಲ್ಲಿ ಓದುಬರಹ ಬಲ್ಲಂತವರ ಸಂಖ್ಯೆ ಸಾಕಷ್ಟಿತ್ತು.

ಕೌಜಲಗಿ ಮನೆತನದ ಪೂರ್ವಜರಾದ ಹೇಮಪ್ಪನವರು ಕೌಜಲಗಿಯನ್ನು ಬಿಟ್ಟು ನೆರೆಯ ತಾಲ್ಲೂಕಿನ ಕೇಂದ್ರವಾಗಿದ್ದ ಸವದತ್ತಿಗೆ 1850ರ ಸುಮಾರಿಗೆ ಬಂದು ನೆಲಸಿದರು. ಸವದತ್ತಿಯಲ್ಲಿ ಗೋಕಾಕದಂತೆಯೇ ಸುಸಂಸ್ಕೃತಿಯಿಂದ ಕೂಡಿದ ಊರು. ಅಲ್ಲಿ ಅವರು ಕೃಷಿ ಮತ್ತು ವ್ಯಾಪಾರಗಳಲ್ಲಿ ತೊಡಗಿದರು. ಊರಿನಲ್ಲಿ ತಮ್ಮ ಸದ್ಗುಣಗಳಿಂದ ಗಣ್ಯ ಸ್ಥಾನ ಪಡೆದರು. ಇವರಿಗೆ ಇಬ್ಬರು ಗಂಡು ಮಕ್ಕಳು. ಹಿರಿಯವರು ವೀರಭದ್ರಪ್ಪ, ಕಿರಿಯವರು ಮಲ್ಲಪ್ಪ. ತಂದೆ ಹೇಮಪ್ಪನವರು ಈ ಮಕ್ಕಳಿಗೆ ಶಿಕ್ಷಣ, ಸಂಸ್ಕಾರ ಮತ್ತು ಧಾರ್ಮಿಕ ನಡವಳಿಕೆಗಳನ್ನು ಕಲಿಸಿದರು. ತಂದೆಯ ಆದರ್ಶವಾದ ಬದುಕು ಈ ಸಹೋದರರಿಗೆ ದಾರಿ ದೀಪವಾಯಿತು. ಈ ಕುಟುಂಬ ಊರ ಜನರ ಅಭಿಮಾನಕ್ಕೆ ಪ್ರೀತ್ಯಾದರಗಳಿಗೆ ಪಾತ್ರವಾಯಿತು. ಕಷ್ಟಸಾಧನೆ ಮತ್ತು ದುಡಿಮೆಯಿಂದ ಹೆಚ್ಚು ಹೊಲ ಮನೆ ವಿಸ್ತರಿಸಿ ಅನುಕೂಲಕ್ಕೆ ಬಂದರು. ಹಿರಿಯ ಮಗ ವೀರಭದ್ರಪ್ಪನವರು ಕೃಷಿಯಲ್ಲೇ ಹೆಚ್ಚು ಆಸಕ್ತಿ ತೋರಿ ಅಭಿವೃದ್ಧಿಗೆ ಬಂದರು. ಅವರ ತಮ್ಮ ಮಲ್ಲಪ್ಪನವರೂ ವ್ಯಾಪಾರಕ್ಕಿಂತ ಕೃಷಿಯನ್ನೇ ಹಿಡಿದು ಮುನ್ನಡೆದರು. ಮಲ್ಲಪ್ಪನವರು ಸವದತ್ತಿಯ ಸಮೀಪದ ಹೂಲಿ ಗ್ರಾಮದಲ್ಲಿ ನೆಲೆಸಿದರು. ಅಲ್ಲಿ ಅವರು ಜಮೀನು ಖರೀದಿಸಿ ಕೃಷಿಯಲ್ಲಿ ನಿಷ್ಠೆಯಿಂದ ತೊಡಗಿಸಿಕೊಂಡರು.

ವೀರಭದ್ರಪ್ಪನವರ ಧರ್ಮ ಪತ್ನಿ ಪತ್ರಮ್ಮನವರು. ಇವರು ಅಲ್ಪಸ್ವಲ್ಪ ವಿದ್ಯೆ ಕಲಿತಿದ್ದರು. ಈ ಕಾಯಕ ನಿಷ್ಠ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು. ಹೇಮಪ್ಪ ಮತ್ತು ಸಿದ್ರಾಮಪ್ಪ. ಒಬ್ಬಳು ಹೆಣ್ಣು ಮಗಳು ಗಂಗವ್ವ. ಹೇಮಪ್ಪ ಜನಿಸಿದ್ದು 1904 ರಲ್ಲಿ. ಸಿದ್ರಾಮಪ್ಪನವರ ಜನನ 1906. ಮೊದಲ ಗಂಡು ಮಗುವಿಗೆ ಅಜ್ಜನ ಹೆಸರನ್ನೇ ಇಟ್ಟಿದ್ದರು. ಅದು ಆಗ ಹಿರಿಯರನ್ನು ಸ್ಮರಿಸಿಕೊಳ್ಳುತ್ತಿದ್ದ ರೀತಿಯಾಗಿದ್ದಿತು. ಈ ಸಹೋದರರಿಗೆ ವಯಸ್ಸಿನ ಅಂತರ ಕಡಿಮೆ ಇದ್ದು ಅವಳಿಜವಳಿಗಳಂತೆಯೇ ಬೆಳೆದರು. ಈ ಇಬ್ಬರು ಸಹೋದರರನ್ನು ಹೇಮಣ್ಣ, ಸೀಮಣ್ಣರೆಂದೇ ಅಕ್ಕರೆಯಿಂದ ಮನೆಯವರು, ನೆರೆಹೊರೆಯವರೂ ಕರೆಯುತ್ತಿದ್ದರು.

ಆಗ ಬೆಳಗಾವಿ ಜಿಲ್ಲೆ ಮುಂಬಯಿ ಪ್ರಾಂತ್ಯದ ಭಾಗವಾಗಿತ್ತು. ಈ ಪ್ರಾಂತ್ಯದಲ್ಲಿ ವಿದ್ಯಾಭ್ಯಾಸಕ್ಕೆ ಅದರಲ್ಲೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಸರ್ಕಾರದಿಂದಲೂ, ಗುರುಮಠಗಳಿಂದಲೂ ಒದಗಿ ಬಂದಿತು. ಗೋಕಾಕವನ್ನೇ ಉದಾಹರಣೆಗೆ ತೆಗೆದುಕೊಂಡರೆ 1858ರಲ್ಲೇ ಅಲ್ಲಿ ಪ್ರಾಥಮಿಕ ಶಾಲೆ ಪ್ರಾರಂಭವಾಗಿತ್ತು. 1900 ರ ಕಾಲಕ್ಕೆ ಸವದತ್ತಿ ಇರಲಿ ಹೂಲಿಗೂ ಶಾಲೆ ಬಂದಿದ್ದಿತು. ಹೇಮಣ್ಣನವರನ್ನು 1910ರಲ್ಲಿ ತಂದೆತಾಯಿಗಳು ಶಾಲೆಗೆ ಸೇರಿಸಿದರು. ಆ ಕಾಲದಲ್ಲಿ ಪದವಿ ಪಡೆಯುವುದಕ್ಕಿಂತ ಹೆಚ್ಚಾಗಿ ಮಕ್ಕಳಿಗೆ ಓದುಬರಹವನ್ನು ಚೆನ್ನಾಗಿ ಕಲಿಸಬೇಕೆಂಬುದೇ ಶಿಕ್ಷಣದ ಗುರಿ. ಅದಕ್ಕಾಗಿ ಪ್ರಾಥಮಿಕ ಹಂತದಲ್ಲಿ ಗಟ್ಟಿಯಾದ ಶಿಕ್ಷಣಕ್ಕೆ ಬುನಾದಿ ಹಾಕಬೇಕೆಂದು ಗುರುಗಳು ಮಕ್ಕಳಿಗೆ ಕಲಿಸಿ, ತಿದ್ದಿತೀಡಿ ಸರಿಪಡಿಸುತ್ತಿದ್ದರು. ಬುದ್ಧಿವಂತ ವಿದ್ಯಾರ್ಥಿ ಯಾರು? ಓದಿನಲ್ಲಿ ಮಂದಮತಿ ಯಾರು? ಇವರಿಗೆ ಹೇಗೆ ಪ್ರೋತ್ಸಾಹ ಕೊಡಬೇಕೆಂದು ನಿರ್ಧರಿಸುತ್ತಿದ್ದರು. ಅನೇಕ ವೇಳೆ ಈ ಶಿಕ್ಷಣಕ್ಕಾಗಿ ಕೊಡುತ್ತಿದ್ದ ಶಿಕ್ಷೆಯು ಅಸಹನೀಯವಾಗುತ್ತಿದ್ದದ್ದೂ ಉಂಟು. ಅಕ್ಷರಗಳನ್ನು ಮರಳಿನ ಮೇಲೆ ತಿದ್ದಿಸುವುದು, ಕಾಪಿ ಬರೆಸುವುದು, ಕಾಗುಣಿತ ಕಲಿಸುವುದು, ಅಮರಕೋಶ

ಕಂಠಪಾಠ ಮಾಡಿಸುವುದು ಇವುಗಳಿಗೆ ಆದ್ಯತೆ ಇರುತ್ತಿತ್ತು. ಭಾಷೆ, ವ್ಯಾಕರಣ ಮತ್ತು ಲೆಕ್ಕಗಳ ಬಗ್ಗೆ ಹೆಚ್ಚಿನ ಜ್ಞಾನ ಕೊಡುವುದು ಮುಖ್ಯವಾಗಿಯೂ ವಿಷಯಗಳ ಪರಿಚಯ ಗೌಣವಾಗಿಯೂ ಇರುತ್ತಿದ್ದ ಕಾಲವದು.

ಈ ಶಿಕ್ಷಣ ಪದ್ಧತಿಯಲ್ಲಿ ಮುಂಬಯಿ ಪ್ರಾಂತದಲ್ಲಿ ಬುದ್ಧಿವಂತರಿಗೆ ಪ್ರೋತ್ಸಾಹ ಸಿಗುವ ಏರ್ಪಾಡು ಇದ್ದಿತು. ಅದರ ಪ್ರಕಾರ ಇಯತ್ತೆಗೆ ವಿದ್ಯಾರ್ಥಿಯನ್ನು ಸೇರಿಸುವ ಮೊದಲು ಅತಿ ಸಣ್ಣ ಬಿನ್ನ ಇಯತ್ತೆ ಮತ್ತು ದೊಡ್ಡ ಬಿನ್ನ ಇಯತ್ತೆ ಎಂಬ ಎರಡು ಇಯತ್ತೆಗಳನ್ನು ಪಾಸು ಮಾಡಬೇಕಾಗಿತ್ತು. ಇದರಿಂದಾಗಿ ಇವೆರಡು ತರಗತಿಗಳನ್ನು ಮುಗಿಸಿ ಒಂದನೆಯ ಇಯತ್ತೆ ಪಾಸು ಮಾಡಬೇಕಾದರೆ ಮೂರು ವರ್ಷಗಳ ಕಾಲಾವಧಿ ಹಿಡಿಯುತ್ತಿತ್ತು. ವಿದ್ಯಾರ್ಥಿ ಬುದ್ಧಿವಂತನಾದರೆ ಮಾತ್ರ ಅವನ ಪರಿಜ್ಞಾನವನ್ನು ಪರೀಕ್ಷಿಸಿ ನೇರವಾಗಿ ಒಂದನೆಯ ಇಯತ್ತೆಯ ಪರೀಕ್ಷೆಗೆ ಕೂಡಿಸುತ್ತಿದ್ದರು. ಇಂತಹ ಅವಕಾಶ ಹೇಮಣ್ಣನಿಗೆ ಬಂದಿತು. ಅವನ ಗ್ರಹಣ ಶಕ್ತಿ ಚುರುಕಾಗಿದ್ದು ಉಪಾಧ್ಯಾಯರು ಕೇಳಿದ್ದನ್ನು ಚಟಪಟನೆ ಉತ್ತರಿಸುತ್ತ ಬರೆಯುವುದರಲ್ಲಿ ತಪ್ಪುಗಳು ಕಡಿಮೆ ಇರುತ್ತಿದ್ದವು. ಹುಡುಗ ಜಾಣ್ಯ ಇದ್ದಾನೆ ಎಂದು ತಿಳಿದ ಗುರುಗಳು ಒಂದೇ ವರುಷದಲ್ಲಿ ಒಂದನೆಯ ಇಯತ್ತೆಯ ಪರೀಕ್ಷೆ ತೆಗೆದುಕೊಳ್ಳುವುದಕ್ಕೆ ಅನುಮತಿ ಕೊಟ್ಟರು. 1910 ರಲ್ಲಿ ಶಾಲೆಗೆ ಸೇರಿದ ಹೇಮಣ್ಣ ಒಂದೇ ವರ್ಷದಲ್ಲಿ ಒಂದನೆಯ ಇಯತ್ತೆ ಪಾಸು ಮಾಡಿ ಜಾಣ ವಿದ್ಯಾರ್ಥಿ ಎನಿಸಿಕೊಂಡ. ಹೇಮಣ್ಣನವರದು ತುಂಬಾ ಗಂಭೀರ ಸ್ವಭಾವ. ಪಠ್ಯೇತರ ಚುಟುವಟಿಕೆಗಳಿಗಿಂತ ಓದುಬರಹದಲ್ಲಿ ಮಗ್ನ. ಆಟ, ಹರಟೆ, ಇವೆಲ್ಲ ಸ್ವಲ್ಪ ದೂರ. ಇದರಿಂದ ಓದಿನಲ್ಲಿ ಏಕಾಗ್ರತೆ, ವಿಷಯ ಗ್ರಹಣ ಶಕ್ತಿಗಳು ಅವನಲ್ಲಿ ಬೆಳೆದವು.

ತನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮ ನೆಲೆಸಿದ್ದ ಹೂಲಿಯ ಪ್ರಾಥಮಿಕ ಶಾಲೆಯಲ್ಲಿ ಹೇಮಣ್ಣನ ವಿದ್ಯಾಭ್ಯಾಸ ಮುಂದುವರೆಯಿತು. ಅಲ್ಲಿ ಶ್ರೀ ಬಂಡೋಪಂತ ಅನಂತ ಸೂರೇಬಾನ ಎಂಬುವರು ಗುರುಗಳಾಗಿದ್ದರು. ಅವರು ವಿದ್ವಾಂಸರಾಗಿ, ಮುಖ್ಯೋಪಾಧ್ಯಾಯರಾಗಿ ವಿದ್ಯಾರ್ಥಿಗಳನ್ನು ತಿದ್ದುವ, ಸಜ್ಜನರನ್ನಾಗಿ ಪರಿವರ್ತಿಸುವ ಕೆಲಸವನ್ನು ಚೆನ್ನಾಗಿ ಮಾಡುತ್ತಿದ್ದರು. ಈ ಗುರುಗಳು ವಿದ್ಯಾರ್ಥಿಗಳ ನಡುವೆ ಬೆರೆತು, ಕಲಿಸಿ, ನಲಿಸಿ ಕಥೆಗಳನ್ನು ಹೇಳಿ ಸ್ಫೂರ್ತಿ ತುಂಬುತ್ತಿದ್ದರು. ಇಂತಹ ಪರಿಸರದಲ್ಲಿ ಹೇಮಣ್ಣನಿಗೆ ಒಳ್ಳೆಯ ಸ್ನೇಹಿತರೂ ಸಿಕ್ಕಿದರು. ಅವರಲ್ಲಿ ಶ್ರೀ ಗೋವಿಂದ ಭೀಮರೆಡ್ಡಿ ಸವದತ್ತಿಯವರು ಒಬ್ಬರು. ಇವರಿಬ್ಬರು ತಮ್ಮ ಇಳಿವಯಸ್ಸಿನವರೆಗೂ ಆಪ್ತ ಸ್ನೇಹಿತರಾಗಿಯೇ ಮುಂದುವರಿದಿದ್ದರು.

ಹೇಮಣ್ಣನವರ ಚಿಕ್ಕಮ್ಮ–ಚಿಕ್ಕಮ್ಮನವರಾದ ಮಲ್ಲಪ್ಪ ಗುರುಬಸಮ್ಮ ದಂಪತಿಗಳಿಗೆ ಮಕ್ಕಳಿರಲಿಲ್ಲ. ಅವರ ಅಣ್ಣ ವೀರಭದ್ರಣ್ಣನವರ ಮಕ್ಕಳಾದ ಹೇಮಣ್ಣ ಮತ್ತು ಸೀಮಣ್ಣ ಹಾಗೂ ಗಂಗಪ್ಪರನ್ನೇ ತಮ್ಮ ಮಕ್ಕಳೆಂದು ಭಾವಿಸಿ ಸಲಹುತ್ತಿದ್ದರು. ನಾಲ್ಕು ವರ್ಷದ ಬಾಲಕನಾಗಿದ್ದಾಗಲೇ ಹೇಮಣ್ಣ ಚಿಕ್ಕಪ್ಪ ಚಿಕ್ಕಮ್ಮನ ಮನೆ ಸೇರಿಕೊಂಡಿದ್ದನು. ಅದ್ದರಿಂದ ಅವರ ಮೇಲೆ ಈ ದಂಪತಿಗಳ ಪ್ರಭಾವ ಸಾಕಷ್ಟಾಗಿತ್ತು.

ಹೇಮಣ್ಣನ ಪೂರ್ವಜರ ಸ್ಥಳವಾದ ಕೌಜಲಗಿಗೆ ಸಂಬಂಧಿಸಿದ್ದ ಕೌಜಲಗಿ ಮಲ್ಲಪ್ಪನವರ ಮನೆ ತನ್ನ ಮನೆಯ ಹತ್ತಿರದಲ್ಲೇ ಇತ್ತು. ತಮ್ಮ ಗೆಳೆಯರೊಂದಿಗೆ ಅವರ ಮನೆಗೆ ನುಸುಳಿ

ಕುಣೆದುಕುಪ್ಪಳಿಸಿ ಅವರ ಪತ್ನಿ ಶ್ರೀಮತಿ ಗುರಬಸಮ್ಮನವರು ಕೊಟ್ಟ ಕೈತಿನಿಸು ತಿಂದು ಹೊರಬೀಳುವುದು ಅವರ ಪರಿಪಾಠವಾಗಿತ್ತು. ಈ ಮನೆಗೆ ಸ್ವಲ್ಪ ದೂರದಲ್ಲೇ ಸಾಂಬಯ್ಯನ ಮಠದ ಪೂಜ್ಯ ಸಂಗಮೇಶ ಅಜ್ಜನವರ ವಾಸ್ತವ್ಯವಿತ್ತು. ಈ ಅಜ್ಜನವರ ಮಠಕ್ಕೆ ತನ್ನ ಚಿಕ್ಕಮ್ಮನವರೊಡಗೂಡಿ ಹೇಮಣ್ಣನು ಆಗಾಗ ಹೋಗುತ್ತಿದ್ದು, ಇವನೊಂದಿಗೆ ಗೆಳೆಯ ಗೋವಿಂದರೆಡ್ಡಿಯೂ ಇರುತ್ತಿದ್ದುದ್ದುಂಟು. ಇಂತಹ ಒಂದು ನಿರ್ಮಲವಾದ ಗುರುಹಿರಿಯರ ಮಠಮಾನ್ಯಗಳ ಪರಿಸರದಲ್ಲಿ ಅವರು ಬೆಳೆದದ್ದು ಅವರಿಗೆ ಎಳೆತನದಲ್ಲೇ ಒಳ್ಳೆಯ ಸಾತ್ವಿಕ ಸಂಸ್ಕಾರ ದೊರೆಯಲು ಅವಕಾಶವಾಯಿತು.

ಹೂಲಿಯಲ್ಲಿ ಕೆಲವು ವರ್ಷಗಳ ಕಾಲ ಕಲಿತ ಹೇಮಣ್ಣನಿಗೆ ಮತ್ತೆ ಸವದತ್ತಿಯಲ್ಲಿ ತಂದೆತಾಯಿಗಳ ಬಳಿ ಇದ್ದು ವ್ಯಾಸಂಗ ಮಾಡುವ ಅವಕಾಶ ಒದಗಿತು. ಒಂದನೆ ಇಯತ್ತೆಯನ್ನು ಒಂದೇ ವರ್ಷದ ಪರೀಕ್ಷೆಯ7ಲ್ಲಿ ಮುಗಿಸಿದ ಹೇಮಣ್ಣ ಮುಂದು ಏಳು ವರ್ಷಗಳ ಕಾಲ ಓದಿ ಮುಲ್ಕೆ ಪರೀಕ್ಷೆಗೆ ಕೂರಬೇಕಾಗಿತ್ತು. ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ವರ್ನಾಕ್ಯುಲರ್ ಫೈನಲ್ ಪರೀಕ್ಷೆ ಸರ್ಟಿಫಿಕೇಟ್ ಎಂದು ಕೊಡುತ್ತಿದ್ದರು. ಈ ಪರೀಕ್ಷೆಯಲ್ಲಿ ಪಾಸಾಗುತ್ತಿದ್ದವರೇ ವಿರಳ. ಈ ಪರೀಕ್ಷೆ ಮುಗಿಸಿದವರು ಶಿಕ್ಷಕರಾಗಿ ಉದ್ಯೋಗಕ್ಕೆ ಸೇರುವ ಅವಕಾಶವಿತ್ತು. ಹೇಮಣ್ಣ ಬುದ್ಧಿವಂತ ವಿದ್ಯಾರ್ಥಿಯಾಗಿದ್ದು 1918ರಲ್ಲಿ ಮುಲ್ಕಿ ಪರೀಕ್ಷೆ ತೆಗೆದುಕೊಂಡು ಮೊದಲನೇ ಪ್ರಯತ್ನದಲ್ಲೇ ಯಶಸ್ಸು ಸಾಧಿಸಿದ್ದು. ಇದು ಹೇಮಣ್ಣನ ಬಗ್ಗೆ ಅವನ ಕುಟುಂಬ ವರ್ಗದವರಲ್ಲಿ ಬಂಧುಗಳಲ್ಲಿ ಅಭಿಮಾನ ಮತ್ತು ಪ್ರೀತಿ ವಿಶ್ವಾಸಗಳನ್ನು ಹೆಚ್ಚಿಸಿತು. ಹೇಮಣ್ಣ ಈಗ ಹದಿನೈದರ ಹೊಸ್ತಿಲಿಗೆ ಬಂದು ನಿಂತ ಹದಿಹರೆಯದ ಯುವಕ. ಅಂದು ಮಾಧ್ಯಮಿಕ ಶಾಲೆ ಅಂದರೆ ಈಗಿನ ಪ್ರೌಢಶಾಲೆಯಲ್ಲಿ ಓದಬೇಕೆಂದರೆ ಜಿಲ್ಲಾ ಕೇಂದ್ರ ಬೆಳಗಾವಿಗೆ ಸಮೀಪದ ಧಾರವಾಡಕ್ಕೆ ಹೋಗಬೇಕಾಗಿತ್ತು. ಕುಟುಂಬದ ಎಲ್ಲ ಸದಸ್ಯರು ಕುಳಿತು ಚರ್ಚಿಸಿ ಚಿಂತಿಸಿ ಧಾರವಾಡದಲ್ಲಿ ಹೇಮಣ್ಣನ ವಿದ್ಯಾಭ್ಯಾಸ ಮುಂದುವರಿಸಬೇಕೆಂದು ತೀರ್ಮಾನಿಸಿದರು. ಅವರ ಚಿಕ್ಕಮ್ಮ ಗುರುಬಸಮ್ಮ ಹೇಮಣ್ಣನ ಯೋಗಕ್ಷೇಮ ನೋಡಿಕೊಳ್ಳಲು ಧಾರವಾಡದಲ್ಲಿ ನಿಲ್ಲುವುದೆಂದೂ ಗೊತ್ತಾಯಿತು. ತಮ್ಮ ಸೀಮಣ್ಣ ಉರುಫ್ ಸಿದ್ರಾಮಪ್ಪ ಹೊಲ ಮನೆ ನೋಡಿಕೊಳ್ಳಲು ಶಿಕ್ಷಣಕ್ಕೆ ವಿದಾಯ ಹೇಳಿದನು.

## ಧಾರವಾಡದ ಪರಿಸರದಲ್ಲಿ ಶಿಕ್ಷಣ

ಹೇಮಣ್ಣ ಕೌಜಲಗಿಯವರು ಧಾರವಾಡಕ್ಕೆ ಪ್ರೌಢಶಿಕ್ಷಣ ಕಲಿಯಲು ಬಂದದ್ದು ಅವರ ಜೀವನದಲ್ಲಿ ದೊಡ್ಡ ತಿರುವನ್ನು ನೀಡಿದ ಸಂದರ್ಭವಾಯಿತು. ಧಾರವಾಡ ಅಂದು ಆರ್ಥಿಕವಾಗಿ ಮುಂದುವರಿಯದಿದ್ದರೂ ಶಿಕ್ಷಣ, ಸಂಸ್ಕೃತಿ, ಸಾಹಿತ್ಯ, ಶ್ರೀಮಂತವಾದ ಊರಾಗಿದ್ದಿತು. ಅದು ಶಾಲಾ ಕಾಲೇಜುಗಳು, ಚಿತ್ರಕಲಾ ಮಂದಿರ, ಕರ್ನಾಟಕ ವಿದ್ಯಾವರ್ಧಕ ಸಂಘ, ವಿವಿಧ ವೀರಶೈವ ಮಠಗಳು, ಕರ್ನಾಟಕ ಏಕೀಕರಣ ಚಳವಳಿಯ ಕೇಂದ್ರಗಳು, ದ.ರಾ. ಬೇಂದ್ರೆ, ಶಂ.ಬಾ ಜೋಷಿಯವರಂತಹ ಸಾಹಿತಿಗಳು ಇದ್ದ ಊರು. ಶಾಲೆಯಿಂದ ಹಿಡಿದು ಕಾಲೇಜಿನವರೆಗೂ ಇಲ್ಲಿ

ಕಲಿಯಲು ಬಂದ ವಿದ್ಯಾರ್ಥಿಗಳ ಗುಂಪೇ ಎಲ್ಲೆಡೆ ಕಂಡುಬರುತ್ತಿತ್ತು. ಹೇಮಣ್ಣನವರ ಚಿಕ್ಕಮ್ಮ ಶ್ರೀಮತಿ ಗುರುಬಸಮ್ಮನವರ ಮಗನ ಉಸ್ತುವಾರಿಗೆ ಧಾರವಾಡದಲ್ಲೇ ನಿಂತರು. ಮುರುಘಾ ಮಠದ ಸಾನಿಧ್ಯ, ಶಾಲೆಯ ಸುಸಂಸ್ಕೃತ ಪರಿಸರ ಹೇಮಣ್ಣನ ವ್ಯಾಸಂಗಕ್ಕೆ ಪೂರಕವಾಯಿತು. ರಾಜಾ ಲಖಮನಗೌಡ ಸರ ದೇಸಾಯಿ ಮಾಧ್ಯಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುವುದು ದೊಡ್ಡ ವಿಚಾರವೇ ಆಗಿತ್ತು. ಕಾವ್ಯ, ಭಾವಗೀತೆ, ವಾಚನ; ಚರ್ಚಾಕೂಟದಲ್ಲಿ ಪಾಲ್ಗೊಳ್ಳುವ, ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶಗಳು ಹೇಮಣ್ಣನ ಅಂತಃಸತ್ವವನ್ನು ಉದ್ದೀಪಿಸಿದವು. ಇಲ್ಲಿ ಅವನ ವ್ಯಕ್ತಿತ್ವ ವಿಕಸನಕ್ಕೆ ಅವಕಾಶವಾಯಿತು.

ಅಂದು ಆ ಶಾಲೆಯನ್ನು ಮಾಧ್ಯಮಿಕ ಶಾಲೆಯೆಂದು ಕರೆದರೂ ವಾಸ್ತವಿಕವಾಗಿ ಅದು ಈಗಿನ ಪದವಿಪೂರ್ವ ಕಾಲೇಜಿನ ದರ್ಜೆಯದಾಗಿತ್ತು. ಅಲ್ಲಿ ಕಲಿಯುತ್ತಿದ್ದ ವಿಷಯಗಳು ಮತ್ತು ವಿದ್ಯಾರ್ಥಿಗಳ ವಯಸ್ಸು ಪ್ರೌಢವೇ ಆಗಿದ್ದವು. ಹೇಮಣ್ಣನ ಗ್ರಹಣಶಕ್ತಿ, ತೂಕದ ಮತ್ತು ಸಂದರ್ಭೋಚಿತ ಮಾತುಗಳು, ಗಂಭೀರ ವರ್ತನೆ ಇವೆಲ್ಲ ಆತನಲ್ಲಿ ಒಬ್ಬ ವಕೀಲನಾಗುವ ಗುಣಲಕ್ಷಣಗಳನ್ನು, ಅರ್ಹತೆಯನ್ನು ಆತನ ಗುರುಗಳು, ಹಿತಚಿಂತಕರು ಕಂಡರು. ಹೇಮಣ್ಣ ಮ್ಯಾಟ್ರಿಕುಲೇಷನ್ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾದ. ಈ ಪರೀಕ್ಷೆ ಆದ ಅನಂತರ ಸುಲಭವಾಗಿ ಅಧಿಕಾರದ ಹುದ್ದೆಗಳಿಗೆ ಸೇರುವ ಅವಕಾಶ ಆಗ ಇದ್ದಿತು. ಈಗಿನ ಸಿರಸ್ತದಾರ ಅಥವಾ ತಹಸೀಲ್ದಾರ್ ಹುದ್ದೆಗೂ ನೇಮಕವಾಗಬಹುದ್ದಿತ್ತು. ಆದರೆ ಹೇಮಣ್ಣ ಹೆಚ್ಚು ಕಲಿಯಬೇಕು ದೊಡ್ಡ ಪದವಿಗಳನ್ನು ಪಡೆಯಬೇಕೆಂದು ಹಂಬಲವುಳ್ಳವನಾಗಿದ್ದ.

ಮುಂದೆ ಧಾರವಾಡದಲ್ಲೇ ಇದ್ದ ಕರ್ನಾಟಕದ ಕಾಲೇಜಿಗೆ ಬಿ.ಎ. ಪದವಿ ಶಿಕ್ಷಣಕ್ಕೆ ಹೇಮಣ್ಣ ಸೇರಿದರು. ತಮ್ಮ ಜ್ಞಾನಾರ್ಜನೆಯ ದೃಢನಿಶ್ಚಯ, ಜೀವನದ ಗುರಿಯ ಬಗ್ಗೆ ಸ್ಪಷ್ಟ ಕಲ್ಪನೆ ಇದ್ದು ಹೇಮಣ್ಣನವರು ಯೋಗ್ಯ ಕಾಲೇಜು ವಿದ್ಯಾರ್ಥಿಯಾಗಿ ಕಾಲೇಜು ಶಿಕ್ಷಣದ ಅಧ್ಯಯನ ಮಾಡಿದರು. ಕುಟುಂಬದವರ ನಿತ್ಯ ಪ್ರೋತ್ಸಾಹ ಅವರ ವಿದ್ಯಾಭ್ಯಾಸಕ್ಕೆ ಭೀಮರಕ್ಷಣೆ ನೀಡಿತು. 1925ರಲ್ಲೇ ಬಿ.ಎ. ಪದವೀಧರರಾದರು. ಬಿ.ಎ. ಪದವಿ ಆ ಕಾಲದಲ್ಲಿ ಒಂದು ಗೌರವಾನ್ವಿತ ಪದವಿ. ಈ ಪದವಿ ಪಡೆದವರಿಗೆ ಸಮಾಜದಲ್ಲೂ ಸರ್ಕಾರದಲ್ಲೂ ಮನ್ನಣೆ ಇತ್ತು. ಉತ್ತಮ ಹುದ್ದೆಗಳಿಗೂ ನೇಮಕವಾಗುವ ಅವಕಾಶವಿತ್ತು. ಆದರೆ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವ ತನ್ನ ಜೀವನದ ದಾರಿಯ ಗೆರೆಯನ್ನು ಸ್ಪಷ್ಟವಾಗಿ ಮನಸ್ಸಿನಲ್ಲಿ ಮೂಡಿಸಿಕೊಂಡಿದ್ದ. 1925ರಲ್ಲಿ ಹೇಮಣ್ಣನವರು ಇನ್ನೂ ಎತ್ತರದ ಭವಿಷ್ಯವನ್ನು ಕಾಣುತ್ತ ಪದವಿ ಪಡೆದು ತನ್ನೂರು ಸವದತ್ತಿಗೆ ಮರಳಿದರು.

## ಜೀವನ ಪರೀಕ್ಷೆಯಲ್ಲಿ

ಪದವೀಧರ ಹೇಮಣ್ಣ ಕೌಜಲಗಿಯವರು ಊರಿಗೆ ಬಂದಾಗ ಕುಟುಂಬದವರ ಮತ್ತು ಊರಿನವರ ಸಂಭ್ರಮವೋ ಸಂಭ್ರಮ. ಅಂದು ಇಡೀ ಒಂದು ತಾಲ್ಲೂಕಿನಲ್ಲಿ ಒಬ್ಬಿಬ್ಬ ಪದವೀಧರರು ಸಿಗುವುದು ಕಷ್ಟವಿತ್ತು. ಅಂತಹದರಲ್ಲಿ ನಮ್ಮೂರ ಹೇಮಣ್ಣ ಪದವೀಧರನಾದ ಎಂಬುದು ಸವದತ್ತಿಯ

1757-2

ಹಿರಿಕಿರಿಯರೆಲ್ಲರಿಗೂ ಆನಂದದ ಸಂಗತಿ. ಈ ಸಂತೋಷ ಕ್ಷಣಗಳನ್ನು ಕಳೆಯುತ್ತ ಹೇಮಣ್ಣ ತಾನು ಮುಂದೆ ಕಾನೂನು ಪದವಿ ಶಿಕ್ಷಣ ಮುಗಿಸಿ ವಕೀಲನಾಗಬೇಕೆಂಬ ಕನಸನ್ನು ಮನದಲ್ಲಿ ಮೂಡಿಸಿಕೊಂಡು ಕಣ್ಣಲ್ಲಿ ತುಂಬಿಕೊಂಡು ಓಡಾಡುತ್ತಿದ್ದರು. ಅದಕ್ಕೆ ಅವರ ತಂದೆ ವೀರಭದ್ರಪ್ಪನವರಿಂದ ಹಿಡಿದು ಕುಟುಂಬದ ಎಲ್ಲರ ಬೆಂಬಲ, ಆಶೀರ್ವಾದಗಳು ಸದಾ ಇದ್ದವು. ಈ ಹೊತ್ತಿನಲ್ಲಿ ಹೇಮಣ್ಣನವರ ಜೀವನದ ಮೊದಲ ಪರೀಕ್ಷಾ ಕಾಲ ಬಂದೊದಗಿತು.

ಸವದತ್ತಿ ಈಗ ಒಂದು ತಾಲ್ಲೂಕಿನ ಕೇಂದ್ರವಾಗಿ ಬೆಳೆದ ಪಟ್ಟಣವಾಗಿದೆ. ಆದರೆ ಆಗ ಅದು ಕೇವಲ ಒಂದು ದೊಡ್ಡ ಗ್ರಾಮದ ಸ್ವರೂಪದಲ್ಲಿದ್ದಿತು. ಅಲ್ಲಿ ಒಂದು ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಅಥವಾ ಎ.ವ. ಸ್ಕೂಲ್ ಇದ್ದು ಅಲ್ಲಿನ ಮತ್ತು ಸುತ್ತಮುತ್ತಲ ಹಳ್ಳಿಗಳ ನೂರಾರು ಮಕ್ಕಳಿಗೆ ವಿದ್ಯೆ ಕಲಿಸುವ ಜ್ಞಾನದೇಗುಲವಾಗಿತ್ತು. ಈ ಶಾಲೆಯನ್ನು ಒಂದು ಸಮಿತಿ ನಡೆಸುತ್ತಿತ್ತು. ಬರಬರುತ್ತಾ ಆ ಶಾಲೆ ಮಂದಗತಿಯಲ್ಲಿ ಸಾಗಿ ಸರಿಯಾಗಿ ಪಾಠ ಪ್ರವಚನ ಮಾಡುವವರಿಲ್ಲದೆ ಮುಚ್ಚುವ ಹಂತಕ್ಕೆ ಬಂದಿತು. ಈ ಖಾಸಗಿ ಶಾಲೆಯನ್ನು ನಡೆಸುವುದು ಸ್ಥಳೀಯರ ಜವಾಬ್ದಾರಿಯಾಗಿದ್ದಿತು. ಮೊದಲೇ ಶಾಲೆಗಳೇ ಇಲ್ಲದಿದ್ದ ಪ್ರದೇಶದಲ್ಲಿ ಇಂತಹದೊಂದು ಶಾಲೆಯನ್ನು ಮುಚ್ಚಲು ಊರವರು ಸಿದ್ಧರಿರಲಿಲ್ಲ. ಅವರೆಲ್ಲ ಒಬ್ಬ ಸಮರ್ಥ ಮುಖ್ಯೋಪಾಧ್ಯಾಯರಿಗಾಗಿ ಅರಸತೊಡಗಿದರು.. ತಮ್ಮೂರಿನವರಾದ ಹೇಮಣ್ಣನವರು ಪ್ರಥಮ ಪದವೀಧರರಾಗಿ ನಮಗೆಲ್ಲ ಹೆಮ್ಮೆ ತಂದಿರುವುವಾಗಲೇ ಈ ಶಾಲೆಗೆ ಇಂತಹ ದುರವಸ್ಥೆ ಬರಬೇಕೆ? ಉಳಿದ ವಿದ್ಯಾರ್ಥಿಗಳು ಹೇಮಣ್ಣನಂತೆ ದೊಡ್ಡ ಕೀರ್ತಿಯನ್ನು ತರುವ ವಿದ್ಯೆ ಸಂಪಾದಿಸುವುದು ಹೇಗೆಂದು ಊರಿನ ಹಿರಿಯರು ಚಿಂತಿಸಿದರು. ಅವರೆಲ್ಲರಿಗೂ ಹೊಳೆದ ಆಶಾಕಿರಣವೆಂದರೆ ಹೇಮಣ್ಣನವರೇ. ಈ ಯುವ ಪದವೀಧರನೇ ನಮ್ಮ ಶಾಲೆಯನ್ನು ಸಂರಕ್ಷಿಸಿ ಮುನ್ನಡೆಸಲು ಸರಿಯಾದ ವ್ಯಕ್ತಿಯೆಂದು ಅವರೆಲ್ಲ ನಿರ್ಧರಿಸಿದರು.

ಅನಿರೀಕ್ಷಿತವಾಗಿ ಊರಿನ ಹಿರಿಕಿರಿಯರೆಲ್ಲ ವೀರಭದ್ರಪ್ಪನವರ ಮನೆಯತ್ತ ಹೆಜ್ಜೆಯಿಟ್ಟರು. ಅವರು ಅಲ್ಲಿಗೆ ಬಂದು ಹೇಮಣ್ಣನವರ ಸಾಧನೆಯನ್ನು ಹೊಗಳಿ ಅಭಿನಂದಿಸಿದರು. ಇದರಿಂದ ಕುಟುಂಬದವರೆಲ್ಲ ಸಂಕೋಚದಿಂದ ಮುದ್ದೆಯಾದರು. ತಾವು ಧನ್ಯರಾದಂತೆ ಭಾವಿಸಿದರು. ಬಂದವರಿಗೆ ಸತ್ಕಾರದಲ್ಲಿ ನಿರತರಾದರು. ಹೇಮಣ್ಣನಿಗೆ ಕೃತಜ್ಞತೆಯಿಂದ ಕಣ್ಣಾಲೆಗಳು ತುಂಬಿ ಬಂದವು. ಸಾರ್ಥಕ ಜೀವನಕ್ಕೆ ಇದು ಮೊದಲ ಮೆಟ್ಟಿಲು ಎಂಬ ಆನಂದ ಮತ್ತು ಮುಂದಿನ ಶಿಕ್ಷಣ ಮುಗಿಸಿ ಊರಿನವರನ್ನು ಇನ್ನೂ ಹೆಚ್ಚು ಸಂತೋಷಪಡಿಸಬೇಕೆಂಬ ಹೆಬ್ಬಯಕೆ ಅವರಲ್ಲಿ ಮೂಡಿತು. ಆದರೆ ಗ್ರಾಮಸ್ಥರು ಇಟ್ಟ ಹೊಸದೊಂದು ಪ್ರಸ್ತಾಪ ಹೇಮಣ್ಣನವರ ಪಾಲಿಗೆ ಅಗ್ನಿ ಪರೀಕ್ಷೆಯೇ ಆಯಿತು.

ತಮ್ಮ ಪಟ್ಟಣದ ಕೀರ್ತಿ ಎನಿಸಿಕೊಂಡ ಎ.ವಿ. ಶಾಲೆಯು ಮುಳುಗುವ ಹಂತದಲ್ಲಿರುವ ಸ್ಥಿತಿಯನ್ನು ಹೇಮಣ್ಣನವರ ತಂದೆ ವೀರಭದ್ರಪ್ಪನವರಿಗೆ ಹಿರಿಯರು ಬಿಡಿಬಿಡಿಸಿ ವಿವರಿಸಿದರು. ಈ ಶಾಲೆಯ ಏಳಿಗೆಗಾಗಿ ತಮ್ಮ ಪದವೀಧರ ಪುತ್ರ ಹೇಮಣ್ಣನವರ ಸಹಾಯ, ಸೇವೆ ಬೇಕಾಗಿದೆ

ಎಂದು ವಿನಂತಿಸಿದರು. ಈ ಸಂಗತಿಯನ್ನು ತಿಳಿದ ಹೇಮಣ್ಣನವರ ಕುಟುಂಬದವರು ಮೂಕವಿಸ್ಮಿತರಾದರು. ವೀರಭದ್ರಪ್ಪನವರಿಗೆ ಮನಸ್ಸಿನಲ್ಲೇ ತನ್ನ ಮಗನಿಂದ ಈ ಶಾಲೆಗೆ ಒಂದು ಬೆಳಕು ಬರಬೇಕೆಂದು ಆಸೆ ಇದ್ದಿತು. ಅವರು ತಾವೇ ತೀರ್ಮಾನ ಕೊಡುವ ಗೋಜಿಗೆ ಹೋಗದೆ ಮಗನ ಕಡೆ ನೋಡಿದರು. ಅಂದು ಅಪರೂಪವಾಗಿ ಸಾಧಿಸಬಹುದಾಗಿದ್ದ ಕಾನೂನು ಪದವಿ ಹೇಮಣ್ಣನವರನ್ನು ಕೈ ಬೀಸಿ ಕರೆಯಿತು. ಅದಕ್ಕೆ ಸೂಕ್ತವಾಗಿ ಅರ್ಹತೆ, ಪ್ರೋತ್ಸಾಹ ಎಲ್ಲ ಅವರಿಗಿದ್ದಿತು. ಇಂತಹ ಬದುಕು ಬಂಗಾರವಾಗುವ ಅವಕಾಶವನ್ನು ತೊರೆದು ಹಳ್ಳಿಯ ಒಂದು ಶಾಲೆಯ ಏಳಿಗೆಗಾಗಿ ಅವರು ನಿಲ್ಲಲು ಒತ್ತಾಯ ಬಂದಿತ್ತು. ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳುವ ಸರದಿ ಹೇಮಣ್ಣನವರದಾಯಿತು.

ಹೇಮಣ್ಣನವರು ಕ್ಷಣಕಾಲ ಯೋಚಿಸಿದರು. ಆ ಕಾಲದಲ್ಲಿ ಒಬ್ಬ ಮಗ, ಒಂದು ಕುಟುಂಬದ ಕಣ್ಣು; ಒಂದು ಕುಟುಮಬ ಒಂದು ಊರಿನ ಕಣ್ಣು ಎಂಬಂತಹ ಭಾವನೆಗಳಿದ್ದವು. ಕುಟುಂಬದಲ್ಲಿ ಹೇಗೆ ಅವ ಬೇರೆ ಇವ ಬೇರೆ ಎಂದು ಇರಲಿಲ್ಲವೋ ಹಾಗೆಯೇ ಊರಿನ ಹಿತಾಸಕ್ತಿಯ ವಿಷಯದಲ್ಲೂ ಒಮ್ಮತವಿದ್ದಾಗ ಎಲ್ಲ ಮನೆಯವರೂ ಅಣ್ಣತಮ್ಮಂದಿರಂತೆ ಒಂದೆಂಬ ಭಾವನೆ ತೋರುತ್ತಿದ್ದರು. ಜೊತೆಗೆ ಊರಿನ ಒಬ್ಬ ಹುಡುಗ ದೊಡ್ಡ ಓದನ್ನು ಓದಿರುವುದಕ್ಕೆ ಎಲ್ಲರೂ ಹೃತ್ಪೂರ್ವಕವಾಗಿ ಹೆಮ್ಮೆಪಡುವವರಾಗಿದ್ದರು. ಈ ಸನ್ನಿವೇಶದಲ್ಲಿ ತಾವು ಬೇರೆ ನಿರ್ಧಾರ ತೆಗೆದುಕೊಂಡರೆ ತನ್ನ ಪರಿವಾರದರಿಗೆಲ್ಲ ನಿರಾಸೆಯಾಗುತ್ತದೆಂಬ ಭಾವನೆ ಅವರಲ್ಲಿ ಮೂಡಿತು. ತನ್ನೂರಿನ ಹಿತ ಮೊದಲ ನನ್ನ ಸ್ವಂತ ಹಿತ ಆಮೇಲೆ ಎಂಬ ನಿರ್ಧಾರಕ್ಕೆ ಹೋಗಿ ಕಾನೂನು ಪದವಿ ಪಡೆಯುವುದು ದೊಡ್ಡ ಮಾತೇ ಆಗಿದ್ದಿತು. ಆ ಅದೃಷ್ಟವನ್ನು ಮುಂದೂಡುವುದು ಸಾಮಾನ್ಯರಿಗೆ ಸಾಧ್ಯವಿರಲಿಲ್ಲ. ಅದಕ್ಕೆ ದೊಡ್ಡ ತ್ಯಾಗ ಮನೋಭಾವವೇ ಬೇಕಿತ್ತು. ಅಂತಹ ತ್ಯಾಗದ ಮನಸ್ಸು ಹೇಮಣ್ಣನವರಿಗಿದ್ದು ಅವರು ಕಾನೂನು ವ್ಯಾಸಂಗವನ್ನು ಬದಿಗಿಟ್ಟು ಊರಿನ ಶಾಲೆಯನ್ನು ಮುನ್ನಡೆಸಲು ನಿಲ್ಲಲು ನಿರ್ಧರಿಸಿದರು. ಈ ನಿರ್ಧಾರವನ್ನು ಸಭೆಯ ಹಿರಿಯರಿಗೆ ತಿಳಿಸುತ್ತಿದ್ದಂತೆ ಅವರೆಲ್ಲರಿಗೂ ಆದ ಆನಂದ ಅಷ್ಟಿಷ್ಟಲ್ಲ. ಅವರು ಹೇಮಣ್ಣನನ್ನು ಬಾಯ್ತುಂಬ ಕೊಂಡಾಡುತ್ತ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಶಾಲೆಯ ಚಟುವಟಿಕೆಗಳ ಜವಾಬ್ದಾರಿಯನ್ನು ಹೊತ್ತ ಹೇಮಣ್ಣನವರು ಬೋಧನೆಯಲ್ಲಿ ತಲ್ಲೀನತೆ ಮತ್ತು ತೃಪ್ತಿಯನ್ನು ಕಂಡುಕೊಂಡರು. ಮಕ್ಕಳಿಗೆ ಹೆದರಿಸಿ, ಬೆದರಿಸಿ ಹೊಡೆದು ಪಾಠ ಹೇಳುವ ವಿಧಾನವನ್ನು ಕೈಬಿಟ್ಟು ಅವರಲ್ಲಿ ಉತ್ಸಾಹ ಆಸಕ್ತಿ ತುಂಬಿ ತಾವಾಗಿಯೇ ಕಲಿಯಲು ಪ್ರೇರೇಪಿಸಿದರು. ಅವರ ಎರಡು ವರ್ಷಗಳ ಶ್ರದ್ಧೆ ಮತ್ತು ದುಡಿಮೆಗಳ ಫಲವಾಗಿ ಶಾಲೆ ಮತ್ತೆ ಜೀವಕಳೆಯಿಂದ ಕಂಗೊಳಿಸತೊಡಗಿತು. ಶಾಲೆಗೂ ಹೇಮಣ್ಣನವರಿಗೂ ಒಳ್ಳೆಯ ಹೆಸರು ಬಂತು. ತಾವು ಕೊಟ್ಟ ಮಾತಿನಂತೆ ಎರಡು ವರ್ಷಗಳ ಅನಂತರ ಹೇಮಣ್ಣನವರು ಊರಿನ ಹಿರಿಯರ ಕೈಗೆ ಶಾಲೆಯನ್ನು ಒಪ್ಪಿಸಿ ಕಾನೂನು ಪದವಿ ಶಿಕ್ಷಣ ಪಡೆಯಲು ಸಿದ್ಧರಾದರು. ಊರಿನವರು ಹೇಮಣ್ಣರಿಗೆ ಸಕಲ ಯಶಸ್ಸುಗಳು ಸಿಗಲೆಂದು ಹಾರೈಸಿ ಆಶೀರ್ವದಿಸಿದರು.

ಆಗ ಮುಂಬಯಿ ಕರ್ನಾಟಕದ ಯಾವ ಜಿಲ್ಲೆಯಲ್ಲೂ ಕಾನೂನು ಕಾಲೇಜು ಇರಲಿಲ್ಲ. ಕಾನೂನು ಪದವಿ ಶಿಕ್ಷಣ ಪಡೆಯುವವರು ಪೂನಾದ ಫರ್ಗ್ಯುಸನ್ ಲಾ ಕಾಲೇಜಿಗೆ ಹೋಗಿ ಸೇರಬೇಕಾಗಿತ್ತು. 1928 ರಲ್ಲಿ ಪುಣೆಯ ಕಾನೂನು ಕಾಲೇಜು ಸೇರಿದ ಹೇಮಣ್ಣ ಕೌಜಲಗಿಯವರು ನಿಷ್ಠೆ, ಶ್ರಮ, ಶ್ರದ್ಧೆಗಳಿಂದ ವ್ಯಾಸಂಗ ಮಾಡಿದರು. ವಿದ್ವಾಂಸರಾದ ಗುರುಗಳ ಕೈಯಲ್ಲಿ ಕಲಿತು ಯಶಸ್ವಿಯಾಗಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಕಾನೂನು ಪದವೀಧರರಾದರು. ಹಿಡಿದ ಕೆಲಸವನ್ನು ಅರ್ಧದಲ್ಲಿ ನಾವು ಕೈಬಿಟ್ಟರೆ ಅದು ಪೂರ್ತಿಯಾಗಿ ನಮ್ಮನ್ನು ಕೈಬಿಡುತ್ತದೆ ಎಂಬ ಮಾತನ್ನು ಕೌಜಲಗಿಯವರು ಮುಂದೆ ಆಗಾಗ ಹೇಳುತ್ತಿದ್ದುದುಂಟು. ಅಂತಹ ಧ್ಯೇಯವಾಕ್ಯವನ್ನಿಟ್ಟುಕೊಂಡು ಅವರು ಈ ಉನ್ನತ ಶಿಕ್ಷಣವನ್ನು ಪೂರೈಸಿದರು.

ಕಾನೂನು ಪದವೀಧರರಾಗಿ ಸ್ವಂತ ಊರಿಗೆ ಹಿಂದಿರುಗಿದ ಹೇಮಣ್ಣನವರು ವಕೀಲಿ ನಡೆಸಬೇಕಾಗಿದ್ದದ್ದು ಪಕ್ಕದ ತಾಲ್ಲೂಕಿನ ಕೇಂದ್ರವಾಗಿದ್ದ ಬೈಲಹೊಂಗಲದಲ್ಲಿ. ಇದು ಸಂಪಗಾಂವ್ ತಾಲ್ಲೂಕಿನ ಆಡಳಿತ ಕೇಂದ್ರವಾಗಿತ್ತು. ಇದಕ್ಕೆ ಕಾರಣ ಸವದತ್ತಿ ತಾಲ್ಲೂಕು ಕೇಂದ್ರದಲ್ಲಿ ನ್ಯಾಯಾಲಯವಿರಲಿಲ್ಲ. ಈ ತಾಲ್ಲೂಕು ಸಹ ಬೈಲಹೊಂಗಲದ ನ್ಯಾಯಾಲಯದಲ್ಲಿ ವಕೀಲ ವೃತ್ತಿಗೆ ತಮ್ಮ ಹೆಸರನ್ನು ನೋಂದಾಯಿಸಿದರು. ಈ ರೀತಿ ವಕೀಲಿ ಸನ್ನದು ಪಡೆದವರಲ್ಲಿ ಸವದತ್ತಿ ತಾಲ್ಲೂಕಿನಲ್ಲಿ ಹೇಮಣ್ಣನವರೇ ಮೊದಲಿಗರು. ಆ ಹೆಗ್ಗಳಿಕೆ ಇವರಿಗೆ ಬಂದಿತು. ಮುಂದೆ ಅನೇಕ ಮೊದಲಿಗ ಸ್ಥಾನಗಳಲ್ಲಿ ನಿಲ್ಲುವುದಕ್ಕೆ ಇದು ಶುಭಾರಂಭವಾಯಿತು. ಹೇಮಣ್ಣ ವೀರಭದ್ರಪ್ಪ ಕೌಜಲಗಿಯವರು ಮುಂದೆ ಹೆಚ್.ವಿ. ಕೌಜಲಗಿ ಎಂದೇ ಪರಿಚಿತರಾದರು. ಅವರು ತಮ್ಮ ಸಹಜ ನಾಮವನ್ನು ಅಡಕವಾಗಿಸಿಕೊಂಡು ತಮ್ಮ ಹಿರಿಯರ ಸ್ಥಳವಾಗಿದ್ದ ಕೌಜಲಗಿಯ ಹೆಸರನ್ನು ಮುಂದಿಟ್ಟುಕೊಂಡರು. ಅವರಿಗೆ ಹೆಚ್.ವಿ. ಕೌಜಲಗಿ ಎಂಬ ಹೆಸರೇ ಅಧಿಕೃತವಾಗಿ ದಾಖಲಾಗತೊಡಗಿತು.

ಮೂವತ್ತರ ಚಿಕ್ಕ ವಯಸ್ಸಿನಲ್ಲೇ ಹೆಚ್.ವಿ. ಕೌಜಲಗಿಯವರು ದಕ್ಷರಾದ ವಕೀಲರೆಂಬುದನ್ನು ತೋರಿಸಿಕೊಟ್ಟರು. ಕಾನೂನು ಗ್ರಂಥಗಳನ್ನು ಅಭ್ಯಸಿಸಿ, ಸಣ್ಣ ದಾವಾಗಳಿಗೂ ಎಲ್ಲ ಗಮನಕೊಟ್ಟು ಸಿದ್ಧರಾಗಿ ನ್ಯಾಯಾಯಲಕ್ಕೆ ಬರುತ್ತಿದ್ದರು. ಅವರ ವಾದಸರಣಿ ಗಂಭೀರವಾಗಿಯೂ ನಿರ್ದುಷ್ಟವಾಗಿಯೂ ಇರುತ್ತಿದ್ದಿತು. ಕೌಜಲಗಿಯವರ ಕಾರ್ಯತತ್ಪರತೆ, ಕೇಸುಗಳನ್ನು ಗೆಲ್ಲುತ್ತಿದ್ದ ಪರಿ ನೋಡಿ ಜನರು ಅವರ ಕಛೇರಿಯಲ್ಲಿ ಸದಾ ಗಿಜಿಗುಡುತ್ತಿದ್ದರು. ಅತ್ಯಲ್ಪ ಕಾಲದಲ್ಲಿಯೇ ಅವರೊಬ್ಬ ವಕೀಲರ ಮತ್ತು ಊರಿನ ಸಾರ್ವಜನಿಕ ಮುಖಂಡರ ಸ್ನೇಹ ದೊರೆಯಿತು. ಶ್ರೀ ಬೆಳ್ಳುಳ್ಳಿ ಸಾಹುಕಾರರು, ಶ್ರೀ ಹಂಪನಗೌಡರ ಶಿವಪುತ್ರಪ್ಪನವರಂತಹ ದೊಡ್ಡವರು ಕೌಜಲಗಿಯವರನ್ನು ಅಭಿಮಾನದಿಂದ ಕಾಣುತ್ತಿದ್ದರು.

ಕೌಜಲಗಿಯವರಿಗೆ ವಯಸ್ಸು ಜವಾಬ್ದಾರಿ ಎರಡೂ ಬಂದಿದ್ದರಿಂದ ಅವರ ತಂದೆತಾಯಿಗಳು ಯೋಗ್ಯ ವಧುನೋಡಿ ವಿವಾಹ ಮಾಡುವ ಉತ್ಸಾಹ ತೋರಿದರು. ಅನೇಕ ಕಡೆಗಳಿಂದ ಬಂದಿದ್ದ

ಸಂಬಂಧಗಳನ್ನು ಪರಿಶೀಲಿಸಿ ಕೊನೆಗೆ ಲಕ್ಷ್ಮೇಶ್ವರದ "ಮಹಾಜಲೆಟ್ಟಿ ಮನೆತನ"ವೆಂಬ ಪ್ರಸಿದ್ಧ ಮನೆತನದ ಹೆಣ್ಣನ್ನು ತಮ್ಮ ಮನೆಗೆ ಸೊಸೆಯಾಗಿ ತುಂಬಿಸಿಕೊಳ್ಳಲು ನಿರ್ಧರಿಸಿದರು. ತಂದೆತಾಯಿಗಳ ಮಾತನ್ನು ಮನ್ನಿಸಿದ ಹೇಮಣ್ಣನವರು ಲಕ್ಷ್ಮೇಶ್ವರದ ಶ್ರೀಗುರಪ್ಪ, ಶ್ರೀಮತಿ ಗುರವ್ವ ದಂಪತಿಗಳ ಸುಪುತ್ರಿ ಸೌಭಾಗ್ಯವತಿ ಗುರುಸಿದ್ದವ್ವರನ್ನು (ಗೌರವ್ವ) ನೋಡಿ ಮದುವೆಗೆ ಒಪ್ಪಿಗೆ ಕೊಟ್ಟರು. ಇದೇ ಸಂದರ್ಭದಲ್ಲಿ ಹೇಮಣ್ಣನವರ ತಮ್ಮ ಶ್ರೀ ಸಿದ್ರಾಮಪ್ಪನವರಿಗೂ (ಸೀಮಣ್ಣ) ವೀರಭದ್ರಪ್ಪನವರು ಸೂಕ್ತವಾಗಿ ಕನ್ಯೆಯನ್ನು ಹುಡುಕಿದರು. ಹುಕ್ಕೇರಿಯ ಪ್ರಸಿದ್ಧ ಜನಪದ ಹಾಡುಗಾರರಾದ ಶ್ರೀ ಹುಕ್ಕೇರಿ ಬಾಳಪ್ಪನವರ ಸಹೋದರಿ ಭಾಗ್ಯವತಿ ಕಾಶವ್ವಳನ್ನು ಎರಡನೆ ಸೊಸೆಯಾಗಿ ತರಲು ನಿಶ್ಚಯವಾಯಿತು. ಈ ಮದುವೆಗಳು ನಿಶ್ಚಯವಾದ ಎರಡು ವರ್ಷಗಳ ತರುವಾಯ ಈ ಸಹೋದರರಿಬ್ಬರ ವಿವಾಹವು ಒಂದೇ ಚಪ್ಪರದಲ್ಲಿ 1934ರಲ್ಲಿ ನಡೆಯಿತು. ವೀರಭದ್ರಪ್ಪನವರು ಅದ್ದೂರಿಗೆ ಕಡಿವಾಣ ಹಾಕಿ ಸಾಮಾನ್ಯ ರೀತಿಯಲ್ಲೇ ವಿವಾಹ ಸಮಾರಂಭ ನೆರವೇರಿಸಿದರು.

ವಿವಾಹವಾದ ನಂತರ ಕೌಜಲಗಿಯವರು ಬೈಲಹೊಂಗಲಕ್ಕೆ ತಮ್ಮ ವಾಸ್ತವ್ಯವನ್ನು ಸ್ಥಳಾಂತರಿಸುವ ಯೋಚನೆ ಮಾಡಿದರು. ಇದಕ್ಕೆ ಮುಖ್ಯ ಕಾರಣವೆಂದರೆ ಸಾರಿಗೆ ಸೌಕರ್ಯ ಸುಗಮವಾಗಿಲ್ಲದಿದ್ದ ಆ ಕಾಲದಲ್ಲಿ ಪ್ರತಿ ದಿನವೂ ಸವದತ್ತಿಯಿಂದ ಬೈಲಹೊಂಗಲಕ್ಕೆ ಪ್ರಯಾಣ ಮಾಡುವುದು ತ್ರಾಸದಾಯಕವಾಗಿತ್ತು. ಜೊತೆಗೆ ಈ ಪ್ರಯಾಣಕ್ಕೆ ಸಾಕಷ್ಟು ಕಾಲ ಹಿಡಿಯುತ್ತಿದ್ದುದರಿಂದ ಖಟ್ಲೆಗಳಿಗೆ ಸಿದ್ಧತೆ ಮಾಡಿಕೊಳ್ಳಲು ಸೂಕ್ತ ಕಾಲಾವಕಾಶ ಸಿಗುತ್ತಿರಲಿಲ್ಲ. ಹೀಗೆ ಬೈಲಹೊಂಗಲದಲ್ಲಿ ಕೌಜಲಗಿ ದಂಪತಿಗಳು ಹೊಸ ಸಂಸಾರ ಹೂಡಿ ನವ ಜೀವನಕ್ಕೆ ಕಾಲಿಟ್ಟರು.

## ಸಾರ್ವಜನಿಕ ಕ್ಷೇತ್ರದಲ್ಲಿ ಅಡಿಇಟ್ಟಿದ್ದು

1930ರ ದಶಕ ಸ್ವಾತಂತ್ರ್ಯ ಚಳವಳಿ ತೀವ್ರ ಸ್ವರೂಪ ಪಡೆದ ಕಾಲ. ಆಗ ದೇಶಾದ್ಯಂತ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳವಳಿ ಭುಗಿಲೆದ್ದಿತು. 1924 ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ಸ್ವತಹ ಮಹಾತ್ಮ ಗಾಂಧಿಜಿಯವರೇ ವಹಿಸಿದ್ದರು. ಇದರಿಂದ ಈ ಜಿಲ್ಲೆಯ ಜನ ಹೆಚ್ಚು ಸ್ಫೂರ್ತಿಯಿಂದ ಚಳವಳಿಯಲ್ಲಿ ಭಾಗವಹಿಸಿದ್ದರು. ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣನ ನೆನಪುಗಳು ಹಸಿರಾಗಿಯೇ ಇದ್ದವು. ಉತ್ತರ ಕನ್ನಡ ಜಿಲ್ಲೆಯಿಂದ ಬಂದು ಘಟಪ್ರಭಾ ತೀರದಲ್ಲಿ ಶಿಬಿರ ಮಾಡಿಕೊಂಡು ಸೇವಾದಳದ ಸೈನ್ಯವನ್ನೇ ಕಟ್ಟಿ ಶಾಂತಿಯುತವಾಗಿ ಸತ್ಯಾಗ್ರಹ ಹಾಗೂ ಹೋರಾಟಗಳಲ್ಲಿ ತೊಡಗಿದ್ದ ಹರ್ಡೇಕರ್ ಮಂಜಪ್ಪನವರು ಮುಂಬಯಿ ಕರ್ನಾಟಕದ ಗಾಂಧಿಯೇ ಆಗಿದ್ದರು. ಇಂತಹ ಪರಿಸರದಲ್ಲಿ ವಕೀಲರು ಹೆಚ್ಚಾಗಿ ಚಳವಳಿಯ ಮುಖಂಡತ್ವ ವಹಿಸುತ್ತಿದ್ದರು.

ಹೇಮಣ್ಣ ವೀರಭದ್ರಪ್ಪ ಕೌಜಲಗಿಯವರು ಸಹ ತಮ್ಮ ಸಹೋದ್ಯೋಗಿಗಳೊಂದಿಗೆ ಕಾಂಗ್ರೆಸ್ ಸೇರಿದರು. ಮುಂದೆ ಅವರ ನಿಜನಾಮ ಸಂಕ್ಷಿಪ್ತ ರೂಪ ಪಡೆದು ಹೆಚ್.ವಿ. ಕೌಜಲಗಿ ಎಂದು ಅಧಿಕೃತ ಹೆಸರಿನಲ್ಲಿ ಜನಪ್ರಿಯರಾದರು.

ಕೌಜಲಗಿಯವರು ಅಂದಿನ ರಾಜಕೀಯ ಬೆಳವಣಿಗೆಗಳಿಗೆ ಸ್ಪಂದಿಸಿದರೋ ಅಥವಾ ರಾಜಕೀಯ ಸನ್ನಿವೇಶವೇ ಕೌಜಲಗಿಯವರನ್ನು ಅಪ್ಪಿಕೊಂಡಿತೋ ಎಂಬುದು ತಿಳಿಯದ ಮಟ್ಟಿಗೆ ಅವರು ಸಾರ್ವಜನಿಕ ಜೀವನಕ್ಕೆ ಪಾದಾರ್ಪಣೆ ಮಾಡಿದರು. ಅಂದು ಬ್ರಿಟಿಷ್ ಪ್ರಭುತ್ವ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆ ಮೂಲಕ ಭಾರತೀಯರಿಗೆ ಅವುಗಳಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿತು. ಇದರಿಂದ ಸ್ವಾತಂತ್ರ್ಯ ಚಳವಳಿಯ ಕಾವು ಕಡಿಮೆ ಆಗಬಹುದೆಂದು ಅವರ ಎಣಿಕೆಯಾಗಿತ್ತು. ಆದರೆ ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ ಸ್ಥಾನಗಳು ದೇಶಿಯರಿಗೆ ಪ್ರಜಾಪ್ರಭುತ್ವವು ದ ಭಾರಿ ಹೊಣೆಹೊರಲು ತರಬೇತಿ ತಾಣಗಳಾದವೇ ಹೊರತು ಅವರಿಂದ ಬ್ರಿಟಿಷರ ಬಗ್ಗೆ ಸಹಾನುಭೂತಿಯಾಗಲಿ, ಸ್ವಾತಂತ್ರ್ಯ ಬೇಡಿಕೆಯ ಬಗ್ಗೆ ರಿಯಾಯಿತಿಯಾಗಲಿ, ದೇಶಪ್ರೇಮದಲ್ಲಿ. ಕಿಲುಬಾಗಲಿ ಕಾಣಲಿಲ್ಲ. ಅಂದು ಜಾರಿಯಲ್ಲಿದ್ದ ಸ್ಥಳೀಯ ಸಂಸ್ಥೆಗಳ ಕಾಯಿದೆ ಮೇರೆಗೆ ರಚನೆಯಾಗಿದ್ದ ಜಿಲ್ಲಾ ಲೋಕಲ್ ಬೋರ್ಡ್ ಅಥವಾ ಜಿಲ್ಲಾ ಸ್ಥಳೀಯ ಮಂಡಲಿ ಹೊಸ ತಲೆಮಾರಿನ ವಿದ್ಯಾವಂತರನ್ನು ಕೈಬೀಸಿ ಕರೆಯುತ್ತಿತ್ತು.

ಜಿಲ್ಲಾ ಬೋರ್ಡ್‌ಗೆ ಪ್ರತಿ ತಾಲ್ಲೂಕಿನಿಂದಲೂ ಇಬ್ಬರು ಸದಸ್ಯರನ್ನು ಚುನಾವಣೆಯ ಮೂಲಕ ಆರಿಸಿ ಕಳುಹಿಸಲು ಅವಕಾಶವಿತ್ತು. ಅಂದು ಈಗಿನಂತೆ ಪ್ರತಿಯೊಬ್ಬ ಪ್ರಜೆಯೂ ಮತದಾನ ಮಾಡಲು ಅವಕಾಶವಿರಲಿಲ್ಲ. ನಿರ್ದಿಷ್ಟ ಮೊಬಲಗಿನ ಭೂ ಕಂದಾಯ ಸಲ್ಲಿಸುವವರು, ನಿರ್ದಿಷ್ಟ ವ್ಯಾಪಾರ ತೆರಿಗೆ ಪಾವತಿ ಮಾಡುವವರು, ಪದವೀಧರರು ಚುನಾವಣೆಗೆ ಸ್ಪರ್ಧಿಸುವ ಅರ್ಹತೆ ಪಡೆದಿರುತ್ತಿದ್ದರು. ಈ ಜಿಲ್ಲಾ ಮಂಡಲಿಗೆ ಸವದತ್ತಿ ತಾಲ್ಲೂಕಿನಿಂದ ಇಬ್ಬರು ಪ್ರತಿನಿಧಿಗಳು ಚುನಾಯಿತರಾದರು. ಅವರೆಂದರೆ ತಲ್ಲೂರಿನ ಶ್ರೀ ಚಂದ್ರಕಾಂತ ದೇಸಾಯಿ ಮತ್ತು ಸವದತ್ತಿಯ ಶ್ರೀ ಹೆಚ್.ವಿ. ಕೌಜಲಗಿಯವರು.

ಬೆಳಗಾವಿ ಜಿಲ್ಲೆ ದೊಡ್ಡ ಜಿಲ್ಲೆ. ಅದರಲ್ಲಿ 10 ತಾಲ್ಲೂಕುಗಳಿದ್ದವು. ಅದ್ದರಿಂದ ಬೆಳಗಾವಿ ಜಿಲ್ಲಾ ಬೋರ್ಡ್ ಒಂದು ದೊಡ್ಡ ಆಡಳಿತ ಸಂಸ್ಥೆಯೇ ಆಗಿದ್ದಿತು. ಈ ಸಂಸ್ಥೆ ಹಿಂದಿನಿಂದ ಜಿಲ್ಲಾಧಿಕಾರಿಗಳು ಮತ್ತು ಪ್ರಾಂತ ಮಟ್ಟದ ಅಧಿಕಾರಿಗಳು ಕುಳಿತು ತೀರ್ಮಾನಿಸುತ್ತಿದ್ದಂತಹ ಜಿಲ್ಲೆಯ ಅಭಿವೃದ್ಧಿ ವಿಷಯಗಳ ಬಗ್ಗೆ ತೀರ್ಮಾನಿಸುವ ಅಧಿಕಾರ ಪಡೆದಿದ್ದಿತು. ಸಿವಿಲ್ ಅಧಿಕಾರಿಗಳ ಪ್ರಭಾವ ಸಾಕಷ್ಟಿದ್ದರೂ ಈ ಜನಪ್ರತಿನಿಧಿಗಳು ಅವರೊಂದಿಗೆ ಸಮಾಲೋಚಿಸಿ ತಮ್ಮದೇ ಆದ ನಿರ್ಣಯಗಳನ್ನು ಜಾರಿಗೆ ತರಬಲ್ಲವರಾಗಿದ್ದರು. ಇಂತಹ ಪ್ರತಿಷ್ಠಿತ ಸಂಸ್ಥೆಗೆ ಹೆಚ್.ವಿ. ಕೌಜಲಗಿಯವರು ಸದಸ್ಯರಾಗಿ ಆಯ್ಕೆಯಾದದ್ದು ಅವರ ಸಾರ್ವಜನಿಕ ಜೀವನದ ಮೊದಲ ದೊಡ್ಡ ಮೆಟ್ಟಿಲಾಯಿತು.

ಹೆಚ್.ವಿ. ಕೌಜಲಗಿಯವರು ಜಿಲ್ಲಾ ಬೋರ್ಡ್ ಸದಸ್ಯರಾದಾಗ ಅವರು ಏರಬಹುದಾದ ಎತ್ತರದ ಬಗ್ಗೆ ಯಾರಿಗೂ ಸರಿಯಾದ ಕಲ್ಪನೆಯಿರಲಿಲ್ಲ. ಆ ಕಾಲದಲ್ಲಿ ಇನ್ನೂ ಅನೇಕ ಶ್ರೀಮಂತರೂ ಹಿರಿಯ ರಾಜಕಾರಣಿಗಳು ಈ ಜಿಲ್ಲಾ ಬೋರ್ಡ್ ಸದಸ್ಯರಲ್ಲಿ ಸೇರಿದ್ದರು. ಈ ಜಿಲ್ಲೆಯಿಂದ ಸರ್

ಸಿದ್ದಪ್ಪನವರು ಕಂಬಳಿ ಮತ್ತು ಚಿಕ್ಕೋಡಿ ಇವರು ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದರು. ಇವರೆಲ್ಲರ ನಡುವೆ ಮೂವತ್ನಾಲ್ಕರ ಹರಯದ ಕೌಜಲಗಿಯವರಿಗೆ ಇದ್ದ ವೈಶಿಷ್ಟಗಳೆಂದರೆ ಅವರ ವಕೀಲಗಿರಿ ಮತ್ತು ಸದೃಢ, ಅಪ್ಪಟ ವ್ಯಕ್ತಿತ್ವಗಳು, ಶಿಸ್ತು ಸಂಯಮಕ್ಕೆ ಹೆಸರಾಗಿದ್ದ ಕೌಜಲಗಿಯವರು ಅಂದು ಅತ್ಯಂತ ವಿರಳವಾಗಿದ್ದ ಕಾನೂನು ಪದವೀಧರರಲ್ಲೊಬ್ಬರು. ಅವರಲ್ಲಿ ಈ ವಿಶೇಷತೆಗಳು ಸಮ್ಮಿಲನವಾಗಿ ಆಕರ್ಷಕ ವ್ಯಕ್ತಿತ್ವಕ್ಕೆ ಇನ್ನೊಂದು ಹೆಸರೇ ಹೆಚ್.ವಿ. ಕೌಜಲಗಿಯವರಾದರು. ತುಂಬಾ ಕಿರಿಯರಾದರೂ ತಾವಿದ್ದ ಸಂಸ್ಥೆಯಲ್ಲಿ ಹಿರಿಯರಿಗೂ ಇವರ ನಾಯಕತ್ವದಲ್ಲಿ ನಂಬುಗೆ, ವಿಶ್ವಾಸಗಳು ಮೂಡುವಂತಹ ದಿಟ್ಟ ಪ್ರಾಮಾಣಿಕ ನಾಯಕನಾಗಿ ಹೊರಹೊಮ್ಮಿದರು. ಅದರ ಫಲವಾಗಿ ತಮ್ಮ ಮೊದಲ ಜಿಲ್ಲಾ ಬೋರ್ಡ್ ಸದಸ್ಯತ್ವದ ಅವಧಿಯಲ್ಲೇ ಅವರಿಗೆ ಅದರ ಅಧ್ಯಕ್ಷ ಪದವಿಗೆ ಏರುವ ಅವಕಾಶ ಲಭ್ಯವಾಯಿತು. 1938ರಲ್ಲಿ ಕೌಜಲಗಿಯವರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಆಯ್ಕೆಯಾದರು.

ಜನಹಿತ ಕಾರ್ಯಗಳನ್ನು ಮಾಡುವುದಕ್ಕೆ ಕೌಜಲಗಿಯವರದು ಪ್ರಥಮ ಆದ್ಯತೆ. ಆಗ ಈ ಜಿಲ್ಲಾ ಬೋರ್ಡ್‌ಗೆ ಅಧಿಕಾರವೂ ಅಧಿಕಾರವೂ ಕಡಿಮೆ ಮತ್ತು ಹಣಕಾಸಿನ ಸಂಪನ್ಮೂಲವೂ ಕಡಿಮೆ. ಆದರೆ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತಿದ್ದ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ಮೂಡಿಸುವಲ್ಲಿ ಕೌಜಲಗಿಯವರಿಗೆ ತುಂಬಾ ಆಸಕ್ತಿ. ಅದಕ್ಕಾಗಿ ತಾವು ಯೋಜಿಸಿಕೊಂಡ ಕಾರ್ಯಗಳನ್ನು ಆಗ ಮಾಡಿಸಲು ತಾವೇ ಖುದ್ದು ಆಸಕ್ತಿ ವಹಿಸುತ್ತಿದ್ದರು. ಚನ್ನಮ್ಮನ ಕಿತ್ತೂರಿಗೆ ರಸ್ತೆ ಮಾಡಿಸುವುದಿರಲಿ, ಸವದತ್ತಿ ತಾಲ್ಲೂಕಿನ ಬಸಿಡೋಣಿ ಮತ್ತು ಗೋರಾಬಾಳುಗಳಿಗೆ ರಸ್ತೆ ಮಾಡಿಸುವುದಿರಲಿ, ಕುಡಿಯುವ ನೀರು ವ್ಯವಸ್ಥೆ ಮಾಡುವುದಿರಲಿ ಎಲ್ಲ ಕಡೆಗಳಿಗೂ ಗಮನ ಕೊಡುತ್ತಿದ್ದರು. ವೈಯಕ್ತಿಕ ಕೆಲಸಗಳಿರಲಿ, ಊರಿನ ಶಾಲೆ, ಆಸ್ಪತ್ರೆ ಕೆಲಸಗಳಿರಲಿ ನೇರವಾಗಿ ಹೋಗಿ ಹೇಮಣ್ಣನವರಲ್ಲಿ ಹೇಳಿಕೊಂಡರೆ ಆದೀತು ಎಂಬ ವಿಶ್ವಾಸ ಮೂಡಿಯದಾಯಿತು. ಇದರಿಂದಾಗಿ ಹೆಚ್.ವಿ. ಕೌಜಲಗಿಯವರು ಜನಪ್ರಿಯ ಅಧ್ಯಕ್ಷರಾದರು.

ಅವರು ಜಿಲ್ಲಾ ಬೋರ್ಡಿನ ಒಂದು ಕಾರ್ಯಕ್ರಮಕ್ಕೆ ಮೈಸೂರು ಸಂಸ್ಥಾನದ ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರನ್ನು ಕರೆಸಿದ್ದರು.

ಕೌಜಲಗಿಯವರು ಒಂದು ಅವಧಿಗೆ ಅಧ್ಯಕ್ಷರಾಗಿ ತಮ್ಮ ಕಾರ್ಯ ದಕ್ಷತೆಯನ್ನು ತೋರಿದ್ದರಿಂದ ಸದಸ್ಯರು ಎರಡನೆ ಬಾರಿಗೂ ಅವರನ್ನೇ ಅಧ್ಯಕ್ಷರನ್ನಾಗಿ ಆರಿಸಿದರು. ಅಧಿಕಾರದ ಮೇಲಾಟವಲ್ಲಿರುವ ರಾಜಕೀಯ ಕ್ಷೇತ್ರದಲ್ಲಿ ಇಂತಹ ಅವಕಾಶ ಬರುವುದು ವಿಶೇಷವೇ ಸರಿ. ಸವದತ್ತಿ ತಾಲ್ಲೂಕನ್ನು ತನ್ನ ತವರು ತಾಲ್ಲೂಕೆಂದೇ ಅವರು ಭಾವಿಸಿದ್ದರು. ಅಲ್ಲಿಯ ಯರಝರ್ವಿ, ಜೇವಾಪುರ, ಕರಿಕಟ್ಟೆ ಮೊದಲಾದ ಕಡೆಗಳಲ್ಲಿ ಕೆರೆ ಬಾವಿಗಳು, ಟ್ಯಾಂಕ್ ನಿರ್ಮಾಣಗೊಂಡವು. ಗೋರಾಬಾಳಕ್ಕೆ ಮತ್ತು ಕರಿಕಟ್ಟೆ ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯ ಒದಗಿಸಿದರು. ಸವದತ್ತಿಯಲ್ಲಿ ಈಗಿನ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣ ರೂಪು ತಳೆಯಿತು. ಸವದತ್ತಿ ಧಾರವಾಡ ಮಾರ್ಗದಲ್ಲಿ ಒಂದು ಕಾಟೇಜ್ ಆಸ್ಪತ್ರೆ ನಿರ್ಮಿಸುವ ಕನಸು ಇವರದೇ. ದೊಡ್ಡ ಜಿಲ್ಲೆಯಾದ ಬೆಳಗಾವಿ ಜಿಲ್ಲೆಯ ಎಲ್ಲ ತಾಲ್ಲೂಕುಗಳಿಗೂ ಅಂದು ಸಾಧ್ಯವಿದ್ದ ಸೌಲಭ್ಯಗಳನ್ನು

ಪ್ರಾಮಾಣಿಕವಾಗಿ ಒದಗಿಸಿದರು. ವಿಶೇಷವಾಗಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಎಲ್ಲಾ ತಾಲ್ಲೂಕುಗಳಲ್ಲೂ ಪ್ರಾರಂಭವಾದವು. ಅಧ್ಯಕ್ಷರೆಂದರೆ ಹೇಮಣ್ಣ ಕೌಜಲಗಿಯರಂತಿರಬೇಕೆಂದು ಜನರು ಹೊಗಳುವಂತಹ ಕೆಲಸ ಮಾಡಿ ತಮ್ಮ ಅಧಿಕಾರಾವಧಿಯನ್ನು 1950ರಲ್ಲಿ ಮುಗಿಸಿದರು. ಅವರು ಜಿಲ್ಲಾ ಬೋರ್ಡ್, ಅಧ್ಯಕ್ಷರಾಗಿದ್ದು ಅವರಿಗೆ ಜಿಲ್ಲಾ ಮಟ್ಟದಲ್ಲಿ ಒಂದು ರಾಜಕೀಯ ವ್ಯಕ್ತಿತ್ವವನ್ನು ತಂದುಕೊಡಲು ಸಹಕಾರಿಯಾಗಿದ್ದಿತು. ಹೆಚ್ ವಿ ಕೌಜಲಗಿಯವರೆಂದರೆ ಈ ಜಿಲ್ಲೆಯ ಒಬ್ಬ ವಿದ್ಯಾವಂತ ಅನುಭವಿ ಮುಖಂಡರೆಂಬ ಹೆಗ್ಗಳಿಕೆಗೆ ಪಾತ್ರರಾದರು.

## ಸವದತ್ತಿ ಪರುಸಭೆಯ ಅಧ್ಯಕ್ಷರು

ಹೆಚ್.ವಿ. ಕೌಜಲಗಿಯವರು ಅದೃಷ್ಟವಂತರಲ್ಲಿ ಅದೃಷ್ಟವಂತರು. ಘನವಂತರಲ್ಲಿ ಘನವಂತರು ಅವರು ಕಾನೂನು ಪದವಿ ಮುಗಿಸಿ ವಕೀಲ ವೃತ್ತಿ ಹಿಡಿದು ಬಹಳೇನು ವರ್ಷಗಳು ಕಳೆದಿಲ್ಲ. ಆಗಲೇ ಅವರ ಸಾರ್ವಜನಿಕ ಜೀವನದಲ್ಲಿ ಅವಕಾಶಗಳ ಮೇಲೆ ಅವಕಾಶಗಳು ಬೆನ್ನು ಬಿದ್ದು ಬರತೊಡಗಿದವು. ಸವದತ್ತಿಯಲ್ಲೇ ದೊಡ್ಡ ಹೆಸರು ಮಾಡಿದ್ದ ಶ್ರೀ ಬೆಳ್ಳುಳ್ಳಿ ಸಾಹುಕಾರರ ಮನೆತನದ ಹಂಪಣ್ಣನವರ ಶಿವಪುತ್ರಪ್ಪನವರು ಒಂದು ದಿನ ಹೇಮಣ್ಣ ಕೌಜಲಗಿಯವರ ಮನೆಗೆ ಬಂದರು. ಅವರು ಬಂದದ್ದನ್ನು ಕಂಡು ಏನೋ ವಿಶೇಷವಿರಬೇಕೆಂದು ಭಾವಿಸಿದ ಕೌಜಲಗಿಯವರು ದೊಡ್ಡವರನ್ನು ಆತ್ಮೀಯತೆ ಮತ್ತು ವಿನಯವಂತಿಕೆಯಿಂದ ಸ್ವಾಗತಿಸಿದರು. ಅವರು ಬರುವಾಗ ಅನೇಕ ಹಿರಿಯರ ಅಭಿಪ್ರಾಯಗಳನ್ನು ಗ್ರಹಿಸಿಯೇ ಬಂದಿದ್ದರು. ನೀವು ಸವದತ್ತಿ ಪುರಸಭೆಯ ಸದಸ್ಯತ್ವಕ್ಕೆ ಸ್ಪರ್ಧಿಸಬೇಕು ನಾವೆಲ್ಲ ನಿಮ್ಮ ಬೆಂಬಲಕ್ಕಿದ್ದೇವೆ ಎಂದರು. ಹಿರಿಯರ ಅದರಲ್ಲೂ ಘನ ವ್ಯಕ್ತಿತ್ವ ಹೊಂದಿದ್ದ ಶಿವಪುತ್ರಪ್ಪನವರ ಮಾತನ್ನು ಅಲ್ಲಗಳೆಯುವುದುಂಟೇ. ದೊಡ್ಡವರ ಈ ಮಾತು ಹೇಮಣ್ಣನವರ ಭವ್ಯ ಭವಿಷ್ಯದ ಸೂಚಕವಾಗಿತ್ತು. ಒಂದು ಪ್ರತಿ ಮಾತಾಡದೆ ಆಗಲಿ ಎಂದು ಒಪ್ಪಿಕೊಂಡರು.

ಸವದತ್ತಿಯ ಎಲ್ಲಮ್ಮ ಪರುಸಭೆಯ ಚುನಾವಣೆಯಲ್ಲಿ ಕೌಜಲಗಿಯವರು ಸ್ಪರ್ಧಿಸಿದರು. ಕೆಲವು ಯುವ ವಕೀಲರು ಸ್ಪರ್ಧಿಸಿ ಪುರಸಭೆ ಚುನಾವಣೆಯಲ್ಲಿ ಸೋತಿರುವುದುಂಟು. ಆದರೆ ಹೆಚ್ ವಿ ಕೌಜಲಗಿಯವರಿಗೆ ಇದು ಅನ್ವಯಿಸುವ ಮಾತಾಗಿರಲಿಲ್ಲ. ಅವರ ಪಕ್ವ ವ್ಯಕ್ತಿತ್ವವನ್ನು ಮೆಚ್ಚಿದವರೇ ಹೆಚ್ಚು. ಹೀಗಾಗಿ ಚುನಾವಣೆಯಲ್ಲಿ ಅವರು ಸರಾಗವಾಗಿ ಜಯಶೀಲರಾದರು. ಶ್ರೀ ಮೂಗಪ್ಪ ಚಚಡಿ, ಶ್ರೀ ಬಸವಣ್ಣೆಪ್ಪ ಶೆಟ್ಟರ ಮತ್ತು ಶ್ರೀ ಶಿವಪುತ್ರಪ್ಪ ಜಕಾತಿ ಮುಂತಾದವರು ಅಂದು ಶ್ರಮಿಸಿ ಕೌಜಲಗಿಯವರ ಯಶಸ್ಸಿಗೆ ಕಾರಣರಾದುದನ್ನು ಕೌಜಲಗಿಯವರ ಪೀಳಿಗೆಯವರು ಇಂದೂ ಸ್ಮರಿಸುತ್ತಾರೆ.

ಕೌಜಲಗಿಯವರು 1937-38 ರ ಅವಧಿಗೆ ಸವದತ್ತಿ ಪುರಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದರು. ಈ ಹೊತ್ತಿಗಾಗಲೇ ಅವರ ವ್ಯಕ್ತಿತ್ವಕ್ಕೆ ಸಾರ್ವಜನಿಕ ಮನ್ನಣೆ ದೊರೆತ್ತಿದ್ದಿತು. ಅವರು ಸುಮಾರು ಇದೇ ಸಮಯದಲ್ಲಿ ಜಿಲ್ಲಾ ಬೋರ್ಡ್‌ನ ಸದಸ್ಯರಾದುದನ್ನು ನೋಡಿದ್ದೇವೆ. ಇಂತಹ ನಾಯಕ ಗುಣವನ್ನು ಹೊಂದಿದ್ದ ಕೌಜಲಗಿಯವರಿಗೆ ಸ್ವಾಭಾವಿಕವಾಗಿಯೇ ಅವಕಾಶದ ಬಾಗಿಲುಗಳು ತೆರೆದವು. ಅವರು ಮರು ವರ್ಷವೇ ಈ ಪುರಸಭೆಯ ಉಪಾಧ್ಯಕ್ಷರಾದರು. (2-10-2938 ರಿಂದ

5-3-1940). ಈ ಅವಧಿಯ ಅನಂತರ ಪುರಸಭೆಯ ಸದಸ್ಯರಾಗಿ ಮುಂದುವರಿದರು. ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದರೂ ಹೆಚ್ ವಿ ಕೌಜಲಗಿಯವರು ಒಂದು ಚಿಕ್ಕ ಪುರಸಭೆಯ ಸದಸ್ಯರೂ ಆಗಿದ್ದ ವಿಷಯ ಗಮನಾರ್ಹವಾಗಿದೆ. ಏಕೆಂದರೆ ಅಧಿಕಾರದ ಸೆರಗನ್ನು ಹಿಡಿದು ಹೋಗುವ ವ್ಯಕ್ತಿಗಳು ತಾವು ಒಂದು ಎತ್ತರಕ್ಕೆ ಏರಿದ ಮೇಲೆ ಅದಕ್ಕಿಂತ ಕಡಿಮೆಯಾದ ಸ್ಥಾನದಲ್ಲಿ ಮುಂದುವರಿಯಲು ಇಷ್ಟಪಡುವುದಿಲ್ಲ. ಆದರೆ ಹೇಮಣ್ಣ ಕೌಜಲಗಿಯವರ ವಿಷಯದಲ್ಲಿ ಅದು ಅನ್ವಯಿಸಲಿಲ್ಲ. ಅವರು ಸ್ಥಾನ ಹಿರಿದಿರಲಿ ಕಿರಿದಿರಲಿ ಜನಪ್ರತಿನಿಧಿಯಾಗಿ ಕೆಲಸ ಮಾಡಲು ಸದಾ ಬದ್ಧರಾಗಿದ್ದರು. ಅವರ ಈ ಮನೋಭಾವ ಅವರಿಗೆ ಹೆಚ್ಚಿನ ಜನಮನ್ನಣೆಯನ್ನು ತಂದುಕೊಟ್ಟಿತು. ಮುಂದೆ ಆರು ವರ್ಷಗಳ ತರುವಾಯ ಅವರಿಗೆ ಪುರಸಭೆಯ ಅಧ್ಯಕ್ಷಗಿರಿ ಕೈಬೀಸಿ ಕರೆಯಿತು. 1946 ರಿಂದ ಅವರು ಅದೇ ಪುರಸಭೆಯ ಅಧ್ಯಕ್ಷರಾದರು. ಈ ಹೊಣೆಗಾರಿಕೆಯ ಹುದ್ದೆಯನ್ನು ಅವರು 1952 ರವರೆಗೂ ಅಂದರೆ ಆರು ವರ್ಷಗಳ ಕಾಲ ನಿರ್ವಹಿಸಿದರು. ಆ ಕಾಲದಲ್ಲಿ ಶ್ರೀ ರಾವ್‌ಸಾಹೇಬ ಹಂಪಣ್ಣನವರ ಅಣ್ಣನವರು ಉಪಾಧ್ಯಕ್ಷರಾಗಿದ್ದರು. ಇವರ ಅಧ್ಯಕ್ಷ ಅವಧಿಯಲ್ಲಿ ಹಲವಾರು ಜನಸೌಲಭ್ಯ ಒದಗಿಸುವ ಕಾರ್ಯಗಳಾದವು. ಅವುಗಳಲ್ಲಿ ಯಲ್ಲಮ್ಮನ ಗುಡ್ಡಕ್ಕೆ ರಸ್ತೆ ಅಭಿವೃದ್ಧಿ ಮತ್ತು ನೀರು ಸೌಲಭ್ಯ ಒದಗಿಸಿದ್ದು ದಾಖಲಾರ್ಹವಾದವು.

ಕೌಜಲಗಿಯವರು ಸವದತ್ತಿಯಲ್ಲಿ ಎಲ್ಲರ ಮೆಚ್ಚಿನ ಹೇಮಣ್ಣನವರಾಗಿಯೇ ಇದ್ದರು. ಪುರಸಭಾ ಅಧ್ಯಕ್ಷರೆಂದ ಮೇಲೆ ಪ್ರತಿ ಮನೆ ಮತ್ತು ಬೀದಿಯವರೂ ಒಂದಲ್ಲ ಒಂದು ಸಮಸ್ಯೆ ಮುಂದಿಟ್ಟುಕೊಂಡು ಕೌಜಲಗಿಯವರ ಬಳಿ ಬರುತ್ತಿದ್ದರು. ಆಗ ಪುರಸಭೆಗಳಿಗೆ ಒದಗಿ ಬರುತ್ತಿದ್ದ ಹಣಕಾಸಿನ ಸಂಪನ್ಮೂಲವೂ ಕಡಿಮೆ. ಸರಕು ಸುಂಕ, ಗಾಡಿ, ಸೈಕಲ್‌ಗಳ ಮೇಲಿನ ತೆರಿಗೆಗಳೇ ಮುಖ್ಯ ಆದಾಯಗಳಾಗಿರುತ್ತಿದ್ದವು. ಸರ್ಕಾರ ಕೊಡುವ ಅಷ್ಟಿಷ್ಟು ಗ್ರಾಂಟು ಏನಕ್ಕೂ ಸಾಲುತ್ತಿರಲಿಲ್ಲ. ಸಾಧ್ಯವಿದ್ದಷ್ಟು ಪುರಸಭಾಪತಿಯವರಿಂದ ಕೆಲಸ ಮಾಡಿಸುವುದು, ಸ್ವಯಂ ಪ್ರೇರಣೆಯಿಂದ ಮುಂದೆ ಬರುತ್ತಿದ್ದ ಸೇವಾಳದ ಯುವಕರ ತಂಡವನ್ನು ಉಪಯೋಗಿಸಿ ಬೀದಿಯ, ಬಯಲಿನ ಕಸಕಡ್ಡಿ ತೆಗೆಸುವುದು, ಥಸೆ ನಿರ್ಮಿಸುವುದು ಮೊದಲಾದ ಕಾರ್ಯಗಳು ನಡೆಯುತ್ತಿದ್ದವು. ಈ ಊರೊಟ್ಟಿನ ಕೆಲಸಗಳಿಗೆ ಜನರನ್ನು ಒಗ್ಗೂಡಿಸಲು ಕೌಜಲಗಿಯವರು ಮನೆ ಮನೆಗೆ ಹೋಗಿ ಜನರನ್ನು ಪ್ರೇರೇಪಿಸುತ್ತಿದ್ದರು. ಇದರಿಂದಾಗಿ ಅವರಿಗೆ ಸವದತ್ತಿಯ ಜನರ ಮನಸ್ಸಿನಲ್ಲಿ ನೆಲೆಯೂರಲು ಅವಕಾಶ ಒದಗಿತು.

## ಶಾಸಕರಾಗಿ ಆಯ್ಕೆ:

ಹೆಚ್ ವಿ ಕೌಜಲಗಿಯವರು 1940 ರ ದಶಕದಲ್ಲಿ ವಕೀಲಿ ವೃತ್ತಿಗಿಂತಲೂ ಹೆಚ್ಚಾಗಿ ಸಾರ್ವಜನಿಕ ಸಂಸ್ಥೆಗಳ ಜವಾಬ್ದಾರಿಯನ್ನು ಹೊತ್ತಿದ್ದರು. ಜಿಲ್ಲಾ ಬೋರ್ಡ್ ಅಧ್ಯಕ್ಷಗಿರಿ ಮತ್ತು ಪುರಸಭೆ ಅಧ್ಯಕ್ಷಗಿರಿಗಳು ಬಹು ಗುರುತರವಾದ ಹುದ್ದೆಗಳಾಗಿದ್ದವು. ಇದರಿಂದಾಗಿ ಅವರಿಗೆ ಬಿಡುವಿಲ್ಲದ ಕೆಲಸ. 1942 ರ ಕ್ವಿಟ್ ಇಂಡಿಯಾ ಚಳವಳಿಯು ಪಟ್ಟಣ ಗ್ರಾಮಗಳೆನ್ನದೆ ಎಲ್ಲೆಡೆ ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸಿತು. ಕೌಜಲಗಿಯವರು ಕಾಂಗ್ರೆಸ್ ಪಕ್ಷದ ಮುಖಂಡರಾಗಿ ಚಳವಳಿಗೆ

ಬೆಂಬಲ ನೀಡಿದರು. ಆದರೆ ಸ್ವಾತಂತ್ರ್ಯ ಹೋರಾಟಗಾರರಾಗಿ ಜನಪ್ರಿಯವಾದುದಕ್ಕಿಂತಲೂ ಜನಪ್ರತಿನಿಧಿಯಾಗಿ ತಮ್ಮ ಪಾಲಿನ ಕರ್ತವ್ಯಗಳನ್ನು ನಿರ್ವಹಿಸಿ ಹೆಚ್ಚು ಜನಪ್ರಿಯರಾದರು. ಅಂದು ಶಾಸಕರಾಗಲು ಸಾಕಷ್ಟು ಸ್ವಾತಂತ್ರ್ಯ ಹೋರಾಟ ಇಲ್ಲವೇ ಸಾರ್ವಜನಿಕ ಸೇವೆಯ ಹಿನ್ನೆಲೆ ಬೇಕಿತ್ತು.

1920 ರಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದಿತು. ಗಂಗಾಧರರಾವ್ ಅವರ ಪ್ರಥಮ ಅಧ್ಯಕ್ಷರಾದರು. 1921 ರಲ್ಲಿ ಗೋಕಾಕದಲ್ಲಿ ಜಿಲ್ಲಾ ರಾಜಕೀಯ ಸಮ್ಮೇಳನವು ನಡೆಯಿತು. ಅದರಲ್ಲಿ ಅಲಿ ಸಹೋದರರು ಉಪಸ್ಥಿತರಿದ್ದರು. 1924 ರ ಕಾಂಗ್ರೆಸ್ ಅಧಿವೇಶನದ ವ್ಯವಸ್ಥೆಗೆ ಹಿಂದೂಸ್ಥಾನಿ ಸೇವಾದಳದ ಯುವಕ ಯುವತಿಯರು ಸ್ವಯಂ ಸೇವಕರಾಗಿ ಭಾಗವಹಿಸಿದರು. ಸರ್ದಾರ್ ವೀರಣ್ಣಗೌಡ ಪಾಟೀಲರು ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯನ್ನು (ಕೆಎಲ್‌ಇ) ಸ್ಥಾಪಿಸಿದವರಲ್ಲೊಬ್ಬರು. ಅವರು 1924 ರಲ್ಲಿ ಬೆಳಗಾವಿಯಲ್ಲಿ ಗಾಂಧಿಜಿಯವರನ್ನು ಭೇಟಿ ಮಾಡಿ ಸ್ವಾತಂತ್ರ್ಯ ಚಳವಳಿಗೆ ತಾನು ಧುಮುಕುವುದಾಗಿ ತಿಳಿಸಿದರು. ಅದಕ್ಕೆ ಗಾಂಧಿಜಿಯವರು ವೀರಣ್ಣಗೌಡರು ಮಾಡುತ್ತಿದ್ದ ಹರಿಜನ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ವಸತಿ ಸೌಲಭ್ಯದ ಕಾರ್ಯವನ್ನು ಮುಂದುವರಿಸುವಂತೆಯೂ ಅದು ಒಂದು ರಚನಾತ್ಮಕ ಕಾರ್ಯವೆಂದು ತಿಳಿಸಿದರು. ಬೈಲಹೊಂಗಲ ತಾಲ್ಲೂಕುಗಳಲ್ಲಿ ಚಳವಳಿ ಅತ್ಯಂತ ಬಿರುಸಿನಿಂದ ನಡೆದಿತ್ತು. ಮುಂಬಯಿ ಪ್ರಾಂತದ ಗವರ್ನರು ಗುಜರಾತಿಗಿಂತ ಕರ್ನಾಟಕದಲ್ಲೇ ಚಳವಳಿ ತೀವ್ರವಾಗಿದೆ ಎಂದು ಹೇಳಿರುವುದು ಇದಕ್ಕೆ ಸಮರ್ಥನೆಯಾಗಿದೆ.

1930 ರಲ್ಲಿ ಹಾವೇರಿಯಲ್ಲಿ ವೀರಶೈವ ಪರಿಷತ್‌ನ ಸಮಾವೇಶ ಹರ್ಡೇಕರ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ಸಮಾವೇಶದಲ್ಲಿ ವೀರಶೈವರು ಕಾಂಗ್ರೆಸ್ ಸೇರುವಂತೆ ಕರೆಕೊಡಲಾಯಿತು. ಪರಸಗಡ ತಾಲ್ಲೂಕಿನ ಮುಖ್ಯ ಬ್ರಾಹ್ಮಣೇತರ ನಾಯಕರಲ್ಲೊಬ್ಬರಾಗಿದ್ದ ಹೂಲಿಯ ವೆಂಕಟರೆಡ್ಡಿ ಹೂಲಿ ಎಂಬುವರು ಚಳವಳಿಯಲ್ಲಿ ಭಾಗವಹಿಸಿ ಹತ್ತು ವರ್ಷಗಳ ಜೈಲು ಶಿಕ್ಷೆಗೊಳಗಾದರು. ಅಣ್ಣುಗುರೂಜಿ ಮತ್ತು ಜಯದೇವರಾವ್ ಕುಲಕರ್ಣಿಯವರ ನೇತೃತ್ವದಲ್ಲಿ ದಲಿತೋದ್ಧಾರಕ್ಕಾಗಿ ಜಿಲ್ಲೆಯಾದ್ಯಂತ ಪಾದಯಾತ್ರೆ ನಡೆಯಿತು. ಇನ್ನೂ ಅನೇಕರು ಇಂತಹ ಪಾದಯಾತ್ರೆ ಕೈಗೊಂಡಿದ್ದಲ್ಲದೆ ಕೆಲವು ಮುಖಂಡರು ಜಲಗಾರರ ಕರ್ಮ ಮಾಡಿ ಕೀಳಲ್ಲವೆಂಬುದನ್ನು ಪ್ರಚುರಪಡಿಸಿದರು.

1934 ರಲ್ಲಿ ಗಾಂಧಿಜಿ ಮತ್ತೊಮ್ಮೆ ಬೆಳಗಾಂವಿ ಪಟ್ಟಣಕ್ಕೆ ಬಂದು ಅನೇಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಬೈಲಹೊಂಗಲಕ್ಕೂ ಭೇಟಿ ನೀಡಿದರು. ಹರಿಜನರಿಗೆ ಸಮಾನ ನಾಗರಿಕ ಹಕ್ಕುಬಾಧ್ಯತೆಗಳನ್ನು ಒದಗಿಸುವ ವಿಷಯವೇ ಅವರ ಪ್ರವಾಸದ ಮುಖ್ಯ ಉದ್ದೇಶವಾಗಿತ್ತು. 1933 ರಲ್ಲಿ ಪ್ರಾರಂಭವಾದ ಸಂಯುಕ್ತ ಕರ್ನಾಟಕ ಪತ್ರಿಕೆಯು ರಾಷ್ಟ್ರೀಯ ಧ್ಯೇಯೋದ್ದೇಶಗಳನ್ನು ಪ್ರತಿಪಾದಿಸಿತು. 1937 ರ ಮುಂಬಯಿ ಅಸೆಂಬ್ಲಿ ಚುನಾವಣೆಯಲ್ಲಿ ಜಿಲ್ಲೆಯ ಎಲ್ಲ ಆರು ಸ್ಥಾನಗಳಿಗೂ ಕಾಂಗ್ರೆಸ್ ಅಭ್ಯರ್ಥಿಗಳೇ ಗೆದ್ದು ಬಂದರು. 1937 ರಲ್ಲಿ ಮತ್ತೊಮ್ಮೆ ಗಾಂಧೀಜಿಯವರು ಹುದಲಿಯಲ್ಲಿ

ನಡೆದ ಸಮಾವೇಶದಲ್ಲಿ ಭಾಗವಹಿಸಲು ಜಿಲ್ಲೆಗೆ ಭೇಟಿ ನೀಡಿದರು. ಮಿಷನ್ ಶಾಲೆಯ ಸ್ಯಾಮನ್ ಮಾಸ್ತರು ಹುಟ್ಟುಹಾಕಿದ್ದ ವಿದ್ಯಾರ್ಥಿಗಳ ಸಂಘಟನೆಯು ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಅಂಗವಾಗಿದ್ದಲ್ಲದೆ 1938 ರಲ್ಲಿ ಬೆಳಗಾಂವಿಯಲ್ಲಿ ಅಖಿಲ ಭಾರತ ವಿದ್ಯಾರ್ಥಿ ಮಹಾ ಒಕ್ಕೂಟದ ಸಮಾವೇಶವನ್ನು ಸಂಘಟಿಸಿತು. ಅದನ್ನು ಉದ್ದೇಶಿಸಿ ಸುಭಾಷಚಂದ್ರ ಬೋಸರು ಮಾತನಾಡಿದರು. 1939 ರಲ್ಲಿ ಮಹಾಯುದ್ಧದ ವಿರುದ್ಧ ನಡೆದ ಸತ್ಯಾಗ್ರಹದಲ್ಲಿ ಪರಸಗಡ ತಾಲ್ಲೂಕಿನಲ್ಲಿ ಬಂಧನಕ್ಕೊಳಗಾದವರ ಸಂಖ್ಯೆ ಜಿಲ್ಲೆಯಲ್ಲೇ ಅಧಿಕ. ಅನೇಕ ಊರುಗಳಿಗೆ ಪುಂಡು ಕಂದಾಯ ಹಾಕಿ ಬಲವಂತವಾಗಿ ವಸೂಲು ಮಾಡಲಾಯಿತು. ಈ ಸ್ವಾತಂತ್ರ್ಯ ಚಳವಳಿ ತಾರಕ್ಕೇರಿದ್ದಾಗ ಹೆಚ್ ವಿ ಕೌಜಲಗಿಯವರು ಗುರುತರವಾದ ಜಿಲ್ಲಾ ಬೋರ್ಡ್ ಮತ್ತು ಸವದತ್ತಿ ಪುರಸಭೆಗಳಿಗೆ ಅಧ್ಯಕ್ಷತೆಗಳ ಜವಾಬ್ದಾರಿ ಹೊತ್ತಿದ್ದರು. ಅವರು ರಚನಾತ್ಮಕ ಕಾರ್ಯಗಳು ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಲಾಗದಿದ್ದರೂ ಅವರಿಗೆ ಜನಮನ್ನಣೆ ತಂದುಕೊಟ್ಟವು.

1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಿತು. ಆಗ ಬೆಳಗಾವಿ ಜಿಲ್ಲೆ ಮುಂಬಯಿ ಪ್ರಾಂತದ ಭಾಗವಾಗಿಯೇ ಮುಂದುವರೆಯಿತು. ಸಂವಿಧಾನದ ರಚನೆಯಾಗಿ 1952 ರಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಚುನಾವಣೆ ಕಾಲ ಪ್ರಾಪ್ತವಾಯಿತು. ಆಗ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಪಕ್ಷದಿಂದ ಅಭ್ಯರ್ಥಿಗಳನ್ನು ಆರಿಸುವ ಸಂದರ್ಭ ಒದಗಿತು. ವಕೀಲಿ ವೃತ್ತಿಯ ಮೂಲಕ ಮತ್ತು ಜಿಲ್ಲಾ ಬೋರ್ಡ್ ಮೂಲಕ ಇಡೀ ಜಿಲ್ಲೆಗೆ ಪರಿಚಿತರಾಗಿದ್ದ ಹೆಚ್ ವಿ ಕೌಜಲಗಿಯವರ ವ್ಯಕ್ತಿತ್ವ ಮತ್ತು ಕಾರ್ಯಸಾಧನೆಗಳು ಅವರ ನೆರವಿಗೆ ಬಂದವು. ಕಾಂಗ್ರೆಸ್ ಪಕ್ಷ ಶ್ರೀಯುತರನ್ನು ಮುಂಬಯಿ ಪ್ರಾಂತದ ವಿಧಾನಸಭೆಗೆ ಸವದತ್ತಿ ಕ್ಷೇತ್ರದಿಂದ ಅಂದರೆ ಪರಸಗಡ ತಾಲ್ಲೂಕಿನ ಮತಕ್ಷೇತ್ರದಿಂದ ಅಭ್ಯರ್ಥಿಯಾಗಿ ಆರಿಸಿತು. ಇವರ ಎದುರಾಳಿಯಾಗಿ ಶ್ರೀತಲ್ಲೂರ ರಾಯನ ಗೌಡ್ರು ಪ್ರಜ್ಞಾ ಪಕ್ಷದ ಹುರಿಯಾಳಾಗಿ ಸ್ಪರ್ಧಿಸಿದರು. ಆಗ ಸವದತ್ತಿ ತಾಲ್ಲೂಕಿನಲ್ಲಿರುವ ಎಲ್ಲ ಹಳ್ಳಿಗಳೂ ಪರಸಗಡ ಮತಕ್ಷೇತ್ರದ ವ್ಯಾಪ್ತಿಗೆ ಬರುತ್ತಿದ್ದವು. ಅದೇ ಕಾಲಕ್ಕೆ ಬೈಲಹೊಂಗಲ ಮತಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಶ್ರೀ ಎಚ್ ಎಸ್ ಮೆಟಗುಡ್ಡ ಎಂಬ ವಕೀಲರು ಹುರಿಯಾಳಾಗಿದ್ದರು. ಇವರ ಎದುರಾಳಿಯಾಗಿ ಶ್ರೀ ಎಸ್ ಎನ್ ಅಂಡಗಿಯವರು ಪ್ರಜಾಪಕ್ಷದಿಂದ ಚುನಾವಣೆಗೆ ನಿಂತಿದ್ದರು. ಕಾಂಗ್ರೆಸ್ ಪಕ್ಷದ ಇಬ್ಬರು ಅಭ್ಯರ್ಥಿಗಳು ಅನ್ಯೋನ್ಯವಾಗಿದ್ದು ಪರಸ್ಪರ ಸಹಕಾರದಿಂದ ಪ್ರಚಾರ ಮಾಡಿದರು.

ಆ ದಿನಗಳಲ್ಲಿ ಚುನಾವಣೆಗೆ ಪ್ರಚಾರ ಮಾಡುವುದು ಗ್ರಾಮಾಂತರ ಪ್ರದೇಶದಲ್ಲಿ ತುಂಬಾ ಪ್ರಯಾಸಕರ ಕೆಲಸವಾಗಿದ್ದಿತು. ಕಾಲ್ನಡಿಗೆಯಲ್ಲಿ ಮತ್ತು ಕುದುರೆ ಮೇಲೆ ಹೋಗಿ ಪ್ರಚಾರ ಮಾಡಬೇಕಾಗಿತ್ತು. ಯರಗಟ್ಟಿಯ ಶ್ರೀಮಂತ ದೇಸಾಯಿಯವರು ಹಾಗೂ ಅವರ ಕಾರಭಾರಿ ಶ್ರೀ ಹಿರೇಮಠರು ಕೌಜಲಗಿಯವರಿಗೆ ಬೆಂಬಲವಾಗಿ ಕುದುರೆಯನ್ನೇರಿ ಪ್ರವಾಸ ಮಾಡಿ ದೇಮಣ್ಣನವರೊಂದಿಗೆ ಹಳ್ಳಿಗಳಲ್ಲಿ ಕಾಣಿಸಿಕೊಂಡರು. ಇದು ಅವರಿಗೆ ದೊಡ್ಡ ಬಲ ತಂದು

ಕೊಟ್ಟಿತು. ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಪದ್ಮರಾಜ ಜೋಗಾರ, ಶ್ರೀ ವೀರಪ್ಪ ಸುತಗಟ್ಟಿ, ಶ್ರೀ ಮಡ್ಡಪ್ಪ ಹಪ್ಪಳಿ, ಶ್ರೀ ಹುರಜು ಶೆಟ್ಟರು ಮುಂತಾದವರು ಎಲ್ಲ ಬೆಂಬಲವನ್ನು ಹೆಚ್ ವಿ ಕೌಜಲಗಿಯವರಿಗೆ ನೀಡಿದರು. ಅಸುಂಡಿಯ ಶ್ರೀ ಬಸಪ್ಪ ಮಲ್ಲೂರ, ಕರಿಕಟ್ಟೆಯ ಶ್ರೀ ಬಸಪ್ಪಕಡಕೋಳ, ಹಿರೇಕುಂಬಿಯ ಶ್ರೀ ಕಲ್ಲಪ್ಪ ಬೆಳವಡಿ, ಉಗರಗೋಳದ ಶ್ರೀ ಚೆನ್ನಪ್ಪ ಯರಗಣವಿ ಹಾಗೂ ಹಿರಿಯರಾದ ಶ್ರೀ ವೆಂಕರೆಡ್ಡಿ ಹೂಲಿ ಇವರೆಲ್ಲ ದೇಶ ಸೇವೆಗೆ ತ್ಯಾಗ ಮಾಡಿದವರಾಗಿದ್ದು ಹೆಚ್ ವಿ ಕೌಜಲಗಿ ಯವರಿಗೆ ಮಾರ್ಗದರ್ಶನ ಮತ್ತು ಆಶೀರ್ವಾದ ಮಾಡಿದರು. ಇಂತಹ ಅಖಂಡ ಬೆಂಬಲದಿಂದ ಕೌಜಲಗಿಯವರು ಸರಾಗವಾಗಿ ಚುನಾಯಿತರಾದರು. ಇವರ ಸಹೋದ್ಯೋಗಿ ಶ್ರೀ ಮೆಟಗುಡ್ಡದವರೂ ಆರಿಸಿ ಬಂದರು.

ಹೆಚ್ ವಿ ಕೌಜಲಗಿಯವರಿಗೆ ಶಾಸಕರಾಗಿ ಕೆಲಸ ಮಾಡುವುದು ಕಷ್ಟವೆನಿಸಲಿಲ್ಲ. ಕಾರಣ ಅವರು ಶಾಸಕಾಂಗ ಸಭೆಯಲ್ಲಿ ವಿಷಯ ಮಂಡಿಸುವುದು, ಚರ್ಚಿಸುವುದು ಮುಂತಾದವನ್ನು ಹೊರತುಪಡಿಸಿದರೆ ಉಳಿದಂತೆ ಸಾರ್ವಜನಿಕ ಜೀವನದ ಆಗುಹೋಗುಗಳನ್ನು ಬಲ್ಲವರಾಗಿದ್ದಲ್ಲದೆ ಸ್ವತಃ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು ಅನುಭವವನ್ನು ಪಡೆದಿದ್ದರು. ಜನರ ನಿರೀಕ್ಷಣೆ ಏನು ಇದ್ದೀತೆಂಬುದೂ ಅವರ ಅರಿವಿಗೆ ಬಂದಿದ್ದಿತು. ಐದು ವರ್ಷಗಳ ಅವಧಿಯಲ್ಲಿ ಅವರು ತಮ್ಮ ಮತಕ್ಷೇತ್ರದ ಪ್ರತಿಯೊಂದು ಹಳ್ಳಿಗೂ ಖುದ್ದಾಗಿ ಭೇಟಿ ನೀಡಿದರು. ಹಳ್ಳಿಗರ ಕಷ್ಟಸುಖಗಳನ್ನು ಕೇಳಿದರು. ಅವರ ಕುಂದುಕೊರತೆಗಳನ್ನು ಪರಿಹರಿಸಲು ಶಕ್ತಿಮೀರಿ ಶ್ರಮಿಸಿದರು. ತಾವು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದಾಗ ಕಂಡು ಬಂದಿದ್ದ ಅನೇಕ ನಾಗರಿಕ ಸೌಲಭ್ಯಗಳ ಕೊರತೆಯನ್ನು ತುಂಬಲು ಈಗ ಒದಗಿದ ಅವಕಾಶವನ್ನು ಬಳಸಿಕೊಂಡರು.

ಕೌಜಲಗಿಯವರು ಎಂದೂ ಹೆಚ್ಚು ಮಾತನಾಡಿದವರಲ್ಲ. ಕಾರ್ಯದಲ್ಲಿ ನಂಬಿಕೆ ಇಟ್ಟವರು. ಮಾತು ಬೆಳ್ಳಿ ಮೌನ ಬಂಗಾರ ಎಂಬುದು ಅವರ ಅರಿವಿನಲ್ಲಿದ್ದಿತು ಕಾಯಕವೇ ಕೈಲಾಸ ಎಂಬ ಬಸವಣ್ಣನವರ ವಚನ ಅವರ ದಾರಿದೀಪವಾಗಿದ್ದಿತು. ಅವರು ಜನರಿಗೆ ಆಶ್ವಾಸನೆ ಕೊಡಬೇಕಾದರೆ ಸಾಕಷ್ಟು ಚಿಂತನೆ ಮಾಡುತ್ತಿದ್ದರು. ಒಂದು ಬಾರಿ ಮಾತುಕೊಟ್ಟರೆಂದರೆ ಏನೇ ಬಂದರೂ ಅದನ್ನು ಈಡೇರಿಸಲು ಶ್ರಮಿಸುತ್ತಿದ್ದರು. ಇದರಿಂದಾಗಿ ಕೌಜಲಗಿಯವರು ಬೇಗ ಜನಪ್ರಿಯ ಶಾಸಕರಾದರು. ಯೋಗ್ಯ ಮನುಷ್ಯನೆನಿಸಿಕೊಂಡರು. ಇದು ಅವರಿಗೆ ಮತದಾರರಲ್ಲಿ ವಿಶ್ವಾಸ ಗಳಿಸಲು ನೆರವಾಯಿತು. ರಾಜಕೀಯ ಕ್ಷೇತ್ರದಲ್ಲಿ ಅವರು ದೃಢವಾಗಿ ಬೇರೂರಲು ನಾಂದಿಯಾಯಿತು.

## ಎರಡನೆ ಬಾರಿ ಶಾಸಕರಾಗಿ ಆಯ್ಕೆ

1957 ರ ಸಾರ್ವತ್ರಿಕ ಚುನಾವಣೆ ಬಂದಿತು. ಈ ಬಾರಿ ಮುಂಬಯಿ ಪ್ರಾಂತದಿಂದ ಬೆಳಗಾಂವಿ ಜಿಲ್ಲೆ ಕರ್ನಾಟಕ ರಾಜ್ಯಕ್ಕೆ ಸೇರಿದ್ದಿತು. ಕರ್ನಾಟಕದ ಏಕೀಕರಣದ (1956) ತರುವಾಯ ನಡೆದ ಮೊದಲ ಚುನಾವಣೆ ಇದು. ಹೆಚ್ ವಿ ಕೌಜಲಗಿಯವರು ಯಾವುದೇ ಪಕ್ಷಕ್ಕೂ ಒಂದು ಆಸ್ತಿಯಿದ್ದಂತಿದ್ದರು. ಆದ್ದರಿಂದ ಕಾಂಗ್ರೆಸ್ ಪಕ್ಷದ ವರಿಷ್ಠರು ಈ ಬಾರಿಯೂ ಇವರಿಗೆ ವಿಧಾನ

ಸಭೆ ಸ್ಥಾನಕ್ಕೆ ಸ್ಪರ್ಧಿಸಲು ಅವಕಾಶ ಕೊಡಬೇಕೆಂದು ನಿರ್ಧರಿಸಿದರು. ಸವದತ್ತಿ (ಪರಸಗಡ) ಕ್ಷೇತ್ರದಲ್ಲಿ ಹಿರಿಯರೂ ಅಪ್ಪಟ ಗಾಂಧಿವಾದಿಗಳು ಮತ್ತು ಸ್ವಾತಂತ್ರ್ಯ ಸೇನಾನಿಯಾಗಿದ್ದ ಹೂಲಿಯ ಶ್ರೀ ವೆಂಕಟರೆಡ್ಡಿ ಹೂಲಿಯವರಿದ್ದರು. ಅವರಿಗೆ ಈ ಬಾರಿ ಪರಸಗಡ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ವರಿಷ್ಠರ ಇರಾದೆಯಾಗಿತ್ತು. ಹೆಚ್ ವಿ ಕೌಜಲಗಿಯವರಿಗೂ ಸ್ಥಾನ ಉಳಿಸಿಕೊಂಡು ಹೂಲಿಯವರಿಗೆ ಅವಕಾಶ ಕೊಡುವುದು ವರಿಷ್ಠರಿಗೆ ಸುಲಭವಿತ್ತು. ಏಕೆಂದರೆ ಹೆಚ್ ವಿ ಕೌಜಲಗಿಯವರು ಪರಸಗಡ ಕ್ಷೇತ್ರದಲ್ಲಿ ಎಷ್ಟು ಪರಿಚಿತರೋ ಬೈಲಹೊಂಗಲ ತಾಲ್ಲೂಕಿನ ವ್ಯಾಪ್ತಿಯ ಕ್ಷೇತ್ರದಲ್ಲೂ ಅಷ್ಟೇ ಪರಿಚಿತರಾಗಿದ್ದರು. ಕೌಜಲಗಿಯವರು ವಕೀಲಿ ವೃತ್ತಿಯನ್ನು ಆರಂಭಿಸಿದ್ದೇ ಬೈಲಹೊಂಗಲದಲ್ಲಿ. ಅಲ್ಲಿನ ಸಾರ್ವಜನಿಕರ ಸಂಪರ್ಕ ಕೌಜಲಗಿಯವರಿಗೆ ಚೆನ್ನಾಗಿಯೇ ಇದ್ದಿತು. ಜೊತೆಗೆ ಹೂಲಿ ಕೌಜಲಗಿಯವರಿಗೆ ಚಿಕ್ಕಂದಿನಲ್ಲಿ ಆಟಪಾಠ ಕಲಿತು ಬೆಳೆದ ಊರು. ಅಲ್ಲಿನ ಹಿರಿಯರೊಬ್ಬರಿಗೆ ಸ್ಥಾನ ಬಿಟ್ಟುಕೊಡಲು ಅವರು ಸಂತೋಷದಿಂದಲೇ ಒಪ್ಪಿದರು. ತಾವು ಬೈಲಹೊಂಗಲ ಮತಕ್ಷೇತ್ರದಿಂದ ಸ್ಪರ್ಧಿಸಿದರು. ಹಿಂದಿನಂತೆಯೇ ಸ್ನೇಹಿತರು, ಹಿತೈಷಿಗಳು ಮತ್ತು ದೊಡ್ಡವರ ಬೆಂಬಲ ಪ್ರೋತ್ಸಾಹಗಳಿಂದ ಸರಾಗವಾಗಿಯೇ ಜಯಶೀಲರಾದರು.

ಎರಡನೇ ಬಾರಿಗೆ ಶಾಸಕರಾಗುವ ಅವಕಾಶ ಕೌಜಲಗಿಯವರಿಗೆ ಬಂದದ್ದು ಅವರ ರಾಜಕೀಯ ಜೀವನದ ಇನ್ನೊಂದು ಏರುಮೆಟ್ಟಿಲಾಯಿತು. ಅದೂ ಕರ್ನಾಟಕ ಏಕೀಕರಣದ ಆನಂತರ ನಡೆದ ಮೊದಲ ಚುನಾವಣೆಯಲ್ಲಿ ಅವರು ವಿಧಾನಸಭೆಯನ್ನು ಪ್ರವೇಶಿಸಿದರು. ಇದರಿಂದಾಗಿ ಅವರು ಕನ್ನಡನಾಡಿನ ಶಾಸನ ಸಭೆಯಲ್ಲಿ ತಮ್ಮ ವಿಚಾರಗಳನ್ನು ಮುಂದಿಡುವ ಮತ್ತು ತಮ್ಮ ಜನರ ಸಮಸ್ಯೆಗಳಿಗೆ ತಮ್ಮವರಿಂದಲೇ ಪರಿಹಾರ ದೊರಕಿಸುವ ಅವಕಾಶ ಪಡೆದರು. ಮುರಗೋಡ, ಚಚಡಿಗಳಲ್ಲಿ ಶಾಲಾಕಟ್ಟಡಗಳ ನಿರ್ಮಾಣ, ಹಿರೇಬೂದನೂರು ನೀರಾವರಿ ಕೆರೆ ಮತ್ತು ಮಳಗಲಿ ನೀರಾವರಿ ಕೆರೆ ಹಿರೇಕೊಪ್ಪ ಹಾಗೂ ಮರಕುಂಜ ನೀರಾವರಿ ಕೆರೆಗಳನ್ನು ಕಟ್ಟಿಸಿದರು. ಜನರ ಪ್ರತಿಯೊಂದು ಕುಂದುಕೊರತೆಗಳ ಬಗ್ಗೆಯೂ ಅವರು ವಿಧಾನಸಭೆಯಲ್ಲಿ ಸರ್ಕಾರದ ಗಮನ ಸೆಳೆಯುತ್ತಿದ್ದುದು ಆ ಕಾಲದ ಶಾಸನ ಸಭಾ ಕಲಾಪದಿಂದ ತಿಳಿದುಬರುತ್ತದೆ.

1958 ರಲ್ಲಿ ವಿಧಾನ ಸಭೆಯಲ್ಲಿ ಮಾತನಾಡುತ್ತಾ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಬಗ್ಗೆ ಮಾತನಾಡುತ್ತಾ ಹೀಗೆ ಹೇಳಿದರು:

"ಈ ಮಸೂದೆಯ ಬಗ್ಗೆ ನನ್ನ ಅಭಿಪ್ರಾಯಗಳನ್ನು ತಿಳಿಸುವ ಮೊದಲು ನಾನು ಈ ಮಸೂದೆಯ ಕೆಲವು ಮುಖ್ಯ ಲಕ್ಷಣಗಳನ್ನು ಪ್ರಸ್ತಾಪಿಸ ಬಯಸುತ್ತೇನೆ. ಮೊದಲನೆಯದಾಗಿ ಏಕೀಕರಣಗೊಂಡ ವಿವಿಧ ಪ್ರದೇಶಗಳಲ್ಲಿ ಹಾಲಿ ಚಾಲ್ತಿಯಲ್ಲಿರುವ ಎಲ್ಲ ಪಂಚಾಯಿತಿ ಕಾಯಿದೆಗಳನ್ನು ಗಮನಿಸಿದಾಗ ಪ್ರಸ್ತುತ ಮಸೂದೆಯ ಮೂಲಕ ಅಸ್ತಿತ್ವಕ್ಕೆ ಬಂದಿರುವ ಪಂಚಾಯಿತಿಗಳಿಗೆ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಅಧಿಕಾರಗಳಿವೆ. ಇದು ಸಮಗ್ರವಾಗಿದ್ದು ಒಳ್ಳೆಯ ವಿಷಯವಾಗಿದೆ. ಈಗಿನ ವ್ಯವಸ್ಥೆಯಲ್ಲಿ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡುವ

ಔಚಿತ್ಯವಿದೆ. ಅಂತಹ ಅಧಿಕಾರಗಳನ್ನು ನೀಡಲಾಗಿದೆ ಕೂಡ. ನನ್ನ ಅಭಿಮತದಲ್ಲಿ ಅವುಗಳಿಗೆ ಇನ್ನೂ ಕೆಲವು ಅಧಿಕಾರಿಗಳನ್ನು ನೀಡುವ ಅಗತ್ಯವಿದೆ. ಆ ಬಗ್ಗೆ ನಾನು ತರುವಾಯ ಪ್ರಸ್ತಾಪಿಸುತ್ತೇನೆ. ಎರಡನೆಯದಾಗಿ ಈ ಮಸೂದೆಯಲ್ಲಿ ತಾಲ್ಲೂಕು ಮಂಡಳಿಗಳಿಗೆ ಅವಕಾಶ ಕಲ್ಪಿಸಿರುವುದು ಒಳ್ಳೆಯ ಲಕ್ಷಣವೇ. ಕೆಲವು ವರ್ಷಗಳ ಹಿಂದೆ ತಾಲ್ಲೂಕು ಮಂಡಳಿಗಳ ಅಗತ್ಯವಿಲ್ಲ. ಅವುಗಳನ್ನು ರದ್ದು ಮಾಡುವುದು ಸೂಕ್ತ ಎಂದು ಭಾವಿಸಲಾಗಿತ್ತು. ಮುಂಬಯಿ ಪ್ರಾಂತದಲ್ಲಿ ಅವುಗಳನ್ನು 1935 ಅಥವಾ 1936 ರಷ್ಟು ಹಿಂದೆಯೇ ರದ್ದುಪಡಿಸಲಾಗಿತ್ತು. ನಾವು ಈಗ ಗ್ರಾಮಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕಾಣುತ್ತಿದ್ದೇವೆ. ತನ್ನ ಗಮನವೂ ಗ್ರಾಮಗಳನ್ನು ಅಭಿವೃದ್ಧಿಗೊಳಿಸುವುದರತ್ತ ಹರಿದಿದೆ. ಈ ಹಿನ್ನೆಲೆಯಲ್ಲಿ ತಾಲ್ಲೂಕು ಮಂಡಳಿಗಳು ಅಗತ್ಯವಾಗಿದೆ. ನಾನು ಈ ಅಂಶವನ್ನು ಸ್ವಾಗತಿಸುತ್ತೇನೆ" (ದಿನಾಂಕ 6–5–1958)

ಕೌಜಲಗಿಯವರ ಮೇಲಿನ ಮಾತುಗಳು ಅರ್ಥಪೂರ್ಣವಾಗಿವೆ. ಅವರು ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಇರುವುದು ಅಗತ್ಯ ಎಂದು ಹೇಳಿದ್ದಾರ. 1983ರ ತರುವಾಯ ತಾಲ್ಲೂಕು ಮಂಡಳಿಗಳನ್ನು ರದ್ದುಪಡಿಸಿ ತಾಲ್ಲೂಕು ಸಮಿತಿಗಳನ್ನು ನೇಮಿಸಲಾಯಿತು. ಅದರ ಮತ್ತೆ ಒಂದು ದಶಕದ ಅನಂತರ ತಾಲ್ಲೂಕು ಅಭಿವೃದ್ಧಿ ಪಂಚಾಯಿತಿಗಳನ್ನು ರಚಿಸಿ ಅವುಗಳಿಗೆ ಶಾಸನಬದ್ಧ ಅಧಿಕಾರಗಳನ್ನು ನೀಡಲಾಗಿದೆ. ಇದರಿಂದ ಕೌಜಲಗಿಯವರು ಹೊಂದಿದ್ದ ಅಭಿಪ್ರಾಯಗಳು ದೂರದೃಷ್ಟಿಯಿಂದ ಕೂಡಿದ್ದವು ಎಂಬುದು ಸ್ಪಷ್ಟವಾಗುತ್ತದೆ.

1957ರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಆಡಿದ ಮಾತುಗಳು ಅವರು ಪ್ರತಿನಿಧಿಸುತ್ತಿದ್ದ ಪ್ರದೇಶದ ಬಗ್ಗೆ ಅವರು ಹೊಂದಿದ್ದ ಕಾಳಜಿಗೆ ಸಾಕ್ಷಿಯಾಗಿದೆ. "ವ್ಯವಸಾಯ ಸಂಶೋಧನೆಗೆ ಸಂಬಂಧಿಸಿದಂತೆ ನಾನು ಮುಂದಿಡುವ ಮೂರನೆಯ ಅಂಶವೆಂದರೆ ನನ್ನ ಜಿಲ್ಲೆಯಲ್ಲಿರುವ ಸಂಶೋಧನಾ ಕೇಂದ್ರಕ್ಕೆ ಸಂಬಂಧಿಸಿದ್ದು, ಅರಭಾವಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಜೋಳವನ್ನು ಯಥೇಚ್ಛವಾಗಿ ಬೆಳೆಯುತ್ತಾರೆ. ಕೇಂದ್ರ ಸರ್ಕಾರವು ಮಿಶ್ರತಳಿ ಜೋಳ (ಮೈಜ್) ಬೆಳೆಯುವುದರ ಬಗ್ಗೆ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದೆ. ಈಗ ಅಮೆರಿಕಾದ ರಾಕ್‌ಫೆಲರ್ ನಿಧಿಯಿಂದ ಉದಾರವಾಗಿ ಈ ಸಂಶೋಧನೆಗಳಿಗೆ ನೆರವು ನೀಡುತ್ತಿದ್ದಾರೆ. ಆದ್ದರಿಂದ ಸರ್ಕಾರವು ದಯವಿಟ್ಟು ಕೆಲವು ಕಟ್ಟಡಗಳನ್ನು ಕಟ್ಟಿಕೊಟ್ಟು ನಮ್ಮಲ್ಲಿರುವ ನೂರಾರು ಎಕರೆಗಳನ್ನು ಇದಕ್ಕಾಗಿ ಬಳಸಿಕೊಳ್ಳುವ ಏರ್ಪಾಡು ಮಾಡಬೇಕು"

"ಪಶುಸಂಗೋಪನೆ ವಿಷಯಕ್ಕೆ ಸಂಬಂಧಿಸಿದಂತೆ ಹಳೆಯ ಮುಂಬಯಿ ಪ್ರಾಂತಕ್ಕೆ ಸೇರಿದ್ದ ನಾಲ್ಕು ಜಿಲ್ಲೆಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಒಂದೊಂದು ಚಿಕಿತ್ಸಾಲಯಗಳಿವೆ. ಮುಂಬಯಿ ಸರ್ಕಾರವು ಪಶು ಶಸ್ತ್ರ ಚಿಕಿತ್ಸಕರಿಲ್ಲದಿರುವುದರಿಂದ ಹೆಚ್ಚು ಚಿಕಿತ್ಸಾಲಯಗಳನ್ನು ತೆರೆಯಲಾಗುವುದಿಲ್ಲ ಎಂದು ಹೇಳುತ್ತಿತ್ತು. ಸಾರ್ವಜನಿಕ ಬೇಡಿಕೆಯನ್ನು ಈಡೇರಿಸಲು ಅವರು ಜಾನುವಾರು ಪರಿಚಾರಕರ ಶಿಕ್ಷಣವನ್ನು ಪ್ರಾರಂಭಿಸಿದರು. ಆದರೆ ಕಳೆದ ಎರಡು ವರ್ಷಗಳಲ್ಲಿ ಆ ಶಿಕ್ಷಣವನ್ನು ನಿಲ್ಲಿಸಲಾಗಿದೆ.

ನಾನು ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಆ ಜಾನುವಾರು ಪರಿಚಾರಕರ ಶಿಕ್ಷಣವನ್ನು ಮತ್ತೆ ಪ್ರಾರಂಭಿಸಿ ಅವರಿಗ ತರಬೇತಿ ನೀಡಬೇಕು. ತನ್ನ ಕಡೆ ಪಂಚಾಯಿತಿಗಳು ಮತ್ತು ಗ್ರಾಮಸ್ಥರು ಜಾನುವಾರು ಪರಿಚಾರಕರನ್ನು ನೇಮಿಸಿ ಚಿಕಿತ್ಸಾಲಯಗಳನ್ನು ತೆರೆದರೆ ಅವುಗಳ ನಿರ್ವಹಣಾ ವೆಚ್ಚವನ್ನು ನೀಡಲು ಸಿದ್ಧರಿದ್ದಾರೆ. ಹಾಗೂ ಅವರು ಒಂದು ಕಟ್ಟಡವನ್ನು ಅದಕ್ಕಾಗಿ ಒದಗಿಸುವುದಲ್ಲದೆ ಔಷಧಿಯ ವೆಚ್ಚವನ್ನೂ ನೀಡುತ್ತಾರೆ. ಆದ್ದರಿಂದ ಸರ್ಕಾರ ಮಾಡಬೇಕಾಗಿರುವುದು ಜಾನುವಾರು ಪರಿಚಾರಕರನ್ನು ನೇಮಿಸುವ ಕೆಲಸ".

"ಸ್ವಾಮಿ ಕೊನೆಯದಾಗಿ ನನ್ನ ಕೋರಿಕೆಯೆಂದರೆ ಸರ್ಕಾರದ ಮುಂದೆ ಒಂದು ಪಶುಸಂಗೋಪನಾ ಕಾಲೇಜನ್ನು ತೆರೆಯುವ ನಾನು ಈ ಸದನದಲ್ಲಿ ಹಿಂದೊಮ್ಮೆ ಹೇಳಿದಂತೆ ಈ ಕಾಲೇಜನ್ನು ಸ್ಥಾಪಿಸಲು ಧಾರವಾಡವು ಸೂಕ್ತ ಸ್ಥಳವಾಗಿದೆ. ನಾನು ಧಾರವಾಡದಲ್ಲಿ ಪಶುಸಂಗೋಪನಾ ಕಾಲೇಜನ್ನು ಸ್ಥಾಪಿಸಬೇಕೆಂದು ಕಳಕಳಿಯಿಂದ ಸರ್ಕಾರವನ್ನು ಕೋರುತ್ತೇನೆ. ಅಲ್ಲಿ ಕಾಲೇಜು ಸ್ಥಾಪನೆಗೆ ಎಲ್ಲ ಅಗತ್ಯವಾದ ಸೌಲಭ್ಯಗಳಿವೆ. ವಂದನೆಗಳು" (ದಿ: 26–7–2957)

ಈ ಮೇಲಿನ ಪ್ರಸ್ತಾಪಗಳನ್ನು ಹೆಚ್.ವಿ. ಕೌಜಲಗಿಯವರು ಕರ್ನಾಟಕ ವಿಧಾನಸಭೆಗೆ ಚುನಾಯಿರಾಗಿ ಬಂದ ವರ್ಷವೇ ಸರ್ಕಾರದ ಮುಂದಿಟ್ಟಿದ್ದಾರೆ. ಹುಬ್ಬಳ್ಳಿಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವುದಕ್ಕೂ ಶ್ರೀಯುತರು ಆಗಾಗ ಸರ್ಕಾರವನ್ನು ಒತ್ತಾಯಿಸುತ್ತಿದ್ದರು. ಹೀಗೆ ತಮ್ಮ ಮತಕ್ಷೇತ್ರ ಮಾತ್ರವಲ್ಲದೆ ಜಿಲ್ಲೆ ಮತ್ತು ಇಡಿಯಾಗಿ ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಸರ್ಕಾರದಿಂದ ಆಗಬೇಕಾದ ಕೆಲಸಗಳಿಗಾಗಿ ಒತ್ತಾಯಿಸುತ್ತಿದ್ದರು.

ಕೌಜಲಗಿಯವರು ಸ್ವತಃ ವಕೀಲರಾಗಿದ್ದವರು; ಅವರು ನ್ಯಾಯಾಂಗದ ಒಳಹೊರಗನ್ನು ಬಲ್ಲವರಾಗಿದ್ದರು. ಅವರು ಸದನದಲ್ಲಿ ಹಳೆ ಮೈಸೂರು ಕಡೆಯ ನ್ಯಾಯಾಧೀಶರನ್ನು ಮುಂಬಯಿ ಪ್ರದೇಶಕ್ಕೆ ವರ್ಗಾ ಮಾಡುವುದು ಅಷ್ಟು ಸೂಕ್ತವಲ್ಲ ಎಂದು ಹೇಳಿದರು. ಇದಕ್ಕೆ ಅವರು ನೀಡಿದ ಕಾರಣವೆಂದರೆ ಭಿನ್ನಭಿನ್ನ ಸರ್ಕಾರಗಳಡಿ ಇದ್ದ ಪ್ರದೇಶಗಳಲ್ಲಿ, ನ್ಯಾಯಾಲಯಗಳಲ್ಲಿ ನ್ಯಾಯ ನೀಡಿಕೆಗೆ ಬೇರೆ ಬೇರೆ ನಿಯಮಾವಳಿಗಳನ್ನು ಅನುಸರಿಸಲಾಗುತ್ತಿದೆ. ಆದ್ದರಿಂದ ನ್ಯಾಯಾಲಯಗಳ ಪ್ರಕ್ರಿಯೆ ಮತ್ತು ಕಲಾಪ ನಡೆಸಲು ಏಕ ವಿಧಾನವನ್ನು ಜಾರಿಗೆ ತಂದು ಆ ನಂತರ ನ್ಯಾಯಾಧೀಶರನ್ನು ವರ್ಗಾವಣೆ ಮಾಡಿ ಎಂದು ಹೇಳುತ್ತಿದ್ದರು. ಹಾಗೆಯೇ ಮಸೂದೆಗಳ (ಬಿಲ್) ಕರಡನ್ನು ಸಿದ್ಧಪಡಿಸುವುದನ್ನು ಕುರಿತು ಮುಚ್ಚುಮರೆ ಇಲ್ಲದೆ ತಮ್ಮ ಅಭಿಪ್ರಾಯಗಳನ್ನು ಹೊರಗೆಡಹಿದ್ದಾರೆ. ಅದು ಈ ರೀತಿ ಇದೆ:–

"ಅನೇಕ ಮಸೂದೆಗಳಿಗೆ ಸಂಬಂಧಿಸಿದಂತೆ ಕರಡು ಸಿದ್ಧಪಡಿಸಿರುವುದು ಅಷ್ಟು ತೃಪ್ತಿಕರವಾಗಿಲ್ಲ; ಇದು ಹೀಗಾಗಲು ಕಾರಣ ಕರಡು ಸಿದ್ಧಪಡಿಸುವುದು ಒಂದು ಕಲೆಯೇ ಆಗಿದ್ದು ಅದನ್ನು ಎಲ್ಲರೂ ಮಾಡಲು ಸಾಧ್ಯವಿಲ್ಲ. ಪ್ರತಿಯೊಬ್ಬ ಕಾನೂನು ಪದವೀಧರ ಅಥವಾ ನ್ಯಾಯಾಧೀಶ ಒಳ್ಳೆಯ ಕರಡು ರಚನಾಕಾರನಾಗಿರುವುದಿಲ್ಲ. ಆದ್ದರಿಂದ ನನ್ನ ಸಲಹೆಯೆಂದರೆ ಸರ್ಕಾರವು ಈ

ಕರಡು ರಚಿಸುವ ಕಲೆಯನ್ನು ಬಲ್ಲ ಮತ್ತು ಈ ಕೆಲಸವನ್ನು ಇಷ್ಟಪಡುವ ನ್ಯಾಯಾಧೀಶರನ್ನು ಆರಿಸಿ ಅವರಿಗೆ ಈ ಕೆಲಸ ವಹಿಸಿಕೊಡಬೇಕು. ಹೆಚ್ಚು ನ್ಯಾಯಾಧೀಶರು ಹೊರತು ಈ ನಿಯಮಾವಳಿಗಳ ಕರಡು ಸಿದ್ಧಪಡಿಸುವುದನ್ನು ಇಷ್ಟಪಡುವುದಿಲ್ಲ. ಆದ್ದರಿಂದ ಕರಡು ಬರೆಯುವ ಕೆಲಸದಲ್ಲಿ ಆಸಕ್ತಿ ಇರುವವರನ್ನು ಆಯ್ದು ಈ ಕೆಲಸಕ್ಕೆ ಹಚ್ಚಬೇಕು" (ದಿನಾಂಕ: 14–3–1959).

ಕಾನೂನನ್ನು ರೂಪಿಸುವುದು ಮಾತ್ರ ಮುಖ್ಯ ಕೆಲಸವಲ್ಲ ಹಾಗೆ ಕಾನೂನುಗಳನ್ನು ರಚಿಸಿದ ಮೇಲೆ ಅದರಲ್ಲಿ ಸಾರ್ವಜನಿಕರಿಗೆ ವಕೀಲರಿಗೆ ಹಾಗೂ ಆಡಳಿತಗಾರರಿಗೆ ಅನಾನುಕೂಲವಾಗುವಂತಹ ಅಸ್ಪಷ್ಟ ವ್ಯಾಖ್ಯಾನಗಳಾಗಲಿ ನಿರೂಪಣೆಗಳಾಗಲಿ ಇರಬಾರದು. ಇದರಿಂದ ಮುಂದಿನ ಅನುಷ್ಠಾನ ಹಂತದಲ್ಲಿ ಎಲ್ಲರೂ ಹೆಚ್ಚಿನ ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಕಾನೂನು ರಚನೆ ಕಾಲದಲ್ಲಿ ಪರಿಣಿತರು ಮತ್ತು ಸ್ಪಷ್ಟವಾಗಿ ಬರೆಯುವವರು ಕರಡು ಸಿದ್ಧಪಡಿಸುವುದು ಉತ್ತಮವೆಂದು ಹೆಚ್ ವಿ ಕೌಜಲಗಿಯವರು ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಇದು ಯಾವ ಕಾಲಕ್ಕೂ ಅನ್ವಯಿಸುವಂತಹ ಮಾತು. ಅವರು ಮುಂದುವರಿದು ನ್ಯಾಯಾಲಯಗಳ ಕಟ್ಟಡಗಳ ಬಗ್ಗೆ ಹೇಳಿರುವ ಸಂಗತಿಗಳು ಗಮನಾರ್ಹವಾಗಿವೆ.

"ನ್ಯಾಯಾಲಯಗಳ ಕಟ್ಟಡಗಳಿಗೆ ಸಂಬಂಧಿಸಿದಂತೆ ಸರ್ಕಾರ ತುಂಬಾ ನಿರ್ಲಕ್ಷ್ಯ ಧೋರಣೆ ತಾಳಿದೆ. ಅವುಗಳಿಗೆ ಒಳ್ಳೆಯ ಮತ್ತು ಖಾಯಂ ಆದ ಕಟ್ಟಡಗಳನ್ನು ಸರ್ಕಾರ ಒದಗಿಸುತ್ತಿಲ್ಲ. ಬೆಂಗಳೂರಿನಲ್ಲಿ ಕೂಡ ನಾನು ನೋಡಿದಂತೆ ನ್ಯಾಯಾಧೀಶರುಗಳಿಗೆ ಕಿರು ಕೊಠಡಿಗಳನ್ನು ನೀಡಲಾಗಿದೆ. ಈ ನ್ಯಾಯಾಲಯಗಳಿಗೆ ಸೂಕ್ತವಾದ ಕಟ್ಟಡಗಳಿಲ್ಲ. ರಾಜ್ಯಾದ್ಯಂತ ಖಾಯಂ ಕಟ್ಟಡಗಳನ್ನು ಕಟ್ಟುವ ಒಂದು ಸಮಗ್ರ ಯೋಜನೆ ಸರ್ಕಾರ ರೂಪಿಸಬೇಕು. ನನ್ನ ಅಭಿಪ್ರಾಯದಲ್ಲಿ ನ್ಯಾಯಾಲಯಗಳಿಗೆ ಘನತೆ ಮತ್ತು ಗೌರವವನ್ನು ತರುವ ದೃಷ್ಟಿಯಿಂದ ಖಾಯಂ ಕಟ್ಟಡಗಳು ಅಗತ್ಯವಾಗಿದೆ" (ದಿ: 14–3–1959)

ಕೌಜಲಗಿಯವರು ಕರ್ನಾಟಕ ಏಕೀಕರಣಕ್ಕೆ ಮೊದಲು ವಿವಿಧ ಪ್ರದೇಶಗಳಲ್ಲಿ ಜಾರಿಯಲ್ಲಿದ್ದು ಅನೇಕ ನಿಯಮಾವಳಿಗಳನ್ನು ಹಾಗೆಯೇ ಉಳಿಸಿಕೊಂಡಿದ್ದು ಇದರಿಂದ ಪ್ರಾದೇಶಿಕ ತಾರತಮ್ಯಕ್ಕೆ ಅವಕಾಶವಾಗುತ್ತಿದೆ ಮತ್ತು ಇದು ಜನರಿಗೆ ಅನಾನುಕೂಲವಾಗಿದೆ ಎಂಬ ಅಂಶವನ್ನು ಸರ್ಕಾರದ ಗಮನಕ್ಕೆ ತಂದರು. ಇವುಗಳಲ್ಲಿ ಒಂದೆರಡನ್ನು ಪರಿಶೀಲಿಸಬಹುದು. ಅವುಗಳಲ್ಲಿ ಮುಂಬಯಿ ಸರ್ಕಾರವು ಪ್ರಾಥಮಿಕ ವಿದ್ಯಾರ್ಥಿಗಳಿಗೆ ಶುಲ್ಕ ವಿಧಿಸಿದ್ದು ಅದು ಹಾಗಯೇ ಮುಂದುವರಿದಿದ್ದರ ಬಗ್ಗೆ ವಿಧಾನ ಸಭೆಯಲ್ಲಿ ಸರ್ಕಾರದ ಗಮನ ಸೆಳೆದರು.

"ನಾನು ಮುಂಬಯಿ ಕರ್ನಾಟಕದ ಸಮಸ್ಯೆಗಳಿಗೆ ಸೀಮಿತವಾಗಿ ಮಾತನಾಡುತ್ತೇನೆ. ನಾನು ಮೊದಲು ಹೇಳಬೇಕೆಂದಿರುವ ವಿಷಯವೆಂದರೆ ಮುಂಬಯಿ ಪ್ರದೇಶದಲ್ಲಿ ಪ್ರಾಥಮಿಕ ಶಾಲೆಗಳಲ್ಲೂ ಶುಲ್ಕವನ್ನು ವಿಧಿಸಲಾಗುತ್ತಿತ್ತು. ಆದರೆ ಹಾಗೆ ಮಾಡಿದ್ದು ಭಾಷಾವಾರು ಪ್ರಾಂತ ರಚನೆಗೆ ಸ್ವಲ್ಪ ಮೊದಲು ಎಂದಿಟ್ಟುಕೊಳ್ಳಿ. ಆಗ ಅದರ ವಿರುದ್ಧ ಒಂದು ಚಳವಳಿ ಹುಟ್ಟಿಕೊಂಡಿದ್ದರೂ ಆ

ವಿಷಯವನ್ನು ಸರ್ಕಾರ ಪರಿಗಣಿಸುವ ಮೊದಲೇ ಏಕೀಕರಣ ನಡೆದು ಆ ಬಗ್ಗೆ ಏನೂ ಪರಿಹಾರ ಪಡೆಯಲಾಗಲಿಲ್ಲ.

ನಾವು ಕರ್ನಾಟಕದ ತೆಕ್ಕೆಗೆ ಬಂದ ಮೇಲೆ ಈ ಶುಲ್ಕವನ್ನು ರದ್ದುಗೊಳಿಸಲು ಕಾಲಕಾಲಕ್ಕೆ ಮನವಿಗಳನ್ನು ಸಲ್ಲಿಸಿದ್ದರೂ ಯಾವುದೇ ಕ್ರಮವನ್ನು ಸರ್ಕಾರ ಕೈಗೊಂಡದಿರುವುದಕ್ಕೆ ವಿಷಾದವಾಗುತ್ತಿದೆ. ನಮ್ಮ ಕಡೆಯ ಜನ ನಾವು ಶಾಸನಸಭೆ ಅಧಿವೇಶನಕ್ಕೆ ಹೋಗಿ ಹಿಂದಿರುಗುವಾಗೆಲ್ಲ ಹೊಸ ತೆರಿಗೆಗಳನ್ನು ಹೇರಿಸಿಕೊಂಡು ಬರುತ್ತಿದ್ದೇವೆಂದು ಆಡಿಕೊಳ್ಳುತ್ತಿದ್ದಾರೆ. ಸರ್ಕಾರ ಎಲ್ಲ ವಿಷಯಗಳಲ್ಲೂ ಸಮರೂಪದ ತೆರಿಗೆ ವಿಧಿಸುವ ನೀತಿಗೆ ಬದ್ಧವಾಗಿದೆಯೆಂದು ಹೇಳುತ್ತಿದೆ. ಆದರೆ ಯಾವುದಾದರೂ ತೆರಿಗೆ ಇಳಿಕೆ ವಿಷಯ ಬಂದರೆ ಮುಂಬಯಿ ಕರ್ನಾಟಕದ ಜನರನ್ನು ಹೊರಗಿಡಲಾಗುತ್ತದೆ. 'ಇದು ನಮ್ಮ ವಿಧಿ' ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ನಾನು ವಿದ್ಯಾ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಅದನ್ನು ರದ್ದುಪಡಿಸುವ ಮೂಲಕ ನೀವು ಆ ಹೆಗ್ಗಳಿಕೆಗೆ ಪಾತ್ರರಾಗಿ ಅದಕ್ಕೆ ಯಾವ ಶಾಸನವೂ ಬೇಕಿಲ್ಲ. ಅದನ್ನು ಸಚಿವ ಸಂಪುಟ ಅಥವಾ ಸಚಿವರೇ ಮಾಡಬಹುದು. ಹೊಸ ಶಿಕ್ಷಣ ವರ್ಷ ಪ್ರಾರಂಭವಾಗುವ ಹೊತ್ತಿಗೆ ಈ ಶುಲ್ಕ ರದ್ದಾಗಿರುತ್ತದೆಂದು ನಾನು ಭಾವಿಸಿರುತ್ತೇನೆ" (ದಿನಾಂಕ: 15–4–1958)

ಹಾಗೆಯೇ ಕೌಜಲಗಿಯವರು ಮುಂಬಯಿ ಕರ್ನಾಟಕ ಭಾಗದಲ್ಲಿ ಎಸ್.ಎಸ್.ಸಿ. ಎಂಬ ಪರೀಕ್ಷೆಯು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಹಿಂದೆ ನಿಗಧಿಯಾಗಿದ್ದು ಮೈಸೂರು ಸಂಸ್ಥಾನದ ಭಾಗದಲ್ಲಿ ಅದೇ ತರಗತಿಯ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ ಎಂಬ ಪ್ರಮಾಣ ಪತ್ರ ನೀಡಲಾಗುತ್ತದೆ. ಈ ಎರಡು ಬಗೆಯ ಪ್ರಮಾಣ ಪತ್ರಗಳನ್ನು ನೀಡುವ ಪದ್ಧತಿ ಹೋಗಿ ಒಂದೇ ಬಗೆಯ ಅಂದರೆ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರ ನೀಡುವ ವ್ಯವಸ್ಥೆಯಾಗಬೇಕು ಮತ್ತು ಒಂದೇ ಪರೀಕ್ಷೆ ಪದ್ಧತಿ ಏರ್ಪಾಡಾಗಬೇಕು ಎಂದು ಮೇಲ್ಕಂಡ ದಿನಸ ಶಾಸನ ಸಭಾ ಭಾಷಣದಲ್ಲಿ ಸರ್ಕಾರವನ್ನು ಒತ್ತಾಯಿಸಿದರು. ಈ ರೀತಿ ತಾವು ಪ್ರತಿನಿಧಿಸುತ್ತಿದ್ದ ಪ್ರದೇಶಗಳ ಕುಂದುಕೊರತೆಗಳನ್ನು ಮತ್ತು ಸಮಸ್ಯೆಗಳನ್ನು ಎಳೆಎಳೆಯಾಗಿ ಎತ್ತಿಕೊಂಡು ಮನಗಾಣಿಸುವ ರೀತಿಯಲ್ಲಿ ವಿಷಯಮಂಡನೆ ಮಾಡುವುದು ಅವರ ರೀತಿಯಾಗಿದ್ದಿತು.

1962ರ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷದ ನಿರ್ಧಾರವನ್ನು ಗೌರವಿಸಿ ವಿಧಾನಸಭೆಗೆ ಸ್ಪರ್ಧಿಸಲಿಲ್ಲ. ಆಗ ಬೆಳಗಾವಿ ಜಿಲ್ಲೆಯ ದಕ್ಷಿಣ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಲೋಕಸಭಾ ಕ್ಷೇತ್ರದ ಉಮೇದುವಾರರಾಗಿ ಶ್ರೀ ಬಳವಂತರಾವ್ ದಾತಾರ ಅವರು ಸ್ಪರ್ಧಿಸಿ ಆಯ್ಕೆಯಾಗಿದ್ದರು. ಅವರು ಕೇಂದ್ರ ಸರ್ಕಾರದಲ್ಲಿ ಸಚಿವರೂ ಆಗಿದ್ದರು. ಆದರೆ ಅವರ ಆಕಸ್ಮಿಕ ನಿಧನದಿಂದಾಗಿ ಈ ಲೋಕಸಭಾ ಕ್ಷೇತ್ರದ ಸ್ಥಾನ ತೆರವಾಯಿತು. ಮುಂದಿನ ಮಹಾ ಚುನಾವಣೆ 1967 ರಲ್ಲಿ ನಡೆಯುವುದಿದ್ದು ಇನ್ನೂ ಒಂದೂವರೆ ವರ್ಷದ ಅವಧಿ ಬಾಕಿಯಿತ್ತು. ಆದ್ದರಿಂದ ಈ ಕ್ಷೇತ್ರಕ್ಕೆ ನಡೆದ ಮಧ್ಯಂತರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಉಮೇದುವಾರರಾಗಿ ಹೆಚ್ ವಿ ಕೌಜಲಗಿಯವರು ಆಯ್ಕೆಯಾದರು. ಇವರ ವಿರುದ್ಧ ಭಾರತೀಯ ಜನಸಂಘದ ಅಭ್ಯರ್ಥಿಯಾಗಿ ಶ್ರೀ ಜಗನ್ನಾಥರಾವ್ ಜೋಷಿಯವರು

ಸ್ಪರ್ಧಿಸಿದರು. ಶ್ರೀ ಎಸ್ ನಿಜಲಿಂಗಪ್ಪನವರಂತಹ ನಾಯಕರು ಕೌಜಲಗಿಯರವನ್ನು ಹುರಿದುಂಬಿಸಿ ಪ್ರೋತ್ಸಾಹಿಸಿದರು. ಉಭಯ ಪಕ್ಷಗಳ ಪ್ರಮುಖ ನಾಯಕರುಗಳು ಬಂದು ಇಲ್ಲಿ ಪ್ರಚಾರ ನಡೆಸಿದರು. ಚುನಾವಣೆ ನಡೆದು ಫಲಿತಾಂಶ ಬಂದಾಗ ವಿಜಯಲಕ್ಷ್ಮಿ ಕೌಜಲಗಿಯವರಿಗೆ ಒಲಿದಿದ್ದಳು. ಈ ಅಲ್ಪಾವಧಿ ಸದಸ್ಯತ್ವದಲ್ಲಿ ಅವರು ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಿದ್ದಲ್ಲದೆ ರಾಷ್ಟ್ರ ರಾಜಕಾರಣದ ಪರಿಚಯವನ್ನೂ ಮಾಡಿಕೊಂಡರು.

1967ರಲ್ಲಿ ಮತ್ತೆ ಮಹಾ ಚುನಾವಣೆ ಬಂದಿತು. ಈ ಬಾರಿ ಕಾಂಗ್ರೆಸ್ ಪಕ್ಷವು ಅವರನ್ನು ವಿಧಾನಸಭೆಗೆ ಆರಿಸಿ ತರಲು ನಿರ್ಧರಿಸಿತು. ಅದರಂತೆ ಪರಸಗಡ (ಸವದತ್ತಿ) ಮತ ಕ್ಷೇತ್ರದಿಂದ ಅವರು ಕಾಂಗ್ರೆಸ್ ಉಮೇದುವಾರರಾದರು. 1952 ರಲ್ಲಿ ಈ ಕ್ಷೇತ್ರದಿಂದ ಆಯ್ಕೆಯಾಗಿದ್ದ ಕೌಜಲಗಿಯವರನ್ನು ಹದಿನೈದು ವರ್ಷಗಳ ಅನಂತರವೂ ಅಲ್ಲಿನ ಮತದಾರರು ಮರೆತಿಲಿಲ್ಲ. ವಿಜಯ ಅವರ ಪಾಲಿನದಾಗಿತ್ತು. ಕಾಂಗ್ರೆಸ್ ಪಕ್ಷಕ್ಕೆ ಸುಮಾರು 125 ಸ್ಥಾನಗಳಷ್ಟೆ ಲಭಿಸಿದ್ದು ಈ ಕಷ್ಟ ಕಾಲದಲ್ಲೂ ಕೌಜಲಗಿಯವರು ಚುನಾಯಿತರಾಗಿ ತಮ್ಮ ಜನಪ್ರಿಯತೆಯನ್ನು ಮೆರೆದರು. ಈ ವಿಜಯದ ಮೂಲಕ ಅವರು ಸೋಲರಿಯದ ಸರದಾರನೆನಿಸಿದರು. ಅವರ ಈ ವಿಜಯಕ್ಕೆ ಸ್ವಾತಂತ್ರ್ಯ ಹೋರಾಟಗಾರ ಮತ್ತು ಮಾಜಿ ಶಾಸಕರಾಗಿದ್ದ ಶ್ರೀ ವೆಂಕಟರೆಡ್ಡಿಯವರ ಬೆಂಬಲವಿದ್ದು ಕೌಜಲಗಿಯವರಿಗಿದ್ದದ್ದು ಅವರ ನೈತಿಕ ವಿಜಯಕ್ಕೆ ಸಾಕ್ಷಿಯಾಗಿದ್ದಿತು.

## ಸಚಿವರಾಗಿ

ಈ ಬಾರಿ ಪಕ್ಷದ ಹಿರಿಯ ಶಾಸಕರಾಗಿದ್ದ ಹೆಚ್.ವಿ. ಕೌಜಲಗಿಯವರು ಸಚಿವ ಸಂಪುಟ ಸೇರುವುದು ನಿರೀಕ್ಷಿತವೇ ಆಗಿದ್ದಿತು. ಶ್ರೀ ವೀರೇಂದ್ರ ಪಾಟೀಲರು ಕೌಜಲಗಿಯವರ ಹಿರಿತನ, ಸಾಮರ್ಥ್ಯ ಮತ್ತು ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಮಹತ್ವದ ಕಂದಾಯ ಖಾತೆಯನ್ನು ವಹಿಸಿದರು. ಪಂಚಾಯಿತಿ, ಪುರಸಭೆ ಮತ್ತು ಜಿಲ್ಲಾ ಬೋರ್ಡ್‌ಗಳಲ್ಲಿನ ಚಟುವಟಿಕೆಗಳ ವಾಸ್ತವ ಅನುಭವವನ್ನು ಪಡೆದಿದ್ದ ಕೌಜಲಗಿಯವರು ಗ್ರಾಮೀಣ ಜನರ ಕಷ್ಟ ಸುಖಗಳನ್ನು ನಾಡಿಮಿಡಿತವನ್ನು ಬಲ್ಲವರಾಗಿದ್ದರು. ಅವರು ಪಟ್ಟಾಪುಸ್ತಕಗಳ ಮೂಲಕ ಜಮೀನುಗಳ ದಾಖಲಾತಿಗಳನ್ನು ನಮೂದಿಸುವ ಪದ್ಧತಿಯನ್ನು ಜಾರಿಗೆ ತಂದರು. ಇದರಿಂದ ರೈತರಿಗೆ ತಮ್ಮ ಜಮೀನುಗಳ ವಿವರವು ತಮ್ಮ ಸುಪರ್ದಿಯಲ್ಲಿರುವುದು ಸಾಧ್ಯವಾಯಿತು. ಅವರಿಗೆ ಈ ಕಾರ್ಯದಿಂದ ಕೀರ್ತಿ ತಂದಿತು. ದಕ್ಷ, ಪ್ರಾಮಾಣಿಕ ಅಧಿಕಾರಿಗಳನ್ನು ಪ್ರೋತ್ಸಾಹಿಸುವುದು ಅವರ ಕಾರ್ಯನೀತಿಯಾಗಿದ್ದಿತು. ಬರಗಾಲದಿಂದ ನೊಂದವರಿಗೆ ಕಂದಾಯ ಮಾಫಿ ಮಾಡುವ ವಿಚಾರದಲ್ಲೂ ಆಸಕ್ತಿವಹಿಸಿದರು. ಕಂದಾಯದಿಂದ ಬರುವ ಆದಾಯದ ಪ್ರತಿಶತ ಇಷ್ಟು ಭಾಗವನ್ನು ಸ್ಥಳಿಯ ಸಂಸ್ಥೆಗಳಿಗೆ ನೀಡಬೇಕೆಂಬ ನಿಯಮ ರಚಿಸಿದರು. ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಬರಪೀಡಿತ ಪ್ರದೇಶಗಳಲ್ಲಿ ಬಾವಿ ಕೆರೆ ತೊಡಿಸಲು ಸಾಲ ಒದಗುವಂತೆ ಮಾಡುವುದರಲ್ಲೂ ಇವರ ಪ್ರಯತ್ನವಿತ್ತು. ಮಲಪ್ರಭಾ ನದಿಗೆ ಮುನವಳ್ಳಿ ಹತ್ತಿರ ಅಣೆಕಟ್ಟು ಕಟ್ಟಿ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಮುಖ್ಯಶಕ್ತಿಯಾಗಿ ನಿಂತವರು ಕೌಜಲಗಿಯವರು. ರಾಜ್ಯದ ವಿವಿಧ ದೇವಸ್ಥಾನಗಳ ಆದಾಯ ಸೋರಿ ಹೋಗದಂತೆ ಒಂದು

ವ್ಯವಸ್ಥೆ ಮಾಡುವಲ್ಲೂ ಅವರ ಪ್ರಯತ್ನ ಬಹಳವಿತ್ತು. ಸದನದಲ್ಲಿ ಅವರು ನೀಡುತ್ತಿದ್ದ ಸಂಕ್ಷಿಪ್ತ ಉತ್ತರಗಳು ತುಂಬಾ ಪರಿಣಾಮಕಾರಿಯಾಗಿರುತ್ತಿದ್ದವು.

1971 ರಲ್ಲಿ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಬಿದ್ದುಹೋಗಿ ರಾಷ್ಟ್ರಪತಿ ಆಳ್ವಿಕೆ ಬರುವವರೆಗೂ ಒಟ್ಟು ನಾಲ್ಕು ವರ್ಷಗಳ ಕಾಲ ಶ್ರೀ ಹೆಚ್. ವಿ. ಕೌಜಲಗಿಯವರು ಕಂದಾಯ ಸಚಿವರಾಗಿ ಸೇವೆ ಸಲ್ಲಿಸಿದರು. ಅವರ ಈ ಸುದೀರ್ಘ ರಾಜಕೀಯ ಜೀವನ ಯಾವ ಕಿಲುಬಿಲ್ಲದೆ ಮುಕ್ತಾಯವಾಯಿತು. ಅಲ್ಲಿಗೆ ಅವರು ತಮ್ಮ ರಾಜಕೀಯ ಜೀವನಕ್ಕೆ ಇತಿಶ್ರೀ ಹೇಳಿದರು. ಮುಂದೆ ಸಮಾಜಮುಖಿಯಾಗಿ, ಕುಟುಂಬ ಮುಖಿಯಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದರು. 1967 ರಿಂದ ಅವರು ಆಗ ಕರ್ನಾಟಕದ ಅತ್ಯಂತ ದೊಡ್ಡ ಶಿಕ್ಷಣ ಸಂಸ್ಥೆಯಾಗಿದ್ದ ಕೆ.ಎಲ್.ಇ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರ ನಿರ್ವಾಜ್ಯ, ದಕ್ಷ ಸೇವೆಯ ಪ್ರಯೋಜನವನ್ನು ಅರಿತ ಸಂಸ್ಥೆಯ ಮುಂದಾಳುಗಳು ಕೌಜಲಗಿಯವರನ್ನು ಈ ಸಂಸ್ಥೆಯ ಅಭಿವೃದ್ಧಿಗೆ ಪೂರ್ಣ ಗಮನಹರಿಸಬೇಕೆಂದು ಕೋರಿಕೊಂಡರು. ಈ ಸಂಸ್ಥೆಗೆ ನಿಷ್ಠೆಯಿಂದ ದುಡಿದ ಕೌಜಲಗಿಯವರು ಅದರ ಪ್ರತಿಷ್ಠಿತ ಅಂಗ ಸಂಸ್ಥೆಯಾದ ಲಿಂಗರಾಜ ಕಾಲೇಜಿನ ಸುವರ್ಣ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಿದರು. ಈ ಸಮಾರಂಭದಲ್ಲಿ ಶ್ರೀ ಮೊರಾರ್ಜಿ ದೇಸಾಯಿಯವರು ಭಾಗವಹಿಸಿದ್ದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಬಸವಪೀಠವನ್ನು ಸ್ಥಾಪಿಸುವಲ್ಲಿ ಇವರ ನೆರವು ಅಡಗಿದ್ದಿತು. ಬೈಲಹೊಂಗಲ ತಾಲ್ಲೂಕಿನ ನಾಗನೂರು ಮಠದ ಬಗ್ಗೆ ಕೌಜಲಗಿಯವರಿಗೆ ನಿಷ್ಠೆ ಹಾಗೂ ಅದರ ಪೀಠಾಧಿಪತಿಗಳಾಗಿದ್ದ ಶ್ರೀ ಶಿವಬಸವ ಮಹಾಸ್ವಾಮಿಗಳ ಬಗ್ಗೆ ಗೌರವ. ಈ ಮಠದ ಸರ್ವತೋಮುಖ ಅಭಿವೃದ್ಧಿಗೆ ಕೌಜಲಗಿಯವರ ಭಕ್ತ ಸೇವೆ ಅಪಾರ. ಇದರೊಂದಿಗೆ ಅವರು ತಮ್ಮ ಮನೆದೇವರಾದ ಗೂಡಚಿಯ ವೀರಭದ್ರನ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಕೈಗೂಡಿಸಿದರು. ಶಿಕ್ಷಕರಾಗಿ ಅನುಭವ ಪಡೆದಿದ್ದ ಕೌಜಲಗಿಯವರು ತಮ್ಮ ನಿವೃತ್ತ ಜೀವನದಲ್ಲಿ ತಮ್ಮ ಚಾಳದಲ್ಲಿ ಮಕ್ಕಳಿಗೆ ಇಂಗ್ಲೀಷ್ ಭಾಷೆ ಕಲಿಸುವ ಕಾಯಕ ಮಾಡುತ್ತಿದ್ದರು. ಉಳಿದ ಸಮಯದಲ್ಲಿ ತಮ್ಮ ವ್ಯವಸಾಯ ಜಮೀನುಗಳನ್ನು ನೋಡಿ ಆನಂದಪಡುತ್ತಿದ್ದರು. ಸದಾ ಕ್ರಿಯಾಶೀಲರಾಗಿ ದುಡಿದ ಹೆಚ್ ವಿ ಕೌಜಲಗಿಯವರ ದೇಹ ಎಪ್ಪತ್ತರ ಹೊಸ್ತಿಲು ದಾಟುವಾಗ ಹಣ್ಣಾಗಿದ್ದಿತು. ಅನಾರೋಗ್ಯ ಕಾಣಿಸಿಕೊಂಡಿತು. ಅವರು 1976ರ ಆಗಸ್ಟ್ 30 ರಂದು ಇಹಲೋಕ ತ್ಯಜಿಸಿ ಶಿವಕ್ಯರಾದರು.

ಹೆಚ್ ವಿ ಕೌಜಲಗಿಯವರು ಒಂದು ಸಾಮಾನ್ಯ ರೈತ–ವಣಿಕ ವೃತ್ತಿಯನ್ನಾಧರಿಸಿದ ಕುಟುಂಬದಲ್ಲಿ ಜನಿಸಿ ಆಗ ಅಪರೂಪವಾಗಿದ್ದ ಉನ್ನತ ವಿದ್ಯಾಭ್ಯಾಸ ಮಾಡಿ ಜನ ಮೆಚ್ಚುಗೆ ಮತ್ತು ಸರ್ಕಾರದ ಮೆಚ್ಚುಗೆಗಳನ್ನು ಪಡೆದು ಪುರಸಭೆಯಿಂದ ಲೋಕಸಭೆಯವರೆಗೂ ವಕೀಲಿತನದಿಂದ ಸಚಿವಸ್ಥಾನದವರೆಗೂ ವಿವಿಧ ಆಯಾಮಗಳಲ್ಲಿ ಅಧಿಕಾರವನ್ನು ನಿರ್ವಹಿಸಿ ಎಲ್ಲೂ ಕಲುಷಿತರಾಗದೆ ಸಾಂಗವಾಗಿ, ಸಾರ್ಥಕವಾಗಿ ತಮ್ಮ ಜೀವನಯಾತ್ರೆಯನ್ನು ಮುಗಿಸಿದ ಕಾರ್ಯಸಾಧಕರು. ಅವರು ಮುಂಬಯಿ ಪ್ರಾಂತದಲ್ಲೂ ಕರ್ನಾಟಕದಲ್ಲೂ ಶಾಸಕಾಂಗಗಳ ಕಲಾಪಗಳಲ್ಲಿ ಯಶಸ್ವಿಯಾಗಿ ಭಾಗವಹಿಸಿ ಅತ್ಯುತ್ತಮ ಸಂಸದೀಯ ಪಟುಗಳ ಪಂಕ್ತಿಯಲ್ಲಿ ಪ್ರಕಾಶಿಸುತ್ತಿರುವವರು.

## ಕೌಜಲಗಿಯವರ ಜೀವನದ ಹೆಜ್ಜೆ ಗುರುತುಗಳು

| | |
|---|---|
| ಜನನ | – 1904 |
| ಕಾನೂನು ಪದವಿ | – 1930 |
| ಜಿಲ್ಲಾ ಬೋರ್ಡ್ ಅಧ್ಯಕ್ಷರು | – 1938 |
| ಸವದತ್ತಿ– ಪುರಸಭೆ ಅಧ್ಯಕ್ಷರು | – 1940 |
| ಶಾಸಕರು– ಮುಂಬಯಿ ಪ್ರಾಂತ | – 1952–57 |
| ಕರ್ನಾಟಕ ವಿಧಾನ ಸಭೆ ಸದಸ್ಯರು | – 1957–62 |
| ಲೋಕಸಭಾ ಸದಸ್ಯರು | – 1965–67 |
| ಕರ್ನಾಟಕ ವಿಧಾನ ಸಭೆ ಸದಸ್ಯರು | – 1967–1971 |
| ಕಂದಾಯ ಸಚಿವರು | – 1967–1971 |

### ಕುಟುಂಬ ಪರಂಪರೆ

ಹೆಚ್ ವಿ ಕೌಜಲಗಿ ಮತ್ತು ಗೌರವ್ವ ದಂಪತಿಗಳದು ಸುದೀರ್ಘ ಅನ್ಯೋನ್ಯ ದಾಂಪತ್ಯ. ಎಲ್ಲರಿಗೂ ಸಲ್ಲುವಂತಾಗಿ ಸಾರ್ಥಕ ಬದುಕು ನಡೆಸಬೇಕೆಂಬ ಹೆಬ್ಬಯಕೆಯಿಂದ ಗೌರವ್ವನವರು ಜೀವನದ ಕಷ್ಟದಲ್ಲೂ ಸುಖದಲ್ಲೂ ಪತಿಯ ನೆರಳಾಗಿ ನಡೆದವರು. ಈ ದಂಪತಿಗಳಿಗೆ ಮೂರು ಜನ ಗಂಡು ಮಕ್ಕಳು ಮತ್ತು ಐದು ಜನ ಹೆಣ್ಣು ಮಕ್ಕಳು. ಈ ದೊಡ್ಡ ಕುಟುಂಬದ ಪ್ರತಿಯೊಂದು ಮಕ್ಕಳು ಜೀವನದಲ್ಲಿ ಸುಸೂತ್ರವಾದ ದಾರಿಯಲ್ಲಿ ಮುಂದುವರೆಯುವಂತೆ ಸಾಕಿ ಬೆಳೆಸಿ ಪ್ರೋತ್ಸಾಹಿಸಿದ್ದು ಈ ದಂಪತಿಗಳ ಹೆಗ್ಗಳಿಕೆ. ಹಿರಿಯ ಪುತ್ರಿ ಶ್ರೀಮತಿ ಶಕುಂತಲಾರು ದಾವಣಗೆರೆಯ ಡಾ: ಎಚ್. ಹಾಲಪ್ಪನವರ ಧರ್ಮಪತ್ನಿ ಎರಡನೆಯವರಾದ ಶ್ರೀಮತಿ ಉಮಾಶಶಿಯವರು ಧಾರವಾಡ ಜಿಲ್ಲೆಯ ಡಾ: ಬಸವರಾಜ ಅವರ ಸಹಧರ್ಮಿಣಿ. ಮೂರನೆಯ ಮಗಳು ಶ್ರೀಮತಿ ಶಾಂತಾರವರು ಕೌಜಲಗಿಯವರ ಸಹೋದರಿ ಗಂಗಮ್ಮ ಶೆಟ್ಟರ ದಂಪತಿಗಳ ಮಗ ಡಾ: ಈಶ್ವರಪ್ಪನವರ ಅರ್ಧಾಂಗಿ, ನಾಲ್ಕನೆಯ ಶ್ರೀಮತಿ ಇಂದುಮತಿ ಸಿಂದಗಿಯ ಎಂಜಿನಿಯರ್ ಚಂದ್ರಶೇಖರ್‌ರವರ ಪತ್ನಿ. ಕೊನೆಯವರಾದ ಶ್ರೀಮತಿ ದಾಕ್ಷಾಯಿಣಿ ಬಿಜಾಪುರದ ಡಾ: ಸತೀಶ್‌ರ ಕೈಹಿಡಿದಿದ್ದಾರೆ. ಗಂಡು ಮಕ್ಕಳಲ್ಲಿ ಹಿರಿಯ ಪುತ್ರ ಡಾ: ಈರಣ್ಣ (ವೀರಭದ್ರಪ್ಪ) ಬಾಗಲಕೋಟೆಯಲ್ಲಿ ವೈದ್ಯರು. ಇವರ ಸಹಧರ್ಮಿಣಿ ಶ್ರೀಮತಿ ದ್ರಾಕ್ಷಾಯಿಣಿ ಎರಡನೆಯ ಪುತ್ರ ಶ್ರೀ ಬಸರವಾಜು ಹರಿಹರದ ಸಕ್ಕರೆ ಕಾರ್ಖಾನೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದು 1999 ರಲ್ಲಿ ಕೈಲಾಸವಾಸಿಗಳಾದರು. ಇವರ ಪತ್ನಿ ದಾವಣಗೆರೆಯ ಶ್ರೀಮತಿ ಪ್ರೇಮಾರವರು. ಮೂರನೆಯ ಮಗನಾದ ಶ್ರೀ ಶಿವಾನಂದ ಕೌಜಲಗಿಯವರು ಕಾನೂನು ಪದವೀಧರರಾಗಿದ್ದು ತಂದೆಯಂತೆಯೇ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದರು. ಅವರ ಪತ್ನಿ ಶ್ರೀಮತಿ ಸುಧಾ (ಸುಶೀಲಾ)ರವರು. ಶಿವಾನಂದ ಕೌಜಲಗಿಯವರು ತಂದೆ ಹೆಚ್ ವಿ ಕೌಜಲಗಿಯವು ರಾಜಕೀಯದಿಂದ ದೂರ ಸರಿದ ಅನೇಕ ವರ್ಷಗಳ ತರುವಾಯ

ತಂದೆಯವರು ಕೈಲಾಸವಾಸಿಗಳಾದ ನಂತರವೇ ರಾಜಕೀಯ ಪ್ರವೇಶಿಸಿದರು. ಈ ಕುಟುಂಬವು ರಾಜಕೀಯವನ್ನು ಉಪಜೀವನವನ್ನಾಗಿ ಮಾಡಿಕೊಳ್ಳಲಿಲ್ಲ. ಅವರು ಜನಬೆಂಬಲದಿಂದಾಗಿ 1985ರ ಮಹಾಚುನಾವಣೆಯಲ್ಲಿ ಜನತಾದಳ ಪಕ್ಷದ ವತಿಯಿಂದ ಬೈಲುಹೊಂಗಲ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾದರು. ಅವರು ಮುಂದೆ 1994 ರ ಚುನಾವಣೆಯಲ್ಲಿ ಚುನಾಯಿತರಾಗಿ ಬಂದು ಶ್ರೀಮಾನ್ ಹೆಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಲೋಕೋಪಯೋಗಿ ಸಚಿವರಾಗಿದ್ದರು. ಮುಂದೆ ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಅದೇ ಪಕ್ಷದ ವತಿಯಿಂದ ಸ್ಪರ್ಧಿಸಿ ಲೋಕಸಭಾ ಸದಸ್ಯರಾಗಿಯೂ ಚುನಾಯಿತರಾದರು. ಅವರು ಹಾಲಿ ಕೆ.ಎಲ್.ಇ.ಯ (ಕರ್ನಾಟಕ ಲಿಂಗಾಯಿತ್ ಎಜುಕೇಷನ್ ಸಂಸ್ಥೆ) ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಶಿವಾನಂದ ಕೌಜಲಗಿಯವರು ಲೋಕಸಭಾ ಸದಸ್ಯರಾಗಿ ಆಯ್ಕೆಯಾದ ಸಂದರ್ಭದಲ್ಲಿ ತಂದೆಯಿಂದ ತೆರವಾದ ಬೈಲಹೊಂಗಲ ವಿಧಾನ ಸಭಾ ಕ್ಷೇತ್ರದಿಂದ ಹಿರಿಯ ಮಗ ಹಾಗೂ ಕಾನೂನು ಪದವೀಧರರಾದ ಶ್ರೀ ಮಹಾಂತೇಶ ಕೌಜಲಗಿಯವರು ಸ್ಪರ್ಧಿಸಿ ಚುನಾಯಿತರಾದರು. 1999ರ ಸಾರ್ವತ್ರಿಕ ಚುನಾವಣೆಯಲ್ಲಿ ಅವರು ಅದೇ ವಿಧಾನ ಸಭಾ ಕ್ಷೇತ್ರದಿಂದ ಮರು ಆಯ್ಕೆಗೊಂಡರು.

ಶ್ರೀಮತಿ ಹೆಚ್ ವಿ ಕೌಜಲಗಿಯವರ ತಮ್ಮ ಶ್ರೀ ಸಿದ್ರಾಮಪ್ಪನವರ ಮೂರನೆಯ ಮಗ ಶ್ರೀ ಸುಭಾಷ್ ಕೌಜಲಗಿಯವರು ಪರಸಗಡ (ಸವದತ್ತಿ) ವಿಧಾನ ಸಭಾ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಚುನಾಯಿತರಾಗಿ ಶಾಸಕರಾದರು. ಇವರು ಪದವೀಧರರಾಗಿದ್ದು ಜನಪ್ರಿಯ ಶಾಸಕರೆನಿಸಿದ್ದಾರೆ. ಶ್ರೀ ಸಿದ್ರಾಮಪ್ಪ (ಸೀಮಣ್ಣ) ನವರ ಇನ್ನೊಬ್ಬ ಪುತ್ರ ವಿರೂಪಾಕ್ಷನವರು ಸವದತ್ತಿ ತಾಲ್ಲೂಕಿನ ಎ.ಪಿ.ಎಂ.ಸಿ. ಅಧ್ಯಕ್ಷರಾಗಿದ್ದಾರೆ. ಹೀಗೆ ಬೈಲಹೊಂಗಲ ಮತ್ತು ಸವದತ್ತಿಗಳೆರಡರಲ್ಲೂ ಈ ಮನೆತನವೂ ಖ್ಯಾತವಾಗಿ ರಾಜಕೀಯ ನಾಯಕತ್ವ ನೀಡಿರುವುದು ಒಂದು ಅಪರೂಪದ ಸಾಧನೆಯೇ ಸರಿ.

# ಭಾಗ-2

## ಎಚ್.ವಿ. ಕೌಜಲಗಿ

## ಮುಂಬಯಿ ಪ್ರಾಂತ ಶಾಸಕಾಂಗ ಕಲಾಪ

# ಮುಂಬಯಿ ಪ್ರಾಂತ್ಯದ ಶಾಸಕಾಂಗ ಕಲಾಪ

ಆಯವ್ಯಯ 1954–55

**ಶ್ರೀ ಹೆಚ್.ವಿ. ಕೌಜಲಗಿ (ಪರಸಗಡ)** – ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಹಣಕಾಸು ಸಚಿವರು ಈ ಸದನದ ಮುಂದೆ ಮಂಡಿಸಿದಂತಹ ಆಯವ್ಯಯದ ಸಂಬಂಧವಾಗಿ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ನನ್ನ ಅಭಿಪ್ರಾಯದಲ್ಲಿ, ಇದೊಂದು ಸಮತೋಲನದಿಂದ ಕೂಡಿದ ಆಯವ್ಯಯವಾಗಿದ್ದು, ಇದು ತನ್ನೆಲ್ಲಾ ಅಂಶಗಳಲ್ಲಿ ಒಪ್ಪಿತವಾಗಬೇಕಾಗುತ್ತದೆ.

ಆಯವ್ಯಯವನ್ನು ಸದನದ ಮುಂದೆ ಮಂಡಿಸುವುದಕ್ಕೂ ಮುಂಚೆ, ನಾವು, ಕನಿಷ್ಠಪಕ್ಷ ಅವರಲ್ಲೊಬ್ಬನಾಗಿ ನಾನು, ಸರ್ಕಾರವು ಅಭಿವೃದ್ಧಿಯ ಅನೇಕ ಬಾಬುಗಳಿಗೆ ಅಲ್ಲದೆ ಇತರ ಅನೇಕ ಬಾಬುಗಳಿಗೆ ನಿಧಿಗಳನ್ನು* ಒದಗಿಸಬೇಕಾಗಿದ್ದುದರಿಂದ ಹಣಕಾಸು ಸಚಿವರು ಅಗತ್ಯ ಹೊಂದಾಣಿಕೆಯನ್ನು ಯಾವ ರೀತಿ ಮಾಡುತ್ತಾರೆಂಬ ಬಗ್ಗೆ ಅತ್ಯಂತ ಕುತೂಹಲಿಗಳಾಗಿದ್ದೆವು. ಆಯವ್ಯಯವನ್ನು ಮಂಡಿಸಿದಾಗ ಮತ್ತು ಯಾವುದೇ ಹೊಸ ತೆರಿಗೆಯನ್ನು ವಿಧಿಸಬೇಕಾಗಿಲ್ಲವೆಂಬುದನ್ನು ನಾವು ಕಂಡಾಗ, ನಮ್ಮೆಲ್ಲರಿಗೂ ಏಕಕಾಲಕ್ಕೆ ಆಶ್ಚರ್ಯವೂ, ಸಂತೋಷವೂ ಆಯಿತು ಮತ್ತು ನಾನು ಹಣಕಾಸು ಸಚಿವರಿಗೆ ಅಭಿನಂದಿಸುವುದೇಕೆಂದರೆ; ಅವರು ಯಾವುದೇ ಹೊಸ ತೆರಿಗೆಯನ್ನು ವಿಧಿಸದಿರುವಲ್ಲಿ ಮತ್ತು ತೆರಿಗೆ ನಿರ್ಧರಣೆ ವಿಚಾರಣಾ ಆಯೋಗದ ಶಿಫಾರಸುಗಳನ್ನು ಬಾಕಿಯಿರಿಸಿ ಹಾಲಿಯಿರುವ ತೆರಿಗೆ ವಿಧಿಸುವಿಕೆಯನ್ನು ಹೆಚ್ಚಿಸದಿರುವಲ್ಲಿ ವಿವೇಕಯುತವಾದ ಕ್ರಮವನ್ನು ತೆಗೆದುಕೊಂಡಿದ್ದಾರೆ. ಅದೇ ಸಮಯದಲ್ಲಿ, ಹಣಕಾಸು ಸಚಿವರು ಸರ್ಕಾರದ ನಿಯಂತ್ರಣದಲ್ಲಿ ಹಾಲಿಯಿರುವ ಸಂಪನ್ಮೂಲಗಳನ್ನು ಪೂರ್ಣ ಪ್ರಮಾಣದಲ್ಲಿ ವಿಸ್ತರಿಸಲು ಪಂಚ ವಾರ್ಷಿಕ ಯೋಜನೆಯ ಅನುಷ್ಠಾನದ ಮೇಲೆ ಒತ್ತು ನೀಡಿದ್ದಾರೆ. ನಾವು ಅವರ ಆಯವ್ಯಯ ಭಾಷಣವನ್ನು ಓದಿದರೆ, ಎಲ್ಲಾ ಬಾಬುಗಳಿಗೂ ಅಂದರೆ ಶಿಕ್ಷಣ, ವೈದ್ಯಕೀಯ, ಸಾರ್ವಜನಿಕ ಆರೋಗ್ಯ, ವಸತಿ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಸಮರ್ಪಕವಾಗಿ ನಿಧಿಗಳನ್ನು ಒದಗಿಸಲಾಗಿದೆ ಎಂಬುದು ಕಂಡುಬರುತ್ತದೆ. ಅಭಿವೃದ್ಧಿ ಯೋಜನೆಗಳಿಗಾಗಿ ಸರಿಸುಮಾರು 33 ಕೋಟಿ ರೂಪಾಯಿಗಳಷ್ಟು ಮೊಬಲಗನ್ನು ಕಲ್ಪಿಸಲಾಗಿದ್ದು, ಇದರಲ್ಲಿ ಇತರ ಬಾಬುಗಳ ಮೇಲಿನ ವೆಚ್ಚವನ್ನು ಸೇರಿಸದಿರುವುದು ಆಯವ್ಯಯದ ಮುಖ್ಯ ಭಾವವಾಗಿದೆ. ಸಣ್ಣ ನೀರಾವರಿ ಮತ್ತು ರಸ್ತೆಯ ಸುಧಾರಣೆಯ ವಿಷಯದಲ್ಲಿ ಕೂಡ ಅವುಗಳಿಗೆ ಒದಗಿಸಲಾದ ಮೊಬಲಗು ಸಂಪೂರ್ಣವಾಗಿ ತೃಪ್ತಿಕರವಾಗಿದೆ.

ಅದರಂತೆ, ಅಧ್ಯಕ್ಷರೇ, ಬಹುಮಟ್ಟಿಗೆ ಪ್ರತಿಯೊಂದು ಬಾಬುವಿಗೂ ಅವುಗಳ ಅರ್ಹತೆಯೇನು ಎಂಬುದನ್ನು ಪರಿಗಣಿಸಿ ಅವುಗಳಿಗೆ ನಿಧಿಗಳನ್ನು ಒದಗಿಸಲಾಗಿದೆ ಎಂಬುದು ಕಂಡುಬರುತ್ತದೆ. ಮೊದಲ ಸ್ಥಾನದಲ್ಲಿ, ಹಣಕಾಸು ಸಚಿವರು ನಾವು ಈವರೆಗೆ ಮಾಡಲಾಗಿರುವಂಥ ಪ್ರಗತಿಯ ಸಂಚಯವನ್ನು ತೆಗೆದುಕೊಂಡಿದ್ದಾರೆ. ಅನಂತರ ಅವರು ನಾವು ಮುಂಬರುವ ವರ್ಷದಲ್ಲಿ ಏನನ್ನು ಮಾಡಬೇಕೆಂಬುದರ ಬಗ್ಗೆ ಯೋಚಿಸಿದ್ದಾರೆ. ಹಾಗಾಗಿ, ನಾವು ಮುನ್ನಡೆಯುತ್ತಿದ್ದೇವೆ ಎಂಬುದು

ಮತ್ತು ಇದು ವಿರೋಧ ಪಕ್ಷದ ಕೆಲವು ಮಾನ್ಯ ಸದಸ್ಯರು ಹೇಳಿದಂತೆ ಬರಿ ಕೆಲವು ಕಾಮಗಾರಿಗಳ ವಿಷಯಪಟ್ಟಿಯಾಗಿರುವುದಿಲ್ಲವೆಂಬುದು ಕಂಡುಬರುತ್ತದೆ. ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಜೋಶಿಯವರು ಆಯವ್ಯಯವು ನೀರಸ, ರೂಢ ಮಾದರಿ (ಸ್ಟೀರಿಯೋ ಟೈಪ್ಡ್) ಆದುದು ಮತ್ತು ಕೆಲವು ಕಡೆಗಳಲ್ಲಿ ಅದು ಕಾಮಗಾರಿಯ ವಿಷಯಪಟ್ಟಿಯಾಗಿದೆ ಎಂದು ಹೇಳಿದ್ದಾರೆ.

**ಸಂಜೆ 6.30 ಗಂಟೆ**

ಇರಬಹುದು, ನಾವು ಪಂಚವಾರ್ಷಿಕ ಯೋಜನೆಗೆ ಅಂಟಿಕೊಂಡಿದ್ದೇವೆ ಮತ್ತು ನಾವು ಅದರ ಅನುಷ್ಠಾನದಲ್ಲಿ ಪ್ರಗತಿ ಸಾಧಿಸುತ್ತಿದ್ದೇವೆ. ಆದ್ದರಿಂದ ಆಯವ್ಯಯವು ನಾವು ಮಾಡುತ್ತಿರುವ ಕಾಮಗಾರಿಗಳ ವಿಷಯಪಟ್ಟಿಯಲ್ಲದೆ ಬೇರೇನೂ ಅಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಆದರೂ ನಮ್ಮ ಮುಖ್ಯ ಕಳಕಳಿ ಎಂದರೆ ನಾವು ಪ್ರಗತಿ ಸಾಧಿಸುತ್ತಿದ್ದೇವೆಯೆ ಅಥವಾ ಇಲ್ಲವೆ ಎಂಬುದನ್ನು ಪರಿಶೀಲಿಸುವುದಾಗಿದೆ. ಈ ಹಿಂದೆ ನಾವು ಯೋಜನೆಯ ಒಂದು ಭಾಗವನ್ನು ಅನುಷ್ಠಾನಗೊಳಿಸಿದ್ದೇವೆ ಅಥವಾ ಇಲ್ಲವೆ ಎಂಬುದನ್ನು ಪರಿಶೀಲಿಸಬೇಕಾಗಿದೆ. ಭವಿಷ್ಯದಲ್ಲಿ ಕೂಡ ನೀರಾವರಿ, ರಸ್ತೆಗಳು ಮತ್ತು ಇತರ ಕಲ್ಯಾಣ ಚಟುವಟಿಕೆಗಳ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುತ್ತದೆಂಬುದನ್ನು ನಾವು ನೋಡಬೇಕು. ಈ ನಿಟ್ಟಿನಲ್ಲಿ ಈಗಾಗಲೇ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಮತ್ತು ಮುಂದಿನ ವರ್ಷದ ಆಯವ್ಯಯದಲ್ಲಿ ಕೂಡ ಸಾಕಷ್ಟು ಮೊಬಲಗನ್ನು ಈ ಉದ್ದೇಶಕ್ಕಾಗಿ ಕಲ್ಪಿಸಲಾಗಿದೆ. ಅದು ಸಾಕಾರಗೊಂಡಲ್ಲಿ, ಸರ್ಕಾರವು ಸುಲಭವಾಗಿ ಕಾಮಗಾರಿಗಳ ವಿಷಯ ಪಟ್ಟಿಯನ್ನು ನೀಡಿದೆ ಎಂದು ಹೇಳಲಿಕ್ಕಾಗುವುದಿಲ್ಲ. ಇದೆಲ್ಲವೂ ಪ್ರಗತಿಯಲ್ಲಿರುವ ಕಾಮಗಾರಿಗಳ ವಿಷಯಪಟ್ಟಿಯಾಗಿದೆ.

ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ನಾವು ಪ್ರಾಥಮಿಕ ಶಿಕ್ಷಣದಲ್ಲಿ ಉತ್ತಮ ಪ್ರಗತಿಯನ್ನು ಕಾಣಬಹುದು. ಮತ್ತು ಪುಟ 20ರಲ್ಲಿ ಮಾನ್ಯ ಹಣಕಾಸು ಸಚಿವರು ಪ್ರಾಥಮಿಕ ಶಿಕ್ಷಣದಲ್ಲಿ ಯಾವ ರೀತಿಯ ಪ್ರಗತಿಯನ್ನು ಸಾಧಿಸಲಾಗಿದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸಿದ್ದಾರೆ. ಅವರು ಈ ಮುಂದಿನಂತೆ ಅಭಿಪ್ರಾಯಪಡುತ್ತಾರೆ.

"ಸದನಕ್ಕೆ ತಿಳಿದಿರುವಂತೆ, ನಾವು 1000ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಗ್ರಾಮಗಳಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸಿದ್ದೇವೆ. 500 ಮತ್ತು 500ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಶಾಲೆಗಳಿಲ್ಲದ ಗ್ರಾಮಗಳಲ್ಲೂ ಸಹ ಶಾಲೆಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಇತ್ತೀಚೆಗೆ, ಭಾರತ ಸರ್ಕಾರವು ವಿದ್ಯಾವಂತ ಜನರಲ್ಲಿರುವ ನಿರುದ್ಯೋಗವನ್ನು ಪರಿಹರಿಸುವ ಸಲುವಾಗಿ ಪ್ರಾಥಮಿಕ ಶಾಲೆಗಳಿಗಾಗಿ 10,000 ಶಿಕ್ಷಕರುಗಳ ಲೆಕ್ಕದ ಮೇಲೆ ವೆಚ್ಚವನ್ನು ಭರಿಸಲು ಒಪ್ಪಿದೆ. ಯೋಜನೆಯ ಮೊದಲನೆಯ ಕಂತಿನಲ್ಲಿ ಶಿಕ್ಷಕರಿಗಾಗಿ ಬೇಡಿಕೆಯಿರುವ ಪ್ರದೇಶಗಳಲ್ಲಿನ ಗ್ರಾಮೀಣ ಪ್ರಾಥಮಿಕ ಶಾಲೆಗಳಿಗೆ ಸಾಕಷ್ಟು ಸಿಬ್ಬಂದಿಯನ್ನು ಒದಗಿಸುವುದಕ್ಕಾಗಿ 2000 ಶಿಕ್ಷಕರುಗಳನ್ನು ಈಗಾಗಲೇ ನಿಯೋಜಿಸಿಕೊಳ್ಳಲಾಗಿದೆ ಮತ್ತು ಇನ್ನೂ 2000 ಶಿಕ್ಷಕರುಗಳನ್ನು

ಹೊಸ ಶಾಲೆಗಳನ್ನು ತೆರೆಯುವುದಕ್ಕಾಗಿ ಬಳಸಿಕೊಳ್ಳಲಾಗಿದೆ. ಮುಂಬರುವ ವರ್ಷದಲ್ಲಿ 6000 ಹೆಚ್ಚುವರಿ ಶಿಕ್ಷಕರುಗಳನ್ನು ನೇಮಕ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ."

ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ನಾವು ಈ ಹಿಂದೆ ಏನು ಮಾಡಿದ್ದೇವೆ ಮತ್ತು ನಾವು ಮುಂಬರುವ ವರ್ಷದಲ್ಲಿ ಏನನ್ನು ಮಾಡಲು ಉದ್ದೇಶಿಸಿದ್ದೇವೆ ಎಂಬುದರ ಚಿತ್ರಣ ಇಲ್ಲಿದೆ. ಮುಂಬರುವ ವರ್ಷದಲ್ಲಿ 6000 ಶಿಕ್ಷಕರುಗಳನ್ನು ನಿಯೋಜಿಸಿಕೊಳ್ಳುವುದು ಚಿಕ್ಕ ವಿಚಾರವೇನಲ್ಲ. ಮಾನ್ಯ ಸದಸ್ಯರಾದ ಶ್ರೀ ಜಾಧವ್‌ರವರು, ಈ ಹಿಂದೆ ಮಾಡಿಕೊಂಡ 400 ಶಿಕ್ಷಕರುಗಳ ನಿಯೋಜನೆಗೆ ಸಂಬಂಧಿಸಿದಂತೆ ಆಡಳಿತ ಪಕ್ಷ ಪ್ರತಿಯೊಬ್ಬ ಮಾನ್ಯ ಸಚಿವರು ಮತ್ತು ಮಾನ್ಯ ಸದಸ್ಯರು ಅದು ಇಡೀ ನಿರುದ್ಯೋಗ ಸಮಸ್ಯೆಯ ಒಂದು ಪರಿಹಾರವಾಗಿತ್ತೆಂಬ ಭಾವನೆಯನ್ನು ಮೂಡಿಸುವ ಮೂಲಕ ಅದನ್ನು ದೊಡ್ಡದು ಮಾಡುತ್ತಿದ್ದಾರೆಂದು ಹೇಳಿದರು. ಆದರೆ ಕನಿಷ್ಠಪಕ್ಷ ವಿದ್ಯಾವಂತ ವರ್ಗಗಳಿಗೆ ಸಂಬಂಧ ಪಡುವಷ್ಟರಮಟ್ಟಿಗೆ, ಪ್ರಾಥಮಿಕ ಶಿಕ್ಷಣದಲ್ಲಿ ತರಬೇತಿಯನ್ನು ಪಡೆದಿರುವಂತಹ ವ್ಯಕ್ತಿಗಳಷ್ಟರ ಮಟ್ಟಿಗೆ ಹೇಳುವುದಾದರೆ, ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸಲಾಗಿದೆ ಮತ್ತು ಇದು ಚಿಕ್ಕ ಸಾಧನೆಯೇನಲ್ಲ. ನನ್ನ ಸ್ವಂತ ಜಿಲ್ಲೆಯ ಬಗ್ಗೆ ಮಾತನಾಡುತ್ತಿದ್ದೇನೆ, ಕಳೆದ ವರ್ಷದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ವಾರ್ಷಿಕ 300 ಅಭ್ಯರ್ಥಿಗಳನ್ನು ಪ್ರಾಥಮಿಕ ಶಾಲಾ ಶಿಕ್ಷಕರುಗಳನ್ನಾಗಿ ನಿಯೋಜಿಸಿಕೊಳ್ಳಲಾಗಿದೆ ಮತ್ತು ಈವರೆಗೆ ನನಗೆ ತಿಳಿದಿರುವಂತೆ ಈಗ ಜಿಲ್ಲೆಯಲ್ಲಿ ವಿದ್ಯಾರ್ಹತೆ ಇದ್ದು ಉದ್ಯೋಗ ಇಲ್ಲದೆ ಇರುವಂಥ ಯಾರೇ ವ್ಯಕ್ತಿ ಇರುವುದಿಲ್ಲ ಮತ್ತು ಈಗ ಸರ್ಕಾರವು 6000 ಹೆಚ್ಚುವರಿ ಶಿಕ್ಷಕರನ್ನು ನಿಯೋಜಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿರುವುದರಿಂದ, ಉದ್ಯೋಗವನ್ನು ಪಡೆಯಲು ಉತ್ಸುಕರಾಗಿರುವಂಥ ಮತ್ತು ಉದ್ಯೋಗಗಳನ್ನು ಪಡೆಯುವುದಕ್ಕಾಗಿ ಯುಕ್ತ ವಿದ್ಯಾರ್ಹತೆಯನ್ನು ಹೊಂದಿರುವಂಥ ಎಲ್ಲರನ್ನೂ ವಿಲೀನಗೊಳಿಸಿಕೊಳ್ಳಲಾಗುವುದೆಂಬ ಭರವಸೆ ನನಗಿದೆ. ಹಾಗಾಗಿ, ಈ ವರ್ಗದ ಜನರಿಗೆ ಸಂಬಂಧಪಡುವಷ್ಟರಮಟ್ಟಿಗಾದರೂ, ಯಾವುದೇ ನಿರುದ್ಯೋಗವಿರುವುದಿಲ್ಲ. ನಿರುದ್ಯೋಗದ ಈ ಪ್ರಶ್ನೆಗೆ ಸಂಬಂಧಪಡುವಷ್ಟರಮಟ್ಟಿಗೆ, ವಿರೋಧಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರವು ಈಗಾಗಲೇ ಈ ಹಿಂದೆ ಏನು ಮಾಡಿದೆಯೋ ಅದನ್ನು ಗಣನೆಗೆ ತೆಗೆದುಕೊಳ್ಳದೆ: ಅವರು ಇನ್ನೂ ಏನು ಮಾಡಬೇಕಾಗಿದೆ ಎಂಬುದನ್ನು ಮಾತ್ರ ಗಣನೆಗೆ ತೆಗೆದುಕೊಂಡಿರುವುದು ದುರದೃಷ್ಟಕರ ಸಂಗತಿ.

ವಿಶ್ವವಿದ್ಯಾಲಯ ಶಿಕ್ಷಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಮಾನ್ಯ ಹಣಕಾಸು ಸಚಿವರು ನಮ್ಮ ವಿಶ್ವವಿದ್ಯಾಲಯಗಳಿಗೆ ಹೆಚ್ಚಿನ ಅನುದಾನಗಳನ್ನು ಒದಗಿಸಲು ಸಾಕಷ್ಟು ಎಚ್ಚರಿಕೆ ವಹಿಸಿದ್ದಾರೆ. ವಿಶ್ವವಿದ್ಯಾಲಯ ಶಿಕ್ಷಣದ ಮಹತ್ವ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅನುದಾನದ ಏರ್ಪಾಡನ್ನು ಶೇಕಡ 25ಕ್ಕೆ ಏರಿಸಲಾಗಿದೆ.

ಮತ್ತೊಂದು ಗಮನಾರ್ಹ ಲಕ್ಷಣವೆಂದರೆ ವೈದ್ಯಶಾಸ್ತ್ರದ ಆಯುರ್ವೇದ ಪದ್ಧತಿಯಲ್ಲಿ ಸಂಶೋಧನಾ ಕೆಲಸವನ್ನು ಮಾಡುವುದಕ್ಕಾಗಿ ಹಣಕಾಸು ಏರ್ಪಾಟನ್ನು ಕಲ್ಪಿಸಿರುವುದು. ಸರ್ಕಾರವು ಈ ಪದ್ಧತಿಯನ್ನು ಬಹಳ ಹಿಂದೆಯೇ ಮಾನ್ಯ ಮಾಡಿದೆ. ಆದರೆ ಇಲ್ಲಿಯವರೆಗೆ ಈ ಕ್ಷೇತ್ರದಲ್ಲಿನ

ಸಂಶೋಧನೆಗಾಗಿ ಯಾವುದೇ ಹಣಕಾಸು ವಿಪರ್ಾಡನ್ನು ಮಾಡಿರುವುದಿಲ್ಲ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಈ ವರ್ಷ ಸರ್ಕಾರವು ಸ್ವತಂತ್ರ ಸರ್ಜನ್-ಜನರಲ್ ಆಗಿರುವಂತಹ ಒಬ್ಬ ವಿಶೇಷಾಧಿಕಾರಿಯನ್ನು ನೇಮಕ ಮಾಡಿಕೊಳ್ಳುವುದಕ್ಕಾಗಿ ವಿವೇಚನೆಯಿಂದ ಹಣಕಾಸು ವಿಪರ್ಾಡನ್ನು ಮಾಡಿದೆ ಮತ್ತು ಪೂನ, ಅಹಮದಾಬಾದ್ ಹಾಗೂ ಬರೋಡ ಆಸ್ಪತ್ರೆಗಳಲ್ಲಿ ಸಂಶೋಧನೆಗಾಗಿ ಅವಕಾಶವನ್ನು ಕಲ್ಪಿಸಿದೆ. ಆಯುರ್ವೇದ ಮತ್ತು ಯುನಾನಿ ಕ್ಷೇತ್ರದಲ್ಲಿ ಸಂಶೋಧನೆಗೆ ಉತ್ತಮ ಅವಕಾಶವಿದೆ. ಆಯುರ್ವೇದ ಚಿಕಿತ್ಸಕರು (ಪ್ರಾಕ್ಟಿಷನರ್ಸ್) ಅಥವಾ ವೈದ್ಯರು ತಮ್ಮ ಪೂರ್ವಜರಿಂದ ತಮ್ಮ ಜ್ಞಾನ ಮತ್ತು ತರಬೇತಿಯನ್ನು ಪಡೆಯುವ ವಾಡಿಕೆಯಿತ್ತು. ಜ್ಞಾನವನ್ನು ಬಾಯಿಂದ ಬಾಯಿಗೆ ವರ್ಗಾಯಿಸುವ ವಾಡಿಕೆಯಿತ್ತು. ಆಯುರ್ವೇದ ಪದ್ಧತಿಯ ಯಾವುದೇ ನಿಯತ ಶಾಲೆಗಳಿರಲಿಲ್ಲ. ಹಾಗಾಗಿ ಈ ಸಾರಿ ಅತ್ಯಂತ ವಿವೇಚನೆಯಿಂದ ಸಂಶೋಧನೆಗಾಗಿ ಹಣಕಾಸು ವಿಪರ್ಾಟನ್ನು ಮಾಡಲಾಗಿದೆ ಮತ್ತು ಈ ಕಾರ್ಯವನ್ನು ನೋಡಿಕೊಳ್ಳಲು ಒಬ್ಬ ವಿಶೇಷಾಧಿಕಾರಿಯನ್ನು ನೇಮಿಸಲಾಗಿದೆ. ಸರ್ಕಾರವು ಸುಮಾರು 10 ಅಥವಾ 15 ವರ್ಷಗಳ ಹಿಂದೆಯೇ ಈ ಪದ್ಧತಿಗೆ ಮಾನ್ಯತೆ ನೀಡಿದ್ದು, ಆ ಸಮಯದಲ್ಲಿ ವಿದ್ಯಾರ್ಹತೆಯನ್ನು ಪಡೆದಿರುವುದಾಗಿ ಹೇಳಲ್ಪಡುತ್ತಿದ್ದಂತಹ ಮತ್ತು ಈ ಪದ್ಧತಿಯಲ್ಲಿ ವೈದ್ಯವೃತ್ತಿಯನ್ನು ನಡೆಸುತ್ತಿದ್ದಂತಹ ಅನೇಕ ವ್ಯಕ್ತಿಗಳಿಗೆ ವೈದ್ಯವೃತ್ತಿ ನಡೆಸಲು ಲೈಸೆನ್ಸ್‌ಗಳನ್ನು ನೀಡಲಾಗಿತ್ತೆಂಬುದನ್ನು ಇಲ್ಲಿ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಜನರು ಗ್ರಾಮಗಳಲ್ಲಿ ವೈದ್ಯವೃತ್ತಿ ನಡೆಸುತ್ತಿದ್ದು, ಅವರು ಹೆಚ್ಚು ಕಡಿಮೆ ಅಳಲೆಕಾಯಿ ಪಂಡಿತರಾಗಿದ್ದರು. ಈಗಾಗಲೇ ನೀಡಲಾಗಿರುವಂತಹ ಲೈಸೆನ್ಸ್‌ಗಳನ್ನು ಪರಿಶೀಲಿಸಲು ಸಮಿತಿಯೊಂದನ್ನು ನೇಮಿಸುವಂತೆ ಮತ್ತು ಆಯುರ್ವೇದದಲ್ಲಿ ಉತ್ತಮ ಪಾಂಡಿತ್ಯವನ್ನು ಹೊಂದಿರವಂತಹ ಹಾಗೂ ಲೈಸೆನ್ಸ್‌ಗಳನ್ನು ಪಡೆಯದಿರುವ ಅಥವಾ ತಪ್ಪು ವಿವರಣೆಯನ್ನು ನೀಡಿರುವಂತಹ ಎಲ್ಲಾ ವ್ಯಕ್ತಿಗಳ ಲೈಸೆನ್ಸ್‌ಗಳನ್ನು ರದ್ದುಪಡಿಸಬೇಕೆಂದು ಹಾಗು ಆಯುರ್ವೇದ ವೈದ್ಯಶಾಸ್ತ್ರ ಪದ್ಧತಿಯನ್ನು ಅರಿತಿರುವಂತಹ ವ್ಯಕ್ತಿಗಳಿಗೆ ಮಾತ್ರ ಮುಂದೆ ವೈದ್ಯವೃತ್ತಿ ನಡೆಸಲು ಅನುಮತಿ ನೀಡಬೇಕೆಂದು ನಾನು ಸರ್ಕಾರಕ್ಕೆ ಕೋರುತ್ತೇನೆ. ಇದು ಅತ್ಯಗತ್ಯ. ಏಕೆಂದರೆ ಈ ಅಳಲೆಕಾಯಿ ಪಂಡಿತರು ಗ್ರಾಮಗಳಲ್ಲಿ ಹೆಚ್ಚು ಜೀವಹಾನಿಗೆ ಕಾರಣವಾಗುವ ಸಂಭವವಿರುತ್ತದೆ.

ಎರಡನೆಯದಾಗಿ ನಾನು ಕಾಟೇಜ್ ಹಾಸ್ಪಿಟಲ್‌ಗಳಿಗೆ ಸಂಬಂಧಿಸಿದ ವಿಷಯವನ್ನು ಮುಂದಿಡಬಯಸುತ್ತೇನೆ. ಗ್ರಾಮೀಣ ಪ್ರದೇಶಗಳು ಅಥವಾ ಪ್ರಮುಖ ಪಟ್ಟಣಗಳು ವೈದ್ಯಕೀಯ ನೆರವು ಅವುಗಳಿಗೆ ತಲುಪದಿರುವಷ್ಟು ಸಿವಿಲ್ ಆಸ್ಪತ್ರೆಗಳಿಂದ ದೂರವಿದ್ದಲ್ಲಿ, ಅಂತಹ ಗ್ರಾಮೀಣ ಪ್ರದೇಶಗಳಲ್ಲಿ ಅಥವಾ ಪ್ರಮುಖ ಪಟ್ಟಣಗಳಲ್ಲೂ ಕೂಡ ಕಾಟೇಜ್ ಹಾಸ್ಪಿಟಲ್‌ಗಳನ್ನು ತೆರೆಯುವುದು ಈ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಒಪ್ಪಿತ ನೀತಿಯಾಗಿದೆ. ಸಾಮಾನ್ಯವಾಗಿ ಕಾಟೇಜ್ ಹಾಸ್ಪಟಲ್‌ಗಳನ್ನು ಸಿವಿಲ್ ಆಸ್ಪತ್ರೆಗಳಿಂದ ದೂರವಿರುವಂತಹ ತಾಲೂಕು ಸ್ಥಳಗಳಲ್ಲಿ ಅಥವಾ ದೊಡ್ಡ ಗ್ರಾಮಗಳಲ್ಲಿ ತೆರೆಯಲಾಗುತ್ತದೆ. ಈ ಬಾರಿ ಒಂದೇ ಒಂದು ಕಾಟೇಜ್ ಹಾಸ್ಪಿಟಲ್‌ಗೆ ಅದೂ ಕೂಡ ಗ್ರಾಮಸ್ಥರು 50,000 ರೂಪಾಯಿಗಳವರೆಗೆ ವಂತಿಗೆಯನ್ನು ನೀಡುವಂತಹ ಪ್ರಕರಣದಲ್ಲಿ, ಮಾತ್ರ ಹಣಕಾಸು ಏರ್ಪಾಡು ಮಾಡಿರುವುದು ನನಗೆ ಕಂಡುಬಂದಿದೆ. ಸರ್ಕಾರವು ಈ ವಿಷಯದಲ್ಲಿ

ಜನರಿಂದ ಬರುವ ವಂತಿಗೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲು ಮುಂದಾದರೆ, ವ್ಯಾಪಕ ಪ್ರಮಾಣದಲ್ಲಿ ಕಾಟೇಜ್ ಹಾಸ್ಪಟಲ್‌ಗಳ ಅಗತ್ಯವಿರುವಂತಹ ಕೆಲವು ಗ್ರಾಮಸ್ಥರು ವಂತಿಗೆಗಳನ್ನು ಕೊಡಲು ಬೇಗ ಮುಂದೆ ಬರದಿದ್ದರೆ ಅವರೂ ಅಂತಹ ಆಸ್ಪತ್ರೆಗಾಗಿ ದೀರ್ಘಾವಧಿಯವರೆಗೆ ಕಾಯಬೇಕಾಗುತ್ತದೆ ಎಂಬುದಕ್ಕೆ ನಾನು ವಿಷಾದಿಸುತ್ತೇನೆ. ಸ್ಥಳೀಯ ವಂತಿಗೆಗಳಿಗಾಗಿ ಕಾಯುವುದಕ್ಕೆ ಬದಲಾಗಿ, ಕಾಟೇಜ್ ಹಾಸ್ಪಿಟಲ್‌ಗಳನ್ನು ಅಂತಹ ಆಸ್ಪತ್ರೆಯ ತುರ್ತು ಅಗತ್ಯತೆ ಇರುವಂತಹ ಎಲ್ಲಾ ಗ್ರಾಮಗಳಲ್ಲಿ ಕಲ್ಪಿಸಬೇಕೆಂಬುದು ಸರ್ಕಾರವನ್ನು ಶ್ರದ್ಧಾಪೂರ್ವಕವಾಗಿ ನಾನು ಕೋರಿಕೊಳ್ಳುತ್ತೇನೆ. ಸರ್ಕಾರವು ತಾನೇ ಅಂಥ ಕಾಟೇಜ್ ಹಾಸ್ಪಿಟಲ್‌ಗಳಿಗಾಗಿ ನಿಧಿಗಳನ್ನು ದೊರಕಿಸಿಕೊಳ್ಳಬೇಕು.

ಮತ್ತೊಂದು ವಿಷಯಕ್ಕೆ ಬಂದರೆ, ನಾವು, ಮಾನ್ಯ ಮುಖ್ಯ ಮಂತ್ರಿಯವರು ಆಯವ್ಯಯದಲ್ಲಿ ಹಣಕಾಸು ಏರ್ಪಾಡನ್ನು ಕಲ್ಪಿಸಿರದಂತಹ ಸಂಶೋಧನಾ ಯೋಜನೆಗಳಿಗಾಗಿ ಅನುದಾನಗಳನ್ನು ನೀಡಲು ಅನುವಾಗುವಂತೆ ಮಾನ್ಯ ಮುಖ್ಯ ಮಂತ್ರಿಯವರ ಕೈಯಲ್ಲಿ ಹತ್ತಿರ ಹತ್ತಿರ 3 ಲಕ್ಷ ರೂಪಾಯಿಗಳನ್ನು ಇಟ್ಟುಕೊಳ್ಳುವ ಒಂದು ಹೊಸ ನೀತಿಯನ್ನು ಪ್ರಾರಂಭಿಸುತ್ತಿದ್ದೇವೆ. ಇಲ್ಲಿ ಸಭಾಧ್ಯಕ್ಷರೆ, ಇದು, ಅನಪೇಕ್ಷಣೀಯವೆಂದು ಮತ್ತು ಇದನ್ನು ಮಂತ್ರಿಯ ಕೈಯಲ್ಲಿರುವ ದೊಡ್ಡ ಅಸ್ತ್ರವೆಂದು ಹಾಗೂ ರಾಜಕೀಯ ಅಸ್ತ್ರವಾಗಿ ಇದನ್ನು ಬಳಸಿಕೊಳ್ಳುವ ಸಂಭವವಿದೆಯೆದು ವಿರೋಧಪಕ್ಷದ ಕಡೆಯಿಂದ ಟೀಕೆಯನ್ನು ಮಾಡಲಾಗಿರುತ್ತೆ. ಕೆಲವು ವೇಳೆ ಇದು ಸ್ವಜನಪಕ್ಷಪಾತಕ್ಕೆ ದಾರಿಮಾಡಿಕೊಡುತ್ತದೆಂದು ಕೂಡ ವಿರೋಧ ಪಕ್ಷದವರು ಹೇಳಿರುತ್ತಾರೆ. ಇದು ಸಂಪೂರ್ಣ ತಪ್ಪು ಭಾವನೆ ಎಂದು ನಾನು ಪ್ರತಿಪಾದಿಸುತ್ತೇನೆ. ನಾವು ಈ ಮೊಬಲಗನ್ನು ಯಾವ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಪರಿಗಣಿಸಿದರೆ, ಆ ಉದ್ದೇಶವು ವೈದ್ಯಕೀಯ, ವಿಜ್ಞಾನ, ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿನ ಸಂಶೋಧನಾ ಯೋಜನೆಗಳಿಗೆ ಸಹಾಯ ಮಾಡುವುದಾಗಿರುವುದರಿಂದ ವಿರೋಧಪಕ್ಷದವರು ವ್ಯಕ್ತಪಡಿಸಿದ ಶಂಕೆಯು ಸಂಪೂರ್ಣ ನಿರಾಧಾರವಾದುದೆಂದು ರುಜುವಾತಾಗುತ್ತದೆ. ಮೂಲತಃ ವಿಷಯಗಳೇ ರಾಜಕೀಯೇತರ ಸ್ವರೂಪದವುಗಳಾಗಿರುತ್ತವೆ, ಹಾಗಾಗಿ ಮುಖ್ಯ ಮಂತ್ರಿಯವರು ಸಂಶೋಧನೆಯ ಉದ್ದೇಶಕ್ಕಾಗಿ ಈ ವಿಷಯಗಳ ಪೈಕಿ ಯಾವುದೊಂದು ವಿಷಯಕ್ಕೆ ಈ ಎಲ್ಲಾ 3 ಲಕ್ಷ ರೂಪಾಯಿಗಳನ್ನು ನೀಡಿದರೂ ಕೂಡ ಅದು ಒಂದು ಅಸ್ತ್ರವಾಗಿ ಬಳಕೆಯಾಗುವುದಿಲ್ಲ. ಇನ್ನೊಂದು ಕಡೆ, ನಾವು, ಆಯವ್ಯಯಯದಲ್ಲಿ ಹಣಕಾಸು ಏರ್ಪಾಡನ್ನು ಕಲ್ಪಿಸದಿರವಂತಹ ಸಂಶೋಧನಾ ಯೋಜನೆಗಾಗಿ ಅನುದಾನಗಳನ್ನು ಒದಗಿಸುವ ಹೊಸ ವಿಧಾನವನ್ನು ಮಾಡಿರುವುದಕ್ಕಾಗಿ ಹಣಕಾಸು ಸಚಿವರಿಗೆ ನಿಜಕ್ಕೂ ಅಭಿನಂದನೆ ಸಲ್ಲಿಸಲೇಬೇಕು.

ಈ ಬಾರಿ, ವಿಕೇಂದ್ರೀಕರಣದ ಹಾದಿಯಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಸರ್ಕಾರವು ರಸ್ತೆಯ ನಿರ್ವಹಣೆ ಮತ್ತು ದುರಸ್ತಿಗಳು, ಕಿರು ಸೇತುವೆಗಳ ನಿರ್ಮಾಣ, ಸಣ್ಣ ನೀರಾವರಿ ಕಾಮಗಾರಿಗಳು, ಬಾವಿಗಳ ನಿರ್ವಹಣೆ, ಮೊದಲಾದವುಗಳನ್ನು ಜಿಲ್ಲಾ ಸ್ಥಳೀಯ ಮಂಡಳಿಗಳಿಗೆ ವಹಿಸಿಕೊಡಲು ನಿರ್ಧರಿಸಿದೆ ಮತ್ತು ಇದು ಈ ಬಾರಿಯ ಆಯವ್ಯಯದಲ್ಲಿ ಪರಿಚಯಿಸಲಾಗಿರುವಂಥ ಒಂದು ಅತ್ಯಂತ ಅಪೇಕ್ಷಣೀಯವಾದ ಹಾಗು ವಿವೇಚನಾಯುಕ್ತವಾದ ವಿಚಾರವಾಗಿದೆ ಎಂದು ನಾನು ಭಾವಿಸುತ್ತೇನೆ. ಈ ವಿಧಾನದಿಂದ ಸರ್ಕಾರಕ್ಕೆ ಸಾಕಷ್ಟು ಹಣ

ಉಳಿತಾಯವಾಗುತ್ತದೆಂದು ಮತ್ತು ಈಗಾಗಲೇ ಸಾಮರ್ಥ್ಯ ಮೀರಿ ಕೆಲಸ ಮಾಡುತ್ತಿರುವಂತಹ ಲೋಕೋಪಯೋಗಿ ಇಲಾಖೆಯನ್ನು ಅದರ ಹೆಚ್ಚಿನ ಕೆಲಸದ ಹೊರೆಯಿಂದ ಬಿಡುಗಡೆಗೊಳಿಸಿದಂತಾಗುತ್ತದೆಂದು ಹಾಗೂ ಇದು ಭಾರೀ ಸಮಸ್ಯೆಗಳತ್ತ ಗಮನಹರಿಸಬಹುದೆಂದು ನಾನು ಅಭಿಪ್ರಾಯಪಡುತ್ತೇನೆ. ಜಿಲ್ಲಾ ಸ್ಥಳೀಯ ಮಂಡಳಿಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ನಮ್ಮ ಇಂಜಿನಿಯರುಗಳು ಸಮಾನವಾದ ಸಕ್ಷಮತೆ ಹಾಗೂ ಸಮಾನವಾದ ವಿದ್ಯಾರ್ಹತೆಯನ್ನು ಹೊಂದಿದಾರೆಂದು ಮತ್ತು ಅವರು ಜಿಲ್ಲೆಗಳಲ್ಲಿನ ಲೋಕೋಪಯೋಗಿ ಇಲಾಖೆಯ ಇಂಜಿನಿಯರುಗಳಷ್ಟೇ ಅನುಭವವನ್ನು ಹೊಂದಿದಾರೆಂದು ನಾನು ಹೇಳಬಹುದು. ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಇದು ಒಂದು ಔಪಚಾರಿಕ ಮತ್ತು ವಾಡಿಕೆಯ ಕೆಲಸವಾಗಿದೆ. ಕಿರು ಸೇತುವೆಗಳು, ಸಣ್ಣ ನೀರಾವರಿ ಯೋಜನೆಗಳು ಹಾಗೂ ಬಾವಿಗಳ ನಿರ್ಮಾಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಈ ಕಾಮಗಾರಿಗಳನ್ನು ಈಗಾಗಲೇ ಜಿಲ್ಲಾ ಸ್ಥಳೀಯ ಮಂಡಳಿಯಿಂದ ಮಾಡಿಸಲಾಗಿದೆ. ಗ್ರಾಮ ಬಾವಿಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಅವುಗಳನ್ನು ಈಗಾಗಲೇ ಜಿಲ್ಲಾ ಸ್ಥಳೀಯ ಮಂಡಳಿಗಳಿಂದ ನಿರ್ವಹಿಸಲಾಗುತ್ತಿದೆ. ಕರ್ನಾಟಕದ ಪ್ರಗತಿಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಪ್ರಗತಿಯು ಸಾಕಷ್ಟು ಉತ್ತಮವಾಗಿದೆ ಮತ್ತು ಜಿಲ್ಲಾ ಸ್ಥಳೀಯ ಮಂಡಳಿಗಳಿಗೆ ಈ ಅಧಿಕಾರವನ್ನು ನಿಯೋಜಿಸುವಲ್ಲಿ ಸರ್ಕಾರವು ಉತ್ತಮ ಕೆಲಸವನ್ನು ಮಾಡಿದೆ ಎಂಬುದನ್ನು ನಾನು ಖುದ್ದಾಗಿ ಗಮನಿಸಿದ್ದೇನೆ.

ಆಯವ್ಯಯದಲ್ಲಿನ ಗಮನಕ್ಕೆ ತರತಕ್ಕಂತಹ ಮತ್ತೊಂದು ವಿಚಾರವೆಂದರೆ, ಹಿಂದಿನಿಂದ ಪಡೆದ ಅನುಭವದ ಹಿನ್ನೆಲೆಯಲ್ಲಿ, ಹಣಕಾಸು ಸಚಿವರು ಕ್ಷಾಮದ ಸ್ಥಿತಿಗೆ ಸಂಬಂಧಪಡುವಷ್ಟರಮಟ್ಟಿಗೆ ಅದು ಒಂದು ನಿರಂತರ ವ್ಯವಹಾರವಾಗಿರುವುದರಿಂದ ಕ್ಷಾಮ ಪರಿಹಾರ ನಿಧಿಯಲ್ಲಿನ 63 ಲಕ್ಷ ರೂಪಾಯಿಗಳ ಪ್ರಸ್ತುತ ಪರಿಮಿತಿಯನ್ನು ಹೆಚ್ಚಿಸುವುದಕ್ಕಾಗಿ ವಿವೇಚನೆಯಿಂದ 25 ಲಕ್ಷ ರೂಪಾಯಿಗಳ ಹಣಕಾಸು ವಿಪರ್ಾಡನ್ನು ಮಾಡಿದ್ದಾರೆ. ಕ್ಷಾಮವು ರಾಜ್ಯದ ಒಂದಲ್ಲ ಒಂದು ಭಾಗದಲ್ಲಿ ಒಂದಲ್ಲ ಒಂದು ರೂಪದಲ್ಲಿ ಸಂಭವಿಸುವುದರಿಂದ ಅವರು ನಿಧಿಯು ಹೆಚ್ಚುವಂತೆ ನೋಡಿಕೊಳ್ಳಲು ವಿವೇಚನೆಯಿಂದ ಎಚ್ಚರವಹಿಸಿದ್ದಾರೆ.

ಅವರು, ಸ್ಥಳೀಯ ಮಂಡಳಿಗಳು ಮತ್ತು ಪುರಸಭೆಗಳು ತಮ್ಮ ನ್ಯಾಯಸಮ್ಮತ ಕರ್ತವ್ಯಗಳನ್ನು ನಿರ್ವಹಿಸಲು ಅನುವಾಗುವ ಹಾಗೆ ಅವುಗಳಿಗೆ ಸಹಾಯಾನುದಾನದ ರೂಪದಲ್ಲಿ ಹೆಚ್ಚು ನಿಧಿಗಳನ್ನು ನೀಡಬೇಕೆಂದು ಸಹ ನಿರ್ಧರಿಸಿದ್ದಾರೆ. ಎಲ್ಲಿ ನಾನು ಸರ್ಕಾರದ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಅದೇನಪ್ಪಾ ಅಂದರೆ, ಪುರಸಭೆಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಅವು ನೀರಿನ ಯೋಜನೆಗಳಂತಹ ಸಿದ್ಧವಾಗಿರುವ ಅನೇಕ ಯೋಜನೆಗಳನ್ನು ಹೊಂದಿವೆ. ಬಹುತೇಕ ಎಲ್ಲಾ ಪುರಸಭೆಗಳಲ್ಲೂ, ಯೋಜನೆಗಳು ಮತ್ತು ಅಂದಾಜುಗಳು ಸಿದ್ಧವಾಗಿದ್ದು, ಮೊದಲ ಆದ್ಯತೆಯನ್ನು ಪಡೆಯಲಾಗಿದೆ ಮತ್ತು ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲಾಗಿದೆ. ಆದರೆ ನಿಧಿಗಳ ಕೊರತೆಯಿಂದಾಗಿ, ಅವುಗಳಿಗೆ ಅಂತಹ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರವು, ಉಚಿತ ಅನುದಾನದ ರೂಪದಲ್ಲಿ ಅವುಗಳಿಗೆ

ಶೇಕಡ 50ರಷ್ಟು ಅನುದಾನವನ್ನು ನೀಡುವ ತನ್ನ ನೀತಿಯನ್ನು ಘೋಷಿಸಿದೆಯಾದರೂ ಅವುಗಳು ಮುಕ್ತ ಮಾರುಕಟ್ಟೆಯಲ್ಲಿ ಸಾಲದ ರೂಪದಲ್ಲಿ ಇನ್ನೂ ಶೇಕಡ 50ರಷ್ಟು ಹಣವನ್ನು ಪಡೆಯಬೇಕು ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಮುಕ್ತ ಮಾರುಕಟ್ಟೆಯಲ್ಲಿ ಸಾಲಗಳನ್ನು ಪಡೆಯುವುದು ಪುರಸಭೆಗಳಿಗೆ ಅತ್ಯಂತ ಕಠಿಣವಾಗಿದೆ. ಹಾಗಾಗಿ, ಸರ್ಕಾರವು ಯಾವುದಾದರು ರೀತಿಯಲ್ಲಿ ಪುರಸಭೆಗಳಿಗೆ ಸಾಲಗಳನ್ನು ಪಡೆಯಲಿಕ್ಕೆ ಸಾಧ್ಯವಾಗುವಂತೆ ಪರಿಹಾರೋಪಾಯವನ್ನು ರೂಪಿಸಬೇಕು. ಸರ್ಕಾರವು ಸಾಲಗಳನ್ನು ಎತ್ತಿ, ಅವುಗಳನ್ನು ಪುರಸಭೆಗಳಿಗೆ ಮುಂಗಡವಾಗಿ ನೀಡಬೇಕು ಎಂಬುದಾಗಿ ನಾನು ಕೋರುತ್ತೇನೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಆಯವ್ಯಯವು ಸಾಕಷ್ಟು ಸಮತೋಲನದಿಂದ ಕೂಡಿದ್ದು, ಇದರಲ್ಲಿ ಪಂಚವಾರ್ಷಿಕ ಯೋಜನೆಯೂ ಸೇರಿದಂತೆ ಎಲ್ಲಾ ಶೀರ್ಷಿಕೆಗಳಿಗೂ ನಿಧಿಗಳನ್ನು ಕಲ್ಪಿಸಲಾಗಿದೆ ಎಂದು ನಾನು ಅಭಿಪ್ರಾಯಪಡುತ್ತೇನೆ. ಆದ್ದರಿಂದ, ನಾನು ಮತ್ತೊಮ್ಮೆ ಹಣಕಾಸು ಸಚಿವರಿಗೆ ಅಭಿನಂದಿಸುತ್ತೇನೆ.

ಸಭಾಧ್ಯಕ್ಷರೇ, ಈ ನುಡಿಗಳೊಂದಿಗೆ ನಾನು ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

(ದಿನಾಂಕ: 4.3.1954)

## ಟಿಪ್ಪಣಿ

ಸಾರ್ವಜನಿಕ ಕೆಲಸ-ಕಾರ್ಯಗಳ ಬಗ್ಗೆ ಹೆಚ್ಚಿನ ಅನುಭವವನ್ನು ಪಡೆದಿದ್ದ ಕೌಜಲಗಿಯವರು ಮುಂಬಯಿ ಪ್ರಾಂತದ ವಿಧಾನಸಭಾ ಅಧಿವೇಶನದಲ್ಲಿ ಮಂಡಿಸಲಾದ ಆಯವ್ಯಯವನ್ನು ಕುರಿತು ಗಂಭೀರವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ಬಜೆಟ್ ಅನ್ನು ಮೆಚ್ಚಿ ಅವರು ಮಾತನಾಡಿದರಾದರೂ "ನಮ್ಮ ಮುಖ್ಯ ಕಾಳಜಿ ಇರುವುದು, ನಮ್ಮ ಆರ್ಥಿಕ ನೀತಿಯಿಂದ ನಾವು ಪ್ರಗತಿ ಸಾಧಿಸುತ್ತಿದ್ದೇವೆಯೇ ಇಲ್ಲವೇ ಎಂಬುದರಲ್ಲಿ" ಎಂದು ನೇರವಾಗಿ ನುಡಿದಿದ್ದಾರೆ. ಮುಖ್ಯವಾಗಿ ರಸ್ತೆಗಳು, ನೀರಾವರಿ, ಕುಡಿಯುವ ನೀರಿನ ವ್ಯವಸ್ಥೆಯಂತಹ ಮೂಲಭೂತ ಅಭಿವೃದ್ಧಿ ಕಾರ್ಯಗಳು ಅನುಷ್ಠಾನಕ್ಕೆ ಬಂದಾಗಲೇ ನಿಜವಾದ ಪ್ರಗತಿ ಸಾಧ್ಯ ಎಂಬ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಶಿಕ್ಷಣಕ್ಕೆ ಅದರಲ್ಲೂ ಕಡ್ಡಾಯ ಶಿಕ್ಷಣಕ್ಕೆ ಸರ್ಕಾರ ನೀಡುತ್ತಿದ್ದ ಪ್ರೋತ್ಸಾಹ ಕುರಿತು ಸಮಾಧಾನ ತಳೆದಿದ್ದರು. ಉನ್ನತ ಶಿಕ್ಷಣಕ್ಕೆ ಸರ್ಕಾರ ನೀಡಿದ ಹೆಚ್ಚಿನ ಅನುದಾನ ಕುರಿತು ಮೆಚ್ಚುಗೆಯ ಮಾತನಾಡಿದರು. ಗ್ರಾಮಗಳಲ್ಲಿ ಕಿರು ಆರೋಗ್ಯ ಚಿಕಿತ್ಸಾಲಯಗಳನ್ನು ಸ್ಥಾಪಿಸುವುದು ಗ್ರಾಮೀಣರು ದೂರದ ಪಟ್ಟಣಗಳಿಗೆ ಸಣ್ಣಪುಟ್ಟ ಕಾಯಿಲೆಗಳಿಗೆ ಚಿಕಿತ್ಸೆಗಾಗಿ ಬರುವುದನ್ನು ತಪ್ಪಿಸುತ್ತದೆಂದು ಸೂಕ್ತವಾಗಿಯೇ ಪ್ರತಿಪಾದಿಸಿದರು.

ಕೌಜಲಗಿಯವರು ಸ್ವತಃ ಸ್ಥಳೀಯ ಸಂಸ್ಥೆಗಳನ್ನು ನಡೆಸಿ ಬಲ್ಲವರಾಗಿ ಜಿಲ್ಲಾ ಬೋರ್ಡ್ ಮತ್ತು ಪುರಸಭೆಗಳಿಗೆ ಸರ್ಕಾರ ಅಭಿವೃದ್ಧಿ ಕಾರ್ಯದಲ್ಲಿ ನೀಡುವ ಹೆಚ್ಚಿನ ಅಧಿಕಾರವನ್ನು ಹಾಗೂ ನೆರವನ್ನು ಸ್ವಾಗತಿಸಿದರು.

# ಆಯವ್ಯಯ

1955–56

**ಶ್ರೀ ಹೆಚ್.ವಿ. ಕೌಜಲಗಿ** (ಪರಸಗಡ) – ಮಾನ್ಯ ಸಭಾಧ್ಯಕ್ಷರೇ, ಗ್ರಾಮೀಣ ಪ್ರದೇಶದಿಂದ ಬಂದಿರುವಂತಹ ಒಬ್ಬ ಸದಸ್ಯನಾಗಿ ಗ್ರಾಮೀಣ ಪ್ರದೇಶದ ಅಗತ್ಯತೆಗಳನ್ನು ಬಹುಮಟ್ಟಿಗೆ ಈಡೇರಿಸಲಾಗಿದೆ ಎಂಬುದನ್ನು ತಿಳಿಯಲು ನನಗೆ ಸಂತೋಷವಾಗುತ್ತದೆ. ಸರ್ಕಾರವು ಪ್ರಾಥಮಿಕ ಶಿಕ್ಷಣದ ಮೇಲೆ ರಾಜ್ಯದ ಒಟ್ಟು ರಾಜಸ್ವದ ಸರಿಸುಮಾರು ಶೇಕಡ 20ರಷ್ಟನ್ನು ಖರ್ಚು ಮಾಡುತ್ತಿದೆ ಮತ್ತು 200 ಹಾಗೂ ಅದಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಬಹುತೇಕ ಪ್ರತಿಯೊಂದು ಗ್ರಾಮವು ಮುಂದಿನ ವರ್ಷದಿಂದ ಶಾಲೆಯನ್ನು ಹೊಂದಿರುತ್ತದೆ. ಎಲ್ಲಾ ಅನುದಾನಿತ ಶಾಲೆಗಳನ್ನು ಜಿಲ್ಲಾ ಶಾಲಾ ಮಂಡಳಿಗಳ ನಿಯಂತ್ರಣದಡಿಗೆ ತರಲಾಗುವುದು ಎಂಬುದನ್ನು ನಾವು ಕಾಣುತ್ತೇವೆ. ಮುಂದಿನ ವರ್ಷ ರಾಜ್ಯದಲ್ಲಿ ಹೆಚ್ಚು ಕಡಿಮೆ 10,000 ಶಿಕ್ಷಕರುಗಳನ್ನು ನಿಯೋಜಿಸಿಕೊಳ್ಳಲಾಗುತ್ತಿದ್ದು, ನನ್ನ ಅಭಿಪ್ರಾಯದಲ್ಲಿ, ಇದು ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಬಹುಮಟ್ಟಿಗೆ ಸಹಾಯವಾಗುವುದು. ಮಾಧ್ಯಮಿಕ ಶಿಕ್ಷಣದ ವಿಸ್ತರಣೆಗೆ ಸಾಕಷ್ಟು ಗಮನವನ್ನು ನೀಡಲಾಗಿದೆ ಮತ್ತು ಪ್ರತಿ ಜಿಲ್ಲೆಯಲ್ಲಿ ವಿವಿಧೋದ್ದೇಶ ಶಾಲೆಯನ್ನು ತೆರೆಯಲಾಗುತ್ತಿದೆ.

ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಪ್ರತಿ ಗ್ರಾಮದಲ್ಲಿ ಒಂದು ಬಾವಿಯನ್ನು ಒದಗಿಸುವುದು ಸರ್ಕಾರದ ಪ್ರಾಥಮಿಕ ಕರ್ತವ್ಯವಾಗಿದೆ. ಈ ಯೋಜನೆಯು 1946ನೇ ಇಸವಿಯಷ್ಟು ಹಿಂದೆಯೇ ಆರಂಭಗೊಂಡಿತ್ತು. ಈ ವರ್ಷ ಮಾನ್ಯ ಹಣಕಾಸು ಸಚಿವರು ಈ ಯೋಜನೆಗಾಗಿ ಸರಿಸುಮಾರು 50 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದು 1954–55ನೇ ಸಾಲಿನಲ್ಲಿ ಈ ಯೋಜನೆಗಾಗಿ ಒದಗಿಸಲಾಗಿದ್ದಂತಹ ಹಣಕ್ಕಿಂತ ಸರಿಸುಮಾರು 4 ಲಕ್ಷ ರೂಪಾಯಿಗಳಷ್ಟು ಹೆಚ್ಚಿನದಾಗಿದೆ. ಅತ್ಯಲ್ಪ ಅವಧಿಯೊಳಗೆ ನಾವು ಗ್ರಾಮಗಳ ಪ್ರಾಥಮಿಕ ಅವಶ್ಯಕತೆಗಳಲ್ಲೊಂದಾಗಿರುವ ಪ್ರತಿ ಗ್ರಾಮದಲ್ಲಿ ಒಂದು ಕುಡಿಯುವ ನೀರಿನ ಬಾವಿಯನ್ನು ಹೊಂದಲಿದ್ದೇವೆಂಬ ಆಶಾಭಾವನೆಯಿದೆ.

ಆರೋಗ್ಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಕಾಟೇಜ್ ಹಾಸ್ಪಟಲ್‌ಗಳಲ್ಲಿನ ಔಷಧಾಲಯಗಳ ನೈರ್ಮಲ್ಯ ಮತ್ತು ಸಂರಕ್ಷಣೆಯನ್ನ ಕಾಪಾಡಿಕೊಂಡು ಬರಲು ಹೆಚ್ಚು ಗಮನವನ್ನು ನೀಡಲಾಗಿದೆ. ಕಳೆದ ಬಾರಿ ನಾನು ಈ ಅವಶ್ಯಕತೆಯ ಕಡೆಗೆ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುವ ಅವಕಾಶವನ್ನು ಪಡೆದಿದ್ದೆ ಮತ್ತು ನಾನು. ಹಿಂದುಳಿದ ಪ್ರದೇಶಗಳಿಗೆ ಅದರಲ್ಲೂ ನಿರ್ದಿಷ್ಟವಾಗಿ ಅಭಾವದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಪ್ರದೇಶಗಳಿಗೆ ತಾವು ಸಾಕಷ್ಟು ಗಮನವನ್ನು ನೀಡಬೇಕೆಂದು ಅವರಿಗೆ ಕೋರಿದ್ದೆ. ಮಾನ್ಯ ಆರೋಗ್ಯ ಸಚಿವರು ಬೆಳಗಾವಿ ಜಿಲ್ಲೆಗಾಗಿ ಕಾಟೇಜ್ ಹಾಸ್ಪಿಟಲ್‌ಅನ್ನು ಒದಗಿಸಲು ಸಾಕಷ್ಟು ದಯಾಳುಗಳಾಗಿರುವುದಕ್ಕೆ ನಾನು ಹರ್ಷಿತನಾಗಿದ್ದೇನೆ ಮತ್ತು ಅದಕ್ಕಾಗಿ ನಾನು ಮಾನ್ಯ ಆರೋಗ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಸರ್ಕಾರವು ಕೂಡ,

ಕರ್ನಾಟಕ ಪ್ರದೇಶದಲ್ಲಿನ ಬಹುತೇಕ ಪ್ರಮುಖ ಆಸ್ಪತ್ರೆಗಳಲ್ಲಿ ಹೆಚ್ಚು ಹಾಸಿಗೆಗಳನ್ನು ಒದಗಿಸಿರುವ ಮತ್ತು ಆಸ್ಪತ್ರೆಯಲ್ಲಿನ ರೋಗಿಗಳ ಸಂಖ್ಯೆಯು ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬಗ್ಗೆ ನೋಡಿಕೊಳ್ಳುವಂತೆ ಎಚ್ಚರಿಕೆ ವಹಿಸಿದೆ. ಆದ್ದರಿಂದ, ನಾನು ಈ ಸಿವಿಲ್ ಆಸ್ಪತ್ರೆಗಳಲ್ಲೂ ಸಹ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವಂತೆ ಸರ್ಕಾರವನ್ನು ಕೋರುತ್ತೇನೆ.

ಪುರಸಭೆಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಅವುಗಳು ಈವರೆಗೆ ನಿಧಿಗಳ ಕೊರತೆಯಿಂದಾಗಿ ತಮ್ಮ ನೀರು ಸರಬರಾಜು ಯೋಜನೆಗಳು ಹಾಗೂ ಒಳಚರಂಡಿ ಯೋಜನೆಗಳನ್ನು ನಿರ್ವಹಿಸುವ ಸ್ಥಿತಿಯಲ್ಲಿಲ್ಲ. ಅವುಗಳಿಗೆ ಮುಕ್ತ ಮಾರುಕಟ್ಟೆಯಲ್ಲಿ ಸಾಲಗಳನ್ನು ಪಡೆಯುವುದು ಕಷ್ಟವಾಗಿದೆ. ಕೇಂದ್ರ ಸರ್ಕಾರದಿಂದ ನಿಧಿಗಳನ್ನು ಪಡೆದು ಈ ಪುರಸಭೆಗಳಿಗೆ ಸಾಲಗಳನ್ನು ನೀಡಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವಂತೆ ರಾಷ್ಟ್ರೀಯ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಯನ್ನು ಪ್ರಾರಂಭಿಸುವುದು ಸೂಕ್ತವಾಗಿದೆ. ಈಗ ಈ ನೆರವಿನ ಕಾರಣದಿಂದಾಗಿ ಪುರಸಭೆಗಳು ತಮ್ಮ ನೀರು ಸರಬರಾಜು ಯೋಜನೆಗಳು ಮತ್ತು ಒಳಚರಂಡಿ ಯೋಜನೆಗಳನ್ನು ನಿರ್ವಹಿಸುವಂಥ ಉತ್ತಮ ಸ್ಥಿತಿಯಲ್ಲಿವೆ. ಈ ಪುರಸಭೆಗಳು ತಮ್ಮ ಯೋಜನೆಗಳೊಂದಿಗೆ ಸಿದ್ಧವಾಗಿವೆ ಎಂಬುದು ನನಗೆ ಗೊತ್ತು. ಈ ರಿಯಾಯಿತಿಯ ಪರಿಣಾಮವಾಗಿ ನಮ್ಮ ಪಕ್ಷದಲ್ಲಿ ಈಗಾಗಲೇ ಅನೇಕ ಯೋಜನೆಗಳನ್ನು ಪ್ರಾರಂಭಿಸಲಾಗಿದೆ.

ಘಟಪ್ರಭಾ ಮಾಹಿ, ಕಕ್ರಾಪರ ಮತ್ತು ಇತರ ಯೋಜನೆಗಳಂಥ ಭಾರೀ ನೀರಾವರಿ ಯೋಜನೆಗಳಿಗೂ ಕೂಡ ಸಾಕಷ್ಟು ಮೊಬಲಗುಗಳನ್ನು ಮೀಸಲಿರಿಸಿರುವುದು ನನಗೆ ಕಂಡುಬಂದಿದೆ. ಚರ್ಚಿತ ಆಯವ್ಯಯದಲ್ಲಿ ಘಟಪ್ರಭಾ ಯೋಜನೆಗಾಗಿ ಕೇವಲ 76 ಲಕ್ಷ ರೂಪಾಯಿಗಳನ್ನು ಒದಗಿಸಿರುವುದಾಗಿ ನನಗೆ ತಿಳಿದುಬಂದಿದೆ. ಘಟಪ್ರಭಾ ಯೋಜನೆಯು ಒಂದು ಯಶಸ್ವಿಯುತ ಯೋಜನೆಯಾಗುವತ್ತ ಮುನ್ನಡೆಯುತ್ತಿದೆ ಎಂದು ಮತ್ತು ಇದು ಈಗಾಗಲೇ ಸಾಕಷ್ಟು ಸಂಖ್ಯೆಯ ಗ್ರಾಮಗಳಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸುತ್ತಿದೆ ಎಂದು ಆಯವ್ಯಯದಲ್ಲಿ ಹೇಳಲಾಗಿದೆ. ಆದ್ದರಿಂದ, ನಾನು ಯೋಜನೆಯನ್ನು ಸಾಧ್ಯವಾದಷ್ಟು ಕಡಿಮೆ ಅವಧಿಯೊಳಗಾಗಿ ಪೂರ್ಣಗೊಳ್ಳುವ ಹಾಗೆ ಈ ಯೋಜನೆಗಾಗಿ ಹೆಚ್ಚು ಹಣವನ್ನು ಒದಗಿಸಬೇಕೆಂದು ಸರ್ಕಾರವನ್ನು ಕೋರುತ್ತೇನೆ. ನಾನು ಸರ್ಕಾರದ ಗಮನ ಸೆಳೆಯಲಿಚ್ಛಿಸುವಂತಹ ಮತ್ತೊಂದು ವಿಚಾರವೆಂದರೆ, ಮಾನವನ ವೈದ್ಯಕೀಯ ಸೌಲಭ್ಯಗಳಿಗಾಗಿ ಅವಕಾಶವನ್ನು ಕಲ್ಪಿಸುವ ಮೂಲಕ ಮಾನವರ ಆರೋಗ್ಯದ ಕಡೆಗೆ ಗಮನವನ್ನು ನೀಡಿದಂತೆಯೇ, ಅಂಥ ವೈದ್ಯಕೀಯ ಸೌಲಭ್ಯಗಳನ್ನು ನಮ್ಮ ರಾಜ್ಯದ ಜಾನುವಾರುಗಳಿಗೆ ನೀಡಲಾಗುತ್ತಿಲ್ಲವೆಂಬುದು. ನಮ್ಮದು ಕೃಷಿ ಪ್ರಧಾನವಾದ ರಾಜ್ಯ. ನಾವು ಹೆಚ್ಚು ಕಡಿಮೆ ಕೃಷಿಯ ಮೇಲೇ ಅವಲಂಬಿತರಾಗಿದ್ದೇವೆ. ಪಶುವೈದ್ಯಕೀಯ ಔಷಧಾಲಯಗಳತ್ತ ಸಾಕಷ್ಟು ಗಮನವನ್ನು ಕೊಡದಿರುವುದನ್ನು ನಾನು ಗಮನಿಸಿದ್ದೇನೆ. ಪ್ರತಿ ತಾಲೂಕುಗಳಲ್ಲಿ ನಾವು ಈಗಾಗಲೇ ಒಂದು ಔಷಧಾಲಯವನ್ನು ಹೊಂದಿದ್ದೇವೆ ಮತ್ತು ಔಷಧಾಲಯಗಳು ಇಲ್ಲದೇ ಇರುವಂತಹ ಕೆಲವು ತಾಲೂಕುಗಳೂ ಇವೆ. ಕೃಷಿಕರು ಅಥವಾ ಅಂತಹ ತಾಲೂಕುಗಳು ಕೆಲವು ವೇಳೆ 20 ಮೈಲಿಗಳಷ್ಟು

1757-4

ದೂರವಿರಬಹುದಾದಂತಹ ಪಶುವೈದ್ಯಕೀಯ ಔಷಧಾಲಯವನ್ನು ಹೊಂದಿರುವ ಹತ್ತಿರದ ತಾಲೂಕಿಗೆ ತಮ್ಮ ಜಾನುವಾರನ್ನು ಕರೆದುಕೊಂಡು ಹೋಗಬೇಕಾಗುತ್ತದೆ. ಕೆಲವು ವೇಳೆ ವೈದ್ಯಕೀಯ ನೆರವಿನ ಕೊರತೆಯಿಂದಾಗಿ ಈ ಕೃಷಿಕರು ತಮ್ಮ ಜಾನುವಾರನ್ನು ಕಳೆದುಕೊಳ್ಳುವ ಸಂಭವವಿರುತ್ತದೆ. ನಾನು. ಅಂತಹ ತಾಲೂಕಿನಲ್ಲಿ ಕೃಷಿಕರ ಜಾನುವಾರು ಸಂಪತ್ತಿನ ವೈದ್ಯಕೀಯ ಚಿಕಿತ್ಸೆಗಾಗಿ ಸೌಲಭ್ಯಗಳನ್ನು ನೀಡುವ ಹಾಗೆ ಕನಿಷ್ಠ ಎರಡು ಪಶುವೈದ್ಯಕೀಯ ಔಷಧಾಲಯಗಳಿರಬೇಕೆಂದು ಮನವಿ ಮಾಡುತ್ತೇವೆ. ಸಾಕಷ್ಟು ಪಶುವೈದ್ಯಕೀಯ ಶಸ್ತ್ರಚಿಕಿತ್ಸಕರ ಕೊರತೆಯಿಂದಾಗಿ ಹೊಸ ಔಷಧಾಲಯಗಳನ್ನು ತೆರೆಯಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ ವೆಂಬುದು ನನಗೆ ಕಂಡುಬಂದಿದೆ. ಸರ್ಕಾರವು ಹೆಚ್ಚು ಪಶುವೈದ್ಯಕೀಯ ಶಸ್ತ್ರಚಿಕಿತ್ಸಕರಿಗೆ ತರಬೇತಿ ನೀಡಲು ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕೆಂದು, ನಾನು ಮನವಿ ಮಾಡುತ್ತೇನೆ.

ಕೆಲವು ವರ್ಷಗಳ ಹಿಂದೆ ಇದ್ದಂತಹ ಮತ್ತು ಈಗ ರದ್ದುಪಡಿಸಲಾಗಿರುವಂತಹ ಸ್ಟಾಕ್‌ಮೆನ್ ಹುದ್ದೆಯನ್ನು, ಪಶುವೈದ್ಯಕೀಯ ನೆರವಿನ ವಿಷಯದಲ್ಲಿ ಗ್ರಾಮೀಣ ಪ್ರದೇಶಕ್ಕೆ ಸೇವೆ ಸಲ್ಲಿಸಲು ಅವನಿಗೆ ಸಾಧ್ಯವಾಗುವ ಹಾಗೆ ಪುನಃ ಪ್ರಾರಂಭಿಸಬೇಕೆಂದು ಸಹ ನಾನು ಮತ್ತಷ್ಟು ಸಲಹೆ ಮಾಡುತ್ತೇನೆ. ಜನರು ಔಷಧಾಲಯಕ್ಕಾಗಿ ಕಟ್ಟಡವನ್ನು ಒದಗಿಸಲು ಇಚ್ಛೆಯುಳ್ಳಂತಹ ಕೆಲವು ಗ್ರಾಮಗಳಿವೆ ಮತ್ತು ಅವರು ಸ್ಟಾಕ್‌ಮೆನ್ ಹುದ್ದೆಯ್ನು ನೇಮಕ ಮಾಡುವಂತೆ ಮತ್ತು ಔಷಧಿಯ ವೆಚ್ಚಕ್ಕಾಗಿ ಹಣಕಾಸು ನೆರವನ್ನು ಒದಗಿಸುವಂತೆ ಸರ್ಕಾರವನ್ನು ಕೋರುತ್ತಾರೆ. ಸರ್ಕಾರವು ನಿಧಿಗಳ ಕೊರತೆಯ ಕಾರಣದಿಂದಾಗಿ ಅಂತಹ ಗ್ರಾಮಗಳಿಗೆ (ಸ್ಟಾಕ್‌ಮೆನ್)ನ್ನು ಒದಗಿಸಲು ಅಸಮರ್ಥವಾಗಿದೆಯೆಂದು ಹೇಳಲಾಗಿದೆ. ನಮ್ಮ ಜಾನುವಾರುಗಳ ಒಟ್ಟು ಸಂಖ್ಯೆಯು ನಮ್ಮ ದೇಶದ ಸಂಪತ್ತಿನ ಪ್ರಮುಖ ಬಾಬುಗಳಲ್ಲೊಂದಾಗಿದೆ ಮತ್ತು ಸರ್ಕಾರವು ಈ ಕಡೆಗೆ ಹೆಚ್ಚು ಗಮನ ಹರಿಸಬೇಕೆಂದು ನಾನು ಮನವಿ ಮಾಡುತ್ತೇನೆ.

ಆಯವ್ಯಯದಲ್ಲಿ ಅನೇಕ ಮಹತ್ವದ ಲಕ್ಷಣಗಳಿದ್ದು, ಅವುಗಳನ್ನು ಈಗಾಗಲೇ ಆಡಳಿತ ಪಕ್ಷದ ಕಡೆಯಿಂದ ಹಾಗೂ ವಿರೋಧಪಕ್ಷದ ಕಡೆಯಿಂದ ಎರಡೂ ಕಡೆಗಳಿಂದ ಅನೇಕ ಮಾನ್ಯ ಸದಸ್ಯರುಗಳು ಪ್ರಸ್ತಾಪಿಸಿದ್ದಾರೆ. ಆದ್ದರಿಂದ ನಾನು ಅವುಗಳನ್ನು ಪ್ರಸ್ತಾಪಿಸಲಿಕ್ಕೋಗುವುದಿಲ್ಲ.

ಕಡೆಯದಾಗಿ, ಮಾನ್ಯ ಹಣಕಾಸು ಸಚಿವರು ಜನಸಾಮಾನ್ಯರ ಹಿತಾಸಕ್ತಿಯನ್ನು ಹೆಚ್ಚು ಗಮನದಲ್ಲಿಟ್ಟುಕೊಂಡು ತಮ್ಮ ಆಯವ್ಯಯವನ್ನು ಮಂಡಿಸಿದ್ದಾರೆಂದು ನಾನು ಭಾವಿಸುತ್ತೇನೆ.

(ದಿನಾಂಕ: 2.3.1955)

# ಟಿಪ್ಪಣಿ

1955–56ರ ಆಯವ್ಯಯ ಚರ್ಚೆಯಲ್ಲಿ ಭಾಗವಹಿಸಿದ ಕೌಜಲಗಿಯವರು ಸರ್ಕಾರ ಪ್ರಾಥಮಿಕ ಶಿಕ್ಷಣಕ್ಕೆ ನೀಡಿರುವ ಆದ್ಯತೆಯನ್ನು ಶ್ಲಾಘಿಸಿದರು. ಅದಕ್ಕಾಗಿ ರಾಜ್ಯದ ಆದಾಯದ ಶೇಕಡ 21ರಷ್ಟನ್ನು ಮೀಸಲಿಟ್ಟಿರುವುದನ್ನು ಒಳ್ಳೆಯ ಬೆಳವಣಿಗೆ ಎಂದು ಸ್ವಾಗತಿಸಿದರು. 200 ಜನಸಂಖ್ಯೆ ಮತ್ತು ಅದಕ್ಕೂ ಹೆಚ್ಚಿರುವ ಪ್ರತಿಯೊಂದು ಗ್ರಾಮವು ಶಾಲಾ ಸೌಲಭ್ಯ ಹೊಂದುವಂತಾಗಬೇಕೆಂದು ಆಶಿಸಿದರು. ಹಾಗೆಯೇ ಕುಡಿಯುವ ನೀರು ಗ್ರಾಮಗಳ ಮೂಲಭೂತ ಅಗತ್ಯ. ಅದಕ್ಕಾಗಿ ಸರ್ಕಾರ ಪ್ರಥಮ ಆದ್ಯತೆ ನೀಡಬೇಕೆಂದು ವಿವರಿಸಿದರು.

ಇವರು ಪುರಸಭೆಗಳು ಪಟ್ಟಣಗಳ ಜೀವನ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಆದ್ಯ ಕರ್ತವ್ಯವನ್ನು ಹೊಂದಿರುವುದರಿಂದ ಅವುಗಳನ್ನು ಬಲಪಡಿಸುವುದು ಸರ್ಕಾರದ ಹೊಣೆ ಎಂದು ಪ್ರತಿಪಾದಿಸಿದರು. ಅದಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ನಿಧಿಯನ್ನು ಪಡೆದು ಪುರಸಭೆಗಳಿಗೆ ಸಾಲ ನೀಡಬೇಕೆಂದು ಒತ್ತಾಯಿಸಿದರು.

ಕೌಜಲಗಿಯವರು ಗ್ರಾಮಗಳ ಅಭಿವೃದ್ಧಿಯ ಬಗ್ಗೆ ಸದಾ ಕಾಳಜಿ ತೋರುತ್ತಿದ್ದರು. ಪಶು ಸಂಪತ್ತು ರಾಷ್ಟ್ರದ ಸಂಪತ್ತು, ಆದ್ದರಿಂದ ಅದರ ಅಭಿವೃದ್ಧಿಗಾಗಿ ಪಶು ಶಸ್ತ್ರತಜ್ಞರು ಮತ್ತು ಪರಿಚಾರಕರ ಸೇವೆಯನ್ನು ಗ್ರಾಮಗಳಿಗೆ ಒದಗಿಸಲು ಸರ್ಕಾರ ಹೆಚ್ಚಿನ ಆದ್ಯತೆ ನೀಡುವಂತೆ ಮನವರಿಕೆ ಮಾಡಿಕೊಟ್ಟರು. ಘಟಪ್ರಭಾ ನದಿಯ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣ ಒದಗಿಸಲು ಸರ್ಕಾರವನ್ನು ಕೋರಿದರು.

# ವ್ಯವಸಾಯ ಸುಧಾರಣೆ ಕುರಿತು

1955

**ಶ್ರೀ ಹೆಚ್.ವಿ. ಕೌಜಲಗಿ (ಪರಸಗಡ)** – ಮಾನ್ಯ ಸಭಾಧ್ಯಕ್ಷರೇ, ನಾನು ಯಾಂತ್ರಿಕ ಬೇಸಾಯ ಯೋಜನೆಯ ಬಗ್ಗೆ ಮಾಡಲಾದ ಟೀಕೆಯ ಕುರಿತು ಕೆಲವು ಹೇಳಿಕೆಗಳನ್ನು ನೀಡಲಿಚ್ಛಿಸುತ್ತೇನೆ.

ಮಾನ್ಯರೇ, ಸರ್ಕಾರವು ಪ್ರಾರಂಭಿಸುವಂತಹ ಈ ಯೋಜನೆಯು ಕಾರ್ಯತಃ, ಬಿಳಿ ಆನೆಯಾಗಿದೆಯೆಂದು ಮತ್ತು ಈ ಯೋಜನೆಯಿಂದ ದೊಡ್ಡ ಹಿಡುವಳಿದಾರರು ಮಾತ್ರ ಲಾಭ ಪಡೆದುಕೊಳ್ಳುತ್ತಿದ್ದಾರೆಂದು ಮಾನ್ಯ ಸದಸ್ಯರೊಬ್ಬರು ಹೇಳಿದರು. ಮಾನ್ಯರೇ, ನಾವು ಸದರಿ ಯೋಜನೆಯ ನೈಜ ಕಾರ್ಯನಿರ್ವಹಣೆಯ ಬಗ್ಗೆ ಎಚ್ಚರಿಕೆ ವಹಿಸಿದಲ್ಲಿ, ನಾವು ಈ ಹೇಳಿಕೆಯು ಅಸತ್ಯವಾದುದೆಂಬ ತೀರ್ಮಾನಕ್ಕೆ ಬರಬಹುದೆಂಬುದನ್ನು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ನಾನು ಈಗಲೂ ಸಹ, ಸದರಿ ಯೋಜನೆಯನ್ನು ಕೈಬಿಡುವ ಸಮಯ ಇನ್ನೂ ಬಂದಿಲ್ಲವೆಂದು ಹೇಳುತ್ತೇನೆ ಮತ್ತು ಈ ಯೋಜನೆಯು ನಷ್ಟದಲ್ಲಿ ನಡೆಯುತ್ತಿರಬಹುದಾದಾಗ್ಯೂ ಕೂಡ ಈ ಯೋಜನೆಯನ್ನು ಇನ್ನೂ ಕೆಲವು ವರ್ಷಗಳವರೆಗೆ ಮುಂದುವರಿಸಬೇಕೆಂಬುದು ನನ್ನ ಅಭಿಪ್ರಾಯ.

ಈಗ, ಮಾನ್ಯರೇ, ನಾವು ಮೊದಲು ಈ ಯೋಜನೆಯನ್ನು ಯಾವ ಉದ್ದೇಶಕ್ಕಾಗಿ ಪ್ರಾರಂಭಿಸಲಾಯಿತೆಂಬುದನ್ನು ಕಂಡುಕೊಳ್ಳಬೇಕು. ಈ ಯೋಜನೆಯನ್ನು ಆಹಾರದ ಕೊರತೆಯಿದ್ದಾಗ ಮತ್ತು ಅನೇಕ ಎಕರೆಗಳಷ್ಟು ಬಂಜರು ಭೂಮಿಯು ಸಾಗುವಳಿಯಿಲ್ಲದೆ ಬೀಳು ಬಿದ್ದಿದ್ದಾಗ ಜಾರಿಗೊಳಿಸಲಾಯಿತು. ಆದ್ದರಿಂದ, ಸರ್ಕಾರವು ಭೂಮಿಯು ಬಂಜರು ಭೂಮಿಯಾಗಿದ್ದು ಸಾಗವಳಿಯಿಲ್ಲದೆ ಬೀಳು ಬಿದ್ದಿರುವಂತಹ ಪ್ರದೇಶಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಬೇಕೆಂದು ಆಲೋಚಿಸಿತು ಮತ್ತು ಈ ಯೋಜನೆಯ ಪರಿಣಾಮವಾಗಿ ಅನೇಕ ಎಕರೆಗಳಷ್ಟು ಜಮೀನನ್ನು ಟ್ರಾಕ್ಟರ್‌ಗಳ ಸಾಧನದ ಮೂಲಕ ಸಾಗುವಳಿಯ ವ್ಯಾಪ್ತಿಗೆ ತರಲಾಯಿತು. ಹಾಗಾಗಿ, ಸಾಗುವಳಿಯ ವ್ಯಾಪ್ತಿಗೆ ಬಂಜರು ಭೂಮಿಯನ್ನು ತರಲು, ಅಭಾವವಿರುವ ಪ್ರದೇಶಗಳಲ್ಲಿ ಟ್ರಾಕ್ಟರ್‌ಗಳನ್ನು ಬಳಸಲಾಯಿತು ಮತ್ತು ಈ ಯೋಜನೆಯಿಂದ ಸಣ್ಣ ಹಿಡುವಳಿದಾರರು ಪ್ರಯೋಜನ ಪಡೆಯುತ್ತಿದ್ದಾರೆಂದು ಹೇಳಬಹುದು. ಈ ಸಣ್ಣ ಹಿಡುವಳಿದಾರರಿಗೆ ಟ್ರಾಕ್ಟರ್‌ಗಳನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ತಗಾವಿ ಸಾಲಗಳನ್ನು ನೀಡಲಾಗುತ್ತಿದೆ ಮತ್ತು ಟ್ರಾಕ್ಟರ್‌ಗಳ ಸಹಾಯದೊಂದಿಗೆ ಅವರು ಅನೇಕ ಎಕರೆಗಳಷ್ಟು ಭೂಮಿಯನ್ನು ಸಾಗುವಳಿ ಮಾಡಿದ್ದಾರೆ. ಹಾಗಾಗಿ, ದೊಡ್ಡ ಹಿಡುವಳಿದಾರರು ಈ ಯೋಜನೆಯ ಪ್ರಯೋಜನವನ್ನು ಪಡೆಯುತ್ತಿದ್ದಾರೆಂಬುದು ಸರಿಯಲ್ಲ. ನನ್ನ ಕಡೆಯಿಂದ ದೊಡ್ಡ ಹಿಡುವಳಿದಾರರು ತಮ್ಮದೇ ಆದ ಟ್ರಾಕ್ಟರ್‌ಗಳನ್ನು ಪಡೆದಿದ್ದಾರೆ. ನನ್ನ ವಿಧಾನಸಭಾ ಕ್ಷೇತ್ರದ ಒಂದು ತಾಲೂಕಿನಲ್ಲಿ, ತಾಲೂಕಿನ ಸರಿಸುಮಾರು ಮೂರನೇ ಒಂದರಷ್ಟು (1/3) ಭೂಮಿಯನ್ನು ಟ್ರಾಕ್ಟರ್‌ಗಳ ಸಾಧನದ ಮೂಲಕ ಸಾಗುವಳಿಯ ವ್ಯಾಪ್ತಿಗೆ ತರಲಾಗಿದೆ ಮತ್ತು ಇದನ್ನು ಸಣ್ಣ ಹಿಡುವಳಿದಾರರು ಮಾಡಿದ್ದಾರೆಯೇ ಹೊರತು ದೊಡ್ಡ ಹಿಡುವಳಿದಾರರಲ್ಲ.

ಈಗ, ಮಾನ್ಯರೇ, ಈ ಯೋಜನೆಯನ್ನು ಜಾರಿಗೊಳಿಸಿದಂದಿನಿಂದೀಚೆಗಿನ ಕಳೆದ ಏಳು ಅಥವಾ ಎಂಟು ವರ್ಷಗಳ ಅವಧಿಯಲ್ಲಿ, ಅನೇಕ ಬಂಜರು ಭೂಮಿಗಳನ್ನು ಮತ್ತು ಜನರ ಬಡತನ

ಕಾರಣದಿಂದಾಗಿ ಹಾಗೂ ಮಳೆಯ ಅನಿಶ್ಚಿತತೆಯ ಕಾರಣದಿಂದಾಗಿ ನಿರ್ಲಕ್ಷಿತ ಸ್ಥಿತಿಗಳಲ್ಲಿರುವಂಥ ಭೂಮಿಯನ್ನು ಸಾಗುವಳಿಯ ವ್ಯಾಪ್ತಿಗೆ ತರಲಾಗಿದೆ ಮತ್ತು ಅವು ಉತ್ತಮ ಬೆಳೆ ಇಳುವರಿಯನ್ನು ನೀಡುತ್ತಿವೆ. ನಾವು ಸರ್ಕಾರ ಯೋಜನೆಯ ಮೇಲೆ ಕಳೆದುಕೊಳ್ಳಬೇಕಾಗಿರುವಂಥ ಕೆಲವು ಲಕ್ಷ ರೂಪಾಯಿಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂಬುದಕ್ಕೆ ಇದೇನು ರಾಷ್ಟ್ರೀಯ ಆದಾಯವಲ್ಲವೇ? ಹಾಗಾಗಿ, ನನ್ನ ಅಭಿಪ್ರಾಯದಲ್ಲಿ, ನಾವು ಪ್ರತಿ ವರ್ಷ ಕೆಲವು ಪ್ರಮಾಣದ ಹಣವನ್ನು ಕಳೆದುಕೊಳ್ಳುತ್ತೇವೆಂಬ ಏಕಮಾತ್ರ ಕಾರಣದಿಂದಾಗಿ ಈ ಯೋಜನೆಯನ್ನು ಕೈಬಿಡಬಾರದು. ಆದರೆ ನಾವು ನಮ್ಮದು ಕೃಷಿ ಪ್ರಧಾನ ರಾಷ್ಟ್ರವಾಗಿರುವುದರಿಂದ ಕೃಷಿಯ ಅಭಿವೃದ್ಧಿಗೆ ದಾರಿ ಮಾಡಿಕೊಡುವಂಥ ಅಂತಿಮವಾಗಿ ಉತ್ತಮವಾದ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಕೃಷಿಯು ಈ ರೀತಿಯಲ್ಲಿ ಸುಧಾರಣೆಗೊಂಡಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ರಾಜ್ಯದ ಕರ್ತವ್ಯವಾಗಿದೆ.

ಈಗ, ಗಮನಿಸಬೇಕಾದಂತಹ ಒಂದು ವಿಷಯವಿದೆ. ಯೋಜನೆಯು ನಷ್ಟದಲ್ಲಿ ನಡೆಯುತ್ತಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಪ್ರಮುಖ ಅಂಶವೆಂದರೆ, ಟ್ರಾಕ್ಟರ್‌ನ ಕಾರ್ಯಾಚರಣೆಯು ವರ್ಷದಲ್ಲಿ 4ರಿಂದ 5 ತಿಂಗಳುಗಳವರೆಗೆ ಮಾತ್ರ ಅಂದರೆ ಬೆಳೆಗಳನ್ನು ಕಟಾವು ಮಾಡಿದಾಗ ಮತ್ತು ಮುಂದಿನ ಮುಂಗಾರು ಮಳೆಯು ಪ್ರಾರಂಭವಾಗುವುದಕ್ಕೂ ಮುಂಚೆ ಮಾಡಬಹುದಾದಂತಹ ಕಾರ್ಯಾಚರಣೆಯಾಗಿದೆ. ಉಳಿದ ಅವಧಿಗಳಲ್ಲಿ ಬೆಳೆದು ನಿಂತಿರುವ ಬೆಳೆಯಿರುತ್ತದೆ ಮತ್ತು ಯಂತ್ರಗಳನ್ನು ನಿಷ್ಕ್ರಿಯವಾಗಿಟ್ಟಿರಬೇಕಾಗುತ್ತದೆ: ಆಪರೇಟರ್‌ಗಳಿಗೆ ಮತ್ತು ಇತರ ಸೇವಕರುಗಳಿಗೆ ಹಣವನ್ನು ಸಂದಾಯ ಮಾಡಬೇಕಾಗುತ್ತದೆ ಮತ್ತು ಸರ್ಕಾರವು ನಷ್ಟದ ದೊಡ್ಡ ಮೊತ್ತವನ್ನು ಅನಾವಶ್ಯಕವಾಗಿ ಹೇಗೆ ಭರಿಸಲಿಕ್ಕಾಗುತ್ತದೆ ಎಂಬುದು. ಆದರೆ ಈ ನಷ್ಟವಿದೆಯೆಂಬ ಸಂಗತಿಯಿದ್ದಾಗ್ಯೂ, ರಾಷ್ಟ್ರೀಯ ಗಳಿಕೆಯನ್ನು ಪರಿಗಣಿಸಲಾಗುತ್ತಿದೆ. ಈ ನಷ್ಟವು ಅಮುಖ್ಯವಾದುದೆಂಬುದು ನನ್ನ ಅಭಿಪ್ರಾಯ. ಈಗ, ತೀರಾ ಇತ್ತೀಚೆಗೆ ಈ ಟ್ರಾಕ್ಟರ್ ಘಟಕಗಳಿಗೆ ಬುಲ್ಡೋಜರ್‌ಗಳನ್ನು ಸೇರಿಸಲಾಗಿದೆ. ಬುಲ್ಡೋಜರ್‌ಗಳು ಕೃಷಿ ಜಮೀನುಗಳನ್ನು ಸಮತಟ್ಟುಗೊಳಿಸುವಲ್ಲಿ ಅಗಾಧ ಸೇವೆಯನ್ನು ಸಲ್ಲಿಸುತ್ತಿವೆ. ಮಾನವ ಶ್ರಮದೊಂದಿಗೆ ತಮ್ಮ ಜಮೀನುಗಳನ್ನು ಮಟ್ಟಗೊಳಿಸುವುದು ಸಣ್ಣ ಕೃಷಿಕರಿಗೆ ಅಥವಾ ಇತರ ಯಾರೇ ಕೃಷಿಕರಿಗೂ ಕೂಡ ಅಸಾಧ್ಯವಾದ ಕೆಲಸ ಮತ್ತು ಇದು ದೀರ್ಘಾವಧಿಯನ್ನು ತೆಗೆದುಕೊಳ್ಳುತ್ತದೆ. ಆಗೊಮ್ಮೆ ಈಗೊಮ್ಮೆ ಅವರು ತಮ್ಮ ಜಮೀನುಗಳನ್ನು ಮಟ್ಟ ಮಾಡುವ ಪ್ರಯತ್ನ ಮಾಡಿದರು ಸಹ ಅವರಿಗೆ ಸಾಧ್ಯವಾಗದಿರಬಹುದು. ಬುಲ್ಡೋಜರ್‌ಗಳು ಪ್ರವೇಶಿಸಿದಂದಿನಿಂದ, ಈ ಬುಲ್ಡೋಜರ್‌ಗಳಿಗೆ ಭಾರೀ ಬೇಡಿಕೆಯಿದೆ. ಪ್ರಸ್ತುತ ಇರುವ ಬುಲ್ಡೋಜರ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಮತ್ತು ಪ್ರತಿ ಟ್ರಾಕ್ಟರ್ ಘಟಕಗಳಿಗೆ ಕನಿಷ್ಠ ಒಂದು ಬುಲ್ಡೋಜರ್‌ಅನ್ನು ನೀಡಬೇಕೆಂದು ಸಹ ನಾನು ಸಲಹೆ ಮಾಡಲಿಚ್ಛಿಸುತ್ತೇನೆ.

ಈಗ, ದರಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಹೇಳುವುದಾದರೆ, ದರಗಳು ದುಬಾರಿ ವೆಚ್ಚಗಳಿಗೆ ಹೋಲಿಸಿದರೆ, ತೀರಾ ಕಡಿಮೆಯಾಗಿವೆ ಎಂದು ಕೃಷಿಕರಿಂದ ದೂರಿದೆ. ಸರ್ಕಾರವು, ಸಹಜವಾಗಿ, 'ಲಾಭವು ಇಲ್ಲ ಮತ್ತು ನಷ್ಟವು ಇಲ್ಲ' ಎಂಬುದರ ಆಧಾರದ ಮೇಲೆ ಯೋಜನೆಯನ್ನು

ನಿರ್ವಹಿಸಲು ಪ್ರಯತ್ನಿಸುತ್ತಿದೆ. ಆದರೆ ಈಗಲೂ ಈ ಘಟಕವನ್ನು ವರ್ಷದುದ್ದಕ್ಕೂ ನಿರ್ವಹಿಸಲಿಕ್ಕಾಗುವುದಿಲ್ಲವೆಂಬ ದೃಢೀಕೃತ ವಾಸ್ತವ ಸಂಗತಿಯನ್ನು ಪರಿಗಣಿಸಿದರೆ ದರಗಳನ್ನು ಕಡಿಮೆ ಮಾಡಲಿಕ್ಕೆ ಸರ್ಕಾರವು ಅಸಮರ್ಥವಾಗಿದೆ. ಆದ್ದರಿಂದ, ನಾನು ಸಲಹೆ ಮಾಡುವುದೇನೆಂದರೆ, ಕನಿಷ್ಠಪಕ್ಷ ಈ ಇಲಾಖೆಗೆ ಹೆಚ್ಚು ಆದಾಯವನ್ನು ಸೇರ್ಪಡೆ ಮಾಡುವ ಸಲುವಾಗಿಯಾದರೂ, ಸರ್ಕಾರವು ಮಳೆಗಾಲದ ಹಂಗಾಮಿನಲ್ಲಿ ದರಗಳನ್ನು ಕಡಿಮೆ ಮಾಡಬೇಕು. ಒಬ್ಬ ಕೃಷಿಕನು ಟ್ರಾಕ್ಟರ್‌ಗಳ ಮೂಲಕ ತನ್ನ ಭೂಮಿಯನ್ನು ಸಾಗುವಳಿ ಮಾಡಲು ಬಯಸಿದಲ್ಲಿ ಅಥವಾ ಬುಲ್ಡೋಜರ್‌ನ ಬಳಕೆಯನ್ನು ಮಾಡಲು ಇಚ್ಛಿಸಿದಲ್ಲಿ, ಆತನು ವರ್ಷದ ಬೆಳೆಯನ್ನು ಕೈಬಿಟ್ಟರೂ ಕೂಡ ಅತ್ಯಂತ ಕಡಿಮೆ ಹಣವನ್ನು ಸಂದಾಯ ಮಾಡುವ ಮೂಲಕ ಅವುಗಳ ಬಳಕೆಯನ್ನು ಮಾಡಿಕೊಳ್ಳಬಹುದು. ನನ್ನ ಭಾಗದಲ್ಲಿ ವಿಸ್ತರಣ ವ್ಯವಸಾಯದ ಜಮೀನುಗಳನ್ನು ಹೊಂದಿರುವಂತಹ ಕೆಲವು ಜಮೀನ್ದಾರುಗಳಿದ್ದಾರೆ; ಆದರೆ ಜಮೀನುಗಳನ್ನು ಸಮತಟ್ಟುಗೊಳಿಸದಿರುವುದರಿಂದ ಅಥವಾ ಅವರ ಇಳುವರಿಯು ಕಡಿಮೆಯಿರುವುದರಿಂದ, ಅವರು ಆ ವರ್ಷದ ಬೆಳೆಯನ್ನು ಕೈಬಿಡುವ ಇಚ್ಛೆಯನ್ನು ಹೊಂದಿರುತ್ತಾರೆ ಮತ್ತು ಈ ಕಾರ್ಯಾಚರಣೆಯನ್ನು ಮಾಡಿದ್ದೇ ಆದರೆ ದರಗಳು ಕಡಿಮೆಯಾಗುತ್ತವೆ. ಕನಿಷ್ಠಪಕ್ಷ, ನನ್ನ ಅಭಿಪ್ರಾಯದಲ್ಲಿ, ಸಾಕಷ್ಟು ಸಂಖ್ಯೆಯ ಕೃಷಿಕರು ಈ ಬೇಡಿಕೆಯೊಂದಿಗೆ ಮುಂದೆ ಬರಲಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಈ ಸಲಹೆಗೆ ಯಾವುದೇ ತೊಂದರೆಯು ಕಿರಿಕಿರಿಯುಂಟು ಮಾಡುವುದಿಲ್ಲ.

ನಾನು ಮಾಡಬೇಕಾಗಿರುವಂಥ ಇನ್ನೂ ಒಂದು ಸಲಹೆಯಿದೆ. ಈ ಬುಲ್ಡೋಜರ್‌ಗಳು ಅಥವಾ ಟ್ರಾಕ್ಟರ್‌ಗಳ ಬೆಲೆಗಳು ಕಾಲಕಾಲಕ್ಕೆ ಬದಲಾಗುವುದನ್ನು ನಾನು ಗಮನಿಸಿದ್ದೇನೆ. ಒಬ್ಬ ಕೃಷಿಕನು ಒಂದು ನಿರ್ದಿಷ್ಟ ವರ್ಷಕ್ಕಾಗಿ ಬೆಲೆಗಳನ್ನು ಸಂದಾಯ ಮಾಡಿದ್ದಲ್ಲಿ ಮತ್ತು ಟ್ರಾಕ್ಟರ್ ಅಥವಾ ಬುಲ್ಡೋಜರ್ ಆ ನಿರ್ದಿಷ್ಟ ವರ್ಷದಲ್ಲಿ ಕೆಲಸ ಮಾಡದಿದ್ದಲ್ಲಿ ಮತ್ತು ದರಗಳನ್ನು ಮುಂದಿನ ವರ್ಷದಲ್ಲಿ ಏರಿಸಿದ್ದಲ್ಲಿ, ಸರ್ಕಾರವು ಏರಿಸಿದ ದರಕ್ಕೆ ಅನುಸಾರವಾಗಿ ಆ ಕೃಷಿಕನಿಂದ ಹೆಚ್ಚುವರಿ ದರವನ್ನು ವಸೂಲಿ ಮಾಡಿರುವುದು ಕಂಡುಬಂದಿದೆ. ಇದು ಸರ್ಕಾರ ಮತ್ತು ಗ್ರಾಮಸ್ಥರ ನಡುವಿನ ಒಂದು ಒಪ್ಪಂದವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನೀವು ಗ್ರಾಮಸ್ಥರಿಂದ ಒಂದು ನಿರ್ದಿಷ್ಟ ವರ್ಷದಲ್ಲಿ ಹಣವನ್ನು ಪಡೆದಿರುತ್ತೀರಿ. ಈ ಗ್ರಾಮಸ್ಥರು ತಗಾವಿ ಸಾಲಗಳಂಥ ಸಾಲಗಳನ್ನು ತೆಗೆದುಕೊಳ್ಳುವ ಮೂಲಕ ಹಣವನ್ನು ನೀಡಿರುತ್ತಾರೆ. ಗ್ರಾಮಸ್ಥರು ಸರ್ಕಾರಕ್ಕೆ ಬಡ್ಡಿಯನ್ನು ಸಂದಾಯ ಮಾಡಬೇಕಾಗಿದೆ. ಆದರೆ, ಅದೇ ಸಮಯಕ್ಕೆ, ಸರ್ಕಾರವು ಬುಲ್ಡೋಜರ್‌ಗಾಗಲಿ ಅಥವಾ ಟ್ರಾಕ್ಟರ್‌ಗಾಗಲಿ ಅಕಾಲಿಕ ಮಳೆಯಿದ್ದುದರಿಂದ ಸರಿಯಾಗಿ ಕೆಲಸ ಮಾಡಲಿಕ್ಕಾಗಲಿಲ್ಲವೆಂಬ ಕಾರಣದ ಮೇಲೆ ಕೆಲಸವನ್ನು ನಿರ್ವಹಿಸುವುದಿಲ್ಲ. ವಿಷಯ ಹೀಗಿರುವಾಗ, ಕೃಷಿಕರು ಮುಂದಿನ ವರ್ಷದಲ್ಲಿ ಏರಿಸಿದ ದರವನ್ನು ಏಕೆ ಸಂದಾಯ ಮಾಡಬೇಕು? ನನ್ನ ಅಭಿಪ್ರಾಯದಲ್ಲಿ, ಹಣವನ್ನು ಸಂದಾಯ ಮಾಡಿದಾಗ ಜಾರಿಯಲ್ಲಿದ್ದಂತಹ ದರಕ್ಕೆ ಅನುಸಾರವಾಗಿ ಮತ್ತು ಕೆಲಸವನ್ನು ನಿರ್ವಹಿಸುತ್ತಿರುವಾಗ ಅಸ್ತಿತ್ವದಲ್ಲಿರುವ ದರಕ್ಕೆ ಅನುಸಾರವಾಗಿರದೆ ಬುಲ್ಡೋಜರ್‌ಗಳನ್ನು ಅಥವಾ ಟ್ರಾಕ್ಟರ್‌ಗಳನ್ನು ಓಡಿಸುವುದೂ ಅಥವಾ ಅವುಗಳಿಂದ ಕೆಲಸ ಮಾಡುವುದು ನೈತಿಕವಾಗಿ ಮಾತ್ರವಲ್ಲದೆ ಕಾನೂನು ದೃಷ್ಟಿಯಿಂದಲೂ ಕೂಡ ಸರ್ಕಾರದ ಕರ್ತವ್ಯವಾಗಿರುತ್ತದೆ. ಈ ಸದನಕ್ಕೆ ಒಂದು ಉದಾಹರಣೆಯನ್ನು ನೀಡುವುದಾದರೆ,

ಪಂಚಿನಾಳ್ ಗ್ರಾಮದ ಅನೇಕ ಗ್ರಾಮಸ್ಥರು ಬುಲ್ಡೋಜರ್‌ನಿಂದ ಕೆಲಸ ಮಾಡಿಸಲು 1953ನೇ ಸಾಲಿನಲ್ಲಿ ಈ 2,800 ರೂಪಾಯಿಗಳನ್ನು ಠೇವಣಿಯಾಗಿಟ್ಟರು. ಬುಲ್ಡೋಜರ್ ಕೆಟ್ಟು ಹೋಯಿತು. ಆದ್ದರಿಂದ ಕೆಲಸವನ್ನು ಸದರಿ ವರ್ಷದಲ್ಲಿ ಮಾಡಲಿಕ್ಕಾಗಲಿಲ್ಲ. ತರುವಾಯದ ವರ್ಷದಲ್ಲಿ, ದರಗಳನ್ನು ಏರಿಸಲಾಯಿತು ಮತ್ತು 1953ನೇ ಸಾಲಿನಲ್ಲೇ ಕೆಲಸವನ್ನು ಮಾಡದಿರುವ ತಪ್ಪಿಗೆ ಗ್ರಾಮಸ್ಥರು ಕಾರಣರಲ್ಲದಿದ್ದಾಗ್ಯೂ ಏರಿಸಿದ ದರವನ್ನು ಸಂದಾಯ ಮಾಡುವಂತೆ ಗ್ರಾಮಸ್ಥರನ್ನು ಕೋರಲಾಯಿತು. ಈ ಕಾರಣಕ್ಕಾಗಿ ಗ್ರಾಮಸ್ಥರಿಂದ ಪ್ರತಿಭಟನೆಗಳು ನಡೆದವು. ಹಳೆಯ ದರಗಳ ಪ್ರಕಾರ ಕೆಲಸವನ್ನು ನಿರ್ವಹಿಸುವುದು ಸರ್ಕಾರದ ಕರ್ತವ್ಯವಾಗಿತ್ತೆಂಬುದನ್ನು ಹೇಳಲು ನನಗೆ ವಿಷಾದವೆನಿಸುತ್ತದೆ.

ನಾನು ಮಾಡಲಿಚ್ಛಿಸುವಂಥ ಇನ್ನೂ ಒಂದು ಸಲಹೆ ಏನೆಂದರೆ, ಸರ್ಕಾರವು ಮಳೆಗಾಲದ ಹಂಗಾಮಿನಲ್ಲಿ ಕಡಿಮೆ ಲಾಭವಿದ್ದರೂ ಕೂಡ ಈ ಕಾರ್ಯಾಚರಣೆಗಳನ್ನು ಮಾಡಬೇಕು. ಕೃಷಿಯೇತರ ಉದ್ದೇಶಕ್ಕಾಗಿ ಅಂದರೆ ಶಾಲಾ ಆಟದ ಮೈದಾನವನ್ನು ಸಮತಟ್ಟುಗೊಳಿಸುವ ಉದ್ದೇಶಕ್ಕಾಗಿ ಈ ಯಂತ್ರಗಳಿಗೆ ಬೇಡಿಕೆಗಳಿರಬಹುದು. ಕೆಲವು ಧರ್ಮಾರ್ಥ ಶಿಕ್ಷಣ ಸಂಸ್ಥೆಗಳು ಈ ಯಂತ್ರಗಳು ಕೆಲಸವಿಲ್ಲದೆ ನಿಂತಿರುವಾಗ ಕಡಿಮೆ ದರನ್ನು ಸಂದಾಯ ಮಾಡಿ ಈ ಯಂತ್ರಗಳ ಬಳಕೆಯನ್ನು ಮಾಡಿಕೊಳ್ಳುವ ಇಚ್ಛೆಯನ್ನು ಹೊಂದಿರಬಹುದು. ಹಾಗಾಗಿ, ಮಳೆಗಾಲದ ಹಂಗಾಮಿನಲ್ಲಿ ಯಂತ್ರಗಳನ್ನು ಕೆಲಸವಿಲ್ಲದೆ ಸುಮ್ಮನೆ ನಿಲ್ಲಿಸುವುದಕ್ಕೆ ಬದಲಾಗಿ, ಕಡಿಮೆ ದರವನ್ನು ತೆಗೆದುಕೊಂಡು ಈ ಯಂತ್ರಗಳನ್ನು ಏಕೆ ಬಳಸಿಕೊಳ್ಳಬಾರದು. ಇದರಿಂದ ಕೃಷಿಯೇತರ ಸಂಸ್ಥೆಗಳಿಗೂ ಕೂಡ ಪ್ರಯೋಜನವಾಗುತ್ತದೆ ಮತ್ತು ಅದೇ ಸಮಯಕ್ಕೆ, ಸರ್ಕಾರಕ್ಕೆ ಕೂಡ ಯಂತ್ರಗಳನ್ನು ಕೆಲಸವಿಲ್ಲದೆ ಸುಮ್ಮನೆ ನಿಲ್ಲಿಸುವುದಕ್ಕೆ ಬದಲಾಗಿ ಸ್ವಲ್ಪ ಹಣವನ್ನು ಗಳಿಸಲು ಸಾಧ್ಯವಾಗುತ್ತದೆ.

ಇವು ಈ ವಿಷಯದ ಬಗೆಗಿನ ನನ್ನ ಅಭಿಪ್ರಾಯಗಳಾಗಿವೆ ಮತ್ತು ನಾನು ಬೇಡಿಕೆಯನ್ನು ಬೆಂಬಲಿಸುತ್ತೇನೆ.

(ದಿನಾಂಕ: 17.3.1955)

## ಟಿಪ್ಪಣಿ

ಸರ್ಕಾರ ವ್ಯವಸಾಯದ ಅಭಿವೃದ್ಧಿಗಾಗಿ ಬುಲ್ಡೋಜರ್ ಮೊದಲಾದ ಯಂತ್ರಗಳ ಸಹಾಯದಿಂದ ಪಾಳು ಭೂಮಿಯನ್ನು ಪಟ್ಟಿಮಾಡಿ ಸಾಗುವಳಿಗೆ ಯೋಗ್ಯವಾಗುವಂತೆ ಮಾಡುವುದರಲ್ಲಿ ರೈತರಿಗೆ ನೆರವಾಗಲು ಒಂದು ಯೋಜನೆ ರೂಪಿಸಿತ್ತು. ಅದರಂತೆ ಸರ್ಕಾರ ಬಾಡಿಗೆಗೆ ದೊಡ್ಡ ಯಂತ್ರಗಳನ್ನು ನೀಡುವುದು ಇದರಲ್ಲಿ ಸೇರಿದ್ದಿತು. ಕಡಿಮೆ ಬಾಡಿಗೆಗೆ ಸರ್ಕಾರ ಈ ಯಂತ್ರಗಳನ್ನು ನೀಡುವುದರಿಂದ ಸರ್ಕಾರ ನಷ್ಟ ಅನುಭವಿಸಬೇಕಾಗಿದೆ. ಇದು ಬಿಳಿಯಾನೆ ಸಾಕಿದಂತೆ ಎಂದು ಕೆಲವರು ಟೀಕಿಸಿದ್ದುಂಟು. ಆದರೆ ಈ ಯೋಜನೆಯನ್ನು ಪ್ರಬಲವಾಗಿ ಸಮರ್ಥಿಸಿದ ಶ್ರೀ ಕೌಜಲಗಿಯವರು ಇದರಿಂದ ನಿರುಪಯೋಗಿಯಾಗಿದ್ದ ಅಪಾರ ಜಮೀನು ಸಾಗುವಳಿಗೆ ಬಂದಿದ್ದು ಆಹಾರೋತ್ಪಾದನೆಗೆ ನೆರವಾಗಿದೆ. ಈ ಯೋಜನೆಯಲ್ಲಿನ ದೋಷಗಳನ್ನು ನಿವಾರಿಸಿ ಇದನ್ನು ಮುಂದುವರಿಸಬೇಕು ಎಂದು ಪ್ರತಿಪಾದಿಸಿದರು ಹಾಗು ಇದಕ್ಕಾಗಿ ಹಣ ಕಟ್ಟಿದ ರೈತರಿಗೆ ಸೂಕ್ತ ಸಮಯದಲ್ಲಿ ಕಾಮಗಾರಿ ಮಾಡಿ ಕೊಡಬೇಕೆಂದು ಸರ್ಕಾರವನ್ನು ವಿನಂತಿಸಿದರು.

# ಅನಕ್ಷರತೆ ನಿವಾರಣೆ

1955

**ಶ್ರೀ ಹೆಚ್.ವಿ. ಕೌಜಲಗಿ (ಪರಸಗಡ)** – ಮಾನ್ಯ ಸಭಾಧ್ಯಕ್ಷರೇ, ನಾನು ನಿರ್ಣಯವನ್ನು ಬೆಂಬಲಿಸಿ ಮಾತನಾಡುತ್ತೇನೆ. ಸಹಜವಾಗಿ, ನನ್ನ ಮಾನ್ಯ ಸ್ನೇಹಿತರಾದ ಶ್ರೀ ತಲೆಯಾರ್ ಖಾನ್‌ರವರು ಈ ನಿರ್ಣಯವನ್ನು ಅನುಷ್ಠಾನಗೊಳಿಸುವಲ್ಲಿ ಅನೇಕ ಪ್ರಾಯೋಗಿಕ ತೊಂದರೆಗಳಿವೆಯೆಂದು ಅಭಿಪ್ರಾಯಪಟ್ಟಿದ್ದಾರೆ. ನನಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ನಿರ್ಣಯವನ್ನು ಅನುಷ್ಠಾನಗೊಳಿಸುವಲ್ಲಿ ಯಾವುದೇ ಪ್ರಾಯೋಗಿಕ ತೊಂದರೆಗಳಿವೆಯೆಂಬುದು ನನಗೆ ಕಾಣುತ್ತಿಲ್ಲ. ಸಹಜವಾಗಿ, ಮಾತನಾಡಿದಂತಹ ಅನೇಕ ಮಾನ್ಯ ಸದಸ್ಯರುಗಳೆಲ್ಲರೂ ಅನಕ್ಷರತೆಯು ನಮ್ಮ ರಾಜ್ಯವೂ ಸೇರಿದಂತೆ ದೇಶದಲ್ಲಿನ ಕೆಡಕುಗಳಲ್ಲೊಂದಾಗಿದೆ ಮತ್ತು ಸರ್ಕಾರವು ಅನಕ್ಷರತೆಯನ್ನು ನಿರ್ಮೂಲಗೊಳಿಸಲು ತನ್ನೆಲ್ಲಾ ಪ್ರಯತ್ನವನ್ನು ಮಾಡುತ್ತಿದೆ ಮತ್ತು ಇದು ಅಪೇಕ್ಷಣೀಯವಾದುದು ಮತ್ತು ಇದನ್ನು ಸಾಧ್ಯವಾದಷ್ಟು ಶೀಘ್ರವಾಗಿ ನಿವಾರಣೆ ಮಾಡಬೇಕೆಂಬುದನ್ನು ಒಪ್ಪಿಕೊಂಡಿರುತ್ತಾರೆ. ಹಾಗಾಗಿ, ಈ ತತ್ವವನ್ನು ಒಪ್ಪಿಕೊಂಡಲ್ಲಿ, ಬಗೆಹರಿಯದೆ ಹಾಗೇ ಉಳಿಯುವಂತಹ ಏಕಮಾತ್ರ ಪ್ರಶ್ನೆ ಎಂದರೆ, ಕಾರ್ಖಾನೆಗಳು ಮತ್ತಿತರೆಯವುಗಳಿಂದ ನಿಯೋಜಿತರಾಗುವಂತಹ ವ್ಯಕ್ತಿಗಳ ವಿಷಯದಲ್ಲಿ ಇದನ್ನು ಅನ್ವಯ ಮಾಡಬೇಕೇ ಬೇಡವೇ ಎಂಬುದು. ಸರ್ಕಾರವು ಅನಕ್ಷರತೆ ನಿವಾರಣೆಯಾಗುವಂತೆ ನೋಡಿಕೊಳ್ಳಲು ತನ್ನೆಲ್ಲಾ ಪ್ರಯತ್ನವನ್ನು ಮಾಡುತ್ತಿದೆ ಮತ್ತು ಮಾನ್ಯ ಸದಸ್ಯರಾದ ಶ್ರೀ ತಲೆಯಾರ್ ಖಾನ್‌ರವರು ಹೇಳಿದಂತೆ, ಸಾಮಾಜಿಕ ಶಿಕ್ಷಣ ತರಗತಿಗಳನ್ನು ರಾಜ್ಯದುದ್ದಕ್ಕೂ ಪ್ರಾರಂಭಿಸಲಾಗಿದೆ. ಮೂರು ಪ್ರಾದೇಶಿಕ ಸಾಮಾಜಿಕ ಶಿಕ್ಷಣ ಸಮಿತಿಗಳನ್ನು ರಚಿಸಲಾಗಿದೆ ಮತ್ತು ದೊಡ್ಡ ನಗರಗಳಲ್ಲಿ ಕೂಡ ಅನೇಕ ಸಾಮಾಜಿಕ ಶಿಕ್ಷಣ ತರಗತಿಗಳನ್ನು ನಡೆಸಲಾಗುತ್ತಿದೆ. ಹಾಗಾಗಿ, ಸರ್ಕಾರವು ಅನಕ್ಷರತೆಯನ್ನು ನಿವಾರಣೆ ಮಾಡಲು ತನ್ನ ಅತ್ಯುತ್ತಮ ಪ್ರಯತ್ನವನ್ನು ಮಾಡುತ್ತಿದೆ. ಈ ಸಾಮಾಜಿಕ ಶಿಕ್ಷಣ ತರಗತಿಗಳ ಅನುಭವವೇನು ಮತ್ತು ಈ ತರಗತಿಗಳನ್ನು ನಡೆಸುವುದರ ಪ್ರಭಾರದಲ್ಲಿರುವ ಕಾರ್ಯಕರ್ತರು ಯಾರು? ಕೆಲಸ ಮಾಡಲು ಸಿದ್ಧರಿರುವಂತಹ, ತರಗತಿಗಳನ್ನು ನಡೆಸಲು ಸಿದ್ಧರಿರುವಂತಹ, ಅಗತ್ಯವಾದ ಸಾಮಾಜಿಕ ಶಿಕ್ಷಣವನ್ನು ಅವರಿಗೆ ನೀಡಲು ಸಿದ್ಧರಿರುವಂತಹ ಅನೇಕ ಸಾಮಾಜಿಕ ಕಾರ್ಯಕರ್ತರುಗಳಿದ್ದಾರೆ. ಆದರೆ ಇನ್ನೂ ವಯಸ್ಕರು ಅಂತಹ ತರಗತಿಗಳಿಗೆ ಹೋಗಲು ತಯಾರಿಲ್ಲ. ಅವರು ನಿರುದ್ಯೋಗಿಗಳಾಗಿದ್ದರೂ ಅವರು ಕೇವಲ ತಮ್ಮ ಸಮಯವನ್ನು ಹರಣ ಮಾಡುತ್ತಾರೆ. ಈ ಸಾಮಾಜಿಕ ಕಾರ್ಯಕರ್ತರು ಈ ತರಗತಿಗಳಿಗೆ ಹಾಜರಾಗುವಂತೆ ಈ ಜನರನ್ನು ಪ್ರೇರೇಪಿಸುವರು. ಆದರೆ ಯಾರೊಬ್ಬರೂ ಅವರ ಮಾತಿಗೆ ಯಾವುದೇ ಗಮನವನ್ನು ಕೊಡುವುದಿಲ್ಲ ಮತ್ತು ಕೆಲವೇ ಕೆಲವು ಜನರು ಈ ತರಗತಿಗಳಿಗೆ ಹಾಜರಾಗುತ್ತಾರೆ. ಸರ್ಕಾರವು ತಮ್ಮ ಕರ್ತವ್ಯಗಳಲ್ಲೊಂದಾಗಿ ಸಾಮಾಜಿಕ ಶಿಕ್ಷಣ ಕಾರ್ಯವನ್ನು ತೆಗೆದುಕೊಳ್ಳುವಂತೆ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಪರೋಕ್ಷವಾಗಿ ಹಣ ಒಪ್ಪಿಸುತ್ತಿದೆ ಮತ್ತು ಅಂತಹ ಶಿಕ್ಷಕರು ಸಹ ಅನಕ್ಷರತೆಯನ್ನು ನಿವಾರಣೆ ಮಾಡುವ ಸಲುವಾಗಿ ತಮ್ಮ ಅತ್ಯುತ್ತಮ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಎಲ್ಲಾ

ಪ್ರಯತ್ನಗಳಿದ್ದಾಗ್ಯೂ, ಅನಕ್ಷರಸ್ಥರಾಗಿರುವಂತಹ ವಯಸ್ಕರಿಂದ ಅತ್ಯಲ್ಪ ಪ್ರತಿಕ್ರಿಯೆಯಿರುವುದನ್ನು ನಾವು ನೋಡುತ್ತೇವೆ.

ಈಗ ಪ್ರಶ್ನೆ ಇರುವುದು ಕಾರ್ಮಿಕರಿಗೆ ಸಾಕ್ಷರತೆಯನ್ನು ಪರೋಕ್ಷವಾಗಿ ಏಕೆ ಕಡ್ಡಾಯ ಮಾಡಬಾರದು ಎಂಬುದು. ಉದ್ಯೋಗ ವಿನಿಮಯ ಕಚೇರಿಯಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿರುವಂತಹ ವ್ಯಕ್ತಿಗಳು ತಿಂಗಳುಗಟ್ಟಲೆ ಕಾಯಬೇಕಾಗಿರುವುದನ್ನು ನಾವು ನೋಡಿದ್ದೇವೆ. ಈ ನಡುವೆ, ಅವರು ಈ ತರಗತಿಗಳಿಗೆ ಹಾಜರಾಗಿ ಸ್ವಂತ ಹಿತಾಸಕ್ತಿಯಿಂದ ಕೆಲವು ಅಕ್ಷರಗಳನ್ನು ಕಲಿಯಬಾರದೇ? ಈ ಜನರು ಒಳ ವಿವರಗಳನ್ನು ತಿಳಿಯದೆ ಸುಮ್ಮನೆ ತಮ್ಮ ಹೆಬ್ಬೆಟ್ಟಿನ ಗುರುತನ್ನು ಹಾಕುವುದನ್ನು ನಾವು ಕಂಡಿದ್ದೇವೆ. ಅವರು "ನಾವು ಯಾವ ಉದ್ದೇಶಕ್ಕಾಗಿ ಸಹಿ ಮಾಡಿದ್ದೇವೆ ಎಂಬುದು ನಮಗೆ ಗೊತ್ತಿಲ್ಲ. ಈ ಮಹಾಶಯರು ಸಹಿ ಮಾಡುವಂತೆ ನಮಗೆ ಹೇಳಿದ್ದರಿಂದ ನಾವು ಸಹಿ ಮಾಡಿದೆವೆಂದು" ಹೇಳುತ್ತಾರೆ. ಅವರು ತಾವು ಸ್ವೀಕರಿಸಿದ ಸಂದಾಯ ಅಥವಾ ಪೂರ್ಣ ಸಂದಾಯಕ್ಕಾಗಿ ಸಹಿ ಹಾಕಿರುತ್ತಾರೆ. ಅವರು ಸಹಿ ಮಾಡಿರುವಂತಹ ದಾಖಲೆಗಳ ಒಳ ವಿವರಗಳೇನು ಎಂಬುದನ್ನು ತಿಳಿದುಕೊಳ್ಳುವುದು ಅವರ ಸ್ವ-ಹಿತಾಸಕ್ತಿಯಾಗಿರುವುದಿಲ್ಲವೇ? ನಾವು ಸಚಿವಾಲಯದಲ್ಲಿನ IVನೇ ದರ್ಜೆಯ ಸೇವೆಗಳ ವಿಷಯದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದ್ದೇವೆ. ಸಾಮಾನ್ಯ ನೌಕರರುಗಳನ್ನು ನಿಯೋಜಿಸಿಕೊಳ್ಳುವಾಗ, ಪುರಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳು ಸಹ ಅಭ್ಯರ್ಥಿಗಳಿಗೆ ಓದುವುದು ಮತ್ತು ಬರೆಯುವುದು ಗೊತ್ತಿರಬೇಕೆಂದು ಒತ್ತಾಯಪಡಿಸಬೇಕು. ಅಕ್ಷರಸ್ಥ ಜನರು ಲಭ್ಯವಿರುವಾಗ ನಾವು ಅವರಿಗೆ ಏಕೆ ಆದ್ಯತೆ ನೀಡಬಾರದು. ಅಕ್ಷರಸ್ಥ ಜನರನ್ನು ಮಾತ್ರ ಉದ್ಯೋಗಕ್ಕೆ ತೆಗೆದುಕೊಳ್ಳಬೇಕೆಂದು ನಾವು ಹೇಳಿದಲ್ಲಿ, ಆಗ ಇದು ಸಾಕ್ಷರತೆಯ ತರಗತಿಗಳಿಗೆ ಹೋಗಲು ಮತ್ತು ಓದುವುದು ಹಾಗೂ ಬರೆಯುವುದನ್ನು ಕಲಿಯಲು ಅನಕ್ಷರಸ್ಥ ನಿರುದ್ಯೋಗ ಜನರಿಗೆ ಒಂದು ಪ್ರೇರಣೆಯಾಗಿ ಕೆಲಸ ಮಾಡುತ್ತದೆಂಬುದು ನನ್ನ ಭಾವನೆ. ಓದುವುದು ಮತ್ತು ಬರೆಯುವುದನ್ನು ಕಲಿತುಕೊಳ್ಳಲು ಹೆಚ್ಚು ಕಾಲ ಬೇಕಾಗುವುದಿಲ್ಲ. ಒಬ್ಬ ಕಾರ್ಮಿಕನು ಒಂದು ಅಥವಾ ಎರಡು ತಿಂಗಳುಗಳವರೆಗೆ ತರಗತಿಗೆ ಹಾಜರಾದಲ್ಲಿ, ಆತನು ಪರೀಕ್ಷೆಯಲ್ಲಿ ತೇರ್ಗಡೆಯಾಗಬಹುದು.

ಆಮೇಲೆ ನನ್ನ ಮಾನ್ಯ ಸ್ನೇಹಿತರಾದ ಶ್ರೀ ತಲೆಯಾರ್ ಖಾನ್‌ರವರು, ಅಂತಹ ಕಡ್ಡಾಯವನ್ನು ಅನ್ವಯಿಸಿದಲ್ಲಿ ಅವರು ಸುಳ್ಳು ಪ್ರಮಾಣಪತ್ರಗಳನ್ನು ಸಲ್ಲಿಸುವ ಸಂಭವವಿದೆಯೆಂದು ಹೇಳಿದರು. ಸುಳ್ಳು ಪ್ರಮಾಣಪತ್ರಗಳನ್ನು ಸಲ್ಲಿಸುವುದು ಸುಲಭವಲ್ಲವಾದ್ದರಿಂದ ಅಂತಹ ಪ್ರಕರಣದ ಎಲ್ಲೋ ಒಂದೊಂದು ನಡೆಯುವುದೆಂದು ನನ್ನ ಭಾವನೆ. ಏಕೆಂದರೆ, ಅಂತಹ ಪ್ರಮಾಣಪತ್ರವನ್ನು ಸಲ್ಲಿಸಿರುವ ವ್ಯಕ್ತಿಯು ಓದು ಮತ್ತು ಬರಹ ಬಲ್ಲವನೆ ಎಂಬುದನ್ನು ಯಾವುದೇ ಸಮಯದಲ್ಲಿ ಬೇಕಾದರೂ ಪರೀಕ್ಷಿಸಬಹುದಾಗಿದೆ.

ನಂತರ, ಮಾನ್ಯರೇ, ಈ ತರಗತಿಗಳನ್ನು ಪಟ್ಟಣಗಳ ಪ್ರತಿ ಮೂಲೆ ಮೂಲೆಯಲ್ಲಿ ಮತ್ತು

ಗ್ರಾಮಗಳಲ್ಲಿ ನಡೆಸಲಾಗಿದೆ ಮತ್ತು ಇದು ತಮ್ಮ ಅನುಕೂಲಕ್ಕನುಸಾರವಾಗಿ ಈ ತರಗತಿಗಳಿಗೆ ಹಾಜರಾಗಲು ಮತ್ತು ಅಕ್ಷರಸ್ಥರಾಗಲು ಅವಿದ್ಯಾವಂತ ನಿರುದ್ಯೋಗಿಗಳಿಗೆ ಹಾಗೂ ಉದ್ಯೋಗವನ್ನು ಕೋರುವಂತವರಿಗೆ ಬಹು ಸುಲಭ. ಹಾಗಿದ್ದರೆ, ಅಗತ್ಯಪಡಿಸಲಾದಂತೆ ಸಾಕ್ಷರತೆಯ ಪ್ರಮಾಣಪತ್ರವನ್ನು ಸಲ್ಲಿಸುವುದು ಈ ಜನರಿಗೆ ಅತ್ಯಂತ ಸುಲಭಸಾಧ್ಯವಾಗುತ್ತದೆ ಮತ್ತು ನಾನು ಸುಳ್ಳು ಪ್ರಮಾಣಪತ್ರಗಳನ್ನು ಸಲ್ಲಿಸುವ ಯಾವುದೇ ಅಪಾಯವಿದೆ ಎಂದು ಭಾವಿಸುವುದಿಲ್ಲ. ಅದಕ್ಕೆ ಪ್ರತಿಯಾಗಿ, ಪರೋಕ್ಷವಾಗಿ ನಾವು ತನ್ನ ಸ್ವಂತ ಹಿತಾಸಕ್ತಿಯಿಂದ ಅಕ್ಷರಸ್ಥನಾಗುವಂತೆ ಕಾರ್ಮಿಕನಿಗೆ ಸಹ ಸಹಾಯ ಮಾಡುತ್ತಿದ್ದೇವೆ. ಅದು ರಾಷ್ಟ್ರಕ್ಕೆ ಕೂಡ ಪರೋಕ್ಷ ನೆರವಾಗುತ್ತದೆ. ಈ ಯೋಜನೆಯ ಪರಿಣಾಮವಾಗಿ, ಪ್ರತಿಯೊಬ್ಬ ವ್ಯಕ್ತಿಯು ಅಕ್ಷರಸ್ಥನಾಗುತ್ತಿದ್ದಾನೆ ಮತ್ತು ಸಾಮಾಜಿಕ ಶಿಕ್ಷಣವನ್ನು ಸಹ ಸಕಾಲಕ್ಕೆ ಪೂರೈಸಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದೇ ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಆದ್ದರಿಂದ, ಕೆಲಸಗಾರರನ್ನು ನಿಯೋಜಿಸಿಕೊಳ್ಳುವುದಕ್ಕೂ ಮೊದಲು ಅಕ್ಷರಸ್ಥರಾಗುವಂತೆ ಅವರಿಗೆ ಕಡ್ಡಾಯ ಮಾಡುವುದರಲ್ಲಿ ಯಾವುದೇ ತೊಂದರೆಯಿಲ್ಲದಿರುವುದರಿಂದ ಸದನವು ಈ ನಿರ್ಣಯವನ್ನು ಬೆಂಬಲಿಸಬೇಕೆಂದು ನಾನು ಪ್ರತಿಪಾದಿಸುತ್ತೇನೆ.

(ದಿನಾಂಕ: 31.3.1955)

## ಟಿಪ್ಪಣಿ

ಶ್ರೀ ಕೌಜಲಗಿಯವರು ಕಡ್ಡಾಯ ಶಿಕ್ಷಣ ಕುರಿತು ಶಾಸನಸಭೆಯಲ್ಲಿ ತಂದ ಮಸೂದೆಯನ್ನು ಬೆಂಬಲಿಸಿ ಮಾತನಾಡಿದರು. ಕಾರ್ಮಿಕರಾದಿಯಾಗಿ ಸಮಾಜದ ಎಲ್ಲ ವರ್ಗದ ಜನರು ಅಕ್ಷರಸ್ಥರಾಗಬೇಕು. ಜನ ಅನಕ್ಷರತೆಯಿಂದ ಶೋಷಿತರಾಗುವುದು ತಪ್ಪಬೇಕು ತಾವು ಏತಕ್ಕಾಗಿ ಸಹಿ ಮಾಡುತ್ತಿದ್ದೇವೆ ಎಂಬುದು ತಿಳಿಯದೇ ಇರುವುದು ವಂಚನೆಗೆ ಅವಕಾಶ ಕಲ್ಪಿಸುತ್ತದೆ. ಈ ಸಾಕ್ಷರತಾ ಯೋಜನೆ ಸಾಕಾರಗೊಳ್ಳಬೇಕಾದರೆ ಅದರಲ್ಲಿ ಸಮಾಜ ಕಾರ್ಯಕರ್ತರು, ಶಾಲಾ ಶಿಕ್ಷಕರು, ಮುಖಂಡರು ಸೇರಿ ಈ ಅನಕ್ಷರತೆಯ ಶಾಪದಿಂದ ಜನರನ್ನು ವಿಮೋಚನೆ ಮಾಡಬೇಕು ಎಂದು ತಿಳಿಸಿದರು. ಸರ್ಕಾರ ನಾಲ್ಕನೇ ವರ್ಗದ ನೌಕರರನ್ನು ನೇಮಿಸುವಾಗ ಆ ಹುದ್ದೆಗಳಿಗೆ ನೇಮಕವಾಗುವವರಿಗೆ ಈ ಓದು-ಬರಹದ ಜ್ಞಾನ ಕಡ್ಡಾಯವೆಂದು ನಿಯಮ ಮಾಡಿದರೆ ಅದರಿಂದ ಅಕ್ಷರ ಜ್ಞಾನವಿಲ್ಲದ ನಿರುದ್ಯೋಗ ಯುವಕರಿಗೆ ಅಕ್ಷರಸ್ಥರಾಗಲು ಪ್ರೇರಣೆ ದೊರೆತಂತಾಗುತ್ತದೆ ಎಂಬ ಸಲಹೆ ಕೌಜಲಗಿಯವರದು. ಈ ಕಡ್ಡಾಯ ಶಿಕ್ಷಣದ ಮಸೂದೆ ಜಾರಿಗೊಂಡರೆ ಸಾಕ್ಷರತಾ ಯೋಜನೆಯ ದಿಕ್ಕಿನಲ್ಲಿ ಸರ್ಕಾರ ದೊಡ್ಡ ಹೆಜ್ಜೆ ಇಟ್ಟಂತಾಗುತ್ತದೆಂಬುದು ಶ್ರೀಯುತರ ಅಭಿಪ್ರಾಯವಾಗಿದ್ದು ಇದು ನಿಜಕ್ಕೂ ಇವರ ವಾಸ್ತವ ಪ್ರಗತಿಪರ ದೃಷ್ಟಿಗೆ ಸಾಕ್ಷಿಯಾಗಿತ್ತು.

# ಸಾಮಾನ್ಯ ಆಡಳಿತದ ಬಗ್ಗೆ

1955

**ಶ್ರೀ ಹೆಚ್.ವಿ. ಕೌಜಲಗಿ (ಪರಸಗಡ)** – ಮಾನ್ಯ ಸಭಾಧ್ಯಕ್ಷರೇ, ವಿರೋಧಪಕ್ಷದ ಕಡೆಯ ಮಾನ್ಯ ಸದಸ್ಯರು ಎರಡು ಬಾಬುಗಳ ಮೇಲಿನ ವೆಚ್ಚದ ಬಗ್ಗೆ ಅಂದರೆ ಪ್ರಚಾರ ಮತ್ತು ಮಂತ್ರಿಗಳ ಪ್ರವಾಸಗಳ ಮೇಲಿನ ವೆಚ್ಚದ ಬಗ್ಗೆ ಆಕ್ಷೇಪಣೆ ಎತ್ತಿದ್ದಾರೆ ಮತ್ತು ಅವರು ಈ ಎರಡು ಬಾಬುಗಳ ಮೇಲಿನ ವೆಚ್ಚವು ಅನವಶ್ಯಕವೆಂಬುದಾಗಿ ಟೀಕಿಸಿದ್ದಾರೆ.

**ಸಂಜೆ 6.00 ಗಂಟೆ**

ಅವರು ಸರ್ಕಾರದ ಸಚಿವರ ಮತ್ತು ಪಕ್ಷದ ಪ್ರಚಾರದ ಉದ್ದೇಶಕ್ಕಾಗಿ ಅವು ಹೆಚ್ಚು ಕಡಿಮೆಯಾಗಿವೆ ಎಂದು ಹೇಳಿದರು. ನಾನು, ಈ ಎರಡು ಬಾಬುಗಳ ಮೇಲಿನ ವೆಚ್ಚವು ತೀರಾ ಅವಶ್ಯಕವೆಂದು ವಾದಿಸುತ್ತೇನೆ.

ಪ್ರಚಾರದ ಮೇಲಿನ ವೆಚ್ಚಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ನಾವು ಗ್ರಾಮ ಜೀವನ, ಗ್ರಾಮೀಣ ಜನರ ಶಿಕ್ಷಣ, ಆಡಳಿತದ ಬಗ್ಗೆ ಅವರು ಎಷ್ಟರಮಟ್ಟಿಗೆ ಅಜ್ಞಾನಿಗಳಾಗಿದ್ದಾರೆ, ಸರ್ಕಾರದಲ್ಲಿ ಏನು ನಡೀತಾಯಿದೆ ಎಂಬಿತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡಲ್ಲಿ, ಈ ವೆಚ್ಚವು ತೀರಾ ಅವಶ್ಯಕವೆಂದು ಕಂಡಬರುತ್ತದೆ. ನನಗೆ ತಿಳಿದಿರುವಮಟ್ಟಿಗೆ, ಹೇಳುವುದಾದೆ, ಸರಿಸುಮಾರು ಶೇ. 80 ಅಥವಾ 85ರಷ್ಟು ಗ್ರಾಮೀಣ ಜನರು ಅನಕ್ಷರಸ್ಥರು ಹಾಗೂ ಅಜ್ಞಾನಿಗಳಾಗಿದ್ದಾರೆ. ಆದ್ದರಿಂದ, ಸರ್ಕಾರದಲ್ಲಿ ಏನು ನಡೀತಾಯಿದೆ, ಮತ್ತು ಗ್ರಾಮೀಣ ಜನರು ಏನು ಮಾಡಬೇಕೆಂದು ನಿರೀಕ್ಷಿಸುತ್ತಾರೆ ಎಂಬುದನ್ನು ಅವರಿಗೆ ವಿವರಿಸುವುದು ಸರ್ಕಾರದ ಕರ್ತವ್ಯವಾಗಿದೆ. ಜನರಿಗೆ ಈ ಎಲ್ಲಾ ವಿಚಾರಗಳನ್ನು ವಿವರಿಸುವ ಸಲುವಾಗಿ, ಸರ್ಕಾರವು, ಸರ್ಕಾರದ ಅನೇಕ ಕಾರ್ಯಚಟುವಟಿಕೆಗಳನ್ನು ಹಾಗೂ ಆಡಳಿತದಲ್ಲಿ ಏನು ನಡೀತಾಯಿದೆ ಎಂಬುದನ್ನು ಪ್ರಕಟಿಸಬೇಕಾಗುತ್ತದೆ. ಕಿರುಹೊತ್ತಿಗೆಗಳ ರೂಪದಲ್ಲಿ, ಪ್ರಚಾರ ಅಧಿಕಾರಿಗಳನ್ನು ನೇಮಿಸಿ ಉಪನ್ಯಾಸಗಳನ್ನು ನೀಡುವಂತೆ ಅವರಿಗೆ ಕೋರುವ ಮೂಲಕ ಮತ್ತು ಗ್ರಾಮಗಳಲ್ಲಿ ಚಲನಚಿತ್ರಗಳನ್ನು ಪ್ರದರ್ಶಿಸುವ ಮೂಲಕ ಈ ಎಲ್ಲಾ ವಿಷಯಗಳ ಬಗ್ಗೆ ಅವರಿಗೆ ಮಾಹಿತಿಯನ್ನು ನೀಡಬೇಕಾಗುತ್ತದೆ. ಗ್ರಾಮಗಳಲ್ಲಿ ವಾಸಿಸುತ್ತಿರುವಂತಹ ಜನರಿಗಾಗಿ, ಅವರು ಕಡುಬಡವರು ಮತ್ತು ಅನಕ್ಷರಸ್ಥರಾಗಿರುವ ಕಾರಣ ಅವರ ಗಮನವನ್ನು ಸೆಳೆಯಲು ಆಕರ್ಷಕ ಸಾಹಿತ್ಯವು ತೀರಾ ಅವಶ್ಯವಾಗಿದೆ. ಅಲ್ಲದೆ ಅವರು ತಮ್ಮ ದೈನಂದಿನ ಕೆಲಸ–ಕಾರ್ಯಕ್ಕೆ ಹಾಜರಾಗಬೇಕಾಗಿರುವುದರಿಂದ ಓದಲು ಅವರಿಗೆ ಸಮಯ ಸಿಗುವುದಿಲ್ಲ ಮತ್ತು ಅವರಲ್ಲಿ ಕೆಲವೇ ಕೆಲವರು ಅವುಗಳಿಂದ ಓದುತ್ತಿರುವುದು ತಿಳಿದಿದೆ. ಅವರ ಗಮನವನ್ನು ಸೆಳೆಯಲು ಚಲನಚಿತ್ರಗಳು ತೀರ ಅವಶ್ಯಕ. ಸರ್ಕಾರವು ಆಡಳಿತದಲ್ಲಿ ಏನು ನಡೀತಾಯಿದೆ ಎಂಬುದನ್ನು ವಿವರಿಸಿರುವುದಷ್ಟೇ ಅಲ್ಲದೆ, ಅನೇಕ ಸಂದರ್ಭದಲ್ಲಿ ಅವರ ದೈನಂದಿನ ಜೀವನದ ಮೇಲೆ ಪರಿಣಾಮ ಬೀರುವಂತಹ ಅಥವಾ ಅವರ ದೈನಂದಿನ ಜೀವನದಲ್ಲಿ ಉಪಯುಕ್ತವಾಗುವಂತಹ ಸಾಹಿತ್ಯವನ್ನು ಸಹ ಪ್ರಕಟಿಸಿ

ಹಂಚಿಕೆ ಮಾಡಿದೆ. ಉದಾಹರಣೆಗೆ, ಅಸ್ಪೃಶ್ಯತೆ ನಿರ್ಮೂಲನೆ ಕುರಿತ ಸಾಹಿತ್ಯ, ಪಾನ ನಿಷೇಧ ಕುರಿತ ಸಾಹಿತ್ಯ, ಕೃಷಿಯ ಬಗೆಗಿನ ಸಾಹಿತ್ಯ ಮತ್ತು ಇತರ ಅನೇಕ ವಿಷಯಗಳ ಕುರಿತ ಸಾಹಿತ್ಯವನ್ನು ಮುದ್ರಿಸಿ, ಪ್ರಕಟಿಸಿ, ಸಾರ್ವಜನಿಕರಿಗೆ ವಿತರಣೆ ಮಾಡಲಾಗಿದೆ. ಸರ್ಕಾರವು ಈ ಬಾಬಿನ ಮೇಲೆ ಕೆಲವು ಮಟ್ಟಿನ ವೆಚ್ಚವನ್ನು ಮಾಡಬೇಕಾಗಿರುವುದು ಸ್ವಾಭಾವಿಕ. ಸರ್ಕಾರವು ಇವುಗಳ ಮೂಲಕ ಸಾರ್ವಜನಿಕರು ಆಡಳಿತದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳುವ ಹಾಗೆ ಸಾಮಾಜಿಕ ಶಿಕ್ಷಣ ತರಗತಿಗಳನ್ನು ನಡೆಸಲು ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿದೆ.

"ಲೋಕರಾಜ್" ಪತ್ರಿಕೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಮುದ್ರಿಸಲಾಗಿದೆ ಮತ್ತು ವೆಚ್ಚಕ್ಕೆ ಹೋಲಿಸಿದರೆ ಅದರ ಆದಾಯವು ತೀರಾ ಅಲ್ಪವೆಂದೂ ಸಹ ಸೂಚಿಸಲಾಗಿದೆ. ಸರಿ. ಇದು, ವಾಸ್ತವಿಕವಾಗಿ ಯಾವುದೇ ವಾರ್ತಾ ಪತ್ರಿಕೆಗಳನ್ನು ಖರೀದಿಸುವ ಸ್ಥಿತಿಯಲ್ಲಿ ಇಲ್ಲದಿರುವ ಬಡ ಜನರಿಗಾಗಿ ಇರುವಂತಹ ಪತ್ರಿಕೆ. ಈ ಪತ್ರಿಕೆಯನ್ನು ಅತಿ ದೂರದ ಹಳ್ಳಿಗಳಿಗೂ ಸಹ ಕಳುಹಿಸಲಾಗಿದೆ. ಅದರಿಂದ ಪ್ರತಿಯೊಬ್ಬ ಗ್ರಾಮಸ್ಥನು, ಅದನ್ನು ಪಡೆಯಲು ಪ್ರಯತ್ನ ಪಡಬೇಕು ಹಾಗು ಅವನಿಗೆ ಸ್ವತಃ ಓದಲು ಬರದಿದ್ದರೆ, ಇತರರ ಮೂಲಕ ಅದರಲ್ಲಿರುವ ವಿಷಯಗಳನ್ನು ತಿಳಿದುಕೊಳ್ಳಬೇಕು. ಇದು ಈ ಪತ್ರಿಕೆಯ ಮುಖ್ಯ ಉದ್ದೇಶವಾಗಿದೆ. ಈ ಪತ್ರಿಕೆಯು ರಾಜಕೀಯ ವಿಷಯಗಳ ಮೇಲೆ ಯಾವುದೇ ಮಾಹಿತಿಗಳನ್ನು ಕೊಡದಿದ್ದರೂ, ಕಡೇ ಪಕ್ಷ ಆಡಳಿತದಲ್ಲಿ ಏನು ನಡೆಯುತ್ತಿದೆ ಹಾಗು ಬೊಂಬಾಯಿ ಸರ್ಕಾರ ಏನು ಮಾಡುತ್ತಿದೆ ಎಂಬುದರ ಬಗ್ಗೆ ಇದು ತಿಳಿಸುತ್ತದೆ. ಇದು ಈ ವಿಧಾನ ಸಭೆಯ ಸದಸ್ಯನಿಗಾಗಲಿ ಅಥವಾ ನಗರ ಅಥವಾ ಪಟ್ಟಣದಲ್ಲಿ ವಾಸಿಸುತ್ತಿರುವ ವ್ಯಕ್ತಿಗಾಗಲಿ ಆಸಕ್ತಿದಾಯಕವಾಗಿರದಿದ್ದರೂ ಸಹ, ಕಡೇಪಕ್ಷ ಗ್ರಾಮಗಳಲ್ಲಿ ವಾಸಿಸುತ್ತಿರುವ ವ್ಯಕ್ತಿಗಳಿಗೆ ಬಹಳ ಮಾಹಿತಿಯನ್ನು ನೀಡುತ್ತದೆ ಮತ್ತು ಅವರಿಗೆ ಬಹಳ ಉಪಯುಕ್ತವಾಗುತ್ತದೆ.

ಆದ್ದರಿಂದ, ಮಾನ್ಯರೆ ನಾನು, ಪ್ರಚಾರದ ಮೇಲಿನ ವೆಚ್ಚವು ಅಗತ್ಯವಾದುದಾಗಿದೆ ಎಂಬುದನ್ನು ನಿವೇದಿಸುತ್ತೇನೆ ಹಾಗು ಈ ವಿಷಯವನ್ನು ನಾನು ಬೆಂಬಲಿಸುತ್ತೇನೆ.

ಎರಡನೆಯದಾಗಿ, ಸಚಿವರ ಪ್ರವಾಸಗಳು ಕೆಲವು ವೇಳೆ ಅನಾವಶ್ಯಕವಾಗಿರುತ್ತದೆ ಎಂಬುದಾಗಿಯೂ ಟೀಕಿಸಲಾಗಿದೆ ಹಾಗು ಹೆಚ್ಚು ಕಡಿಮೆ ಅಧಿಕಾರದಲ್ಲಿರುವ ಪಕ್ಷ ತೋರಿಕೆಗಾಗಿ ಈ ಪ್ರವಾಸಗಳು ಹಾಗೆ, ಹೀಗೆ ಎಂಬುದಾಗಿ ಪರೋಕ್ಷವಾಗಿ ಸೂಚಿಸಲಾಗಿದೆ. ಪ್ರಚಾರದ ಮೇಲೆ ವೆಚ್ಚವನ್ನು ಬೆಂಬಲಿಸಿ, ನಾನು ಹೇಳಿದಂತೆ, ಜನರ ನಿರಕ್ಷರತೆ ಹಾಗು ಮುಗ್ಧತೆಗಳನ್ನು ಮತ್ತು ನಮ್ಮ ಸರ್ಕಾರವು ಪ್ರಜಾಪ್ರಭುತ್ವದ ಸರ್ಕಾರವೆಂಬುದನ್ನು ನಾವು ಪರಿಗಣನೆಗೆ ತೆಗೆದುಕೊಂಡರೆ ಸಚಿವರ ಪ್ರವಾಸಗಳು ಅತ್ಯಾವಶ್ಯಕ ಎಂಬುದು ಮನವರಿಕೆಯಾಗುತ್ತದೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಗ್ರಾಮೀಣ ಪ್ರದೇಶಗಳು ಮತ್ತು ಗ್ರಾಮಸ್ಥರೊಂದಿಗೆ ಸಚಿವರುಗಳು ಸಂಪರ್ಕವನ್ನು ಇಟ್ಟುಕೊಳ್ಳಬೇಕಾದುದು ಅವರ ಕರ್ತವ್ಯವಾಗಿರುತ್ತದೆ. ಮತ್ತು ಆಡಳಿತದಲ್ಲಿ ಏನು ನಡೆಯುತ್ತಿದೆ? ಅವರುಗಳು ಏನು ಮಾಡುತ್ತಿದ್ದಾರೆ, ಗ್ರಾಮಸ್ಥರು ಏನು ಮಾಡಬೇಕೆಂದು ನಿರೀಕ್ಷಿಸಲಾಗುತ್ತದೆ? ಸರ್ಕಾರದ ಕಾರ್ಯನೀತಿ ಏನು? ಹೀಗೆ ಹಲವಾರು ವಿಷಯಗಳನ್ನು

ಸಾರ್ವಜನಿಕರಿಗೆ ವಿವರಿಸುವುದೂ ಸಹ ಅವರ ಕರ್ತವ್ಯವಾಗಿರುತ್ತದೆ. ನನ್ನ ಅಭಿಪ್ರಾಯದಲ್ಲಿ, ಈ ಪ್ರವಾಸಗಳು, ಉತ್ಸವದ ಪ್ರವಾಸಗಳಲ್ಲ ವಾಸ್ತವವಾಗಿ, ಪ್ರವಾಸವು ಅವರಿಗೆ ಒಂದು ದೊಡ್ಡ ಹೊರೆಯಾಗಿರುತ್ತದೆ ಮತ್ತು ಅವರು ಅದನ್ನು ಹೆಚ್ಚಿನ ಕಷ್ಟದಿಂದ ಹಾಗೂ ತೀರಾ ತೊಂದರೆಯಿಂದ ಕೈಗೊಳ್ಳುತ್ತಾರೆ. ಅವರು ಹೋದೆಡೆಯಲ್ಲೆಲ್ಲ ಆಡಳಿತದಲ್ಲಿ ಏನು ನಡೆಯುತ್ತಿದೆ ಹಾಗೂ ಗ್ರಾಮಸ್ಥರು ಏನು ಮಾಡಬೇಕೆಂಬುದನ್ನು ನಿರೀಕ್ಷಿಸಲಾಗುತ್ತದೆ ಎಂಬುದನ್ನು ವಿವರಿಸುತ್ತಾರೆ. ಗ್ರಾಮಸ್ಥರಿಗೆ ಸಚಿವರನ್ನು ನೇರವಾಗಿ ಸಂಪರ್ಕಿಸುವ ಮತ್ತು ಅವರ ಕುಂದುಕೊರತೆಗಳನ್ನು ಅವರ ಮುಂದೆ ಹೇಳಿಕೊಳ್ಳುವ ಅವಕಾಶವೂ ಒದಗುತ್ತದೆ. ಅವರಿಂದ ತಮಗೆ ಏನು ಬೇಕಾಗಿದೆ ಅಥವಾ ಸರ್ಕಾರದ ವತಿಯಿಂದ ಏನು ತೊಂದರೆ ಇದೆ ಅಥವಾ ಸರ್ಕಾರವು ಯಾವ ಒಳ್ಳೆಯ ಕೆಲಸವನ್ನು ಮಾಡಿದೆ ಎಂಬುದನ್ನು ವಿವರಿಸಲೂ ಸಹ ಒಂದು ಅವಕಾಶ ಸಿಗುತ್ತದೆ. ಸಚಿವರು ಗ್ರಾಮಗಳಿಗೆ ಪ್ರವಾಸ ಹೋದಾಗ ಈ ಎಲ್ಲ ವಿಷಯಗಳನ್ನು ವಿವರಿಸಿದಲ್ಲಿ ಅವರಿಗೆ ನೇರವಾದ ಮಾಹಿತಿಯು ದೊರೆಯುತ್ತದೆ. ಒಮ್ಮೊಮ್ಮೆ, ಗ್ರಾಮಸ್ಥರೇ ಸ್ವತಃ ಸಚಿವರನ್ನು ಯಾವುದಾರೂ ಸಮಾರಂಭವನ್ನು ಅಲಂಕರಿಸಲು ಅಥವಾ ಯಾವುದಾದರೂ ಸಾರ್ವಜನಿಕ ಸಮಾರಂಭವನ್ನು ನೇರವೇರಿಸಲು ಆಹ್ವಾನಿಸುತ್ತಾರೆ. ಇದು ಸಚಿವರನ್ನು ಆಲಿಸಲು ಮಾಡಿಕೊಂಡಿರುವ ಒಂದು ಸಂದರ್ಭ ಅಷ್ಟೆ. ಇದರಿಂದ, ಸರ್ಕಾರದ ಕಾರ್ಯನೀತಿಯನ್ನು ಹಾಗೂ ಈ ಸದನದಿಂದ ಅಂಗೀಕಾರವಾದ ಹಲವಾರು ಶಾಸನಗಳನ್ನು ಹಾಗು ಇತರ ವಿಷಯಗಳನ್ನೂ ವಿವರಿಸಲು ಸಚಿವರಿಗೆ ಒಂದು ಅವಕಾಶ ಸಿಗುತ್ತದೆ. ಹಾಗೆಯೇ ಸಾರ್ವಜನಿಕರೂ ಸಹ ಅವರನ್ನು ಭೇಟಿ ಮಾಡಿ ತಮ್ಮ ಕುಂದುಕೊರತೆಗಳನ್ನು ಅವರ ಮುಂದಿಡಲು ಸಹ ಅವರಿಗೆ ಇನ್ನೊಂದು ಅವಕಾಶ ಸಿಗುತ್ತದೆ. ಒಂದು ಪ್ರಜಾಸತ್ತಾತ್ಮಕ ಸರ್ಕಾರದಲ್ಲಿ ಅವರವರ ಕ್ಷೇತ್ರಗಳ ಜನತೆಯೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡು ಅವರ ಕಷ್ಟಗಳನ್ನು ಅರ್ಥ ಮಾಡಿಕೊಳ್ಳುವುದು ಕೇವಲ ಸಚಿವರ ಕರ್ತವ್ಯವಷ್ಟೇ ಅಲ್ಲ. ಅದು ಮಾನ್ಯ ಸದಸ್ಯರುಗಳ ಮೇಲೂ ಇದೆ.

ಆದ್ದರಿಂದ, ಸಚಿವರುಗಳು ಪ್ರವಾಸವನ್ನು ಕೈಗೊಂಡರೆ, ಅದು ಹೆಚ್ಚು ಸ್ವಾಗತಾರ್ಹವಾಗಿರುತ್ತದೆ ಮತ್ತು ಅದು ಜನರ ಹಿತಾಸಕ್ತಿಯಿಂದ ಕೈಗೊಂಡುದುದಾಗಿರುತ್ತದೆ. ಅದೇ ವೇಳೆಯಲ್ಲಿ, ಅವರಿಗೆ ಮುಂದುವರಿಯುತ್ತಿರುವ ಅನೇಕ ಕೆಲಸಗಳನ್ನು ಪರೀಕ್ಷಿಸಲು ಮತ್ತು ಅವುಗಳನ್ನು ಮೇಲ್ವಿಚಾರಣೆ ಮಾಡಲು ಸಾಧ್ಯವಾಗುತ್ತದೆ. ಅವರು ಜಿಲ್ಲಾ ಅಧಿಕಾರಿಗಳೊಂದಿಗೆ ನೇರವಾಗಿ ಸಂಪರ್ಕಕ್ಕೆ ಬರುತ್ತಾರೆ, ಅವರ ತೊಂದರೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ ಹಾಗು ಅವರು ಏನು ಮಾಡಬೇಕೆಂಬುದನ್ನು ಅವರಿಗೆ ವಿವರಿಸುತ್ತಾರೆ. ಹಾಗಾಗಿ ಅದನ್ನು ತ್ವರಿತಗೊಳಿಸಬಹುದು.

ಆದ್ದರಿಂದ ನಾನು, ಈ ಎರಡೂ ಬಾಬುಗಳ ಮೇಲಿನ ವೆಚ್ಚವು ಅತ್ಯಾವಶ್ಯಕವಾದುದೆಂದು ಮತ್ತು ಅವುಗಳ ಬಗ್ಗೆ ಮಾಡಿರುವ ಟೀಕೆಗಳು ಅನಾವಶ್ಯಕವೆಂಬುದಾಗಿ ಭಾವಿಸುತ್ತೇನೆ. ಈ ಬಾಬಿನ ವಿರುದ್ಧ ಮಾಡಿರುವ ಟೀಕೆಯು ಆಧಾರರಹಿತವಾದುದು, ಹಾಗಾಗಿ ನಾನು ಬೇಡಿಕೆಯನ್ನು ಬೆಂಬಲಿಸುತ್ತೇನೆ.

(ದಿನಾಂಕ: 15.3.1955)

# ಟಿಪ್ಪಣಿ

ಸರ್ಕಾರವು ಪ್ರಚಾರ ಸಾಹಿತ್ಯ ಸೃಷ್ಟಿಗಾಗಿ ಮತ್ತು ಸಚಿವರ ಪ್ರವಾಸಕ್ಕಾಗಿ ವೆಚ್ಚಗಳನ್ನು ಭರಿಸಲು ಸಭೆಯ ಅನುಮೋದನೆ ಕೋರಿ ಒಂದು ಸೂಚನೆಯನ್ನು ಮಂಡಿಸಿತ್ತು. ಇವರು ಈ ಬಗ್ಗೆ ಮಾತನಾಡುವಾಗ ತುಂಬಾ ವಾಸ್ತವ ದೃಷ್ಟಿಯಿಂದ ವಿಷಯವನ್ನು ವಿಶ್ಲೇಷಿಸಿದರು. ಸಾಕಷ್ಟು ನಿರಕ್ಷರಸ್ಥರಿರುವ ದೇಶದಲ್ಲಿ ಪ್ರಚಾರ ಸಾಹಿತ್ಯ ಅಗತ್ಯ ಎಂದು ಪ್ರತಿಪಾದಿಸಿದರು. ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆ ಸರ್ಕಾರದ ನೀತಿ ನಿಲುವುಗಳ ಬಗ್ಗೆ, ವಿವಿಧ ಕಾರ್ಯಕ್ರಮಗಳ ಬಗ್ಗೆ, ಸಾರ್ವಜನಿಕ ಆರೋಗ್ಯ, ಸಾಕ್ಷರತೆ, ಅಸ್ಪೃಶ್ಯತೆ ನಿವಾರಣೆ, ಪಾನ ನಿಷೇಧ ಆಧುನಿಕ ಬೇಸಾಯ ಪದ್ಧತಿ ಇವುಗಳು ಮತ್ತಿತರ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಕಿರು ಹೊತ್ತಗೆಗಳನ್ನು, ಕರಪತ್ರಗಳನ್ನು ರಚಿಸಿ ಪ್ರಕಟಿಸುವುದರಿಂದ ಜನಸಾಮಾನ್ಯರಿಗೆ ಈ ಬಗ್ಗೆ ತಿಳಿವಳಿಕೆ ನೀಡಲು ಅನುಕೂಲವಾಗುತ್ತದೆಂದು ಪ್ರತಿಪಾದಿಸಿದರು. ಇವುಗಳ ವಿಷಯಗಳನ್ನು ಓದು ಬಲ್ಲವರು ಇತರರಿಗೆ ವಿವರಿಸಿ ಹೇಳಬೇಕೆಂದು ಬಯಸಿದರು.

ಹಾಗೆಯೇ ಸಚಿವರು ನಡೆಸುವ ಪ್ರವಾಸಗಳ ಔಚಿತ್ಯವನ್ನು ಇವರು ಎತ್ತಿಹಿಡಿದರು. ಇದರಿಂದ ಸಚಿವರಿಗೆ ಜನರ ಕುಂದುಕೊರತೆಗಳ ಬಗ್ಗೆ ಪ್ರತ್ಯಕ್ಷ ಪರಿಚಯವಾಗುವುದಲ್ಲದೆ ಆಡಳಿತ ವ್ಯವಸ್ಥೆಯ ಕಾರ್ಯನಿರ್ವಹಣಾ ಸ್ವರೂಪದ ಅರಿವಾಗುತ್ತದೆ. ಜನರು ಸಚಿವರನ್ನು ನೇರವಾಗಿ ಕಂಡು ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶವಾಗುತ್ತದೆ. ಸಚಿವರಿಗೂ ರಾಜ್ಯದ ವಿಷಯ ವಿದ್ಯಮಾನಗಳ ಪ್ರತ್ಯಕ್ಷ ಮಾಹಿತಿ ದೊರೆಯುತ್ತದೆಂದು ತಿಳಿಸಿದರು.

ಆಡಳಿತದ ಕಷ್ಟ ಕಾರ್ಪಣ್ಯಗಳು ಅವರ ಅರಿವಿಗೆ ಬಂದು ಅದು ಸಮಸ್ಯೆಗಳನ್ನು ಪರಿಹರಿಸಲು ನೆರವಾಗುತ್ತದೆಂದು ಅಭಿಪ್ರಾಯಪಟ್ಟರು. ಸಚಿವರು ಮಾತ್ರವಲ್ಲದೆ ಅವರವರ ಕ್ಷೇತ್ರದಲ್ಲಿ ಶಾಸಕರು ಸಹ ಪ್ರವಾಸ ಕೈಗೊಂಡು ಜನರೊಂದಿಗೆ ಸಂಪರ್ಕ ಸಾಧಿಸಬೇಕೆಂದು ಶ್ರೀ ಕೌಜಲಗಿ ಸಲಹೆ ಮಾಡಿದರು.

# ಎರಡನೆ ಪಂಚವಾರ್ಷಿಕ ಯೋಜನೆ ಕರಡು ಮಸೂದೆ

1955

**ಶ್ರೀ ಹೆಚ್. ವಿ. ಕೌಜಲಗಿ** (ಪರಸಗಡ):- ಮಾನ್ಯ ಸಭಾಧ್ಯಕ್ಷರೇ ಈಗ ಸದನದ ಮುಂದಿರುವ ವಿಷಯದ ಮೇಲೆ, ಕೆಲವು ಮಾತುಗಳನ್ನು ಆಡಲು ನನಗೆ ಅವಕಾಶ ಸಿಕ್ಕಿರುವುದಕ್ಕಾಗಿ ನನಗೆ ಬಹಳವೇ ಸಂತೋಷವಾಗಿದೆ. ನಮ್ಮ ಮೊದಲನೇ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿ ಮತ್ತು ಅದನ್ನು ಕಾರ್ಯಗತಗೊಳಿಸಲು ತೊಡಗಿದಾಗ ನಮ್ಮಲ್ಲಿನ ಅನೇಕರು ಹಾಗೂ ವಿದೇಶಿಯರೂ ಸಹ ಅದನ್ನು ನಾವು ಹೇಗೆ ಅನುಷ್ಠಾನಗೊಳಿಸುತ್ತೇವೋ ಎಂಬುದನ್ನು ಗಮನಿಸುತ್ತಿದ್ದರು. ಆ ದಿನಗಳ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡರೆ, ಅದರ ಯಶಸ್ವೀ ಅನುಷ್ಠಾನದ ಬಗ್ಗೆ ನಮಗೇ ಒಳ್ಳೆಯ ಭರವಸೆ ಇರಲಿಲ್ಲ. ನಾವು ಅನೇಕ ತೊಂದರೆಗಳನ್ನು ಎದುರಿಸಬೇಕಾಗಿತ್ತು. ನಮ್ಮ ರಾಜಕೀಯ ಸ್ಥಿತಿಯು ಅಷ್ಟೇನೂ ಸ್ಥಿರವಾಗಿರಲಿಲ್ಲ. ನಮ್ಮ ಆರ್ಥಿಕ ಸ್ಥಿತಿ ತೃಪ್ತಿದಾಯಕವಾಗಿರಲಿಲ್ಲ ಮತ್ತು ನಮ್ಮ ಆಹಾರ ಸಮಸ್ಯೆ ತೀರಾ ಕೆಟ್ಟದಾಗಿತ್ತು. ಮೊದಲನೇ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸಲು ಪ್ರಾರಂಭಿಸಿದಾಗ ನಾವು ಈ ಎಲ್ಲ ತೊಂದರೆಗಳನ್ನು ಅನುಭವಿಸಬೇಕಾಗಿತ್ತು. ಈ ದಿನ, ನಾವು ಅದನ್ನು ಯಶಸ್ವಿಯಾಗಿ ಅನುಷ್ಠಾನ ಗೊಳಿಸಿರುವುದನ್ನು ಕಂಡು ನಮಗೆ ಬಹಳ ಸಂತೋಷವಾಗುತ್ತಿದೆ. ನಮ್ಮ ಆಹಾರ ಸಮಸ್ಯೆಯು ಬಹುಪಾಲು ಪರಿಹಾರವಾಗಿದೆ. ಮುಂಬಯಿ (ಬೊಂಬಾಯಿ) ರಾಜ್ಯವು ಸಂಬಂಧಪಡುವಷ್ಟರಮಟ್ಟಿಗೆ, ಇದು ಬಹುಮಟ್ಟಿಗೆ ಪರಿಹಾರಗೊಂಡಿದೆ. ಇತರ ವಲಯಗಳಲ್ಲಿ ಎಂದರೆ, ಆರೋಗ್ಯ, ಶಿಕ್ಷಣ, ಅಭಿವೃದ್ಧಿ ಕಾಮಗಾರಿಗಳು ಮುಂತಾದವುಗಳಲ್ಲಿ ನಮ್ಮ ಸಾಧನೆಗಳನ್ನು ನಾವು ಪರಿಗಣನೆಗೆ ತೆಗೆದುಕೊಂಡರೆ, ನಾವು ಇವುಗಳನ್ನು ಸಮರ್ಥವಾಗಿ ನಿಭಾಯಿಸಿದ್ದೇವೆ. ಈ ದಿನ ನಮ್ಮ ಸ್ಥಾನ ಯಾವ ಮಟ್ಟದಲ್ಲಿದೆ? ನಾವು, ಧೈರ್ಯ ಮತ್ತು ವಿಶ್ವಾಸದಿಂದ ಎರಡನೇ ಪಂಚವಾರ್ಷಿಕ ಯೋಜನೆಯನ್ನು ರೂಪಿಸಲು ಸಮರ್ಥರಾಗಿದ್ದೇವೆ ಹಾಗೂ ಅದನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತೇವೆಂಬ ಭರವಸೆಯೂ ನಮ್ಮಲ್ಲಿದೆ.

ಈಗ, ಎರಡನೆಯ ಪಂಚವಾರ್ಷಿಕ ಯೋಜನೆಯ ಮುಖ್ಯ ಉದ್ದೇಶವೇನು? ಅದು ಸಮಾಜವಾದಿ ಮಾದರಿ ಸಮಾಜ ರಚನೆಯ ತತ್ವದ ಮೇಲೆ ಆಧಾರಿತವಾಗಿದೆ. ಸಮಾಜವಾದಿ ಮಾದರಿ ಸಮಾಜದ ರಚನೆಯನ್ನು ಸಾಕಾರಗೊಳಿಸುವುದು. ನಮ್ಮ ಆರ್ಥಿಕ ಕಾರ್ಯನೀತಿಯ ಅಂಗೀಕೃತ ಉದ್ದೇಶವಾಗಿದೆ. ಅದು ನಮ್ಮ ಮುಖ್ಯ ಉದ್ದೇಶವಾಗಿದೆ. ಎರಡನೇ ಪಂಚವಾರ್ಷಿಕ ಯೋಜನೆಯಡಿ ಎಲ್ಲ ಅಸಮಾನತೆಗಳು ಕಡಿಮೆಯಾಗುವಂತೆ ಕೈಗಾರಿಕೆಗಳು ತ್ವರಿತವಾಗಿ ಬೆಳೆಯುವಂತೆ, ಸಾಧ್ಯವಾದಷ್ಟೂ, ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ, ಹಾಗೂ ಉದ್ಯೋಗವಕಾಶಗಳನ್ನು ವಿಸ್ತೃತಗೊಳಿಸುವಂತೆ ಇತ್ಯಾದಿಗಳ ಬಗ್ಗೆ ಅಂತಿಮವಾಗಿ ಈ ರಾಷ್ಟ್ರದ ಒಟ್ಟಾರೆ ಆದಾಯವು ಹೆಚ್ಚಾಗುವಂತೆ ನಾವು ನೋಡಿಕೊಳ್ಳಬೇಕಾಗಿದೆ. ಇದು ಎರಡನೆ ಪಂಚವಾರ್ಷಿಕ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಸಾಗಿಸುವ ಸಲುವಾಗಿ ಹಲವಾರು

ಯೋಜನೆಗಳನ್ನು ಸೂಚಿಸಲಾಗಿದೆ ಹಾಗೂ ಈ ಎಲ್ಲ ಯೋಜನೆಗಳನ್ನು ಅನುಷ್ಠಾನಗೊಳಿಸಿದರೆ, ನಮ್ಮ ರಾಷ್ಟ್ರೀಯ ಆದಾಯವು ಖಚಿತವಾಗಿ ಹೆಚ್ಚುಗೊಳ್ಳುತ್ತದೆ ಮತ್ತು ಅಸಮಾನತೆಗಳು ಕಡಿಮೆಯಾಗುತ್ತವೆ ಎಂಬ ಭರವಸೆ ನನಗಿದೆ. ಬೊಂಬಾಯಿ (ಮುಂಬಯಿ) ರಾಜ್ಯಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಈ ಉದ್ದೇಶಗಳನ್ನು ಸಾಧಿಸಲು ಪ್ರಾರಂಭದಲ್ಲಿ ನಾವು ಅಧಿಕ ಹಣದ ಮೊತ್ತವನ್ನು ಕೇಳಿದ್ದೆವು, ಆದರೆ ಹೇಗೋ ಏನೋ ಕೇಂದ್ರವು ಅದಕ್ಕೆ ಒಪ್ಪಿಗೆ ನೀಡಲಿಲ್ಲ ಮತ್ತು ಕಾಲ ಕಾಲಕ್ಕೆ ನಮ್ಮ ಬೇಡಿಕೆಗಳನ್ನು ಕಡಿಮೆ ಮಾಡಿಕೊಳ್ಳುವಂತೆ ನಮಗೆ ಹೇಳಲಾಯಿತು. ಈಗ, ಎರಡನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ನಾವು ನಮ್ಮ ರಾಜ್ಯದಲ್ಲಿ ಕೇವಲ ಸುಮಾರು 260 ಕೋಟಿ ರೂ.ಗಳನ್ನು ಖರ್ಚು ಮಾಡಬಹುದಾಗಿದೆ. ದೈಹಿಕ ಶ್ರಮ ಅಥವಾ ಕೊಡಗೆ ಅಥವಾ ಇನ್ನಾವುದೇ ಇತರ ರೀತಿಯಲ್ಲಿ ಸಾರ್ವಜನಿಕರ ಸಹಕಾರವನ್ನು ಸೇರಿಸಿಕೊಳ್ಳುವ ಮೂಲಕ ಈ ಹಣವನ್ನು ಖರ್ಚು ಮಾಡಿದರೂ ಎರಡನೇ ಪಂಚವಾರ್ಷಿಕ ಯೋಜನಾ ಅವಧಿಯ ಅಂತ್ಯದ ವೇಳೆಗೆ ನಮ್ಮ ಉದ್ದೇಶ ಈಡೇರುವಂತೆ ಮಾಡುವಲ್ಲಿ ನಾವು ಸಮರ್ಥರಾಗುತ್ತೇವೆಂದು ನನಗನ್ನಿಸುತ್ತದೆ. ಆದರೆ, ಕರ್ನಾಟಕಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ. ಈಗಾಗಲೇ. ಪ್ರಾರಂಭವಾಗಬೇಕಾಗಿದ್ದ ಅನೇಕ ಕಾಮಗಾರಿಗಳನ್ನು ಪರಿಗಣಿಸಿರುವುದಿಲ್ಲ, ಆದ್ದರಿಂದ ಆ ಪ್ರದೇಶದ ಅತ್ಯುತ್ತಮ ಹಿತಾಸಕ್ತಿಯ ದೃಷ್ಟಿಯಿಂದ ಹಾಗೂ ಯೋಜನೆಯಲ್ಲಿ ಸೇರಿರದಿರುವಂತಹ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಸೂಚಿಸುವುದು ನನ್ನ ಕರ್ತವ್ಯವೆಂದು ನಾನು ಪರಿಗಣಿಸುತ್ತೇನೆ. ಯೋಜನೆಯನ್ನು ಪರಿಶೀಲಿಸಿದಾಗ, ಕರ್ನಾಟಕದಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಸಾಕಷ್ಟು ಗಮನವನ್ನು ನೀಡಿಲ್ಲವೆಂದು ನನಗೆ ಕಂಡುಬಂದಿದೆ. ಉದಾಹರಣೆಗೆ ಕಾರವಾರ ಜಿಲ್ಲೆಯನ್ನು ತೆಗೆದುಕೊಳ್ಳೋಣ. ಕರ್ನಾಟಕ ಪ್ರಾಂತ್ಯದ ಈ ಭಾಗವು ಖನಿಜ ಸಂಪತ್ತಿನಲ್ಲಿ ಸಮೃದ್ಧವಾಗಿದ್ದು ಅಲ್ಲಿ ಹೇರಳವಾದ ಕಚ್ಚಾ ಸಾಮಗ್ರಿಗಳಿವೆ ಮತ್ತು ಅಲ್ಲಿ ಹಲವಾರು ಕೈಗಾರಿಕೆಗಳನ್ನು ಪ್ರಾರಂಭಿಸಲು ಸಾಕಷ್ಟು ಅವಕಾಶಗಳಿವೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆ ಜಿಲ್ಲೆಯಲ್ಲಿ ಕಾಗದದ ಕಾರ್ಖಾನೆಯನ್ನು ಪ್ರಾರಂಭಿಸಲು ಅವಕಾಶವಿದೆ ಮತ್ತು ಆ ಕೈಗಾರಿಕೆಗೆ ಅಗತ್ಯವಿರುವ ಕಚ್ಚಾ ಸಾಮಗ್ರಿಗಳನ್ನು ಸರ್ಕಾರವು ಚೆನ್ನಾಗಿ ಬಳಸಿಕೊಳ್ಳಬಹುದಾಗಿದೆ. ಈ ಅಂಶವನ್ನು ಪರಿಗಣನೆಗೆ ತೆಗೆದುಕೊಳ್ಳುವಂತೆ ನಾನು ಸರ್ಕಾರಕ್ಕೆ ವಿನಂತಿಸುತ್ತೇನೆ.

ಎರಡನೆಯದಾಗಿ, ಧಾರವಾಡ ಮತ್ತು ಕಾರವಾರ ಜಿಲ್ಲೆಗಳಲ್ಲಿ, ವೈದ್ಯಕೀಯ ಉಪಯೋಗಕ್ಕಾಗಿ ಹೇರಳವಾದ ಗಿಡಮೂಲಿಕೆಗಳಿವೆ. ದೇಶದ ಎಲ್ಲಾ ಕಡೆಯಿಂದ ಜನರು ವೈದ್ಯಕೀಯ ಉದ್ದೇಶಕ್ಕಾಗಿ ಈ ಅಮೂಲ್ಯವಾದ ಗಿಡಮೂಲಿಕೆಗಳನ್ನು ತೆಗೆದುಕೊಳ್ಳಲು ಇಲ್ಲಿಗೆ ಬರುತ್ತಾರೆ. ಆದ್ದರಿಂದ, ಇಲ್ಲಿ ಒಂದು ಆಯುರ್ವೇದ ಶಾಲೆ ಅಥವಾ ಕಾಲೇಜನ್ನು ಸ್ಥಾಪಿಸಿದ್ದರೆ ಉತ್ತಮವಾಗಿರುತ್ತಿತ್ತು. ಅದಾಗ್ಯೂ, ಸರ್ಕಾರವು ಆಯುರ್ವೇದ ವೈದ್ಯಪದ್ಧತಿಗೆ ಹೆಚ್ಚಿನ ಗಮನ ನೀಡುತ್ತಿರುವುದನ್ನು ಕಂಡು ಸಂತೋಷವೆನಿಸುತ್ತದೆ. ಹುಬ್ಬಳ್ಳಿಯಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸುವಂತೆ ನಾವು ನಿರಂತರವಾಗಿ ಕೇಳುತ್ತಿದ್ದೇವೆ. ಆದರೆ ಇಲ್ಲಿಯವರೆಗೆ ಈ ಕೋರಿಕೆಯನ್ನು ಮಂಜೂರು ಮಾಡಿಲ್ಲ ಹಾಗೂ ಅದನ್ನು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗುವುದೆಂದು ಸೂಚಿಸಲಾಗಿದೆ.

ಆದರೆ ಆಯುರ್ವೇದ ಕಾಲೇಜಿಗೆ ಸಂಬಂಧಿಸಿದಂತೆ, ಅದಕ್ಕೆ ಹೆಚ್ಚಿನ ಖರ್ಚು ಬೀಳುವುದಿಲ್ಲ ಮತ್ತು ಅದರ ಹೆಚ್ಚಿನ ಅಗತ್ಯತೆಗಳು ಸ್ಥಳೀಯವಾಗಿ ದೊರೆಯುತ್ತದೆ. ಆದ್ದರಿಂದ ಅಂಥ ಕಾಲೇಜು ಅಥವಾ ಶಾಲೆ ಆ ಪ್ರದೇಶಕ್ಕೆ ಒಂದು ವರವಾಗುತ್ತದೆ.

ನಂತರದ, ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಕರ್ನಾಟಕ ಪ್ರದೇಶದಲ್ಲಿ ಕಾರವಾರ ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ಹೇರಳವಾದ ಖನಿಜಗಳು ಮತ್ತು ಕಚ್ಚಾ ಸಾಮಗ್ರಿಗಳಿವೆ. ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ, ಅನೇಕ ನಿರುದ್ಯೋಗಿಗಳಿಗೆ ಉದ್ಯೋಗ ದೊರಕುತ್ತದೆ. ಇದು ರಾಷ್ಟ್ರೀಯ ಸಂಪತ್ತನ್ನೂ ಸಹ ವೃದ್ಧಿಸುತ್ತದೆ.

ಭಾರಿ ಪ್ರಾಜೆಕ್ಟ್‌ಗಳ ಬಗ್ಗೆ ಹೇಳುವುದಾದರೆ, ಘಟಪ್ರಭ ಪ್ರಾಜೆಕ್ಟ್‌ನ್ನು ಹೊರತುಪಡಿಸಿ ಅನೇಕ ಭಾರಿ ಪ್ರಾಜೆಕ್ಟ್‌ಗಳಿವೆ. ಇನ್ನೊಂದು ಪ್ರಾಜೆಕ್ಟ್‌ನ್ನು ಎಂದರೆ ಕಾಳಿನದಿ ಪ್ರಾಜೆಕ್ಟನ್ನು ಕೈಗೆತ್ತಿಕೊಳ್ಳಲು ವಿಫುಲ ಅವಕಾಶಗಳಿವೆ. ಈ ಪ್ರಾಜೆಕ್ಟ್ ಕೊಯ್ನ ಪ್ರಾಜೆಕ್ಟ್‌ಗಿಂತಲೂ ಅನುಕೂಲಕರವಾಗಿದೆ ಎಂದು ತಜ್ಞರೂ ಸಹ ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ, ಈ ಪ್ರಾಜೆಕ್ಟನ್ನು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಅನುಷ್ಠಾನಕ್ಕಾಗಿ ಪರಿಗಣನೆಗೆ ತೆಗೆದುಕೊಂಡರೆ ಉತ್ತಮವಾಗಿರುತ್ತದೆ, ಆದರಿಂದಾಗಿ ಕೈಗಾರಿಕೆಗಳನ್ನು ಪ್ರಾರಂಭಿಸಲು ಹಾಗೂ ಮನೆ ಬಳಕೆಗಾಗಿ ತೀರಾ ಅವಶ್ಯಕವಾದ ವಿದ್ಯುತ್‌ನ್ನು ಅದು ಉತ್ಪಾದಿಸುತ್ತದೆ.

ನಾನು ಚರ್ಚಿಸಲು ಬಯಸುವ ಇನ್ನೊಂದು ಅಂಶವೆಂದರೆ, ಗ್ರಾಮೀಣ ನೀರು ಸರಬರಾಜು ಯೋಜನೆಗಳು. ಮಾನ್ಯ ಸದಸ್ಯರಾದ ಶ್ರೀ ಎಂ.ಸಿ. ಷಾರವರು ಈ ವಿಷಯದ ಮೇಲೆ ಈಗಾಗಲೇ ಮಾತನಾಡಿದ್ದಾರೆ ಮತ್ತು ಅದು ಪುನರಾವರ್ತನೆಯಾಗುತ್ತದೆ ಎಂಬ ಭಯವಿಲ್ಲದೆ, ಕುಡಿಯುವ ನೀರಿನ ಅಭಾವದಿಂದಾಗಿ ತೊಂದರೆಗೊಳಗಾಗಿರುವ ಏಕಮಾತ್ರ ಪ್ರದೇಶವೆಂದರೆ, ಕರ್ನಾಟಕ ಎಂಬುದಾಗಿ ನಾನು ಹೇಳಬಯಸುತ್ತೇನೆ. ನಮ್ಮ ಪ್ರದೇಶದ ಸುಮಾರು ನಾಲ್ಕನೇ ಒಂದು ಭಾಗದಷ್ಟು ಜನರಿಗೆ ಯಾವುದೇ ರೀತಿಯ ಕುಡಿಯುವ ನೀರು ಸರಬರಾಜು ಇರುವುದಿಲ್ಲ. ಹೌದು, 1946ರ ಸರ್ಕಾರದ ಯೋಜನೆಯ ಅನುಸಾರ, ಪ್ರತಿ ಗ್ರಾಮಕ್ಕೆ ಕಡೇಪಕ್ಷ ಒಂದು ಕುಡಿಯುವ ನೀರಿನ ಬಾವಿಯನ್ನು ಒದಗಿಸುವುದಾಗಿ (ಯೋಜನೆಯು) ಅದು ವಾತು ಕೊಟ್ಟಿದೆ. ಆ ಯೋಜನೆಯಡಿಯಲ್ಲಿ ಕೆಲವು ಗ್ರಾಮಗಳಿಗೆ ಅನುಕೂಲಗಳಾಗಿವೆ; ಆದರೆ ಕಾಮಗಾರಿಯ ಸ್ವರೂಪ ಹೇಗಿರುತ್ತದೆ ಎಂದರೆ, ಎಲ್ಲ ಗ್ರಾಮಗಳನ್ನು ಒಂದೇ ಸಲಕ್ಕೆ ಕೈಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ. ಬಾವಿಗಳ ನಿರ್ಮಾಣ ಎಷ್ಟು ಕಷ್ಟವೆಂದರೆ, ಅದನ್ನು ಬೇಗನೆ ಮುಗಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಈ ಪ್ರದೇಶದ ನಾಲ್ಕನೇ ಒಂದರಷ್ಟು ಭಾಗ ಇನ್ನೂ ಯಾವುದೇ ನೀರು ಸರಬರಾಜಿಲ್ಲದೆ ಇದೆ. ಈಗ, ದುರಾದೃಷ್ಟವೆಂದರೆ, ಸರ್ಕಾರವು ಈ ಯೋಜನೆಯನ್ನು ಸ್ಥಗಿತಗೊಳಿಸಿದೆ. ಇದರ ಪರಿಣಾಮವೆಂದರೆ ಗ್ರಾಮಗಳ ಪ್ರಾಥಮಿಕ ಅಗತ್ಯತೆಯಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಭರಿಸಲಾಗಿಲ್ಲವೆಂಬುದು ಜನರ ಮನಸ್ಸಿನಲ್ಲಿ ಒಂದು ರೀತಿಯ ಹತಾಶೆ ಭಾವನೆಯನ್ನುಂಟುಮಾಡಿದೆ.

1757-5.

ಪ್ರತಿಯೊಂದು ಗ್ರಾಮವು ಕುಡಿಯುವ ನೀರಿನ ಸರಬರಾಜನ್ನು ಪಡೆಯುವಂತೆ ನೋಡಿಕೊಳ್ಳುವುದು ಸರ್ಕಾರದ ಮೊದಲ ಮತ್ತು ಬಹುಮುಖ್ಯವಾದ ಕರ್ತವ್ಯವಾಗಿದೆ. ಈ ಉದ್ದೇಶಕ್ಕಾಗಿ ಯಾವುದೇ ನಿಧಿಯು (ಹಣವು) ಲಭ್ಯವಿರದಿದ್ದರೆ, ಇತರ ಯಾವುದಾದರೂ ಉದ್ದೇಶಗಳಿಗಾಗಿ ಮೀಸಲಿರಿಸಿದ ಹಣವನ್ನು ಈ ಯೋಜನೆಗೆ ವರ್ಗಾಯಿಸಬೇಕು. ಪ್ರತಿಯೊಂದು ಗ್ರಾಮವು ಕುಡಿಯುವ ನೀರು ಸರಬರಾಜನ್ನು ಪಡೆಯುವವರೆಗೂ ಈ ಯೋಜನೆ ಆದ್ಯತೆಯನ್ನು ಪಡೆಯತಕ್ಕದ್ದು. ನಾವು ಬಡ ಕೃಷಿಕರಿಗೆ, ಸರ್ಕಾರದಲ್ಲಿ ಹಣ ಇಲ್ಲ ಆದ್ದರಿಂದ ಈ ಕೆಲಸವನ್ನು ಕೈಗೆತ್ತಿಕೊಳ್ಳಲು ಅದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಗ್ರಾಮದಲ್ಲಿರುವ ಬಡ ಜನರು ಕುಡಿಯುವ ನೀರು ಸರಬರಾಜಿನ ವಿಷಯದಲ್ಲಿ ಹೆಚ್ಚು ಆಸಕ್ತರಾಗಿರುವಷ್ಟು ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳಲ್ಲಾಗಲೀ ಅಥವಾ ಯಾವುದೇ ಇತರ ಯೋಜನೆಗಳಲ್ಲಾಗಲೀ ಆಸಕ್ತರಾಗಿರುವುದಿಲ್ಲ. ಆದ್ದರಿಂದ ಸರ್ಕಾರವು, ಎಲ್ಲ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜಾಗಿರುವುದನ್ನು ನೋಡಿಕೊಳ್ಳುವಂತೆ ಕ್ರಮ ಕೈಗೊಳ್ಳಬೇಕು.

ಮುಂದಿನ ವಿಷಯ ಶಾಲಾ ಕಟ್ಟಡಗಳದ್ದು. ಈ ವಿಷಯವನ್ನೂ ಸಹ ನನ್ನ ಹಿಂದೆ ಮಾತನಾಡಿದ ಭಾಷಣಕಾರರು ದೀರ್ಘವಾಗಿ ಚರ್ಚಿಸಿದ್ದಾರೆ. ಆದರೆ ನಾನು ಆ ಪ್ರಶ್ನೆಯ ಕೆಲವು ಪ್ರಮುಖ ವಿಷಯಗಳ ಬಗ್ಗೆ ಮಾತ್ರ ಮಾತನಾಡುತ್ತೇನೆ. ಈ ದಿನದವರೆಗೂ ಸರ್ಕಾರದ ಕಾರ್ಯನೀತಿಯು ಗ್ರಾಮಸ್ಥರು ಶಾಲಾ ಕಟ್ಟಡಗಳ ನಿರ್ಮಾಣಕ್ಕಾಗಿ ಅಗತ್ಯವಿರುವಂತೆ ವೆಚ್ಚದ ನಾಲ್ಕನೇ ಒಂದರಷ್ಟು ಅಥವಾ ಮೂರನೇ ಒಂದರಷ್ಟನ್ನು ವಂತಿಗೆಯಾಗಿ ನೀಡಬೇಕೆಂಬುದಾಗಿತ್ತು. ನನ್ನ ಜಿಲ್ಲೆಯಲ್ಲಿರುವ ಜನರು, ನನಗೆ ತಿಳಿದಿರುವಷ್ಟರಮಟ್ಟಿಗೆ ಸ್ವಇಚ್ಛೆಯಿಂದ ವಂತಿಗೆ ಹಣ ನೀಡಿದರು. ಆದರೆ, ಇಲ್ಲಿಯವರೆಗೂ ಅವರ ಬೇಡಿಕೆಗಳನ್ನು ಈಡೇರಿಸಲಿಲ್ಲ. ನನಗೆ ತಿಳಿದುಬಂದ ಮಾಹಿತಿಯ ಪ್ರಕಾರ 5 ಲಕ್ಷ ರೂ.ಗಳವರೆಗೆ ಹಣವನ್ನು ಸಂಗ್ರಹಿಸಲಾಗಿತ್ತು, ಆದರೆ ಶಾಲಾ ಕಟ್ಟಡಗಳ ನಿರ್ಮಾಣವನ್ನು ಇದುವರೆಗೂ ಕೈಗೆತ್ತಿಕೊಂಡಿಲ್ಲ. ಈಗ, ನನಗೆ ತಿಳಿದು ಬಂದಿರುವುದೇನೆಂದರೆ, ಸರ್ಕಾರವು ತನ್ನ ಕಾರ್ಯನೀತಿಯನ್ನು ಬದಲಿಸಿದ್ದು, ಶಾಲಾ ಕಟ್ಟಡಗಳನ್ನು ನಿರ್ಮಾಣ ಮಾಡಲು ಅಗತ್ಯವಿರುವ ವೆಚ್ಚ ಶೇಕಡ 50ರಷ್ಟನ್ನು ಅಥವಾ ಅದಕ್ಕೂ ಹೆಚ್ಚಿನ ಹಣವನ್ನು ಗ್ರಾಮಸ್ಥರು ನೀಡಬೇಕೆಂಬುದು. ಸರ್ಕಾರವು ಈ ರೀತಿ ತನ್ನ ಕಾರ್ಯನೀತಿಯನ್ನು ಕಾಲಕಾಲಕ್ಕೆ ಬದಲಾಯಿಸುತ್ತಲೇ ಇದ್ದರೆ, ಇದು ಆಡಳಿತದ ಮೇಲೆ ಒಳ್ಳೆಯ ಪರಿಣಾಮ ಬೀರುವುದಿಲ್ಲ. ಆದ್ದರಿಂದ ನನ್ನ ಸಲಹೆ ಎಂದರೆ, ಯಾವ ಗ್ರಾಮಗಳಲ್ಲಿ ಜನರು ಈ ಉದ್ದೇಶಕ್ಕಾಗಿ ಈಗಾಗಲೇ ಅವರ ಕೊಡುಗೆಗಳನ್ನು ನೀಡಿದ್ದಾರೆಯೋ ಆ ಗ್ರಾಮಗಳಲ್ಲಿ ಶಾಲಾ ಕಟ್ಟಡಗಳ ನಿರ್ಮಾಣ ಕೆಲಸವನ್ನು ಕೂಡಲೇ ಕೈಗೆತ್ತಿಕೊಳ್ಳಬೇಕು ಮತ್ತು ಆ ಗ್ರಾಮಸ್ಥರಿಂದ ಸರ್ಕಾರವು ಹೆಚ್ಚಿನ ವಂತಿಗೆಯನ್ನು ಕೇಳಬಾರದು.

ನಾನು ಉಲ್ಲೇಖಿಸಲು ಬಯಸುವ ಇನ್ನೊಂದು ಅಂಶವೆಂದರೆ, ಅದು ಸಾರಿಗೆ ಸೌಲಭ್ಯಗಳನ್ನು ಕುರಿತದ್ದಾಗಿದೆ.

ಕರ್ನಾಟಕ ಪ್ರದೇಶದಲ್ಲಿ ಸಾರಿಗೆ ಸೌಲಭ್ಯಗಳು ಅಂತಹ ಆಶಾದಾಯಕವಾಗಿಲ್ಲ. ಹಿಂದಿನ ದಿನವೇ ಮಾನ್ಯ ಅರ್ಥ ಸಚಿವರು, ಬಜೆಟ್‌ನ ಸಾಮಾನ್ಯ ಚರ್ಚೆಗೆ ಉತ್ತರಿಸುತ್ತಾ ರಾಜ್ಯದ ಕರ್ನಾಟಕ

ಪ್ರದೇಶವು ಗುಜರಾತಿನಲ್ಲಿರುವ ಸಣ್ಣ ಸಣ್ಣ ರಸ್ತೆಗಳಿಗೆ ಹೋಲಿಸಿದರೆ ಅತಿ ಉದ್ದದ ಮೈಲು ರಸ್ತೆಗಳನ್ನು ಹೊಂದಿದೆ ಎಂಬುದನ್ನು ತೋರಿಸಲು ಅಂಕಿ–ಅಂಶಗಳನ್ನು ಉದ್ಧರಿಸಿದರು. ರಸ್ತೆ ಮೈಲೇಜಿನ ವಿಷಯದಲ್ಲಿ ರತ್ನಗಿರಿಯು ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ ಎಂಬುದನ್ನೂ ಸಹ ತಿಳಿಸಿದರು. ಆದರೆ ಸಾರಿಗೆಯ ಇತರ ರೀತಿಗಳೂ ಇವೆ. ಕರ್ನಾಟಕ ಪ್ರದೇಶದಲ್ಲಿ ಸಾಕಷ್ಟು ರೈಲ್ವೆ ಇಲ್ಲ; ದಕ್ಷಣ ರೈಲ್ವೆ ಮಾತ್ರವೇ ಕರ್ನಾಟಕ ಪ್ರದೇಶಕ್ಕೆ ಸೇವೆ ಒದಗಿಸುತ್ತಿದೆ ಮತ್ತು ಕೈಗಾರಿಕೆಗಳ ದೃಷ್ಟಿಯಿಂದ ಕರ್ನಾಟಕದ ಬಹಳ ಮುಖ್ಯವಾದ ಭಾಗವಾಗಿರುವ, ಕಾರವಾರ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದಲ್ಲಿ, ರೈಲ್ವೆ ಮೂಲಕ ಪ್ರಯಾಣ ಮಾಡಿದವರೆಲ್ಲರಿಗೂ, ರೈಲ್ವೆ ಸೇವೆಯು ಎಷ್ಟು ದಕ್ಷತೆಯಿಂದ ಕೂಡಿದೆ ಎಂಬುದು ತಿಳಿಯುತ್ತದೆ. ಅಲ್ಲಿ ರೈಲ್ವೆ ಮಾರ್ಗಗಳಿಲ್ಲ. ಅಲ್ಲಿರುವ ರಸ್ತೆಗಳು ಸರಿಯಾಗಿಲ್ಲ. ಮಳೆಗಾಲದಲ್ಲಿ ಎಲ್ಲ ಪ್ರಮುಖ ಹಳ್ಳಿಗಳು ಹಾಗೂ ತಾಲೂಕು ಸ್ಥಳಗಳೂ ಸಹ ಸಂಪರ್ಕ ಕಳೆದುಕೊಳ್ಳುತ್ತವೆ. ಬೆಳಗಾವಿ ಜಿಲ್ಲಾ ಅಭಿವೃದ್ಧಿ ಮಂಡಳಿಯು, ಆ ಜಿಲ್ಲೆಯಲ್ಲಿ ಕಟ್ಟಬೇಕಾದ ಒಡ್ಡು ದಾರಿಗಳು ಮತ್ತು ಸೇತುವೆಗಳ ಪಟ್ಟಿಯನ್ನು ಸಲ್ಲಿಸಿದೆ. ಆದರೆ, ಅವರಲ್ಲಿ ಯಾವುದನ್ನೂ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಲ್ಲವೆಂಬುದನ್ನು ಹೇಳಲು ನನಗೆ ವಿಷಾದವೆನಿಸುತ್ತದೆ.

ಒಟ್ಟಿನಲ್ಲಿ, ನನ್ನ ಮಾನ್ಯ ಗೆಳೆಯ ಶ್ರೀ ಮೇಟಗುಡ್ಡ ಹೇಳಿದಂತೆ, ಕರ್ನಾಟಕ ಪ್ರದೇಶವನ್ನು ಸಾರಿಗೆ, ಆರೋಗ್ಯ, ಕೈಗಾರಿಕೆ ಇತ್ಯಾದಿಗಳು ಸೇರಿದಂತೆ ಅನೇಕ ವಿಷಯಗಳಲ್ಲಿ ನಿರ್ಲಕ್ಷಿಸಲಾಗಿದೆ. ನಾನು ಇದನ್ನು ಹೇಳಿದರೆ ರಾಜ್ಯದ ಇತರ ಭಾಗಗಳಿಗೆ ಒದಗಿಸಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸೇಡಿನ ಮನೋಭಾವ ಹೊಂದಿದ್ದೇನೆ ಎಂಬ ಅರ್ಥವಲ್ಲ. ಆದರೆ, ಇಡೀ ರಾಜ್ಯ ಪ್ರದೇಶವನ್ನು ಸಮಾನವಾಗಿ ಅಭಿವೃದ್ಧಿಗೊಳಿಸುವುದು ಮತ್ತು ಅದರ ಯಾವುದೇ ಭಾಗಕ್ಕೆ ತೊಂದರೆಯುಂಟಾಗದಂತೆ ನೋಡಿಕೊಳ್ಳುವುದು ರಾಜ್ಯದ ಪ್ರಾಥಮಿಕ ಕರ್ತವ್ಯ.. ಈಗಾಗಲೇ ಹೇಳಿರುವಂತೆ, ರಾಜ್ಯದ ನಮ್ಮ ಭಾಗದಲ್ಲಿ, ಕೈಗಾರಿಕೆಗಳು ಮುಂತಾದವುಗಳ ಅಭಿವೃದ್ಧಿಗೆ ವಿಫುಲ ಅವಕಾಶವಿದೆ. ಆದರೆ, ದುರಾದೃಷ್ಟವಶಾತ್, ಈ ಉದ್ದೇಶಕ್ಕಾಗಿ ಕಡಿಮೆ ಹಣವನ್ನು ಒದಗಿಸಲಾಗಿದೆ ಹಾಗು ಅಂಥಹ ಅಭಿವೃದ್ಧಿಗೆ ಸರಿಯಾದ ಗಮನವನ್ನು ನೀಡಿಲ್ಲ. ಈ ಟೀಕೆಗಳ ಹಿನ್ನೆಲೆಯಲ್ಲಿ, ಸದನದ ಈ ಭಾಗದಿಂದ ಸೂಚಿಸಲಾದ ಕೆಲವು ಕಾಮಗಾರಿಗಳನ್ನಾದರೂ ಸರ್ಕಾರವು ಸೇರಿಸಿಕೊಳ್ಳುವುದು ಉತ್ತಮ. ನನ್ನ ಅನಿಸಿಕೆಗಳನ್ನು ಹೇಳಲು ನನಗೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನಾನು ಬಹಳ ಆಭಾರಿಯಾಗಿದ್ದೇನೆ.

(ದಿನಾಂಕ: 22.3.1956)

# ಟಿಪ್ಪಣಿ

ಶ್ರೀ ಕೌಜಲಗಿಯವರು ಮೊದಲನೆಯ ಪಂಚವಾರ್ಷಿಕ ಯೋಜನೆಯನ್ನು ಫಲಪ್ರದವಾಗಿ ಕಾರ್ಯಗತಗೊಳಿಸಿದ ಬಗ್ಗೆ ತೃಪ್ತಿ ವ್ಯಕ್ತಪಡಿಸುತ್ತ ಎರಡನೆಯ ಪಂಚವಾರ್ಷಿಕ ಯೋಜನೆಯ ಕರಡು ಮಸೂದೆಯ ಕುರಿತು ಚರ್ಚೆ ಆರಂಭಿಸಿದರು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿನ ಆರ್ಥಿಕ ಕಾರ್ಯನೀತಿಗಳು ಸಮಾಜವಾದಿ ಮಾದರಿಯ ಸಮಾಜ ರಚನೆಯ ಉದ್ದೇಶ ಹೊಂದಿದ್ದನ್ನು ಸ್ವಾಗತಿಸಿದ್ದಾರೆ. ಸರ್ಕಾರ ತನ್ನ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಮಾಜದ ವಿವಿಧ ಸ್ತರಗಳ ನಡುವೆ ಸಮಾನತೆಯನ್ನು ತರಲು ಮಾಡಿರುವ ಪ್ರಯತ್ನಗಳನ್ನು ಶ್ಲಾಘಿಸಿದ್ದಾರೆ.

ಅವರು ಆಗಿನ ಮುಂಬೈ ಪ್ರಾಂತಕ್ಕೆ ಸೇರಿದ್ದ ಕರ್ನಾಟಕದ ಭಾಗಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಳ್ಳಬೇಕಾದ ಕಾರ್ಯ ಯೋಜನೆಗಳತ್ತ ಸರ್ಕಾರದ ಗಮನ ಸೆಳೆದಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅಗಾಧವಾದ ಖನಿಜ ಸಂಪತ್ತಿದ್ದು, ಅಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಕಷ್ಟು ಅವಕಾಶವಿರುವುದೆಂದು ತಿಳಿಸಿದ್ದಾರೆ. ಹಾಗೆಯೇ ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿರುವ ಅಪಾರ ಗಿಡಮೂಲಿಕೆಗಳ ಪ್ರಯೋಜನ ಪಡೆಯಲು ಈ ಭಾಗದಲ್ಲಿ ಒಂದು ಆಯುರ್ವೇದ ಕಾಲೇಜನ್ನು ಸ್ಥಾಪಿಸಲು ಸರ್ಕಾರವನ್ನು ಕೋರಿದ್ದಾರೆ. ಹುಬ್ಬಳ್ಳಿ ವೈದ್ಯಕೀಯ ಕಾಲೇಜು ಸ್ಥಾಪನೆಯ ಅಗತ್ಯವಿರುವುದರ ಬಗ್ಗೆ ನೆನಪಿಸಿದ್ದಾರೆ. ಅವರು ಕಾಳಿ ನದಿ ಯೋಜನೆಯನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದು ಅತ್ಯಗತ್ಯ. ಇದು ವಿದ್ಯುತ್ ಉತ್ಪಾದನೆಗೆ ನೆರವಾಗಲಿದ್ದು, ಕೈಗಾರಿಕೆಗಳ ಬೆಳವಣಿಗೆಗೆ ಪೂರಕವಾಗಿರುತ್ತದೆ ಎಂದು ಸಲಹೆ ಮಾಡಿರುತ್ತಾರೆ.

ಕುಡಿಯುವ ನೀರಿನ ತೊಂದರೆ ಕರ್ನಾಟಕ ಭಾಗದಲ್ಲಿ ತೀವ್ರವಾಗಿದ್ದು ಅದರ ಪರಿಹಾರಕ್ಕಾಗಿ ಸರ್ಕಾರ ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಬೇಕೆಂಬುದು ಅವರ ಆಗ್ರಹ. ಹಾಗೆಯೇ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವ ವಿಚಾರದಲ್ಲಿ ಸರ್ಕಾರದ ನೀತಿ ಆಗಾಗ ಬದಲಾಗುತ್ತಿರುವುದು ಸ್ವಾಗತಾರ್ಹ ವಿಚಾರವಲ್ಲ ಎಂದು ತಿಳಿಸಿದ್ದಾರೆ. ಮೊದಲು ಸರ್ಕಾರ ಎಲ್ಲಿ ಒಟ್ಟು ಖರ್ಚಿನ 1/4 ಭಾಗ ಅಥವಾ 3ನೇ ಒಂದು ಭಾಗವನ್ನು ಸಾರ್ವಜನಿಕರು ವಂತಿಗೆ ನೀಡುತ್ತಾರೋ ಅಂತಹ ಊರುಗಳಿಗೆ ಶಾಲೆ ಮಂಜೂರು ಮಾಡುವುದಾಗಿ ತಿಳಿಸಿತ್ತು. ಈಗ ಈ ವಂತಿಗೆ ಪ್ರಮಾಣವನ್ನು ಏಕಾಏಕಿ ಶೇಕಡ 50ರಷ್ಟಕ್ಕೆ ಹೆಚ್ಚಿಸಿರುವುದಕ್ಕೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದ್ದಾರೆ.

ಅವರು ಮುಂದುವರಿದು ರಸ್ತೆಗಳ, ದುಃಸ್ಥಿತಿಯ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಬೆಳಗಾವಿ ಜಿಲಾ ಬೋರ್ಡ್ ಸಲ್ಲಿಸಿದ ನಿರ್ಮಿಸಬೇಕಾದ ಕ್ರಾಸ್‌ವೇಗಳು ಮತ್ತು ಸೇತುವೆಗಳ ಪಟ್ಟಿಯನ್ನು ಗಮನಿಸಬೇಕಾಗಿ ಕೋರಿದರು. ರಾಜ್ಯದ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ ಸಾರಿಗೆ, ಆರೋಗ್ಯ ಮತ್ತು ಕೈಗಾರಿಕೆಗಳಿಗೆ ಸೂಕ್ತ ಪ್ರಾಮುಖ್ಯ ಕೊಟ್ಟಿಲ್ಲ ಎಂದು ಮನವರಿಕೆ ಮಾಡಿಕೊಟ್ಟರು.

# ಸ್ಥಳೀಯ ಮಂಡಲಿ ಮತ್ತು ಗ್ರಾಮ ಪಂಚಾಯಿತಿಗಳ (ತಿದ್ದುಪಡಿ) ಮಸೂದೆ

1955

**ಶ್ರೀ ಹೆಚ್.ವಿ. ಕೌಜಲಗಿ (ಪರಸಗಡ)** – ಸ್ವಾಮಿ, ನಾನು, ಈ ಸದನದ ಮುಂದೆ ತರಲಾಗಿರುವ ಪ್ರಸ್ತಾವಿತ ವಿಧೇಯಕದ ಮೇಲೆ ಕೆಲವು ಅಭಿಪ್ರಾಯಗಳನ್ನು ತಿಳಿಸಲು ಇಚ್ಛಿಸುತ್ತೇನೆ. ಇಂಜಿನೀಯರುಗಳ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ದಕ್ಷತೆ ಮತ್ತು ಸುಧಾರಣೆಯನ್ನು ತರುವುದಕ್ಕಾಗಿ ಜಿಲ್ಲಾ ಸ್ಥಳೀಯ ಮಂಡಳಿಗಳ ಇಂಜಿನಿಯರುಗಳಿಗೆ ಸಾಮಾನ್ಯ ಕೇಡರ್‌ಗಳನ್ನು ರಚಿಸುವುದಕ್ಕಾಗಿ ಈ ವಿಧೇಯಕವನ್ನು ತರುವುದು ಸರ್ಕಾರದ ಉದ್ದೇಶವೆನಿಸಿದೆ. ಪ್ರಸ್ತುತದಲ್ಲಿ, ಸ್ಥಳೀಯ ಮಂಡಳಿ ಇಂಜಿನಿಯರುಗಳ ಮೇಲೆ ಸರ್ಕಾರದ ಯಾವ ನಿಯಂತ್ರಣವಾಗಲಿ ಮತ್ತು ಮೇಲ್ವಿಚಾರಣೆಯಾಗಲಿ ಇಲ್ಲ. ಈ ವಿಧೇಯಕವು, ಅವರ ವೇತನ ಶ್ರೇಣಿಗಳಲ್ಲಿ ಏಕರೂಪತೆಯನ್ನು ತರುವ ಮತ್ತು ಭವಿಷ್ಯದಲ್ಲಿ ಅವರ ಕೆಲಸದಲ್ಲಿ ಸಮನ್ವಯತೆಯನ್ನು ಸಾಧಿಸುವ ಉದ್ದೇಶವನ್ನೂ ಹೊಂದಿದೆ. ಸ್ವಾಮಿ, ಈ ಉದ್ದೇಶಗಳನ್ನು ಈಡೇರಿಸುವುದಾದರೆ, ಆಗ ಇಂಜಿನಿಯರುಗಳ ಪ್ರಾದೇಶಿಕವಾರು ಕೇಡರ್‌ಗಳನ್ನು ರಚಿಸಲು ಪ್ರಸ್ತಾವಗಳು ಸರಿಯಾಗಿರುತ್ತವೆಯೆ ಅಥವಾ ಇಲ್ಲವೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ, ಸ್ವಾಮಿ ಈ ವ್ಯವಸ್ಥೆ ಸರಿಯಾಗಿರುವುದಿಲ್ಲ. ಪ್ರಥಮತಃ, ಸ್ವಾಮಿ, ಸ್ಥಳೀಯ ಮಂಡಳಿ ಇಂಜಿನಿಯರುಗಳ ಕಾರ್ಯದಕ್ಷತೆ ಸಮರ್ಥವಾಗಿಲ್ಲ ಎಂಬ ಭಾವನೆಯನ್ನು ಸರ್ಕಾರವು ತಳೆದಿದೆ ಎನಿಸುತ್ತದೆ, ಆದರೆ, ಇದು ಸರಿಯಾದ ದೃಷ್ಟಿಯಲ್ಲವೆಂದು ನಾನು ಯುಕ್ತ ಗೌರವದಿಂದ ಹೇಳುತ್ತೇನೆ. ಪಿಡಬ್ಲ್ಯೂಡಿ ಇಂಜಿನಿಯರುಗಳ ಕೆಲಸವು ಸ್ಥಳೀಯ ಮಂಡಳಿ ಇಂಜಿನಿಯರುಗಳ ಕೆಲಸಕ್ಕಿಂತ ಅತ್ಯಂತ ಉನ್ನತವಾದುದು ಎಂಬುದಾಗಿಯು ಹೇಳಲಾಗಿದೆ. ಆದರೆ ನನ್ನ ಅಭಿಪ್ರಾಯದಲ್ಲಿ, ಸ್ಥಳೀಯ ಮಂಡಳಿ ಇಂಜಿನಿಯರುಗಳ ಕೆಲಸ ಹೆಚ್ಚು ದಕ್ಷತೆಯಿಂದ ಕೂಡಿದ್ದು, ಪಿಡಬ್ಲ್ಯೂಡಿ ಇಂಜಿನಿಯರುಗಳಿಗೆ ಹೋಲಿಸಿದರೆ, ಅವರು ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಪಿಡಬ್ಲ್ಯೂಡಿ ಇಂಜಿನಿಯರುಗಳಿಗೆ ಈ ಸ್ಥಳೀಯ ಮಂಡಳಿ ಇಂಜಿನಿಯರುಗಳ ಕೆಲಸವು ಎಷ್ಟೇ ತೃಪ್ತಿಕರವಾಗಿದ್ದರೂ ಈ ಇಂಜಿನಿಯರುಗಳ ಕೆಲಸದ ಬಗ್ಗೆ ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿಲ್ಲ. ಇನ್ನೊಂದು ವಿಷಯವೆಂದರೆ, ಜಿಲ್ಲಾ ಸ್ಥಳೀಯ ಮಂಡಳಿ ಇಂಜಿನಿಯರುಗಳ ಮೇಲೆ ಪಕ್ಷಪಾತವಿದ್ದಂತೆ ಕಾಣುತ್ತಿದೆ. ಆದ್ದರಿಂದಾಗಿ ಈ ಇಂಜಿನಿಯರುಗಳ ಕೆಲಸವನ್ನು ವಾಸ್ತವವಾಗಿ ಸೂಪರಿಂಟೆಂಡೆಂಟ್ ಇಂಜಿನಿಯರುಗಳು ಮೇಲ್ವಿಚಾರಣೆ ಮಾಡಬೇಕು, ಆದರೆ, ವಾಸ್ತವದಲ್ಲಿ ಈ ಮೇಲ್ವಿಚಾರಣೆ ಕೆಲಸವನ್ನು ಸಹಾಯಕ ಇಂಜಿನಿಯರುಗಳಿಗೆ ವಹಿಸಿಕೊಡಲಾಗಿದ್ದು ಅವನು ನೀಡುವ ಅಭಿಪ್ರಾಯದ ಮೇಲೆ ಜಿಲ್ಲಾ ಸ್ಥಳೀಯ ಮಂಡಳಿ ಇಂಜಿನಿಯರುಗಳ ಕೆಲಸವನ್ನು ನಿರ್ಣಯಿಸಲಾಗುತ್ತದೆ. ಮತ್ತು ಸಹಾಯಕ ಇಂಜಿನಿಯರುಗಳು ಯಾವತ್ತಿಗೂ ಸ್ಥಳೀಯ ಮಂಡಳಿ ಇಂಜಿನಿಯರುಗಳ ಕೆಲಸ ಸಮರ್ಪಕವಾಗಿದೆ ಎಂದು ಹೇಳುವುದೇ ಇಲ್ಲ.

ಹೌದು, ಅವರ ಕೆಲಸವು ಅತ್ಯಂತ ಸಮರ್ಪಕವಾಗಿದೆ ಎಂದು ನಾನು ಹೇಳುವುದಿಲ್ಲ. ಸ್ಥಳೀಯ ಮಂಡಳಿ ಇಂಜಿನಿಯರುಗಳು ಅವರ ಕೆಲಸಗಳನ್ನು ಮಾಡುವಾಗ ಕೆಲವು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಅವರ ಕೆಲಸವು ಹೆಚ್ಚು ಕಡಿಮೆ ಮಂಡಳಿಗಳ ಸಹಕಾರದ ಮೇಲೆ ಅವಲಂಬಿತವಾಗಿರುತ್ತದೆ. ಸಹಕಾರವಿಲ್ಲದಿದ್ದರೆ ಅವರ ಕೆಲಸಗಳಿಗೆ ತಡೆಯುಂಟಾಗುತ್ತವೆ.

ಎರಡನೆಯದಾಗಿ, ಸ್ಥಳೀಯ ಮಂಡಳಿಗಳ ಸೇವೆಗಳಲ್ಲಿ ಕೆಲಸ ಮಾಡುವ ಇಂಜಿನಿಯರುಗಳಿಗೆ ಸಾಮಾನ್ಯವಾಗಿ ಮುಂಬಡ್ತಿಯ ಅವಕಾಶಗಳು ತೀರಾ ವಿರಳವಾಗಿರುತ್ತವೆ, ಅವರು ತಮ್ಮ ಗರಿಷ್ಠ ವೇತನವನ್ನು ತಲುಪಿದ ನಂತರ, ಅವರಿಗೆ ಮುಂದೆ ಮುಂಬಡ್ತಿಯ ಅವಕಾಶವಿಲ್ಲದಿರುವುದರಿಂದ ಅವರ ಕೆಲಸದ ಮೇಲೆ ಅವರಿಗೆ ಅನಾದಾರ ಉಂಟಾಗುತ್ತದೆ. ಇನ್ನೊಂದು ಅಂಶವೆಂದರೆ, ಇಂಜಿನಿಯರುಗಳು ಖಾಯಂ ನೌಕರರಾಗಿದ್ದರೆ, ಜಿಲ್ಲಾ ಸ್ಥಳೀಯ ಮಂಡಳಿ ಸದಸ್ಯರು ಮತ್ತು ಇತರ ಪದಾಧಿಕಾರಿಗಳು ಕಾಲ ಕಾಲಕ್ಕೆ ಬದಲಾವಣೆ ಹೊಂದುತ್ತಿರುತ್ತಾರೆ. ಸ್ವಾಭಾವಿಕವಾಗಿ, ಇಂಜಿನಿಯರನು ಯಾವಾಗಲೂ ಮೇಲಿರಲು ಪ್ರಯತ್ನಿಸುತ್ತಾನೆ. ಹಾಗೂ ಪ್ರಭಾವಶಾಲಿಯಾಗುತ್ತಾನೆ. ಇದರ ಪರಿಣಾಮವಾಗಿ, ಈ ಕೆಲಸವು ಕೆಲವು ವೇಳೆ ಅಸಮರ್ಪಕವಾಗಿದ್ದು ನಿರೀಕ್ಷಿತ ಮಟ್ಟದಲ್ಲಿರುವುದಿಲ್ಲ. ಆದ್ದರಿಂದ, ಈ ಜಿಲ್ಲಾ ಸ್ಥಳೀಯ ಮಂಡಳಿಗಳ ಇಂಜಿನಿಯರುಗಳ ಕೆಲಸದ ಮೇಲೆ ನಿಯಂತ್ರಣವಿರುವುದು ಅವಶ್ಯವಿರುತ್ತದೆ. ಸರ್ಕಾರವು, ಇಂಜಿನಿಯರುಗಳಿಗೆ ವೇತನದ ಒಂದು ಭಾಗವನ್ನು ಸಹಾಯಧನದ ಮೂಲಕ ನೀಡುತ್ತಿದೆಯಾದ್ದರಿಂದ, ಸರ್ಕಾರವು ಈ ಜಿಲ್ಲಾ ಸ್ಥಳೀಯ ಮಂಡಳಿಗಳ ಮೇಲೆ ಸ್ವಲ್ಪ ನಿಯಂತ್ರಣ ಹೊಂದಿರಬೇಕಾದುದು ಸಹಜವಾಗಿದೆ. ಅಂತಹ ಸಂದರ್ಭದಲ್ಲಿ, ಉತ್ತಮವಾದ ಪರಿಹಾರವೆಂದರೆ, ಈ ಹದ್ದೆಗಳನ್ನು ವರ್ಗಾಯಿಸಬಹುದಾದ ಹುದ್ದೆಗಳನ್ನಾಗಿಸುವುದು. ಈ ಹುದ್ದೆಗಳನ್ನು ವರ್ಗಾಯಿಸಬಹುದಾದ ಹುದ್ದೆಗಳಾಗಿ ಮಾಡಿದರೆ, ಆಗ ಉದ್ಭವವಾಗುವ ಪ್ರಶ್ನೆ ಎಂದರೆ, ವರ್ಗಾವಣೆ ಮುಂತಾದವುಗಳ ಉದ್ದೇಶಗಳಿಗೆ ಯಾರು ನಿಯಂತ್ರಣ ಪ್ರಾಧಿಕಾರಿಗಳಾಗಿರುತ್ತಾರೆ ಎಂಬುದು. ಈ ಸಂಬಂಧದಲ್ಲಿ ನನ್ನ ಸಲಹೆ ಎಂದರೆ, ಪ್ರಾಂತವಾರು (ವಲಯ) ಕೇಡರ್‌ಗಳಿರುವುದಕ್ಕೆ ಬದಲಾಗಿ, ಈ ಎಲ್ಲ ಸ್ಥಳೀಯ ಮಂಡಳಿ ಇಂಜಿನಿಯರುಗಳನ್ನು ಸರ್ಕಾರಿ ನೌಕರರನ್ನಾಗಿ ವಿಲೀನಗೊಳಿಸಬೇಕು ಹಾಗೂ ಇಂಜಿನಿಯರುಗಳನ್ನು ಸರ್ಕಾರಿ ನೌಕರರೆಂದು ಪರಿಗಣಿಸಿದರೆ, ಅವರಿಗೆ ಮುಂಬಡ್ತಿಯ ಅವಕಾಶಗಳಿರುವುದರಿಂದ ಅವರು ತಮ್ಮ ಕೆಲಸವನ್ನು ಹೆಚ್ಚು ಸಮರ್ಥವಾಗಿ ಮಾಡುತ್ತಾರೆ.

ನಂತರ ಸ್ವಾಮಿ, ಈ ಹುದ್ದೆಗಳು, ಸಹಾಯಕ ಇಂಜಿನಿಯರುಗಳ ಶ್ರೇಣಿಯ ಹುದ್ದೆಗಳಾಗಿರಬೇಕೆಂದು ಮಾನ್ಯ ಸ್ನೇಹಿತರಾದ ಶ್ರೀ ಷಾರವರು ಸೂಚಿಸಿದರು. ನಾನು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಏಕೆಂದರೆ, ಇಲ್ಲಿ ದೊಡ್ಡ ಹಾಗೂ ಸಣ್ಣ ಜಿಲ್ಲೆಗಳಿವೆ. ಕೆಲವು ಸಂದರ್ಭಗಳಲ್ಲಿ, ಕೆಲವು ಜಿಲ್ಲಾ ಸ್ಥಳೀಯ ಸಂಸ್ಥೆಗಳ ನಿಧಿಗಳು (ಹಣವು) ಇತರರಿಗಿಂತ ಕಡಿಮೆಯದಾಗಿರುತ್ತದೆ, ಸ್ವಾಭಾವಿಕವಾಗಿ, ಎಲ್ಲ ಜಿಲ್ಲೆಗಳಿಗೆ ಸಹಾಯಕ ಇಂಜಿನಿಯರುಗಳ ಶ್ರೇಣಿಯ ಇಂಜಿನಿಯರುಗಳನ್ನು ನೇಮಕ ಮಾಡಿಕೊಳ್ಳುವುದು ನ್ಯಾಯಸಮ್ಮತವಲ್ಲ. ಅನಂತರ, ಕೇಡರ್ ಪ್ರಾಂತ್ಯವಾರು ಆಗಿರಬೇಕೆಂದು ಸೂಚಿಸಲಾಯಿತು. ಆದರೆ, ಅದರಲ್ಲಿಯೂ ಗಣನೀಯ ಪ್ರಮಾಣದ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಉದಾ: ಸ್ವಾಮಿ, ನಾವು ಕರ್ನಾಟಕ ಪ್ರಾಂತ್ಯವನ್ನು ಪರಿಗಣನೆಗೆ ತೆಗೆದುಕೊಂಡರೆ, ಇಲ್ಲಿ ಕೇವಲ ನಾಲ್ಕು ಜಿಲ್ಲೆಗಳು ಮಾತ್ರ ಇವೆ. ಈಗ ಬೆಳಗಾವಿ ಮತ್ತು ಧಾರವಾಡವು ಉತ್ತರ ಕನ್ನಡ ಜಿಲ್ಲೆಗಿಂತ ದೊಡ್ಡದಾದ ಜಿಲ್ಲೆಗಳಾಗಿವೆ. ಕಾರವಾರದಲ್ಲಿ ಸೇವೆ ಮಾಡುತ್ತಿರುವ ಒಬ್ಬ ಇಂಜಿನಿಯರನು, ಬೆಳಗಾವಿಯಲ್ಲಿ ಸೇವೆ ಮಾಡಲು ಇಚ್ಛಿಸಿದರೂ ಬೆಳಗಾವಿಯಲ್ಲಿ ಸೇವೆ ಸಲ್ಲಿಸುತ್ತಿರುವವನು ಕಾರವಾರದಲ್ಲಿ ಸೇವೆ ಮಾಡಲು ಇಚ್ಛಿಸುವುದಿಲ್ಲ. ಪ್ರಸ್ತುತ ವ್ಯವಸ್ಥೆಯಡಿ ವರ್ಗಾವಣೆಗಳನ್ನು ಮಾಡಲು ಸಾಧ್ಯವಿಲ್ಲ. ಆದರೆ ಇನ್ನು ಮುಂದೆ, ಇಂಥ ಪ್ರಶ್ನೆ

ಉದ್ಭವಿಸಿದರೆ, ಇಂತಹ ಪ್ರಕರಣವೂ ಸಹ ಅಲ್ಲಿ ಹುಟ್ಟಿಕೊಳ್ಳಬಹುದು. ಒಂದು ನಿರ್ದಿಷ್ಟ ಸ್ಥಳೀಯ ಸಂಸ್ಥೆಯು, ಅಲ್ಲಿ ಕೆಲಸ ಮಾಡುತ್ತಿರುವ ಇಂಜಿನಿಯರನ್ನು ಮುಂದುವರಿಸಲು ಇಚ್ಛಿಸದಿರಬಹುದು. ಹಾಗಾಗಿ ಸಂಸ್ಥೆಯು ಅವನ ವರ್ಗಾವಣೆಯನ್ನು ಸೂಚಿಸಬಹುದು, ಆದರೆ ಅದೇ ಇಂಜಿನಿಯರನನ್ನು ವರ್ಗಾಯಿಸಲು ಪ್ರಸ್ತಾಪಿಸಲಾದ ಕಡೆಯ ಇನ್ನೊಂದು ಸಂಸ್ಥೆಯು ಇಷ್ಟಪಡದಿರಬಹುದು, ಮತ್ತು ಅದು ಅವನನ್ನು ಸ್ವೀಕರಿಸಲು ಹಿಂಜರಿಯಬಹುದು. ಆ ರೀತಿಯಲ್ಲಿಯೂ ಸಹ ತೊಂದರೆ ಉದ್ಭವಿಸುತ್ತದೆ. ಮಂಡಳಿಯ ಆರ್ಥಿಕ ಪರಿಸ್ಥಿತಿಯ ಕಾರಣದಿಂದಲೂ ತೊಂದರೆಯುಂಟಾಗಬಹುದು. ಸಂಸ್ಥೆಯು ಅವನ ಸಂಬಳದ ಕಾರಣ, ವೆಚ್ಚವನ್ನು ಭರಿಸಲು ಸಾಧ್ಯವಿಲ್ಲದಿರುವ ಸ್ಥಿತಿಯಲ್ಲಿರಬಹುದು. ವಿಶೇಷವಾಗಿ ಕರ್ನಾಟಕದ ನಾಲ್ಕು ಜಿಲ್ಲೆಗಳ ಸಂಬಂಧದಲ್ಲಿ, ಇಂಜಿನಿಯರುಗಳನ್ನು ವರ್ಗಾಯಿಸುವುದು ಬಹಳ ಕಷ್ಟಸಾಧ್ಯ. ಪ್ರದೇಶವನ್ನು ವ್ಯಾಪಕಗೊಳಿಸಿದರೆ, ಈ ಯೋಜನೆಯು ಸಫಲವಾಗಬಹುದು.

ಸ್ವಾಮಿ, ಸಂಕ್ಷಿಪ್ತವಾಗಿ ನನ್ನ ಅಭಿಪ್ರಾಯದಲ್ಲಿ, ವಿಧೇಯಕದಲ್ಲಿ ನಿರೂಪಿಸಲಾದ ಯೋಜನೆಯು, ಭದ್ರವಾದುದಲ್ಲ ಮತ್ತು ವಾಸ್ತವವಾಗಿ ಇದು ಸರಿಯಾಗಿ ಕಾರ್ಯನಿರ್ವಹಿಸದು. ಆದ್ದರಿಂದ, ಈಗಿರುವ ಪದ್ಧತಿ ಮುಂದುವರಿಯಬೇಕು, ಅಥವಾ ಸರ್ಕಾರವು ಬದಲಾವಣೆಗಳನ್ನು ತರಬೇಕಾಗಿದ್ದರೆ, ಅವರ ಬಗ್ಗೆ ಸರ್ಕಾರವು ಗಂಭೀರವಾಗಿ ಯೋಚಿಸಬೇಕು ಮತ್ತು ಅದರ ಮೇಲೆ ಸಾರ್ವಜನಿಕ ಅಭಿಪ್ರಾಯ ಪಡೆಯಲು ವಿಧೇಯಕವನ್ನು ಪರಿಚಲನೆ ಮಾಡಬೇಕು.

(ದಿನಾಂಕ: 27.09.1955)

## ಟಿಪ್ಪಣಿ

ಸ್ಥಳೀಯ ಮಂಡಳಿಗಳು ಮತ್ತು ಗ್ರಾಮ ಪಂಚಾಯತಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಇಂಜಿನಿಯರುಗಳ ಸೇವಾ ನಿಯಮಗಳಿಗೆ ತಿದ್ದುಪಡಿ ತಂದು ಅವರಿಗೆಲ್ಲ ಒಂದು ಸಾಮಾನ್ಯ ಕೇಡರ್ ರಚಿಸಿಕೊಡುವ ಸಲುವಾಗಿ ಈ ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸಲಾಗಿತ್ತು. ಈ ತಿದ್ದುಪಡಿ ಮಸೂದೆಯಲ್ಲಿದ್ದ ಅನೇಕ ನ್ಯೂನತೆಗಳನ್ನು ಶ್ರೀ ಎಚ್.ವಿ. ಕೌಜಲಗಿಯವರು ಸರ್ಕಾರದ ಗಮನಕ್ಕೆ ತಂದರು. ವಿಶೇಷವಾಗಿ ಲೋಕೋಪಯೋಗಿ ಇಲಾಖೆ ಇಂಜಿನಿಯರುಗಳು ಈ ಸ್ಥಳೀಯ ಸಂಸ್ಥೆಗಳ ಕಾಮಗಾರಿಗಳನ್ನು ಉಸ್ತುವಾರಿ ಮಾಡುವಲ್ಲಿ ಇರುವ ತೊಡಕುಗಳನ್ನು ಎತ್ತಿ ತೋರಿದರು. ಮುಂಬೈ ಕರ್ನಾಟಕದ ಭಾಗವನ್ನೇ ಒಂದು ವಲಯವಾಗಿ ಮಾರ್ಪಡಿಸಿದಾಗ ಇಂಜಿನಿಯರುಗಳ ವರ್ಗಾವಣೆಯಲ್ಲಿ ಎದುರಾಗುವ ತಾಂತ್ರಿಕ ಮತ್ತು ವಾಸ್ತವ ಸಮಸ್ಯೆಗಳನ್ನು ಕುರಿತು ಪ್ರಸ್ತಾಪಿಸಿದರು.

ಕೆಲವು ಸ್ಥಳೀಯ ಸಂಸ್ಥೆಗಳಿಗೆ ಇಂಜಿನಿಯರುಗಳ ವೇತನ ಪಾವತಿಸಲಾಗದ ಸ್ಥಿತಿ ಇರುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಸರ್ಕಾರವೇ ಈ ಇಂಜಿನಿಯರುಗಳ ಸಂಬಳ ಸಾರಿಗೆಯ ಭಾರವನ್ನು ಹೊತ್ತುಕೊಳ್ಳುವಂತೆ ಸಲಹೆ ಮಾಡಿದ್ದಾರೆ. ಇವರು ಆಡಳಿತ ಪಕ್ಷದ ಸದಸ್ಯರಾಗಿದ್ದರೂ ನಿರ್ದಾಕ್ಷಿಣ್ಯವಾಗಿ ಸರ್ಕಾರ ಈ ಮಸೂದೆಯನ್ನು ಈಗಿನ ಸ್ಥಿತಿಯಲ್ಲಿ ಜಾರಿಗೆ ತರುವುದಕ್ಕಿಂತ ಹಿಂದಿನ ಪದ್ಧತಿಯನ್ನೇ ಮುಂದುವರಿಸುವುದು ಒಳ್ಳೆಯದು. ಇಲ್ಲದ ಪಕ್ಷದಲ್ಲಿ ಈ ಮಸೂದೆಯ ಸುತ್ತೋಲೆ ಕಳುಹಿಸಿ ಸಾರ್ವಜನಿಕ ಅಭಿಪ್ರಾಯ ಪಡೆಯುವುದು ಸೂಕ್ತ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

# ಕೃಷಿ ಇಲಾಖೆ ಬೇಡಿಕೆ ಕುರಿತು

1956

**ಶ್ರೀ ಹೆಚ್.ವಿ. ಕೌಜಲಗಿ (ಪರಸಗಡ)** – ಮಾನ್ಯ ಸಭಾಧ್ಯಕ್ಷರೇ, ಸ್ವಾಮಿ, ನಾನು ಮಾನ್ಯ ಕೃಷಿ ಸಚಿವರು ಮಂಡಿಸಿದ ಬೇಡಿಕೆಯನ್ನು ಬೆಂಬಲಿಸುತ್ತೇನೆ. ರಾಜ್ಯದ ನಮ್ಮ ಕೃಷಿ ಕಾರ್ಯನೀತಿಯು ಚೆನ್ನಾಗಿ ಯೋಜಿತವಾದುದು ಮತ್ತು ಅದು ಬಹಳ ಯಶಸ್ವಿಯಾಗಿದೆ ಎಂದು ನಾನು ಹೇಳಬಯಸುತ್ತೇನೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಸೂಚಿಸಲಾದ ಹಲವಾರು ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಅದಷ್ಟೇ ಅಲ್ಲ, ಆದರೆ ಈ ಸರ್ಕಾರ ಕೃಷಿಕನ ಪ್ರಯೋಜನಕ್ಕಾಗಿ ಕಾಲಕಾಲಕ್ಕೆ ಭೂ ಕಾನೂನುಗಳನ್ನು ತಿದ್ದುಪಡಿ ಮಾಡುವ ಔದಾರ್ಯ ತೋರಿದೆ. ಇದರ ಪರಿಣಾಮವೆಂದರೆ, ನಾವು ಹೆಚ್ಚು ಹೆಚ್ಚು ಉತ್ಪಾದನೆ ಮಾಡಲು ಸಮರ್ಥರಾಗಿದ್ದೇವೆ ಮತ್ತು ವಿಶೇಷವಾಗಿ ನಮ್ಮ ಆಹಾರದ ಸಮಸ್ಯೆಯನ್ನು ಈ ರಾಜ್ಯಕ್ಕೆ ಸಂಬಂಧಪಟ್ಟಂತೆ ಪರಿಹರಿಸಲಾಗಿದೆ. ಸ್ಥೂಲವಾಗಿ ವಿವರಿಸಲಾದಂತೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ, "ಚಟುವಟಿಕೆಗಳ ರೂಪರೇಷೆ" ಪುಸ್ತಕದಲ್ಲಿ ಅನೇಕ ಯೋಜನೆಗಳ ವಿವರಗಳನ್ನು ನೀಡಲಾಗಿದೆ ಮತ್ತು ನಾವು ಅವುಗಳನ್ನು ಪ್ರಾಮಾಣಿಕವಾಗಿ ಅನುಸರಿಸಿದರೆ, ನಮಗೆ ಅಗತ್ಯಕ್ಕಿಂತಲೂ ಹೆಚ್ಚಾಗಿ ನಾವು ಬೆಳೆಗಳನ್ನು ಬೆಳೆದು ನಮ್ಮ ಆಹಾರ ಸಮಸ್ಯೆಯನ್ನು ಒಮ್ಮೆಗೇ ಪರಿಹರಿಸಬಹುದಾಗಿದೆ.

ಹಾಗಿದ್ದರೂ, ಸ್ವಾಮಿ, ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ, ಒಂದು ಅಥವಾ ಎರಡು ನ್ಯೂನತೆಗಳನ್ನು ನಾನು ಕಾಣುತ್ತೇನೆ. ಮೊದಲನೆಯದು ಪಶುವೈದ್ಯ ಇಲಾಖೆಗೆ ಸಂಬಂಧಪಟ್ಟದ್ದು. ಪ್ರತಿಯೊಂದು ತಾಲೂಕಿಗೆ ಒಂದು ಪಶುವೈದ್ಯ ಚಿಕಿತ್ಸಾಲಯವನ್ನು ಒದಗಿಸಬೇಕೆನ್ನುವುದು ಸರ್ಕಾರದ ಉದ್ದೇಶವಾಗಿದೆ ಮತ್ತು ಇದು ಬಹುಮುಖ್ಯವಾದ ಹಣಕಾಸು ಸಮಸ್ಯೆಯಿಂದ ಸಾಧ್ಯವಾಗಿಲ್ಲವೆಂದು ಮಾನ್ಯ ಹಣಕಾಸು ಸಚಿವರ ಭಾಷಣದಲ್ಲಿ ಒಪ್ಪಿಕೊಳ್ಳಲಾಗಿದೆ. ಈ ತೊಂದರೆಯನ್ನು ಸರ್ಕಾರವು ಬಹು ಹಿಂದೆಯೇ ಗಮನಿಸಿದ್ದರೂ ಸಹ, ಸರ್ಕಾರವು ಹೆಚ್ಚು ಜನರನ್ನು ತರಬೇತಿಗೊಳಿಸಲು ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲವೆಂಬುದು ನನ್ನ ವಿನಮ್ರ ಅಭಿಪ್ರಾಯ. ಅದೃಷ್ಟವಶಾತ್, ಈ ವರ್ಷ ಬೊಂಬಾಯಿ ಪಶುವೈದ್ಯ ಕಾಲೇಜಿನಲ್ಲಿ ಇನ್ನೂ ಒಂದು ಹೆಚ್ಚಿನ ಶಿಫ್ಟ್‌ನ್ನು ಒದಗಿಸಲಾಗುವುದು ಎಂದು ಸೂಚಿಸಲಾಗಿದೆ. ನಾನು ಈ ಒಳ್ಳೆಯ ಆಲೋಚನೆಯನ್ನು ಸ್ವಾಗತಿಸುತ್ತೇನೆ. ಎರಡನೆಯದಾಗಿ, ಪಶುವೈದ್ಯ ಸ್ಟಾಕ್‌ಮೆನ್ ಕೋರ್ಸನ್ನು ಪುನರಾರಂಭಿಸಲಾಗಿದ್ದು ಅದೂ ಕೂಡ ಕೆಲವು ಮಟ್ಟದವರೆಗೆ ಸಮಸ್ಯೆಯನ್ನು ಬಗೆಹರಿಸಲು ಸಹಾಯ ಮಾಡುತ್ತದೆ.

**ಶ್ರೀ ಕೆ.ಎಫ್. ಪಾಟೀಲ್** – 1955–56ರಲ್ಲಿ ಎರಡನೇ ಸರದಿ ಪ್ರಾರಂಭವಾಯಿತು.

**ಶ್ರೀ ಹೆಚ್.ವಿ. ಕೌಜಲಗಿ** – ಆದರೆ, ಇಷ್ಟೆಲ್ಲಾ ಆದರೂ ಸಾಕಷ್ಟು ಸಂಖ್ಯೆಯ ಪಶುವೈದ್ಯರನ್ನು ಮತ್ತು ಸ್ಟಾಕ್‌ಮೆನ್‌ಗಳನ್ನು ಒದಗಿಸಲು ನಮಗೆ ಸಾಧ್ಯವಾಗಿಲ್ಲ. ಈ ಅಭ್ಯರ್ಥಿಗಳ ಬೇಡಿಕೆ ಇನ್ನೂ ಹೆಚ್ಚಾಗುತ್ತಿದ್ದು, ಆರೋಗ್ಯ ಇಲಾಖೆಯಲ್ಲಿ ಅನುಸರಿಸುತ್ತಿರುವ ಯೋಜನೆಯನ್ನು ಎಂದರೆ

ಎಸ್.ಎಂ.ಪಿ. ಯೋಜನೆ, ಸರ್ಕಾರ ಇಲ್ಲಿಯು ಅನುಸರಿಸಿದ್ದಾದರೆ ಈ ಸಮಸ್ಯೆಯನ್ನು ಕಡೆಯ ಪಕ್ಷ ತಾತ್ಕಾಲಿಕವಾಗಿಯಾದರೂ ಪರಿಹರಿಸಬಹುದು ಎನ್ನುವುದು ನನ್ನ ವಿನಮ್ರ ಅಭಿಪ್ರಾಯ. ಸ್ವಂತ ವೆಚ್ಚ ಮೇಲೆ ತರಬೇತಿಯನ್ನು ಪಡೆಯಲು ಅಭ್ಯರ್ಥಿಗಳು ಸಿದ್ಧರಿದ್ದು, ಅವರಿಗೆ ನೇಮಕಾತಿ ನೀಡಿದಲ್ಲಿ ಅವರು ಎಲ್ಲಯೂ ಹೋಗಲು ತಯಾರಿದ್ದಾರೆ. ಹಾಗೆಯೇ ಅನೇಕ ಪಂಚಾಯಿತಿಗಳು ವೈದ್ಯಕೀಯ ವೆಚ್ಚವನ್ನು ಭರಿಸಲು ತಯಾರಾಗಿದ್ದು, ಚಿಕಿತ್ಸಾಲಯಕ್ಕೆ ಅಗತ್ಯವಾದ ಕಟ್ಟಡವನ್ನು ಒದಗಿಸಲೂ ಕೂಡ ತಯಾರಿವೆ. ಕೆಲವು ಸ್ಟಾಕ್‌ಮೆನ್‌ಗಳನ್ನು ಸರ್ಕಾರ ಏಕೆ ತರಬೇತುಗೊಳಿಸಬಾರದು ಮತ್ತು ಹಳ್ಳಿಗಳಿಗೆ ಪಶು ಚಿಕಿತ್ಸಾಲಯಗಳನ್ನು ನೀಡಬಾರದು; ಇದು ಸಮಸ್ಯೆಯನ್ನು ಸ್ವಲ್ಪಮಟ್ಟಿಗಾದರೂ ಬಗೆಹರಿಸುತ್ತದೆ.

ಎರಡನೆಯದಾಗಿ, ಮಾನ್ಯರೇ, ನನ್ನ ಸ್ವಂತ ತಾಲ್ಲೂಕು ಮತ್ತು ಅದರ ಪಕ್ಕದ ತಾಲ್ಲೂಕಿನಲ್ಲಿ ಗಮನಿಸಲಾದಂತೆ ಸಾಂಕ್ರಾಮಿಕ ಸಮಯದಲ್ಲಿ ಅಗತ್ಯವಾದ ಲಸಿಕೆ ಮತ್ತು ಲಸಿಕೆಗಳು

**ಉಪಾಧ್ಯಕ್ಷರು** – ಕೃಷಿ ಇಲಾಖೆಯ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ಪಶು ಸಂಗೋಪನೆ ಇಲಾಖೆಗೆ ಸಂಬಂಧಿಸಿದಂತೆ ಅಲ್ಲ. ಅದೇ ಒಂದು ಪ್ರತ್ಯೇಕ ಇಲಾಖೆ, ನಂತರದಲ್ಲಿ ಅದು ಬರುತ್ತದೆ. ಅವೆರಡನ್ನೂ ಮಿಶ್ರಗೊಳಿಸಬಾರದು.

**ಶ್ರೀ ಹೆಚ್.ವಿ. ಕೌಜಲಗಿ** – ಮಾನ್ಯರೇ, ಜಾನುವಾರು ಕೃಷಿಕನ ಮುಖ್ಯ ಸಂಪತ್ತಾಗಿರುವುದರಿಂದ ಅತ್ಯಂತ ಮುಖ್ಯವಾದ ಈ ವಿಷಯವನ್ನು ಕೃಷಿಯಿಂದ ಬೇರ್ಪಡಿಸುವುದು ಕಷ್ಟವಾಗುತ್ತದೆ. ನಮ್ಮ ಕೃಷಿಯನ್ನು ಸುಧಾರಿಸಬೇಕಾದಲ್ಲಿ ಒಳ್ಳೆಯ ಜಾನುವಾರು ಸಂಪತ್ತು ಅಗತ್ಯವಾಗುತ್ತದೆ. ಜಾನುವಾರು ಹೊರತಾದ ಕೃಷಿಯನ್ನು ಯೋಚಿಸಲೂ ಆಗದು. ಇವೆರಡೂ ಬೇರ್ಪಡಿಸಲಾದಂಥವು. ಆದ್ದರಿಂದ ಇದು ಪೂರ್ಣವಾಗಿ ಪ್ರತ್ಯೇಕವಾದ ಇಲಾಖೆಯೆಂದು ನಿರ್ದಿಷ್ಟವಾಗಿ ಹೇಳಲಾಗದು. ನಾನು ವಿವರಣೆಗಳಿಗಾಗಿ ಹೋಗುತ್ತಿಲ್ಲ. ಆದರೆ .......

**ಉಪಾಧ್ಯಕ್ಷರು** – ಮಾನ್ಯ ಸದಸ್ಯರು ವಿವರಣೆಗಳಿಗೆ ಹೋಗದೆ ಪಶುಸಂಗೋಪನೆಯೂ ಸಹ ಜಾನುವಾರು ಸಂಪತ್ತಿಗೆ ಸಂಬಂಧಿಸಿದೆ ಎಂದು ಹೇಳಿದರೆ ಅದು ಸರಿಯಾದ ಕ್ರಮದಲ್ಲಿರುತ್ತದೆ, ಆದರೆ ಅವರು ಪಶು ಚಿಕಿತ್ಸಾಲಯಗಳು, ರಸಿಕೆಗಳು ಮತ್ತು ಇತರ ವಿಷಯಗಳ ಬಗ್ಗೆ ಹೇಳುತ್ತಾ ಹೋದರೆ, ಅವರುಗಳು "40–ಪಶುಸಂಗೋಪನೆ" ಅಡಿಯಲ್ಲಿ ಬರುತ್ತವೆ, ಆದರೆ ಚರ್ಚೆಯಾಗುತ್ತಿರುವುದು "40–ಕೃಷಿ" ಅಡಿಯಲ್ಲಿ.

**ಶ್ರೀ ಹೆಚ್.ವಿ. ಕೌಜಲಗಿ** – ಕೃಷಿಯನ್ನು ಹೀಗೆ ಸುಧಾರಿಸಬಹುದು ಮತ್ತು ಕೃಷಿ ಸುಧಾರಣೆಗಾಗಿ ಬಜೆಟ್‌ನಲ್ಲಿ ಹೇಗೆ ಹಣಕಾಸು ವ್ಯವಸ್ಥೆ ಮಾಡಿರುವುದಿಲ್ಲ ಎಂಬುದನ್ನು ತೋರಿಸುವ ದೃಷ್ಟಿಯಿಂದ ಆ ವಿಷಯಗಳನ್ನು ಪ್ರಸ್ತಾಪಿಸಿದ್ದೇವೆ. ಅಷ್ಟೆ.

ನಾನು ಮಾಡಬೇಕೆಂದಿರುವ ಎರಡನೆಯ ಸಲಹೆ ಎಂದರೆ, ಯಂತ್ರಾಧಾರಿತ ಕೃಷಿ. ಯಂತ್ರಾಧಾರಿತ ಕೃಷಿಗೆ ಸಂಬಂಧಿಸಿದಂತೆ ಹೇಳುವುದಾದರೆ ಕೃಷಿಕರಿಗೆ ಅದರಿಂದ ಬಹಳಷ್ಟು

ಪ್ರಯೋಜನವಾಗಿದೆಯೆಂಬುದು ನನ್ನ ಅಭಿಪ್ರಾಯ. ನನ್ನ ಅಭಿಪ್ರಾಯದಲ್ಲಿ ಟ್ರಾಕ್ಟರ್ ಸಾಗುವಳಿಯನ್ನು ಇನ್ನೂ ಕೆಲವು ವರ್ಷಗಳವರೆಗೆ ಅದರಲ್ಲೂ ವಿಶೇಷವಾಗಿ ಅಭಾವ ಪ್ರದೇಶಗಳಲ್ಲಿ ಮುಂದುವರಿಸಬಹುದಾಗಿತ್ತು. ಬುಲ್ಡೋಜರ್‌ಗಳಿಗೆ ಸಂಬಂಧಿಸಿದಂತೆ ಅವುಗಳು ಕೃಷಿಕರಿಗೆ ವರದಾನವಾಗಿವೆ. ಅತ್ಯಂತ ಕಡಿಮೆ ಅವಧಿಯಲ್ಲಿ ಲಕ್ಷಾಂತರ ಎಕರೆ ಭೂಮಿಯನ್ನು ಈ ಯೋಜನೆಯ ಅಡಿಯಲ್ಲಿ ತರಲಾಗಿದ್ದು, ಆ ಎಲ್ಲಾ ಭೂಮಿಯನ್ನು ಸಮತಟ್ಟುಗೊಳಿಸಲಾಗಿದೆ ಎಂಬ ಮಾಹಿತಿಯನ್ನು "ಕಾರ್ಯ ಕಾರ್ಯಚಟುವಟಿಕೆಗಳ ರೂಪರೇಷೆ 1955–56 ಮತ್ತು 1956–57" ಎನ್ನುವ ಪುಸ್ತಕದಲ್ಲಿ ನೀಡಲಾಗಿರುವ ಅಂಕಿ–ಅಂಶಗಳಿಂದ ನೋಡಬಹುದಾಗಿದೆ. ಸನ್ಮಾನ್ಯ ಸಚಿವರ ಗಮನಕ್ಕೆ ತರಬಯಸುವುದೇನೆಂದರೆ, "ಲಾಭವೂ ಇಲ್ಲ – ನಷ್ಟವೂ ಇಲ್ಲ" ಆಧಾರದ ಮೇಲೆ ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂಬುದು ಸರ್ಕಾರದ ಉದ್ದೇಶವಾದರೂ ಬಾಡಿಗೆ ದರಗಳು ತೀರಾ ದುಬಾರಿಯಾಗಿವೆ. ಆದರೆ, ಬುಲ್ಡೋಜರ್‌ಗಳಿಗೆ ಸಂಬಂಧಿಸಿದಂತೆ, ಬಡ ಕೃಷಿಕರಿಗೆ ಅದು ನಿಲುಕದಂತಾಗಿದೆ. ಬಡ ಕೃಷಿಕರಿಗಾಗಿ ಸರ್ಕಾರ, ಕಡೆಯ ಪಕ್ಷ ಬಡ್ಡಿರಹಿತ ಅಲ್ಪಾವಧಿ ಸಾಲವನ್ನು ನೀಡುವುದರ ಮೂಲಕವಾಗಲೀ ಅಥವಾ ಯಾವುದೇ ಸಹಾಯಧನ ನೀಡುವುದರ ಮೂಲಕವಾಗಲೀ ಸಹಾಯ ಮಾಡಿದರೆ ಒಳ್ಳೆಯದಾಗುತ್ತದೆ. ನನ್ನ ಮತಕ್ಷೇತ್ರ ಮತ್ತು ಅದರ ಸುತ್ತಮುತ್ತಲಿನ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಪ್ರಯೋಜನ ಪಡೆದಿರುವವರು ಕೇವಲ ದೊಡ್ಡ ಸಾಗುವಳಿದಾರರೇ ವಿನಃ ಬಡ ಸಾಗುವಳಿದಾರರಿಗೆ ಈ ಯೋಜನೆ ಅಡಿಯಲ್ಲಿ ಪ್ರಯೋಜನ ಪಡೆದುಕೊಳ್ಳಲು ಸಾಧ್ಯವಾಗಿಲ್ಲ ಎನ್ನುವುದು ನನ್ನ ಅನುಭವಕ್ಕೆ ಬಂದಿದೆ. ನಾನು ಗಮನಿಸಿರುವ ಮತ್ತೊಂದು ತೊಂದರೆ ಎಂದರೆ ಬುಲ್ಡೋಜರ್ ಕಾರ್ಯನಿರ್ವಹಣೆ ಪ್ರಾರಂಭವಾದಾಗ ಮತ್ತು ಸಾಗುವಳಿದಾರರು ಹಣ ನೀಡಿದಾಗ ಎಲ್ಲ ಉಳಿಮೆ ನಿರ್ವಹಣೆಯನ್ನು ನಿರ್ವಹಿಸುವವನು ಮೆಕಾನಿಕ್. ಕೆಲವು ವೇಳೆ, ಈ ಭೂಮಿಯನ್ನು ಸಾಗುವಳಿ ಅಡಿಯಲ್ಲಿ ತರಬೇಕಾದರೆ ಮತ್ತು ಕಡಿಮೆ ವೆಚ್ಚದಲ್ಲಿ ಸಮರ್ಪಕ ರೀತಿಯಲ್ಲಿ ಅದನ್ನ ಸಮತಟ್ಟುಗೊಳಿಸಬೇಕಾದರೆ ಸ್ವಲ್ಪ ಪ್ರಮಾಣದ ತಾಂತ್ರಿಕ ಸಹಾಯ ಅಗತ್ಯವಾಗುತ್ತದೆ. ಅಂಥ ತಾಂತ್ರಿಕ ಸಹಾಯವನ್ನು ಸಮತಟ್ಟು ಮಾಡುವ ಪೂರ್ವದಲ್ಲಿ ನೀಡಿರುವುದಿಲ್ಲ. ಮೆಕಾನಿಕ್ ಅಷ್ಟೇ ಜಮೀನುಗಳಿಗೆ ಹೋಗುತ್ತಾನೆ. ತನಗೆ ಇಚ್ಛೆ ಬಂದಂತೆ ಜಮೀನನ್ನು ಸಮತಟ್ಟಗೊಳಿಸುತ್ತಾನೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಪ್ರತಿಯೊಂದು ಘಟಕಕ್ಕೂ ಒಬ್ಬ ತಂತ್ರಜ್ಞನನ್ನೂ ಒದಗಿಸಬೇಕು. ಹಾಗಿದ್ದಾಗ, ಸಮತಟ್ಟು ಕಾರ್ಯನಿರ್ವಹಣೆಯನ್ನು ಕೈಗೊಳ್ಳುವುದಕ್ಕಿಂತ ಪೂರ್ವದಲ್ಲಿ ಅವನ್ನು ಕೃಷಿಕರಿಗೆ ತನ್ನ ಅಭಿಪ್ರಾಯಗಳನ್ನು ತಿಳಿಸಬಹುದು.

ನಾನು ಮಾಡಬೇಕೆಂದಿರುವ ಮೂರನೇ ಸೂಚನೆ ಎಂದರೆ, ತಾಲ್ಲೂಕು ಕೇಂದ್ರಗಳಲ್ಲಿ ಕೆಲವು ಸಂಶೋಧನಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದ್ದು, ಅಕ್ಕಿ, ತಂಬಾಕು ಮುಂತಾದವುಗಳಿಗೆ ಸಂಬಂಧಪಟ್ಟಂತೆ ಸಂಶೋಧನಾ ಪ್ರಯೋಗಗಳು ನಡೆಯುತ್ತಿವೆ. ಈ ಪ್ರಯೋಗಗಳನ್ನು ಕೃಷಿ ಅಧಿಕಾರಿಗಳೇ ನಿರ್ವಹಿಸುತ್ತಿದ್ದಾರೆ. ಪರಿಣಾಮವೇನೆಂದರೆ, ಅವರ ನಂತರ ಬರುವವರಿಗೆ ಈ ಕಾರ್ಯದ ಮುಂದುವರಿಕೆ ಸಹಾಯವಾಗುವುದಿಲ್ಲ ಮತ್ತು ಒಂದು ವೇಳೆ ಪ್ರಯೋಗಗಳು ಪ್ರಗತಿಯಲ್ಲಿದ್ದರೆ,

ಅದರಿಂದ ಸಮಯ ವ್ಯರ್ಥವಾಗುವುದಲ್ಲದೆ, ದಕ್ಷತೆಯಲ್ಲಿ ನಷ್ಟವೂ ಉಂಟಾಗುತ್ತದೆ. ಆದ್ದರಿಂದ, ಈ ಕೃಷಿ ಅಧಿಕಾರಿಗಳ ವರ್ಗಾವಣೆಗೆ ಯಾವುದೇ ವಿಶೇಷ ಕಾರಣಗಳು ಇರದ ಹೊರತು ಅವರನ್ನು ಸ್ಥಳದಿಂದ ಸ್ಥಳಕ್ಕೆ ವರ್ಗಾಯಿಸಬಾರದು ಮತ್ತು ಅವರನ್ನು ಆ ಒಂದು ನಿರ್ದಿಷ್ಟ ಸಂಶೋಧನಾ ಕೇಂದ್ರದಲ್ಲಿಯೇ ಅಂಥ ನಿರ್ದಿಷ್ಟ ಪ್ರಯೋಗವು ಮುಗಿಯುವವರೆಗೂ ಮುಂದುವರೆಸಬೇಕೆಂದು ಸೂಚಿಸುತ್ತೇನೆ.

ಇವುಗಳು, ನಾನು ಮಾಡಬೇಕೆಂದಿದ್ದ ಕೆಲವು ಸಲಹೆ–ಸೂಚನೆಗಳು.

ಕೊನೆಯದಾಗಿ, ಆಹಾರ ಸಮಸ್ಯೆಯನ್ನು ಯಶಸ್ವಿಯಾಗಿ ಪೂರೈಸಿದ್ದಕ್ಕಾಗಿ ಮಾನ್ಯ ಕೃಷಿ ಸಚಿವರನ್ನು ಅಭಿನಂದಿಸುತ್ತೇನೆ.

(ದಿನಾಂಕ: 7.3.1956)

## ಟಿಪ್ಪಣಿ

ಕೃಷಿ ಇಲಾಖೆ ಕುರಿತು ನಡೆದ ಚರ್ಚೆಯಲ್ಲಿ ಭಾಗವಹಿಸಿದ ಕೌಜಲಗಿಯವರು ವ್ಯವಸಾಯ ಮತ್ತು ಗ್ರಾಮೀಣ ಆರ್ಥಿಕತೆಯ ಪೋಷಕ ಶಕ್ತಿಯಾದ ಪಶುಸಂಗೋಪನೆಯನ್ನು ಕುರಿತು ಕೆಲವು ಸಲಹೆಗಳನ್ನು ಮಾಡಿದರು. ಅವುಗಳಲ್ಲಿ ಪಶುಚಿಕಿತ್ಸಾಲಯಗಳನ್ನು ತೆರೆಯುವುದು ಮತ್ತು ಪಶುಚಿಕಿತ್ಸಕರನ್ನು ನೇಮಿಸುವುದು ಮುಖ್ಯ ವಿಷಯವಾಗಿದ್ದಿತು. ಆದರೆ ಕೃಷಿ ಕುರಿತು ಮಾತ್ರ ಮಾತನಾಡಬೇಕೆಂದು ಸಭಾಪತಿಗಳು ಸೂಚನೆ ನೀಡಿದಾಗ ಅವರು ಕೃಷಿ ಅಭಿವೃದ್ಧಿಗಾಗಿ ಬಳಸುತ್ತಿರುವ ಯಂತ್ರೋಪಕರಣಗಳನ್ನು ಕುರಿತು ಮಾತನಾಡಿದರು. ವಿಶೇಷವಾಗಿ ಬುಲ್ಡೋಜರುಗಳನ್ನು ಜಮೀನು ಹದ ಮಾಡಲು ಬಳಸುವ ವಿಚಾರದಲ್ಲಿ ಈ ಹಿಂದೆ ಅವರು ಹೇಳಿದ್ದ ವಿಚಾರಗಳನ್ನು ಪುನರ್‌ಪ್ರತಿಪಾದಿಸಿದರು.

# ಶಿಕ್ಷಣದ ಅಭಿವೃದ್ಧಿ ಬಗ್ಗೆ

1956

**ಶ್ರೀ ಹೆಚ್.ವಿ. ಕೌಜಲಗಿ** (ಪರಸಗಡ) – ಮಾನ್ಯ ಸಭಾಧ್ಯಕ್ಷರೇ, ಶಿಕ್ಷಣದ ವಿಷಯದಲ್ಲಿ ಮಾಡಲಾದ ಬೇಡಿಕೆಯುನನ್ನು ನಾನು ಬೆಂಬಲಿಸುತ್ತೇನೆ, ಮತ್ತು ಶಿಕ್ಷಣ ನೀತಿಯು ಸಮರ್ಥವಾಗಿರುವುದು ಮಾತ್ರವಲ್ಲದೆ ವರ್ಷದಿಂದ ವರ್ಷಕ್ಕೆ ಪ್ರಗತಿ ಹೊಂದುತ್ತಿದೆ ಎಂದು ಹೇಳಲು ನನಗೆ ಸಂತೋಷವಾಗುತ್ತಿದೆ. 1946ನೇ ವರ್ಷದಲ್ಲಿ ಈ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಲಾಯಿತು ಮತ್ತು ಕಳೆದ 4ರಿಂದ 5 ವರ್ಷಗಳ ಅವಧಿಯಲ್ಲಿ ಮಾಡಿರುವ ಪ್ರಗತಿಯನ್ನು ನಾವು ಪರಿಗಣನೆಗೆ ತೆಗೆದುಕೊಂಡರೆ, ಯಾವುದೇ ರಾಜ್ಯಕ್ಕಿಂತ ನಾವು ಮುಂದಿದ್ದೇವೆ ಎಂಬುದನ್ನು ನೋಡಬಹುದು. ಇನ್ನೊಂದು ದಿನ ಮಾನ್ಯ ಸದಸ್ಯರಾದ ಡಾ: ಅಮುಲು ದೇಸಾಯಿಯವರು, ಶಿಕ್ಷಣಕ್ಕಾಗಿ ನಾವು ಸುಮಾರು 16 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದರೂ ನಮ್ಮ ರಾಜ್ಯವು ರಾಜ್ಯಗಳ ಪಟ್ಟಿಯಲ್ಲಿ ನಾಲ್ಕನೆಯ ಸ್ಥಾನದಲ್ಲಿ ನಿಲ್ಲುತ್ತದೆ ಎಂಬುದಾಗಿ ಹೇಳಿದ್ದಾರೆ. ಇದು ಹೋಲಿಕೆ ಮಾಡುವ ಕ್ರಮವಲ್ಲ. ನಿರ್ದಿಷ್ಟ ರಾಜ್ಯದಲ್ಲಿ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಾವು ನೋಡಬೇಕಾಗಿರುತ್ತದೆ. ಇವರು ಉದಾಹರಣೆ ಕೊಟ್ಟ ಇತರೆ ರಾಜ್ಯಗಳು ಶಿಕ್ಷಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ನಮಗಿಂತ ಮುಂದಿರಹುದು – ಆದರೆ ಆಗ ಇವುಗಳು ಇತರೆ ಕಾರ್ಯಕ್ಷೇತ್ರಗಳಲ್ಲಿಯೂ ಸಹ ಬಾಂಬೆ ರಾಜ್ಯಕ್ಕಿಂತ ಮುಂದಿವೆಯೇ ಎಂಬುದನ್ನು ನಾವು ಪರಿಗಣಿಸಿರುವುದಿಲ್ಲ. ಅಲ್ಲದೆ, ಅಂತಹ ರಾಜ್ಯಗಳು ಸಣ್ಣ ರಾಜ್ಯಗಳಾಗಿದ್ದು ಅಲ್ಲಿ ತೀವ್ರವಾದ ದೃಢ ಪ್ರಯತ್ನಗಳನ್ನು ಮಾಡಲಾಗಿರುವ ಸಾಧ್ಯತೆಯು ಇರುತ್ತದೆ ಎಂಬುದಾಗಿ ನಾನು ಭಾವಿಸಿದ್ದೇನೆ.

ಮಾನ್ಯರೇ, ಈಗಾಗಲೇ ಹಲವಾರು ಮಾನ್ಯ ಸದಸ್ಯರುಗಳು ಈ ವಿಷಯದ ಬಗ್ಗೆ ಮಾತನಾಡಿರುವುದರಿಂದ, ನಾನು ಮತ್ತೆ ಇದನ್ನು ಮಾತನಾಡುವ ಅಗತ್ಯವಿಲ್ಲ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ನಿಗದಿತ ಸಮಯದೊಳಗೆ ನಾನು ಕೆಲವು ಸಲಹೆಗಳನ್ನು ನೀಡಿರುವ ಬಗ್ಗೆ ನನಗೆ ಸ್ವತಃ ತೃಪ್ತಿ ಇದೆ.

ಸಾಮಾಜಿಕ ಶಿಕ್ಷಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ ನಮ್ಮ ರಾಜ್ಯವು ಸಾಧಿಸಿರುವ ಪ್ರಗತಿಯು ತೃಪ್ತಿಕರವಾಗಿದೆ. "ಚಟುವಟಿಕೆಗಳ ಸ್ಥೂಲಚಿತ್ರ"ದಲ್ಲಿ ನೀಡಲಾದ ಅಂಕಿ-ಅಂಶಗಳಿಂದ ಪ್ರತಿವರ್ಷವು ಸುಮಾರು 1,70,000 ವಯಸ್ಕರು ಸಾಕ್ಷರರಾಗುತ್ತಿದ್ದರೆಂಬುದನ್ನು ನೋಡಬಹುದು. ವಯಸ್ಕರು ಶಿಕ್ಷಣದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿದ್ದು, ಎಲ್ಲಾ ಕಡೆಯೂ ಶಾಲೆಗಳು ಆಕರ್ಷಣೀಯ ಉಗಮ ಸ್ಥಾನಗಳಾಗುತ್ತಿವೆ ಮತ್ತು ಅಲ್ಲಿ ಹಾಜರಾತಿಯೂ ಸಹ ಪ್ರಗತಿದಾಯಕವಾಗಿದೆ. ಆದರೂ ನಾನು ಮಹಿಳಾ ವಯಸ್ಕರ ಶಿಕ್ಷಣಕ್ಕೆ ಸಮಬಂಧಪಡುವಷ್ಟರಮಟ್ಟಿಗೆ, ಹೇಳಬಹುದಾದರೆ ಪ್ರಗತಿಯು ಸರ್ವಥಾ ಅಷ್ಟೊಂದು ಹರ್ಷದಾಯಕವಾಗಿಲ್ಲ. ಅಲ್ಲಿ ಕೆಲವು

ಪಾರಂಪರ್ಯವಾದ ತೊಂದೆಗಳಿವೆ. ಉಹದಾಹರಣೆಗೆ, ನಮ್ಮ ಮಹಿಳೆಯರು ಅವರ ಕೌಟುಂಬಿಕ ಕೆಲಸಗಳನ್ನು ಮಾಡಬೇಕಾಗಿದ್ದು ಅವರು ಮನೆಯಿಂದ ಹೊರಗೆ ಹೋಗುವಂತಿ . ಇಲ್ಲಿ ಸರ್ಕಾರವು ಮಹಿಳಾ ವಯಸ್ಕರನ್ನು ವಿದ್ಯಾವಂತರನ್ನಾಗಿ ಮಾಡುವ ಹಾಗೆ ತನ್ನ ಕಾರ್ಯನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ಸರ್ಕಾರವು ಮಹಿಳಾ ವಯಸ್ಕರರನ್ನು ವಿದ್ಯಾವಂತರನ್ನಾಗಿ ಮಾಡುವ ದೃಷ್ಟಿಯಲ್ಲಿ ಮಹಿಳಾ ಕಾರ್ಯಕರ್ತರನ್ನು ನೇಮಕ ಮಾಡಬೇಕೆಂಬುದು ನನ್ನ ನಮ್ರ ಸಲಹೆಯಾಗಿರುತ್ತದೆ. ಆಗ ಈ ದಿಶೆಯಲ್ಲಿ ಪ್ರಗತಿಯನ್ನು ಸಾಧಿಸಬಹುದಾಗಿದೆ. ಇಲ್ಲದಿದ್ದರೆ ನಮ್ಮ ಪ್ರಗತಿಯು ಪುರುಷ ವಯಸ್ಕರಿಗೆ ಸೀಮಿತಗೊಳ್ಳುತ್ತದೆ ಮತ್ತು ಮಹಿಳಾ ವಯಸ್ಕರು ಅನಕ್ಷರಸ್ಥರಾಗಿಯೇ ಉಳಿಯುತ್ತಾರೆ. ಮಹಿಳಾ ವಯಸ್ಕರ ಶಿಕ್ಷಣವು ಪುರುಷ ವಯಸ್ಕರ ಶಿಕ್ಷಣದಷ್ಟೇ ಪ್ರಮುಖವಾದುದು ಎಂಬುದನ್ನು ನಾವು ಮರೆಯಬಾರದು.

ಮತ್ತೊಂದು ಅಂಶ ಏನೆಂದರೆ ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿರುತ್ತದೆ. ಜಿಲ್ಲಾ ಶಾಲಾ ಮಂಡಳಿಗಳಿಂದ ಪ್ರಸ್ತಾವವನ್ನು ಕಳುಹಿಸಿದಾಗ ನಿವೇಶನಗಳನ್ನು ನೀಡುವಲ್ಲಿ ಹೆಚ್ಚು ವಿಳಂಬ ಉಂಟಾಗುತ್ತದೆ ಎಂಬುದು ನನ್ನ ಅನುಭವವಾಗಿದೆ. ಜಿಲ್ಲಾ ಶಾಲಾ ಕಟ್ಟಡಗಳ ಸಮಿತಿಯು ತನ್ನ ಪ್ರಸ್ತಾವವನ್ನು ಸಲ್ಲಿಸಿದ್ದಾಗ್ಯೂ, ಅವರು ಆವಶ್ಯಕ ಮಂಜೂರಾತಿ ಮತ್ತು ಅನುಮೋದನೆಯನ್ನು ಪಡೆಯುವುದಕ್ಕೆ 6ರಿಂದ 8 ತಿಂಗಳುಗಳು ಕಾಯಬೇಕಾಗುತ್ತದೆ. ಇದರಿಂದ ಕೆಲಸಕ್ಕೆ ಹೆಚ್ಚು ಅಡಚಣೆ ಉಂಟಾಗುತ್ತದೆ. ಉದಾಹರಣೆಗೆ; ಸುಮಾರು 3ರಿಂದ 4 ಲಕ್ಷ ರೂಪಾಯಿಗಳಷ್ಟು ಹಣವನ್ನು ಮಂಜೂರು ಮಾಡಲಾಗಿರುವ ಜಿಲ್ಲೆಗಳಾದ ಬಿಜಾಪುರ ಮತ್ತು ಬೆಳಗಾವಿಯಲ್ಲಿ ಹೊಸ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಪ್ರಸ್ತಾವಗಳನ್ನು ಬಹಳ ಹಿಂದೆಯೇ ಮಾಡಲಾಗಿದ್ದು ಇವುಗಳು ಹಲವಾರು ತಿಂಗಳುಗಳಿಂದ ಅದರ ಅನುಮೋದನೆ ಮತ್ತು ಮಂಜೂರಾತಿಯ ನಿರೀಕ್ಷೆಯಲ್ಲಿವೆ. ಈ ಕಾರ್ಯಕ್ಷೇತ್ರದಲ್ಲಿ ಸ್ವಲ್ಪಮಟ್ಟಿನ ಅಧಿಕಾರ ವಿಕೇಂದ್ರೀಕರಣದ ಅಗತ್ಯವಿದೆ.

ಎರಡನೆಯದಾಗಿ, ಸ್ವಾಮಿ, ಶಾಲಾ ಕಟ್ಟಡಗಳ ದುರಸ್ತಿಗಳ ಯೋಜನೆಗಳು ಮತ್ತು ಅಂದಾಜುಗಳಿಗೆ ಸಂಬಂಧಿಸಿದಂತೆ, ವಿವಿಧ ಜಿಲ್ಲಾ ಶಾಲಾ ಮಂಡಳಿಗಳ ಮೂಲಕ ಕಳುಹಿಸಿದ ಯೋಜನೆಗಳು ಮತ್ತು ಅಂದಾಜುಗಳಿಗೆ ಜಿಲ್ಲಾ ಶಿಕ್ಷಣ ಕಚೇರಿಯು ಅನುಮೋದನೆಯನ್ನು ನೀಡಬೇಕಾಗುತ್ತದೆ. ಈ ಸಂಬಂಧವಾಗಿ, ಸದನದಲ್ಲಿ ಸಾಕಷ್ಟು ಮಾತನಾಡಲಾಗಿದೆ. ಈ ಬಗ್ಗೆ ಹೆಚ್ಚಿನ ವಿಳಂಬವು ಆಗಿದ್ದು, ಪ್ರಸ್ತುತ ಕಾರ್ಯನೀತಿಯನ್ನು ಬದಲಾಯಿಸಬೇಕೆಂದು ಹಲವಾರು ಶಾಲಾ ಮಂಡಳಿಗಳ ಪರವಾಗಿ ಒತ್ತಾಯ ಮಾಡಲಾಗಿರುತ್ತದೆ. ಸಹಜವಾಗಿಯೇ, ಪ್ರಾಥಮಿಕ ಶಿಕ್ಷಣ ಅಧಿನಿಯಮಕ್ಕೆ ಪ್ರಾರಂಭದಲ್ಲಿ ತಿದ್ದುಪಡಿ ಮಾಡಿದಾಗ, ಪ್ರತಿಯೊಂದು ಶಾಲಾ ಮಂಡಳಿಯು ತನ್ನ ಸ್ವಂತ ಇಂಜಿನಿಯರಿಂಗ್ ಸಿಬ್ಬಂದಿಯನ್ನು ಹೊಂದಿರಬೇಕೆಂದು ಉಪಬಂಧ ಕಲ್ಪಿಸಲಾಗಿತ್ತು. ಆದರೆ, ಹಣಕಾಸಿನ ತೊಂದರೆಗಳು ಮತ್ತು ಇತರೆ ತೊಂದರೆಗಳ ಕಾರಣದಿಂದ ಯಾವುದೇ ಶಾಲಾ ಮಂಡಳಿಯು ತನ್ನ ಸ್ವಂತ ಇಂಜಿನಿಯರಿಂಗ್ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಆದ್ದರಿಂದ ಈ ಯೋಜನೆಗಳು ಮತ್ತು ಅಂದಾಜುಗಳನ್ನು ತನ್ನ ಸ್ವಂತ ಸಿಬ್ಬಂದಿಯಿಂದ

ಸಿದ್ಧಪಡಿಸಲಾಗಲಿಲ್ಲ. ಆದರೆ ಜಿಲ್ಲಾ ಸ್ಥಳೀಯ ಮಂಡಳಿಯ ಇಂಜಿನಿಯರ್‌ಗಳಿಂದ ಸಿದ್ಧಪಡಿಸಲಾಗಿದ್ದು ಇವುಗಳಿಗೆ ಜಿಲ್ಲಾ ಶಿಕ್ಷಣ ಕಚೇರಿಯ ಅನುಮೋದನೆಯು ಬೇಕಾತ್ತು. ಈ ಅನುಮೋದನೆಯನ್ನು ಪಡೆಯುವದಲ್ಲಿ ಹೆಚ್ಚಿನ ಸಮಯವನ್ನು ಕಳೆದಿದ್ದು, ಏತನ್ಮಧ್ಯೆ, ದುರಸ್ಥಿ ಕಾರ್ಯವನ್ನು ಮಾಡಲಾಗದೆ ಇದರಿಂದಾಗಿ ಹೆಚ್ಚಿನ ಹಾನಿಯು ಉಂಟಾಯಿತು. ಶಾಲಾ ಮಂಡಳಿಗಳು ಇಂಜಿನಿಯರಿಂಗ್ ಸಿಬ್ಬಂದಿಯನ್ನು ಹೊಂದಿರದ ಸಂದರ್ಭದಲ್ಲಿ ಈ ವಿಷಯವನ್ನು ಇಡಿಯಾಗಿ ಜಿಲ್ಲಾ ಸ್ಥಳೀಯ ಮಂಡಳಿಯ ಇಂಜಿನಿಯರ್‌ಗಳಿಗೆ ಬಿಟ್ಟುಬಿಡಬೇಕು ಮತ್ತು ಯೋಜನೆಗಳು ಮತ್ತು ಅಂದಾಜುಗಳಿಗೆ ಅನುಮೋದನೆಯು ಅಗತ್ಯವಾಗಿದ್ದರೆ ಇದಕ್ಕೆ ಲೋಕೋಪಯೋಗಿ ಇಲಾಖೆಯ ಇಂಜಿನಿಯರುಗಳ ಅನುಮೋದನೆ ಬೇಕಾಗುತ್ತೆ ಎಂಬುದಾಗಿ ನಾನು ಸೂಚಿಸುತ್ತೇನೆ.

ಇನ್ನೊಂದು ವಿಷಯವು ಹೀಗಿದೆ. ಸರ್ಕಾರವು ಪ್ರೌಢಶಾಲೆಗಳಲ್ಲಿನ ಪ್ರಯೋಗಾಲಯಗಳಿಗಾಗಿ ಸಾಮಗ್ರಿಗಳನ್ನು ಖರೀದಿಸುವ ಉದ್ದೇಶಕ್ಕಾಗಿ ಸ್ವಲ್ಪ ಮೊತ್ತವನ್ನು ಮಂಜೂರು ಮಾಡಲು ಬಹಳ ದಯಾಪರತೆಯನ್ನು ತೋರಿಸಿರುತ್ತದೆ. ಈಗ, ಈ ನಿರ್ದಿಷ್ಟ ವಿಷಯದಲ್ಲಿ, ತೊಂದರೆ ಇರುವುದಾಗಿ ನನಗೆ ಕಂಡುಬಂದಿದ್ದು ಶೈಕ್ಷಣಿಕ ಪರೀಕ್ಷಕರಿಗೂ ಸಹ ಇದೆ ತೊಂದರೆ ಇರುವುದಾಗಿ ಕಂಡುಬಂದಿದ್ದು, ಅದು ಸರ್ಕಾರದ ನಿರ್ದಿಷ್ಟ ನಿರ್ಣಯದ ಅರ್ಥವಿವರಣೆಯ ತೊಂದರೆಯಾಗಿರುವಂತೆ ಕಾಣುತ್ತದೆ. ಉದಾಹರಣೆಗೆ, ದೃಶ್ಯ ಶಿಕ್ಷಣದ ಉದ್ದೇಶಕ್ಕಾಗಿ ಒಂದು ಪ್ರೊಜೆಕ್ಟರ್‌ನ ಅಗತ್ಯವಿರುತ್ತದೆ. ಈ ಸಾಮಗ್ರಿಗಳು ಶಾಲೆಗಳಿಗೂ ಬೇಕಾಗುತ್ತವೆ. ಪ್ರೌಢಶಾಲೆಗಳು ಅಂಥ ಸಾಮಗ್ರಿಗಳನ್ನು ಇವುಗಳಿಗೆ ಮಂಜೂರು ಮಾಡಿದ ಅನುದಾನಗಳಿಂದ ಖರೀದಿಸಬಹುದೇ ಎಂಬ ಪ್ರಶ್ನೆ ಉದ್ಭವಿಸಿರುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ, ಇಲಾಖೆಯು, ಸರ್ಕಾರದ ನಿರ್ಣಯವು ಅಂಥ ಸಾಮಗ್ರಿಗಳನ್ನು ಖರೀದಿಸುವುದಕ್ಕೆ ಅನುಮತಿಯನ್ನು ನೀಡುವುದಿಲ್ಲ ಎಂಬುದಾಗಿ ಅರ್ಥವಿವರಣೆ ನೀಡಿದರೆ ಇತರೆ ಜಿಲ್ಲೆಗಳಲ್ಲಿ ಶಾಲೆಗಳ ಅಧಿಕಾರ ವ್ಯಾಪ್ತಿಯೊಳಗೆ ಇದನ್ನು ಖರೀದಿಸಬಹುದು ಎಂಬುದಾಗಿ ನಿರ್ಣಯದಲ್ಲಿ ಅರ್ಥವಿವರಣೆ ಮಾಡಲಾಗಿರುತ್ತದೆ. ಇದರಿಂದಾಗಿ ಶಾಲೆಗಳಿಗೆ ಸರ್ಕಾರದಿಂದ ಮಂಜೂರು ಮಾಡಿದ ಅನುದಾನಗಳು ಇರುವುದರಿಂದ ಶಾಲೆಗಳು ಆ ಸಾಮಗ್ರಿಗಳನ್ನು ಖರೀದಿಸಲು ಸಿದ್ಧವಾಗಿರುತ್ತವೆಯೇ ಎಂಬುದನ್ನು ಸರ್ಕಾರವು ಸ್ಪಷ್ಟಪಡಿಸಬೇಕೆಂದು ನಾನು ಸೂಚಿಸುತ್ತೇನೆ. ಆದರೆ ಈ ಅರ್ಥ ವಿವರಣೆಯ ಕಾರಣದಿಂದ ಇದನ್ನು ಖರೀದಿಸುವ ವಿಷಯದಲ್ಲಿ ವಿಳಂಬವು ಆಗಿರುತ್ತದೆ.

ಶುಲ್ಕ ವಸೂಲಿಯ ಸಂಬಂಧವಾಗಿ, ಅನೇಕ ಮಾನ್ಯ ಸದಸ್ಯರುಗಳು ಈ ವಿಷಯ ಕುರಿತು ಮಾತನಾಡಿದ್ದಾರೆ, ಕೆಲವರು ಶುಲ್ಕ ವಸೂಲಿಯನ್ನು ಬೆಂಬಲಿಸಿದರೆ ಮತ್ತೆ ಕೆಲವರು ಇದನ್ನು ವಿರೋಧಿಸಿದ್ದಾರೆ. ನನಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ನನ್ನ ಅನುಭವದಲ್ಲಿ ಅಷ್ಟಾದರೂ ಗ್ರಾಮೀಣ ಪ್ರದೇಶಗಳಲ್ಲಿ, ಮಹಿಳೆಯರ ಅಥವಾ ಬಾಲಕಿಯರ ಶಿಕ್ಷಣವು ಬಾಧೆಗೀಡಾಗಿರುತ್ತದೆ. ಆದುದರಿಂದ, ಬಾಲಕಿಯರ ಶಾಲೆಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ, ಇವುಗಳಿಗೆ ಶುಲ್ಕ ಸಂದಾಯ ಮಾಡುವುದರಿಂದ ವಿನಾಯತಿ ನೀಡಬೇಕೆಂದು ನಾನು ಸೂಚಿಸುತ್ತೇನೆ.

ಪಠ್ಯ ಪುಸ್ತಕಗಳ ಬಗ್ಗೆ ಕಡೆಯ ಪ್ರಶ್ನೆಗೆ ಬರುವುದಾದರೆ, ನಾನು ಹೆಚ್ಚು ಮಾತನಾಡುವ ಅಗತ್ಯವಿಲ್ಲ. ಒಮ್ಮೆ ಪಠ್ಯ ಪುಸ್ತಕವನ್ನು ನಿಗದಿಪಡಿಸಿದರೆ, ಅದನ್ನು ಕನಿಷ್ಠಪಕ್ಷ ಐದು ವರ್ಷಗಳವರೆಗೆ ಮುಂದುವರೆಸಿಕೊಂಡು ಹೋಗಬೇಕೆಂಬುದಾಗಿ ನಾನು ಸರ್ಕಾರಕ್ಕೆ ಸಲಹೆ ನೀಡುತ್ತೇನೆ. ತದನಂತರ, ಪಠ್ಯ ಪುಸ್ತಕಗಳು ನಿರ್ದಿಷ್ಟ ಜಿಲ್ಲೆಯಲ್ಲಿ ಅಥವಾ ನಿರ್ದಿಷ್ಟ ಪ್ರದೇಶದಲ್ಲಿ ಒಂದೇ ರೀತಿಯಲ್ಲಿರಬೇಕೆಂದು ನಾನು ಸೂಚಿಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಪಠ್ಯಪುಸ್ತಕಗಳು ತುಂಬಾ ದುಬಾರಿಯಾಗಿದ್ದು, ಇವುಗಳು ಸಾಮಾನ್ಯ ಅಥವಾ ಬಡ ಜನರ ಆದಾಯಕ್ಕೆ ಮೀರಿದುದಾಗಿರುತ್ತವೆ. ಒಬ್ಬ ಸಾಮಾನ್ಯ ವ್ಯಕ್ತಿ ತನ್ನ ಮಗನನ್ನು ಶಾಲೆಗೆ ಕಳುಹಿಸಬೇಕಾದರೆ ಸುಮಾರು 20 ರೂ. ಅಥವಾ 25 ರೂ.ಗಳನ್ನು ಖರ್ಚು ಮಾಡಬೇಕಾಗಿದೆ. ಸರ್ಕಾರವು ಕಾಗದದ ನಿರ್ದಿಷ್ಟ ಪ್ರಮಾಣ ಮತ್ತು ಕಾಗದದ ನಿರ್ದಿಷ್ಟ ಗುಣಮಟ್ಟವನ್ನು ಗೊತ್ತುಪಡಿಸಿದ್ದು, ಇದರಿಂದಾಗಿ, ಪಠ್ಯ ಪುಸ್ತಕಗಳು ತುಂಬಾ ದುಬಾರಿಯಾಗಿವೆ. ಪ್ರತಿ ವರ್ಷವೂ ಪಠ್ಯಪುಸ್ತಕಗಳನ್ನು ಬದಲಾವಣೆ ಮಾಡಿದರೆ, ಅವುಗಳ ಮೇಲೆ ಹೆಚ್ಚಿನ ಹಣವನ್ನು ಖರ್ಚು ಮಾಡಲು ವಿದ್ಯಾರ್ಥಿಗಳ ತಂದೆ–ತಾಯಿಯರಿಗೆ ತುಂಬಾ ತೊಂದರೆಯುಂಟಾಗುತ್ತದೆ. ಆದ್ದರಿಂದ, ನಾನು ಸರ್ಕಾರವು ಪಠ್ಯ–ಪುಸ್ತಕಗಳ ವಿಷಯದಲ್ಲಿನ ತನ್ನ ಕಾರ್ಯನೀತಿಯನ್ನು ಪುನರ್‌ಪರಿಶೀಲಿಸುವಂತೆ ಕೋರುತ್ತೇನೆ.

ವೈದ್ಯಕೀಯ ಕಾಲೇಜುಗಳಿಗೆ ಸಂಬಂಧಿಸಿದಂತೆ ಕಡೆಯದಾಗಿ ವಿಷಯವನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಈ ಕಾಲೇಜುಗಳಲ್ಲಿ ಪಾಳಿ ವ್ಯವಸ್ಥೆಯನ್ನು ಪ್ರಾರಂಭಿಸಬೇಕೆಂದು ಡಾ: ಅಮುಲ್ ದೇಸಾಯಿಯವರು ಸಲಹೆ ಮಾಡಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ, ಇದು ವಿಚಾರಣೆ ಮಾಡಲು ಯೋಗ್ಯವಾದ ಸಲಹೆಯಾಗಿರುತ್ತದೆ. ಏಕೆಂದರೆ, ನಮ್ಮ ರಾಜ್ಯದಲ್ಲಿ ವೈದ್ಯರ ಅಭಾವ ಬಹಳ ಇದ್ದು, ಇವರಿಗೆ ಹೆಚ್ಚಿನ ಬೇಡಿಕೆ ಇದೆ. ಪ್ರತಿ ವರ್ಷವೂ ಹೆಚ್ಚು ಸಂಖ್ಯೆಯ ಅರ್ಹ ಮತ್ತು ಸಂಪೂರ್ಣ ವಿದ್ಯಾರ್ಹತೆಯುಳ್ಳ ವಿದ್ಯಾರ್ಥಿಗಳು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶವನ್ನು ಬಯಸಿ ಪ್ರವೇಶ ಸಿಗದೆ ನಿರಾಶರಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಕೆಲವು ವಿದ್ಯಾರ್ಥಿಗಳು ಇತರೆ ರಾಜ್ಯಗಳಿಗೂ ಕೂಡ ಹೋಗಿ ಅಲ್ಲಿ 3,000 ರೂ.ಗಳಷ್ಟು ವಂತಿಗೆಯನ್ನು ಸಂದಾಯ ಮಾಡಿ ಆ ಮೂಲಕ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಹವಣಿಸುತ್ತಿದ್ದಾರೆ. ಇದರಿಂದ ವಂತಿಗೆಯನ್ನು ನೀಡಲು ಸಾಧ್ಯವಾಗದಿರುವ ಆದರೆ ನಿಜವಾಗಿಯೂ ಪ್ರತಿಭಾವಂತರಾಗಿರುವ ಬಡ ವಿದ್ಯಾರ್ಥಿಗಳು ಬವಣೆ ಪಡೆಯುವಂತಾಗಿದೆ. ನಮ್ಮ ರಾಜ್ಯ ಸರ್ಕಾರವು ಯಾವುದೇ ಹೊಸ ವೈದ್ಯಕೀಯ ಕಾಲೇಜನ್ನು ತೆರೆಯಲು ಸಮರ್ಥವಾಗಿಲ್ಲದಿರುವುದರಿಂದ, ಮಾನ್ಯ ಸದಸ್ಯರಾದ ಡಾ: ಅಮುಲ್ ದೇಸಾಯಿಯವರು ಮಾಡಿದ ಸಲಹೆಯು ವಿಚಾರಣೆ ಮಾಡಲು ಯೋಗ್ಯವಾಗಿರುತ್ತದೆ. ಸರ್ಕಾರವು ಈ ಸಲಹೆಯನ್ನು ಪರಿಶೀಲಿಸಬೇಕೆಂದು ನಾನು ಸೂಚಿಸುತ್ತೇನೆ.

ಈ ಅಭಿಪ್ರಾಯಗಳನ್ನು ತಿಳಿಸಿ ನನ್ನ ಸ್ಥಾನದಲ್ಲಿ ವಿಶ್ರಮಿಸುತ್ತೇನೆ.

(ದಿನಾಂಕ: 17.03.1956)

# ಟಿಪ್ಪಣಿ

ಇವರಿಗೆ ಶಿಕ್ಷಣದ ಮೇಲೆ ತುಂಬಾ ಕಾಳಜಿ. ತನ್ನಂತೆ ಯುವ ಜನಾಂಗ ಶಿಕ್ಷಣದ ಮೂಲಕ ಮುಂದೆ ಬರಬೇಕೆಂಬ ಹಂಬಲ. ಅದಕ್ಕಾಗಿ ಶಿಕ್ಷಣದ ಅಭಿವೃದ್ಧಿಗೆ ಹೆಚ್ಚು ಹಣವನ್ನು ಒದಗಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಇವರು ಮಹಿಳೆಯರು ಅದರಲ್ಲೂ ವಯಸ್ಕ ಮಹಿಳೆಯರು ಅಕ್ಷರಸ್ಥರಾಗಬೇಕಾದರೆ ಅವರಿಗೆ ಬೋಧಿಸಲು ಶಿಕ್ಷಕಿಯರನ್ನು ನೇಮಿಸಬೇಕೆಂದು ಸಲಹೆ ಮಾಡಿದರು.

ಶಾಲೆಗಳಿಗೆ ಕಟ್ಟಡ ನಿರ್ಮಿಸಲು ಪಡೆಯಬೇಕಾದ ಮಂಜೂರಾತಿಗೆ ಸಂಬಂಧಿಸಿದ ನಿಯಮಗಳು ಜಟಿಲವಾಗಿವೆ. ಅವನ್ನು ಸಡಿಲಿಸಿ ಸ್ಥಳೀಯ ಸಂಸ್ಥೆಗಳಿಗೆ ಈ ಬಗ್ಗೆ ಹೆಚ್ಚಿನ ಅಧಿಕಾರ ನೀಡಬೇಕೆಂದು ಸಲಹೆ ಮಾಡಿದರು. ಪ್ರಯೋಗಾಲಯಗಳಿಗೆ ಸಲಕರಣೆಗಳನ್ನು ಖರೀದಿಸಲು ಶಾಲೆಗಳಿಗೆ ಸೂಕ್ತ ಅಧಿಕಾರವಿಲ್ಲದೆ ಅದಕ್ಕಾಗಿ ಮಂಜೂರಾದ ನಿಧಿಯನ್ನು ಬಳಸಿಕೊಳ್ಳಲು ಅವುಗಳಿಗೆ ಸಾಧ್ಯವಾಗದಿರುವುದರ ಬಗ್ಗೆ ಸರ್ಕಾರದ ಗಮನ ಸೆಳೆದರು. ಅವರು ದೂರದೃಷ್ಟಿಯಿಂದ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಅವರಿಗೆ ಶಾಲೆಗಳಲ್ಲಿ ಬೋಧನ ಶುಲ್ಕವನ್ನು ವಿನಾಯಿತಿಗೊಳಿಸಬೇಕೆಂದು• ಮಹತ್ತರವಾದ ಸಲಹೆಯನ್ನು ನೀಡಿದರು.

ಪಠ್ಯ ಪುಸ್ತಕಗಳನ್ನು ಪದೇ ಪದೇ ಬದಲಾಯಿಸಬಾರದು; ಅವನ್ನು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಏಕಪ್ರಕಾರವಾಗಿ ನಿಗದಿಪಡಿಸಬೇಕು ಹಾಗೂ ಈ ಪಠ್ಯಪುಸ್ತಕಗಳ ಬೆಲೆ ದುಬಾರಿಯಾಗದಂತೆ ನೋಡಿಕೊಳ್ಳಬೇಕು ಎಂಬ ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದರು. ವೈದ್ಯಕೀಯ ಕಾಲೇಜುಗಳ ಕೊರತೆ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ಅಲ್ಲಿ ಪ್ರವೇಶ ನೀಡದಿರುವುದರ ಬಗ್ಗೆ ಹಾಗೂ ಆ ಕಾಲದಲ್ಲಿ 3000 ರೂ.ಗಳ ವಂತಿಗೆ ಪಡೆಯುತ್ತಿದ್ದುದರ ಬಗ್ಗೆ ಸರ್ಕಾರದ ಗಮನ ಸೆಳೆದು ಈ ಶಿಕ್ಷಣದ ವಿಸ್ತರಣೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದರು.

# ರಾಜ್ಯಗಳ ಪುನರ್ವಿಂಗಡನಾ ಮಸೂದೆ ಕುರಿತ ಚರ್ಚೆ

1956

**ಶ್ರೀ ಹೆಚ್.ವಿ. ಕೌಜಲಗಿ :** ಈ ವಿಷಯವನ್ನು ಪ್ರಾರಂಭಿಸಿದರು.

**ಸಭಾಧ್ಯಕ್ಷರು :** ಸನ್ಮಾನ್ಯ ಸದಸ್ಯರುಗಳು ಸದನದ ಮುಂದಿರುವ ತಿದ್ದುಪಡಿಗೆ ಸ್ವತಃ ತಾವು ನಿರ್ಬಂಧಿತರಾಗಿರಬೇಕೆಂದು ನಾನು ಒತ್ತಿ ಹೇಳುತ್ತೇನೆ. ಇವರು ಈಗಾಗಲೇ ಸಾಕಷ್ಟು ಚರ್ಚೆ ಮಾಡಲಾಗಿರುವಂತಹ ಇತರೆ ವಿಷಯಗಳನ್ನು ಅವಲಂಬಿಸುವ ಅಗತ್ಯವಿಲ್ಲ.

**ಶ್ರೀ ಹೆಚ್.ವಿ. ಕೌಜಲಗಿ :** ಸ್ವಾಮಿ, ನಾನು, ಇಬ್ಬರು ಮಾನ್ಯ ಸದಸ್ಯರುಗಳು ಮುಂದೆ ತಂದಿರುವ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ. ಕಂದಾಯ ಗ್ರಾಮವನ್ನು ಒಂದು ಘಟಕ ಎಂಬುದಾಗಿ ತೆಗೆದುಕೊಂಡಿರುವ ಮೂಲಕ, ಗ್ರಾಮದ ಆಧಾರದ ಮೇಲೆ ಪ್ರದೇಶಗಳ ಹಂಚಿಕೆ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಈ ಪ್ರಶ್ನೆಗೆ ಮೊದಲು ಉತ್ತರ ಕಂಡುಹಿಡಿಯಬಯಸುತ್ತೇನೆ. ಈ ಪ್ರಶ್ನೆಗೆ ಮೊದಲು ಉತ್ತರ ಕಂಡು ಹಿಡಿದರೆ, ಆಗ ತಿದ್ದುಪಡಿಗಳು ನಕಾರಾತ್ಮಕ ಉತ್ತರಗಳಾಗುತ್ತವೆ.

ಮೊದಲನೆಯದಾಗಿ, ಈ ಸಂದರ್ಭದಲ್ಲಿ ಭಾಷೆಯು ಒಂದು ಅಂಶ ಮಾತ್ರವಾಗಿರದಿದ್ದು, ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಸ್ಪಷ್ಟಪಡಿಸುತ್ತೇನೆ. ಈ ತತ್ವದ ಬಗ್ಗೆ ಚರ್ಚಿಸುವಾಗ ರಾಜ್ಯಗಳ ಪುನರ್ರಚನೆ ಆಯೋಗವು ಆಡಳಿತ ಅಪೇಕ್ಷಣೀಯತೆ, ಆರ್ಥಿಕ ಅನುಕೂಲತೆಗಳಂಥ ಅಂಶಗಳನ್ನು ಹಾಗೂ ಸಾಮಾಜಿಕ ಮತ್ತು ಇತರೆ ಅಂಶಗಳನ್ನು ಸಹ ಪರಿಗಣನೆಗೆ ತೆಗೆದುಕೊಂಡಿತ್ತು.

**ಸಭಾಧ್ಯಕ್ಷರು :** ಮಾನ್ಯ ಸದಸ್ಯರು, ತಿದ್ದುಪಡಿ ಸಂಖ್ಯೆ 41ನ್ನು ಗಾಢವಾಗಿ ಓದಿದ್ದರೆ ತಿದ್ದುಪಡಿಯ ಎರಡನೆಯ ಭಾಗದಲ್ಲಿ ಯಾವುದೇ ರೀತಿಯಾಗಿ ಭಾಷೆಯ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ ಎಂಬುದು ಅವರಿಗೆ ಕಂಡುಬರುತ್ತದೆ. ಇದರಲ್ಲಿ ಹೀಗೆ ಹೇಳಿರುತ್ತದೆ:-

"ಗಡಿರೇಖೆ ಆಯೋಗವು ಪಕ್ಕದಲ್ಲಿರುವ ಕಂದಾಯ ಗ್ರಾಮವನ್ನು ಒಂದು ಘಟಕವನ್ನಾಗಿ ಪರಿಗಣಿಸುವ ಮೂಲಕ ಗಡಿ ರೇಖೆಗಳನ್ನು ನಿಗದಿಪಡಿಸತಕ್ಕದ್ದು....".

ಇದನ್ನು ಯಾವುದೇ ರೀತಿಯಾಗಿ ಭಾಷಾ ಸಂಬಂಧವಾದ ಆಧಾರದ ಮೇಲೆ ಪರಿಗಣನೆಗೆ ತೆಗೆದುಕೊಂಡಿಲ್ಲ. ಆದ್ದರಿಂದ, ಮಾನ್ಯ ಸದಸ್ಯರು, ಇವರು ಮಂಡಿಸಿದ ವಾದವು ಸರಿಯಾಗಿರುವುದಿಲ್ಲ ಎಂಬುದನ್ನು ಅರಿತುಕೊಳ್ಳಬೇಕು.

**ಶ್ರೀ ಹೆಚ್.ವಿ. ಕೌಜಲಗಿ :** ಕಂದಾಯ ಗ್ರಾಮವು ಒಂದು ಘಟಕ ಎಂಬುದಾಗಿ ಮೂಲಕ ತತ್ವವಾಗಲು ಸಾಧ್ಯವಿಲ್ಲ ಎಂಬುದನ್ನು ಏಕೆ ಅನ್ವಯಿಸಿಕೊಳ್ಳಬೇಕು ಎಂಬ ನನ್ನ ಅಭಿಪ್ರಾಯಗಳನ್ನು ಮಾತ್ರ ತಮ್ಮ ಮುಂದಿಡುತ್ತೇನೆ. ಏಕೆಂದರೆ, ತಿದ್ದುಪಡಿಯು ಪರೋಕ್ಷವಾಗಿ ..........

**ಸಭಾಧ್ಯಕ್ಷರು :** ಆರ್ಡರ್, ಆರ್ಡರ್.

**ಶ್ರೀ ಹೆಚ್.ವಿ. ಕೌಜಲಗಿ :** ಸ್ವಾಮಿ, ಗ್ರಾಮವನ್ನು ಒಂದು ಘಟಕವಾಗಿ ತೆಗೆದುಕೊಂಡರೆ, ಆಗ ಬಹಳಷ್ಟು ಗೊಂದಲ ಉಂಟಾಗುತ್ತದೆ ಎಂಬುದಾಗಿ ನಾನು ನಿವೇದಿಸುತ್ತೇನೆ.

1757-6

ಈ ವಿಷಯದಲ್ಲಿನ ಕೆಲಸವು ಅಗಾಧವಾಗಿ ಹೆಚ್ಚಾಗುತ್ತದೆ. ಅಷ್ಟೇ ಅಲ್ಲದೆ, ಬಾಂಬೆ ಮತ್ತು ಬೆಳಗಾವಿ ಪ್ರದೇಶಗಳಲ್ಲಿ ಸಂಭವಿಸಿದ ಗಲಭೆಗಳು ಪ್ರತಿಯೊಂದು ಗ್ರಾಮದಲ್ಲಿಯೂ ಸಂಭವಿಸಬಹುದು. ಏಕೆಂದರೆ, ಗ್ರಾಮವನ್ನು ಘಟಕದ ಆಧಾರದ ಮೇಲೆ ಪ್ರದೇಶಗಳನ್ನು ವಿಂಗಡಿಸುವಾಗ ಯಾವ ಆಧಾರದ ಮೇಲೆ ನಿರ್ದಿಷ್ಟ ಗ್ರಾಮವು ನಿರ್ದಿಷ್ಟ ಪ್ರದೇಶಕ್ಕೆ ಹೋಗಬೇಕು ಎಂಬ ಪ್ರಶ್ನೆಯು ಉದ್ಭವಿಸಬಹುದು. ಹೀಗಾಗಿ ಈ ವಿಷಯದಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಆದ್ದರಿಂದ, ಪ್ರದೇಶಗಳನ್ನು ವಿಂಗಡಿಸುವಾಗ ಗ್ರಾಮವನ್ನು ಒಂದು ಘಟಕವಾಗಿ ತೆಗೆದುಕೊಳ್ಳುವ ಅಂಶವೊಂದನ್ನೇ ಪರಿಗಣಿಸಬಾರದು. ಈ ಅಂಶದ ಜೊತೆಗೆ ಮತ್ತಿತರ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಇದರಿಂದಾಗಿ ನಾನು ವ್ಯಕ್ತಪಡಿಸಿರುವ ಸಮಸ್ಯೆಗಳು ಉದ್ಭವಿಸುವುದಿಲ್ಲ. ಆದರೆ ಈ ಎಲ್ಲಾ ವಿಷಯಗಳನ್ನು ತಿದ್ದುಪಡಿಯಲ್ಲಿ ಸ್ವತಃ ಸ್ಪಷ್ಟಪಡಿಸಿರುವುದಿಲ್ಲ. ಆದ್ದರಿಂದ ತಿದ್ದುಪಡಿಯು ಅಸ್ಪಷ್ಟವಾಗಿರುತ್ತದೆ ಮತ್ತು ಕಾರ್ಯಸಾಧ್ಯವಲ್ಲದಾಗಿರುತ್ತದೆ. ಈ ರಾಜ್ಯದ ಪ್ರದೇಶಗಳನ್ನು ವಿಂಗಡಿಸುವಾಗ ಪ್ರಸ್ತುತ ವ್ಯವಸ್ಥೆಯಲ್ಲಿ ತಾಲ್ಲೂಕನ್ನು ಒಂದು ಘಟಕವಾಗಿ ತೆಗೆದುಕೊಳ್ಳುವುದು ಹೆಚ್ಚು ಪ್ರಾಯೋಗಿಕವಾದದ್ದು ಏಕೆಂದರೆ ಈ ವಿಷಯದಲ್ಲಿ ಇಡೀ ರಾಜ್ಯವನ್ನು ತಕ್ಕ ರೀತಿಯಲ್ಲಿ ವಿಂಗಡಿಸಲು ಸುಲಭವಾಗುತ್ತದೆ.

ಸ್ವಾಮಿ, ರಾಜ್ಯಗಳು ಜಾರಿಗೊಂಡ ತರುವಾಯ, ಆಗ, ವಿವಾದಿತ ಪ್ರದೇಶಗಳ ಬಗ್ಗೆ ಪರಸ್ಪರ ಒಪ್ಪಂದದ ಮೂಲಕ ಗ್ರಾಮವು ಘಟಕದ ಆಧಾರದ ಮೇಲೆ ಇರಬೇಕೇ ಅಥವಾ ಯಾವುದೇ ಇತರೆ ಆಧಾರದ ಮೇಲೆ ಇರಬೇಕೇ ಎಂಬುದನ್ನು ಇತ್ಯರ್ಥಪಡಿಸಬಹುದೆಂದು ವಿಧೇಯಕದಲ್ಲಿ ಹೇಳಲಾಗಿದೆ. ಈ ಪ್ರಕಾರ, ಗಡಿನಿರ್ಧರಣಾ ಆಯೋಗವನ್ನು ನೇಮಕ ಮಾಡುವ ಪ್ರಶ್ನೆಯು ಈ ಹಂತದಲ್ಲಿ ಉದ್ಭವಿಸುವುದಿಲ್ಲ. ಈ ಹಂತದಲ್ಲಿ ತಿದ್ದುಪಡಿಯಲ್ಲಿ ಹೇಳಲಾದಂತೆ ಆಯೋಗವನ್ನು ನೇಮಕ ಮಾಡಿದರೆ, ಆಗ ಅಂಥ ಆಯೋಗದ ನೇಮಕದಲ್ಲಿ ಭಾರಿ ವೆಚ್ಚಗಳ ಪ್ರಶ್ನೆಯು ಒಳಗೊಳ್ಳಬಹುದು. ಹಾಗಾಗಿ, ಈ ಎಲ್ಲಾ ಕಾರಣಗಳಿಂದಾಗಿ ತಿದ್ದುಪಡಿಗಳನ್ನು ನಾನು ವಿರೋಧಿಸುತ್ತೇನೆ.

(ದಿನಾಂಕ: 6.4.1956)

## ಟಿಪ್ಪಣಿ

ರಾಜ್ಯಗಳ ಪುನರ್ವಿಂಗಡಣಾ ಮಸೂದೆಯು ಮುಂಬೈ ಪ್ರಾಂತದ ಶಾಸನ ಸಭೆಯಲ್ಲಿ ಚರ್ಚೆಗೆ ಬಂದಾಗ ಹೆಚ್.ವಿ. ಕೌಜಲಗಿಯವರು ತುಂಬಾ ವಿವೇಚನೆಯಿಂದ ವಿಷಯವನ್ನು ವಿಶ್ಲೇಷಿಸಿರು. ಭಾಷಾವಾರು ರಾಜ್ಯಗಳನ್ನು ರಚಿಸುವಾಗ ಕಂದಾಯ ಗ್ರಾಮಗಳನ್ನು ಘಟಕವಾಗಿ ತೆಗೆದುಕೊಳ್ಳಬಾರದೆಂದು ಬಲವಾಗಿ ಪ್ರತಿಪಾದಿಸಿದರು. ಇದರಿಂದ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ ಎಂದು ಹೇಳಿದರು. ಇಂತಹ ಸಂದರ್ಭಗಳಲ್ಲಿ ಆಡಳಿತಾತ್ಮಕ ಅನುಕೂಲ, ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಮತ್ತಿತರ ಅಂಶಗಳನ್ನು ಗುರುತಿಸಬೇಕೆಂದು ಒತ್ತಾಯಿಸಿದರು. ಆದ್ದರಿಂದ ಈ ತಿದ್ದುಪಡಿ ಮಸೂದೆ ಪ್ರಯೋಗಿಕ ರೂಪದ್ದಾಗಿರಬೇಕೆ ಹೊರತು ಕೇವಲ ಪ್ರದೇಶಗಳನ್ನು ಹಂಚುವ ವ್ಯವಸ್ಥೆಯಾಗಿರಬಾರದೆಂದು ತಿಳಿಸಿದರು. ತಾಲ್ಲೂಕನ್ನು ಘಟಕವಾಗಿ ತೆಗೆದುಕೊಳ್ಳುವುದು ಹೆಚ್ಚು ಪ್ರಾಯೋಗಿಕವಾದದ್ದೆಂದು ಹೇಳಿದರು. ಸ್ವತಃ ಕೌಜಲಗಿಯವರು ಕನ್ನಡ ಭಾಷೆ ಮಾತನಾಡುವ ಸರಹದ್ದು ಜಿಲ್ಲೆಯದ ಬೆಳಗಾವಿ ಜಿಲ್ಲೆಯಿಂದ ಬಂದವರಾಗಿದ್ದು ಅವರ ಮಾತಿನ ಹಿಂದಿನ ಕಳಕಳಿ ಸಹಜವಾದುದ್ದಾಗಿದ್ದಿತು.

# ಭಾಗ-3

## ಎಚ್.ವಿ. ಕೌಜಲಗಿ

## ಕರ್ನಾಟಕ ರಾಜ್ಯದ

## ವಿಧಾನಸಭಾ ಕಲಾಪ

## ಪಶುವೈದ್ಯ ಶಾಲೆಗಳ ಸ್ಥಾಪನೆ ಕುರಿತು

1957

**ಶ್ರೀ ಹೆಚ್.ವಿ. ಕೌಜಲಗಿ (ಸಾಮದಾಂವ್ I)** –

ಸರ್ಕಾರದವರು ಈ ಮುಂದಿನವುಗಳ ಬಗ್ಗೆ ದಯಮಾಡಿ ತಿಳಿಸುವರೇ?

ಎ) ಹೊಸ ಮೈಸೂರು ರಾಜ್ಯದಲ್ಲಿರುವ ಪಶುವೈದ್ಯ ಶಾಲೆಗಳ ಸಂಖ್ಯೆ:

ಬಿ) ರಾಜ್ಯದಲ್ಲಿರುವ ಪಶುವೈದ್ಯರು, ಸಹಾಯಕ ಪಶು ವೈದ್ಯರು ಮತ್ತು ಸ್ಟಾಕ್‌ಮ್ಯಾನ್) ಸಂಖ್ಯೆ:

**ಉತ್ತರ : ಶ್ರೀ ಹೆಚ್.ವಿ. ಕೌಜಲಗಿ (ಕೃಷಿ ಸಚಿವರು)** –

| | | |
|---|---|---|
| ಎ) | ಪಶುವೈದ್ಯ ಶಾಲೆಗಳು | 22 |
| | ಪಶುವೈದ್ಯ ಔಷಧಾಲಯಗಳ | 151 |
| | ಗ್ರಾಮಾಂತರ ಪಶುವೈದ್ಯ ಔಷಧಾಲಯಗಳು | 195 |
| | ಒಟ್ಟು | **368** |
| ಬಿ) | ಪಶುವೈದ್ಯರು | 240 |
| | ಸಹಾಯಕ ಪಶುವೈದ್ಯರು | -- |
| | ಸ್ಟಾಕ್‌ಮ್ಯಾನ್‌ಗಳು | 436 |

**ಶ್ರೀ ಹೆಚ್.ವಿ. ಕೌಜಲಗಿ** – ಬಾಂಬೆ ಕರ್ನಾಟಕದಲ್ಲಿರುವ ಔಷಧಾಲಯಗಳ ಸಂಖ್ಯೆಯನ್ನು ಹೆಚ್ಚಿಸುವುದು ಸಾಧ್ಯವೇ?

**ಶ್ರೀ ಹೆಚ್.ಎಸ್. ರುದ್ರಪ್ಪ** – ಕ್ಷಮಿಸಿ ಸ್ವಾಮಿ, ನನ್ನ ಬಳಿ ಅದಕ್ಕೆ ಸಂಬಂಧಿಸಿದ ವರದಿ ಇಲ್ಲ.

**ಶ್ರೀ ಎನ್.ಓ. ಸಮಜಿ** – (ಮರಾಠಿಯಲ್ಲಿ) ಬೆಳಗಾವಿ ಜಿಲ್ಲೆಯ ಗ್ರಾಮಾಂತರ ಭಾಗಗಲ್ಲಿ ಎಷ್ಟು ಪಶುವೈದ್ಯ ಶಾಲೆಗಳಿವೆ?

**ಶ್ರೀ ಹೆಚ್.ಎಸ್. ರುದ್ರಪ್ಪ** – ಹಳ್ಳಿ ಪ್ರದೇಶದಲ್ಲಿ ಎಷ್ಟು ಆಸ್ಪತ್ರೆಗಳಿವೆಯೆಂಬ ವಿಚಾರ ಗೊತ್ತಿಲ್ಲ.

**ಶ್ರೀ ಎನ್.ಓ. ಸಮಜಿ** – (ಮರಾಠಿಯಲ್ಲಿ). ಜನರಿಂದ ಇದಕ್ಕೆ ಬೇಡಿಕೆ ಇದ್ದರೂ ಗ್ರಾಮಾಂತರ ಪ್ರದೇಶಗಳಿಗೆ ವೈದ್ಯಕೀಯ ನೆರವನ್ನು ನೀಡಿಲ್ಲ ಎಂಬುದು ನಿಜವೇ?

**ಅಧ್ಯಕ್ಷರು** – ದವಾಖಾನೆಗಳಿಗೆ ಡಾಕ್ಟರುಗಳು ವೇಳೆಗೆ ಸರಿಯಾಗಿ ಹೋಗುತ್ತಿಲ್ಲವೆಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ ಎಂದು ಕೇಳುತ್ತಿದ್ದಾರೆ.

**ಶ್ರೀ ಎಸ್.ಎಸ್. ರುದ್ರಪ್ಪ** – ಆ ವಿಚಾರ ನನಗೆ ಗೊತ್ತಿಲ್ಲ.

**ಶ್ರೀ ಎಲ್.ಬಿ. ಬಿರ್ಜೆ** – (ಮರಾಠಿಯಲ್ಲಿ) ಪಿಲನ್‌ಗಾಂವ್‌ನ ಜನರು ವೈದ್ಯಕೀಯ ನೆರವಿಗೆ ಕೋರಿಕೆ ಸಲ್ಲಿಸಿದ್ದು, ಆದರೆ ವೈದ್ಯರು ಗ್ರಾಮಕ್ಕೆ ಬಂದಿರುವುದಿಲ್ಲವೆಂಬ ವಿಷಯ ನಿಜವೇ?

**ಮಾನ್ಯ ಸಭಾಧ್ಯಕ್ಷರು** – ಈ ಪ್ರಶ್ನೆಯು ಒಂದು ನಿರ್ದಿಷ್ಟ ಗ್ರಾಮಕ್ಕೆ ಸಂಬಂಧಪಟ್ಟಿರುವುದಾಗಿದ್ದು, ಪ್ರಶ್ನೆಯು ಇಡೀ ಜಿಲ್ಲೆಗೆ ಸಂಬಂಧಿಸಿರುವಾಗ ಅಂಥ ಪ್ರಶ್ನೆಯನ್ನು ಕೇಳಬಾರದು.

**ಶ್ರೀ ಎಲ್.ಬಿ. ಬಿರ್ಜೆ** – (ಮರಾಠಿಯಲ್ಲಿ) ಸೂಪಾದಲ್ಲಿ ಸುಮಾರು ಎರಡು ಸಾವಿರ ದನಗಳು ನೆರಡಿ (ಅಂತ್ರಾಕ್ಸ್) ಎಂದು ಕರೆಯುವ ರೋಗದಿಂದ ಬಳಲುತ್ತಿದ್ದು, ನೂರಾರು ಜನರಿಂದ ತಂತಿ ಸಂದೇಶಗಳನ್ನು ಕಳುಹಿಸಿದರೂ ವೈದ್ಯರು ಆ ಗ್ರಾಮಗಳಿಗೆ ಹೋಗಲಿಲ್ಲವೆಂಬ ವಿಚಾರವು ಸರ್ಕಾರಕ್ಕೆ ತಿಳಿದಿದೆಯೇ?

**ಮಾನ್ಯ ಸಭಾಧ್ಯಕ್ಷರು** – ಇದು ಪ್ರಶ್ನೆಯ ವ್ಯಾಪ್ತಿಯನ್ನು ಮೀರಿದೆ.

**ಶ್ರೀ ಎಲ್.ಬಿ. ಬಿರ್ಜೆ** – (ಮರಾಠಿಯಲ್ಲಿ) ಬೆಳಗಾವಿ ಮತ್ತು ಧಾರವಾಡ ಪ್ರದೇಶಗಳಲ್ಲಿ ಸಾಕಷ್ಟು ಪಶುವೈದ್ಯ ಔಷಧಾಲಯಗಳು ಇಲ್ಲವೆಂಬುದು ನಿಜವೇ?

**ಶ್ರೀ ಹೆಚ್.ಎಸ್. ರುದ್ರಪ್ಪ** – ಈ ಇನ್ನೊಂದು ಸಂದರ್ಭದಲ್ಲಿ, ಬಾಂಬೆ ಪ್ರದೇಶದಲ್ಲಿ ಪಶುವೈದ್ಯ ಔಷಧಾಲಯಗಳು ತುಂಬಾ ಕಡಿಮೆ ಇವೆ ಎಂಬುದನ್ನು ನಾನು ಸದನದ ಗಮನಕ್ಕೆ ತಂದಿರುತ್ತೇನೆ. ನಾವು ತಾಲ್ಲೂಕು ಪ್ರದೇಶಗಳಲ್ಲಿ ಮಾತ್ರ ಈ ಆಸ್ಪತ್ರೆಗಳನ್ನು ಹೊಂದಿದ್ದೇವೆ.

**ಶ್ರೀ ಕೆ.ಪಿ. ಗದಗ್** – ಈಗಿರುವ ಸಂಖ್ಯೆಯ ಪಶುವೈದ್ಯರಿಂದ ಔಷಧಾಲಯಗಳ ಕೆಲಸವನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗಲು ಸಾಧ್ಯವೇ ಎಂಬುದನ್ನು ನಾನು ತಿಳಿದು ಕೊಳ್ಳಬಹುದೇ?

**ಶ್ರೀ ಹೆಚ್.ಎಸ್. ರುದ್ರಪ್ಪ** – ಸರಿ

**ಶ್ರೀ ಅಣ್ಣಾರಾವ್ ಗಣಮುಖಿ** – ಆಸ್ಪತ್ರೆಗಳು ಇಲ್ಲದಿರುವ ತಾಲ್ಲೂಕು ಕೇಂದ್ರಗಳಲ್ಲಿ ಪಶುವೈದ್ಯರು ಜನರಿಗೂ ಸಹ ಔಷಧಿಗಳನ್ನು ಕೊಡುತ್ತಿದ್ದಾರೆಂಬ ವಿಷಯವು ಸರ್ಕಾರಕ್ಕೆ ಗೊತ್ತಿದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ? (ನಗು).

**ಶ್ರೀ ಹೆಚ್.ಎಸ್. ರುದ್ರಪ್ಪ** – ನನಗೆ ಗೊತ್ತಿಲ್ಲ ಸ್ವಾಮಿ.

**ಶ್ರೀ ಎಂ.ಎಂ. ಪಾಟೀಲ್** – ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ವೆಟರ್ನರಿ ಆಸ್ಪತ್ರೆಗಳಿವೆ?

**ಶ್ರೀ ಹೆಚ್.ಎಸ್. ರುದ್ರಪ್ಪ** – ಗಮನಿಸಲಾಗುವುದು.

**ಶ್ರೀ ಜಿ. ವೆಂಕಟೇಗೌಡ** – ಕೊಳ್ಳೇಗಾಲ ತಾಲ್ಲೂಕಿನಲ್ಲಿ ಒಂದು ಲಕ್ಷ 25 ಸಾವಿರ ಜಾನುವಾರುಗಳಿದ್ದಾಗ್ಯೂ ಅಲ್ಲಿ ಕೇವಲ ಒಂದೇ ಆಸ್ಪತ್ರೆಯಿರುವುದರಿಂದ ಅದು ಏತಕ್ಕೂ ಸಾಲದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

**ಶ್ರೀ ಹೆಚ್.ಎಸ್. ರುದ್ರಪ್ಪ** – ಆ ವಿಚಾರಗಳೆಲ್ಲವು ನಮ್ಮ ಗಮನಕ್ಕೆ ಬಂದಿದೆ. ಅಲ್ಲಿ ಆದಷ್ಟು ಬೇಗ ಇನ್ನೊಂದು ಆಸ್ಪತ್ರೆಯನ್ನು ತೆರೆಯಬೇಕೆಂಬ ಆಲೋಚನೆ ಸರ್ಕಾರದವರಿಗೆ ಇದೆ.

**ಶ್ರೀ ಹೆಚ್.ವಿ. ಕೌಜಲಗಿ** – ಕೆಲಸವನ್ನು ಸಮರ್ಥವಾಗಿ ನಿಭಾಯಿಸಲು ಪಶುವೈದ್ಯ ಶಸ್ತ್ರಚಿಕಿತ್ಸಕರ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

**ಶ್ರೀ ಹೆಚ್.ಎಸ್. ರುದ್ರಪ್ಪ** – ನಾನು ಪ್ರಶ್ನೆಯ ಇಂಗಿತವನ್ನು ಅರ್ಥಮಾಡಿಕೊಳ್ಳುತ್ತೇನೆ. ನಾವು ಈ ವರ್ಷ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿದ್ದೇವೆ.

**ಶ್ರೀ ಟಿ.ಕೆ. ಕಂಬಳಿ** – ಎಲ್ಲಾ ತಾಲ್ಲೂಕ್ ಹೆಡ್ ಕ್ವಾರ್ಟರುಗಳಲ್ಲೂ ಒಂದೊಂದು ವೆಟೆರಿನರಿ ಡಿಸ್ಪೆನ್ಸರಿ ಇರುತ್ತದೆಯೇ?

**ಶ್ರೀ ಹೆಚ್.ಎಸ್. ರುದ್ರಪ್ಪ** – ಬೊಂಬಯಿ ಪ್ರದೇಶದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಆಸ್ಪತ್ರೆಯಿದೆ.

**ಶ್ರೀ ಟಿ.ಕೆ. ಕಂಬಳಿ** –ಮಹಲುಗಳಲ್ಲೋ?

**ಶ್ರೀ ಹೆಚ್.ಎಸ್. ರುದ್ರಪ್ಪ** – ಹೋಬಳಿಗಳಲಿಲ್ಲ.

**ಶ್ರೀ ಜಿ. ಶಿವಪ್ಪ** – ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಹೊಸದಾಗಿ ಎಷ್ಟು ಜಾನುವಾರು ಆಸ್ಪತ್ರೆಗಳನ್ನು ಸ್ಥಾಪಿಸಬೇಕೆಂದಿದ್ದೀರಿ?

**ಶ್ರೀ ಹೆಚ್.ಎಸ್. ರುದ್ರಪ್ಪ** – ಇಷ್ಟೇ ಎಂದು ಈಗ ಹೇಳಲಿಕ್ಕೆ ಆಗುವುದಿಲ್ಲ ಎಷ್ಟು ಹಣದ ಸೌಲಭ್ಯ ಒದಗುತ್ತದೆಯೋ ಅಷ್ಟನ್ನು ಇದಕ್ಕೆ ಉಪಯೋಗಿಸಲಾಗುತ್ತದೆ.

(ದಿನಾಂಕ: 1.8.1957)

## ಟಿಪ್ಪಣಿ

ಪಶುವೈದ್ಯ ಶಾಲೆಗಳ ಕುರಿತ ಅಂಕಿ–ಅಂಶಗಳನ್ನು ಸರ್ಕಾರದಿಂದ ಪಡೆದ ಕೌಜಲಗಿಯವರು ಚರ್ಚೆಯನ್ನು ಮುಂದುವರಿಸಿದರು. ಶಸ್ತ್ರಚಿಕಿತ್ಸಾ ತಜ್ಞರ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಪ್ರಶ್ನೆ ಕೇಳಿದರು. ಅದಕ್ಕೆ ಸರ್ಕಾರದಿಂದ ಒಂದು ಹೊಸ ಪಶುಸಂಗೋಪನಾ ಕಾಲೇಜನ್ನು ತೆರೆಯುವುದಾಗಿ ಆಶ್ವಾಸನೆ ಬಂದಿತು. ಈ ಪ್ರಶ್ನೋತ್ತರದ ಸಾಕಷ್ಟು ಭಾಗ ಕನ್ನಡದಲ್ಲಿದೆ.

# ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಳಿಗಳ ಮಸೂದೆ

1958

ಮಾನ್ಯ ಸಭಾಧ್ಯಕ್ಷರೆ, ನಾನು ಈ ಮಸೂದೆಯನ್ನು ಹೃದಯಪೂರ್ವಕವಾಗಿ ಬೆಂಬಲಿಸುತ್ತೇನೆ. ತಡವಾಗಿಯಾದರೂ ಒಂದು ಉಚಿತ ರೂಪದಲ್ಲಿ ಈ ಮಸೂದೆಯನ್ನು ಮಂಡಿಸಿದುದಕ್ಕಾಗಿ ನಾನು ಸಚಿವರನ್ನು ಅಭಿನಂದಿಸುತ್ತೇನೆ.

ಈ ಮಸೂದೆ ಕುರಿತು ನಾನು ಯಾವುದೇ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮೊದಲು ಈ ಮಸೂದೆಯ ಮುಖ್ಯ ಲಕ್ಷಣಗಳನ್ನು ಗುರುತಿಸಲು ಬಯಸುತ್ತೇನೆ. ಮೊದಲನೆಯದಾಗಿ, ಏಕೀಕೃತ ಪ್ರದೇಶಗಳಲ್ಲಿ ಜಾರಿಯಲ್ಲಿರುವ ಎಲ್ಲ ಪಂಚಾಯಿತಿ ಕಾಯಿದೆಗಳನ್ನು ಗಮನಿಸಿದಾಗ ಹಾಲಿ ಮಂಡಿಸಲ್ಪಟ್ಟಿರುವ ಮಸೂದೆಯ ಮೇರೆಗೆ ರಚಿತವಾಗುವ ಪಂಚಾಯಿತಿಗಳು ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಅಧಿಕಾರಗಳನ್ನು ಹೊಂದಿವೆ. ಇದೊಂದು ಸಮುಚಿತವಾದ ಒಳ್ಳೆಯ ಅಂಶ. ಇಂದಿನ ಸನ್ನಿವೇಶದಲ್ಲಿ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರಗಳು ಅಗತ್ಯವಾಗಿವೆ ಮತ್ತು ಅಂತಹ ಅಧಿಕಾರಗಳನ್ನು ಅವುಗಳಿಗೆ ನೀಡಲಾಗಿದೆ. ನನ್ನ ಅಭಿಪ್ರಾಯದಲ್ಲಿ ಅವುಗಳಿಗೆ ಇನ್ನೂ ಕೆಲವು ಅಧಿಕಾರಗಳನ್ನು ಕೊಡಬೇಕಾಗಿದ್ದು ಅದನ್ನು ನಾನು ಮುಂದೆ ಪ್ರಸ್ತಾಪಿಸಲಿಚ್ಛಿಸುತ್ತೇನೆ.

ಎರಡನೆಯದಾಗಿ, ತಾಲ್ಲೂಕು ಮಂಡಳಿಗಳ ರಚನೆ ಉತ್ತಮ ಲಕ್ಷಣವಾಗಿದೆ. ಕೆಲವು ವರ್ಷಗಳ ಹಿಂದೆ ತಾಲ್ಲೂಕು ಮಂಡಳಿಗಳ ಅಗತ್ಯವಿಲ್ಲ ಎಂಬ ಭಾವನೆ ಇದ್ದಿತು; ಆದ್ದರಿಂದ ಅವುಗಳನ್ನು ರದ್ದುಪಡಿಸಲಾಯಿತು. ಮುಂಬಯಿ ಪ್ರಾಂತದಲ್ಲಿ ಅವನ್ನು 1935 ಅಥವಾ 1936 ರಷ್ಟು ಹಿಂದೆಯೇ ರದ್ದುಪಡಿಸಲಾಯಿತು. ಈಗ ಗ್ರಾಮಗಳಲ್ಲಿ ಹೆಚ್ಚಿನ ಅಭಿವೃದ್ಧಿ ಚಟುವಟಿಕೆಗಳು ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ನಮ್ಮ ಗಮನ ಗ್ರಾಮಗಳ ಅಭಿವೃದ್ಧಿಯತ್ತ ಹರಿದಿದೆ. ಈ ಸಂದರ್ಭದಲ್ಲಿ ತಾಲ್ಲೂಕು ಮಂಡಲಿಗಳು ಅಗತ್ಯವಾಗಿದ್ದು ನಾನು ಈ ಬೆಳವಣಿಗೆಯನ್ನು ಸ್ವಾಗತಿಸುತ್ತೇನೆ.

ಮೂರನೆಯದಗಿ ಹಾಲಿ ಇರುವ ಕಾನೂನು ಬದ್ಧ ಸಂಸ್ಥೆಗಳಾದ ಜಿಲ್ಲಾ ಬೋರ್ಡ್‌ಗಳನ್ನು ರಮ್ದುಪಡಿಸಿದ್ದು ಅವುಗಳ ಸ್ಥಾನದಲ್ಲಿ ಜಿಲ್ಲಾ ಅಭಿವೃದ್ಧಿ ಕೌನ್ಸಿಲ್‌ಗಳನ್ನು ರಚಿಸಲಾಗಿದೆ. ಇದು ನನ್ನ ದೃಷ್ಟಿಯಲ್ಲಿ ಒಳ್ಳೆಯ ಕ್ರಮವೇ ಏಕೆಂದರೆ ಪಂಚಾಯಿತಿಗಳು ಮತ್ತು ತಾಲ್ಲೂಕು ಮಂಡಲಿಗಳು ಕಾರ್ಯ ನಿರತವಾಗಿರುವಾಗ ಈ ಎರಡು ಸಂಸ್ಥೆಗಳಿಗೂ ಮಾರ್ಗದರ್ಶನ ಮಾಡುವ ಒಂದು ಮೇಲ್ವಿಚಾರಕ ಸಂಸ್ಥೆಯಷ್ಟೇ ಸಾಕು. ಅದಕ್ಕೆ ಯಾವುದೇ ಶಾಸನ ಬದ್ಧ ಮಂಡಲಿಗಳ ಅಗತ್ಯವಿಲ್ಲ. ಬ್ರಿಟಿಷರ ಕಾಲದಲ್ಲಿ ಜಿಲ್ಲಾ ಬೋರ್ಡ್‌ಗಳನ್ನು ಸ್ಥಾಪಿಸಿದ್ದ ಉದ್ದೇಶವೇ ಬೇರೆ ಇತ್ತು. ಅವು ಹೆಚ್ಚಾಗಿ ನಮ್ಮ ಜನರಿಗೆ ಆಡಳಿತ ಅನುಭವ ಪಡೆಯುವ ತರಬೇತಿ ರಂಗಗಳಾಗಿದ್ದವು. ಸ್ವಾತಂತ್ರ್ಯ ಬಂದ ಮೇಲೆ ನಾವು ನಮ್ಮದೇ ಆದ ಸರ್ಕಾರವನ್ನು ಹೊಂದಿದ್ದೇವೆ. ನಮ್ಮ ಗುರಿ ನಮ್ಮ ದೇಶವನ್ನು ನಮ್ಮ ಜಿಲ್ಲೆಗಳನ್ನು, ಮತ್ತು ತಾಲ್ಲೂಕುಗಳನ್ನು ಅಭಿವೃದ್ಧಿಪಡಿಸುವುದೇ ಆಗಿದೆ. ಆದ್ದರಿಂದ ಶಾಸನಬದ್ಧ

ಅಧಿಕಾರಗಳುಳ್ಳ ಜಿಲ್ಲಾ ಸ್ಥಳೀಯ ಮಂಡಲಿಗಳ ಅಗತ್ಯವಿದೆ ಎಂದು ನನಗನ್ನಿಸುವುದಿಲ್ಲ. ಸದ್ಯ ಅಸ್ತಿತ್ವದಲ್ಲಿರುವ ಜಿಲ್ಲಾ ಕೌನ್ಸಿಲ್‌ಗಳೇ ಸಾಕು. ಕೊನೆಯ ಪಕ್ಷ ಮುಂಬಯಿ ಕರ್ನಾಟಕದಲ್ಲಿ ನಮಗೆ ಜಿಲ್ಲಾ ಅಭಿವೃದ್ಧಿ ಬೋರ್ಡ್‌ಗಳಿದ್ದವು. ಅವು ಅಭಿವೃದ್ಧಿ ಕಾರ್ಯಗಳು ಮತ್ತು ಗ್ರಾಮೀಣ ಪ್ರದೇಶಗಳ ಪ್ರಗತಿಗೆ ಸಂಬಂಧಿಸಿದಂತೆ ಸಲಹಾ ಮಂಡಲಿಗಳಾಗಿದ್ದವು. ಅಭಿವೃದ್ಧಿ ಬೋರ್ಡ್‌ಗಳು ಮತ್ತು ಜಿಲ್ಲಾ ಸ್ಥಳೀಯ ಮಂಡಲಿಗಳ ಕರ್ತವ್ಯಗಳು ಹೆಚ್ಚು ಕಮ್ಮಿ ಒಂದೇ ಆಗಿದ್ದವು. ಮತ್ತು ಕೆಲವೊಮ್ಮೆ ಪುನರಾವರ್ತಕವೂ ಆಗಿದ್ದವು. ಆದ್ದರಿಂದ ಈ ಎರಡು ಮಂಡಲಿಗಳನ್ನು ರದ್ದುಪಡಿಸಿ ಅವುಗಳ ಸ್ಥಾನದಲ್ಲಿ ಜಿಲ್ಲಾ ಅಭಿವೃದ್ಧಿ ಕೌನ್ಸಿಲ್ ಎಂಬ ಒಂದೇ ಪ್ರಾಧಿಕಾರವನ್ನು ರಚಿಸುವುದು ಉತ್ತಮ. ಸ್ವಾಮಿ, ಈಗ ನಾನು ಪಂಚಾಯಿತಿ ಕಾಯಿದೆ ವಿಷಯಕ್ಕೆ ಬರುತ್ತೇನೆ. ನಾನು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಿದೆ.

ಹಾಲಿ ಕಾಯಿದೆಯ ಮೇರೆಗೆ 15,000 ಮತ್ತು ಅದಕ್ಕೂ ಅಧಿಕ ಜನಸಂಖ್ಯೆ ಇರುವ ಗ್ರಾಮಕ್ಕೆ ಒಂದು ಪಂಚಾಯಿತಿ ರಚಿತವಾಗುತ್ತದೆ. ಈ ನಿಯಮದಿಂದ ಮುಂಬಯಿ ಕರ್ನಾಟಕವನ್ನು ಹೊರತುಪಡಿಸಲಾಗಿದೆ. ಏಕೆಂದರೆ ನಮಗೆ ಅಲ್ಲಿ 1,000 ಅಥವಾ ಅಧಿಕ ಜನಸಂಖ್ಯೆ ಇರುವ ಗ್ರಾಮಗಳಲ್ಲಿ ಪಂಚಾಯತಿಗಳಿವೆ. ನನ್ನ ಅಭಿಪ್ರಾಯದಲ್ಲಿ ಸಂವಿಧಾನದ ನಿರ್ದೇಶಕ ತತ್ವವು ಎಷ್ಟು ಸಾಧ್ಯವೋ ಅಷ್ಟೂ ಪಂಚಾಯತಿಗಳನ್ನು ಅಗತ್ಯ ಅಧಿಕಾರಗಳೊಂದಿಗೆ ರಚಿಸಬೇಕೆಂದು ತಿಳಿಸುವುದರಿಂದ 1000 ಅಥವಾ ಅದಕ್ಕೂ ಮೀರಿ ಜನಸಂಖ್ಯೆ ಹೊಂದಿರುವ ಗ್ರಾಮಗಳಿಗೆ ಒಂದು ಪಂಚಾಯಿತಿ ಇರಬೇಕು. 15000 ಜನಸಂಖ್ಯೆ ಇರಬೇಕೆಂದು ನಿಗದಿಪಡಿಸುವುದು ಒಂದು ಹಿಮ್ಮುಖ ಕ್ರಮವಾಗುತ್ತದೆ.

ಎರಡನೆಯದಾಗಿ ಪಂಚಾಯತಿಗಳಲ್ಲಿ ಮಹಿಳೆಯರಿಗೆ ಯಾವುದೇ ಸ್ಥಾನಗಳನ್ನು ಮೀಸಲಿಡದಿರುವುದರ ಬಗ್ಗೆ ಹೇಳಬೇಕೆಂದಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಮಹಿಳೆಯರಿಗೆ ಕೆಲವು ಸ್ಥಾನಗಳನ್ನು ಮೀಸಲಿಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ಬಹುತೇಕ ಮಹಿಳೆಯರು ಅವಿದ್ಯಾವಂತರಾಗಿದ್ದಾರೆ ಹಾಗೂ ಸಂಕೋಚ ಸ್ವಭಾವದವರಾಗಿದ್ದು ಮುಂದೆ ಬಂದು ತಾವಾಗಿಯೇ ಚುನಾವಣೆಗಳಲ್ಲಿ ಸ್ಪರ್ಧಿಸಲಾರರು. ಅಂತಹ ಸಂದರ್ಭದಲ್ಲಿ ಮಹಿಳೆಯರಿಗೆ ಪಂಚಾಯಿತಿಗಳಲ್ಲಿ ಕೆಲವು ಸ್ಥಾನಗಳಲ್ಲಿ ಮೀಸಲಿಡುವುದು ಉತ್ತಮ.

ಸ್ವಾಮಿ, ಈಗ ಮೂರನೆಯ ವಿಷಯಕ್ಕೆ ಬರುತ್ತೇನೆ. ನಾನು ಕಾಯಿದೆಯ ವಿವರಗಳಿಗೆ. ಹೋಗುವುದಿಲ್ಲ. ನಾನು ಕೇವಲ ತತ್ವಗಳ ಕುರಿತು ಮಾತನಾಡುತ್ತೇನೆ. ಕಾಯಿದೆಯಲ್ಲಿ ಸದಸ್ಯರನ್ನು ಮತ್ತು ಅಭ್ಯರ್ಥಿಗಳನ್ನು ಅನರ್ಹಗೊಳಿಸಲು ಅವಕಾಶವಿದೆ. ಆದರೆ ಅಂತಹ ವಿಧಿಗಳಿದ್ದರೂ ಒಂದಲ್ಲ ಒಂದು ಕಾರಣದಿಂದಾಗಿ ಅವನ್ನು ಜಾರಿಗೊಳಿಸಲು ಸಾಧ್ಯವಾಗದು.

ಉದಾಹರಣೆಗೆ, ಅಪರಾಧ ಪ್ರಕ್ರಿಯಾ ಸಂಹಿತೆಯ ಮೇರೆಗೆ ಕೆಟ್ಟ ನಡತೆಗಾಗಿ ಒಬ್ಬ ವ್ಯಕ್ತಿಯು ನಿರ್ಬಂಧಿಸಲ್ಪಟ್ಟದ್ದರೆ ಆತನಿಗೆ ವಿಧಿಸಬಹುದಾದ ಅನರ್ಹತೆ ಆ ನಿರ್ಬಂಧ ಇರುವವರೆಗೆ ಮಾತ್ರ

ಜಾರಿಯಲ್ಲಿರುತ್ತದೆ. ಸಾಮಾನ್ಯವಾಗಿ ಅದು ಎರಡು ವರ್ಷಗಳಿಗೆ ಮೀರಿರುವುದಿಲ್ಲ. ಆ ಅವಧಿಯ ತರುವಾಯ ಆತ ಚುನಾವಣೆಯಲ್ಲಿ ಸ್ಪರ್ಧಿಸಬಹುದು. ಆದ್ದರಿಂದ ಆತನನ್ನು ಶಿಕ್ಷಿಸುವ ಉದ್ದೇಶ ಪರಿಣಾಮಕಾರಿಯಾಗದು. ಎರಡನೆಯದಾಗಿ, ಒಬ್ಬ ವ್ಯಕ್ತಿ ಶಿಕ್ಷೆಗೊಳಗಾಗಿದ್ದರೆ ಅವನು ಬಂಧನದಲ್ಲಿರುವ ಅವಧಿಯವರೆಗೆ ಮಾತ್ರ ಅವನು ಅನರ್ಹನಾಗಿರುತ್ತಾನೆ. ನೈತಿಕ ಅಧಃಪತನದ ವಿಷಯದಲ್ಲೂ ಅನರ್ಹತೆಯ ಶಿಕ್ಷೆ ಮುಂದುವರಿದಷ್ಟು ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಅಂತಹ ವ್ಯಕ್ತಿಯನ್ನು ಕನಿಷ್ಠ ನಾಲ್ಕು ಅಥವಾ ಐದು ವರ್ಷಗಳ ಅವಧಿಗೆ ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸದಂತೆ ನಿರ್ಬಂಧಿಸಬೇಕು. ತಾನು ಮಾಡಿದ ಅಪರಾಧಕ್ಕೆ ಕೊನೆಯ ಪಕ್ಷ ಒಂದು ಚುನಾವಣೆಯನ್ನಾದರೂ ಅವನು ಕಳೆದುಕೊಳ್ಳುವಂತಾಗಬೇಕು. ಇಲ್ಲವಾದರೆ ಈ ಅನರ್ಹತಾ ವಿಧಿ ಪರಿಣಾಮಕಾರಿಯಾಗಲಾರದು.

ಸ್ವಾಮಿ ಮತ್ತೊಂದು ವಿಷಯವೆಂದರೆ, ಪಂಚಾಯತಿ ಕಾಯಿದೆಯ ಮೇರೆಗೆ ಒಬ್ಬ ವ್ಯಕ್ತಿಯನ್ನು ಅನರ್ಹಗೊಳಿಸುವುದಾದರೆ ಆತ ಆ ನಿರ್ದಿಷ್ಟ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಅನರ್ಹಗೊಳಿಸಬೇಕು ಮತ್ತು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿರಬೇಕು. ಯಾವ ಅವಧಿಗೆ ಅನರ್ಹತೆ ಮುಂದುವರಿಯುತ್ತದೆ ಎಂಬುದನ್ನು ನಿಗದಿಪಡಿಸಬೇಕು. ನಾನು ಇನ್ನೊಂದು ಬಗೆಯ ಅನರ್ಹತೆಯನ್ನು ಸೂಚಿಸಬಯಸುತ್ತೇನೆ. ಅಕ್ರಮವಾಗಿ ಮದ್ಯವನ್ನು ತಯಾರಿಸುವ ವ್ಯಕ್ತಿಯನ್ನು ಅನರ್ಹಗೊಳಿಸಬೇಕು. ಈಗ ಸಮಾಜ ಬದಲಾಗಿದೆ. ಹೊಸ ನೀತಿ ಸಂಹಿತೆಯ ಪ್ರಕಾರ ಅಕ್ರಮ ಮದ್ಯವನ್ನು ತಯಾರಿಸುವುದು ಸಮಾಜದ ವಿರುದ್ಧ ಎಸಗಿದ ಒಂದು ಹೀನ ಅಪರಾಧ ಕೃತ್ಯವೆಂದು ಪರಿಗಣಿತವಾಗಿದೆ. ಆದರೆ ಕುಡಿಯುವುದು ತಾನಾಗಿಯೇ ಅಪರಾಧವಾಗುವುದಿಲ್ಲ. ಏಕೆಂದರೆ ಕೆಲವೊಮ್ಮೆ ಜನರಿಗೆ ಆರೋಗ್ಯದ ಹಿನ್ನೆಲೆಯಲ್ಲಿ ಕುಡಿಯಲು ಅವಕಾಶ ನೀಡಲಾಗುತ್ತದೆ. ಆದರೆ ಪಾನನಿರೋಧದ ಕಾಯಿದೆಯ ಅಡಿಯಲ್ಲಿ ಎಸಗಿದ ಅಪರಾಧಗಳಿಗೆ ಶಿಕ್ಷೆಗೊಳಗಾದ ವ್ಯಕ್ತಿಯನ್ನು ಅಭ್ಯರ್ಥಿಯಾಗುವುದಕ್ಕೆ ಅಥವಾ ಸದಸ್ಯನಾಗುವುದಕ್ಕೆ ಇಲ್ಲವೇ ಮತದಾರನಾಗುವುದಕ್ಕೆ ಅನರ್ಹಗೊಳಿಸಬೇಕು.

ಶ್ರೀ ಆರ್. ಚನ್ನಿಗರಾಮಯ್ಯ – ಆತನು ಶಿಕ್ಷೆಗೊಳಗಾದರೆ ಆ ಕಾಯಿದೆಯ ವ್ಯಾಪ್ತಿಗೆ ಬರುತ್ತಾನೆ.

ಶ್ರೀ ಎಚ್.ವಿ. ಕೌಜಲಗಿ – ಪಾನನಿರೋಧ ಅಪರಾಧವು ನೈತಿಕ ಅಧಃಪತನದ ವ್ಯಾಪ್ತಿಗೆ ಬರುವುದಿಲ್ಲ. ಅದು ನೈತಿಕ ಅಧಃಪತನದ ವ್ಯಾಪ್ತಿಗೆ ಒಳಪಟ್ಟಿದ್ದರೆ ಆಗ ಅನರ್ಹತೆಯ ಪಂಚಾಯತಿ ಕಾಯಿದೆಯ ವ್ಯಾಪ್ತಿಯೊಳಗೆ ಬರುತ್ತದೆ. ನಾನು ಅರ್ಥ ಮಾಡಿಕೊಂಡಿರುವಂತೆ ಅಕ್ರಮ ಮದ್ಯವನ್ನು ತಯಾರಿಸುವ ವ್ಯಕ್ತಿಯು ನೈತಿಕ ಅಧಃಪತನದ ಕೃತ್ಯವೆಸಗಿರುವ ಅಪರಾಧದ ವ್ಯಾಪ್ತಿಗೆ ಬರುವುದಿಲ್ಲವೆಂಬುದು ಈಗಿನ ಕಾನೂನು ದೃಷ್ಟಿಯಾಗಿದೆ.

ನಾಲ್ಕನೆಯದಾಗಿ, ನಿನ್ನೆ ನನ್ನ ಸ್ನೇಹಿತರಾದ ಶ್ರೀ ಜಿ. ಶಿವಪ್ಪನವರು ಸದಸ್ಯರೊಬ್ಬರು ರಾಜೀನಾಮೆ ನೀಡಿದರೆ ಅದನ್ನು ಹದಿನೈದು ದಿವಸಗಳ ತರುವಾಯ ಅಂಗೀಕರಿಸಲಾಗುತ್ತದೆಂದು

ಸೂಚಿಸಿದರು. ನನ್ನ ವಿನೀತ ಅಭಿಪ್ರಾಯವೆಂದರೆ ಅಂತಹ ಸನ್ನಿವೇಶದಲ್ಲಿ ನೀಡಲಾಗುವ ರಾಜೀನಾಮೆಯನ್ನು ಕೂಡಲೇ ಅಂಗೀಕರಿಸಬೇಕು. ಮತ್ತು ಅದನ್ನು ಹಿಂತೆಗೆದುಕೊಳ್ಳಲು ಯಾವುದೇ ಯಾವುದೇ ಕಾಲಾವಕಾಶವನ್ನು ನೀಡತಕ್ಕದ್ದಲ್ಲ. ಅಲ್ಲವಾದರೆ ಅನಗತ್ಯವಾಗಿ ಇತರ ಅನೇಕ ಗೋಜಲುಗಳಿಗೆ ಅವಕಾಶ ಕಲ್ಪಿಸುತ್ತದೆ.

ಸ್ವಾಮಿ, ಪಂಚಾಯತಿಯು ಮೊದಲ ಸಭೆ ಸೇರುವ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಕಾಯಿದೆಯ ನಿಬಂಧನೆಗಳನ್ನು ಓದಿದಾಗ ತಿಳಿದುಬಂದ ವಿಷಯವೆಂದರೆ ಪಂಚಾಯತಿಯ ಸದಸ್ಯರಿಗೆ ಮೊದಲ ಸಭೆ ಕರೆಯುವ ಅಧಿಕಾರವಿರುತ್ತದೆ. ಆ ಮೇಲೆ ಪದಾಧಿಕಾರಿಗಳ ಚುನಾವಣೆ ನಡೆಯುತ್ತದೆ. ಹಾಗೆ ಸಭೆ ಕರೆಯಲು ಸರಪಂಚನು ವಿಫಲನಾದರೆ ಸರ್ಕಾರಿ ಅಧಿಕಾರಿಗಳು ಅಂತಹ ಸಭೆಯನ್ನು ಕರೆಯಬಹುದು. ಪಕ್ಷ ರಾಜಕಾರಣ ತಲೆ ಹಾಕಿದಾಗ ಕೆಲವು ಸದಸ್ಯರು ಚುನಾವಣೆಗಳನ್ನು ಉದ್ದೇಶಪೂರ್ವಕವಾಗಿಯೇ ಮುಂದೂಡುವ ಅಕೃತ್ಯ ಎಸಗಬಹುದು. ಈ ತಂತ್ರಗಾರಿಕೆಯಿಂದ ಅನಗತ್ಯವಾಗಿ ಕಾಲ ಕಳೆದು ಹೋಗುವುದಾಗಿದ್ದು ಅದರಿಂದ ಕಾನೂನು ತೊಡಕುಗಳು ಉಂಟಾಗುತ್ತವೆ. ಆದ್ದರಿಂದ ನನ್ನ ಅಭಿಮತವೆಂದರೆ ಸರಪಂಚನು ಮೊದಲ ಸಭೆಯನ್ನು ಕರೆದು ಚುನಾವಣೆಗಳನ್ನು ನಡೆಸಲು ವಿಫಲನಾದಲ್ಲಿ ಸರ್ಕಾರಿ ಅಧಿಕಾರಿಯು ಅಂತಹ ಸಭೆಯ ಅಧ್ಯಕ್ಷತೆಯನ್ನು ವಹಿಸುವುದು ಉತ್ತಮ. ಸಭೆಯನ್ನು ಕರೆಯುವ ಮತ್ತು ಅದರ ಅಧ್ಯಕ್ಷತೆ ವಹಿಸುವ ಜವಾಬ್ದಾರಿಯು ಸರ್ಕಾರಿ ಅಧಿಕಾರಿಗಳದಾಗಿರಬೇಕೇ ಹೊರತು ಸಮಿತಿಯ ಸದಸ್ಯರದಾಗಿರಕೂಡದು.

ಶ್ರೀ ಆರ್. ಚೆನ್ನಿಗರಾಮಯ್ಯ – ನೀವು ತಹಸೀಲ್ದಾರ್‌ರು ಸಮಿತಿಯ ಸಭೆ ಸೇರಿಸಬೇಕೆಂದು ಬಯಸುತ್ತೀರೋ?

ಶ್ರೀ ಹೆಚ್.ವಿ. ಕೌಜಲಗಿ – ತಹಸೀಲ್ದಾರ್ ಅಥವಾ ಅವರಿಂದ ನೇಮಕವಾದ ಅಧಿಕಾರಿ ಸಭೆ ಕರೆಯಬಹುದು. ಅದನ್ನು ಯಾವುದೇ ಪತ್ರಾಂಕಿತ ಅಧಿಕಾರಿ ಮಾಡಬಹುದು. ಹೆಡ್ ಗುಮಾಸ್ತ ಸಹ ಪತ್ರಾಂಕಿತ ಅಧಿಕಾರಿಯಾಗಿರುವುದರಿಂದ ಅವರೇ ಸಭೆಯ ಅಧ್ಯಕ್ಷತೆ ವಹಿಸಬಹುದು. ಇಲ್ಲಿನ ವಿಷಯವೆಂದರೆ ಒಬ್ಬ ಸದಸ್ಯನಿಗೆ ಸಭೆ ಕರೆಯಲು ಹೊಣೆಗಾರಿಕೆ ವಹಿಸಿದರೆ ಅವನು ಸಭೆ ಕರೆಯದೇ ಇರಬಹುದು. ಅವನು ಮೊದಲ ಸಭೆಯನ್ನು ಕರೆದರೂ ಅವನು ಸ್ಥಳದಲ್ಲಿ ಹಾಜರಿರುವುದಿಲ್ಲ. ಮುಂದೆ ಅವನು ಎರಡನೆಯ ಸಭೆಯನ್ನು ಕರೆಯುತ್ತಾನೆ. ಅವನು ಆ ವಿಚಾರವನ್ನು ಕಂದಾಯ ಅಧಿಕಾರಿಗಳಿಗೆ ವರದಿ ಮಾಡಬೇಕು; ಅದಕ್ಕಾಗಿ ಅವನು ಇನ್ನು ಸ್ವಲ್ಪ ಕಾಲಾವಕಾಶ ತೆಗೆದುಕೊಳ್ಳುತ್ತಾನೆ. ಆದ್ದರಿಂದ ಈ ಕಾರ್ಯ ವ್ಯವಹರಣೆಗೆ ಮೂರರಿಂದ ನಾಲ್ಕು ತಿಂಗಳುಗಳ ಕಾಲಾವಧಿ ಅನಗತ್ಯವಾಗಿ ವ್ಯಯವಾಗುತ್ತದೆ. ಈ ಎಲ್ಲ ಗೋಜಲನ್ನು ನಿವಾರಿಸುವುದಕ್ಕಾಗಿ ಮೊದಲ ಸಭೆಯನ್ನು ತಹಸೀಲ್ದಾರ್ ಅಥವಾ ಅವರಿಗೆ ಕೆಳಗಿನ ದರ್ಜೆಯಲ್ಲಿರುವ ಸರ್ಕಾರಿ ಅಧಿಕಾರಿ ಕರೆಯುವುದರಿಂದ ಉತ್ತಮವೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ – ಆ ಅಧಿಕಾರಿ ಸಭಾವೇಳಾ ಪಟ್ಟಿಯನ್ನು ಪ್ರಕಟಿಸಬಹುದೇ?

ಶ್ರೀ ಹೆಚ್.ವಿ. ಕೌಜಲಗಿ – ಅವರು ಮೊದಲ ಸಭೆಯ ಅಧ್ಯಕ್ಷತೆ ವಹಿಸಬೇಕು. ಪಂಚಾಯತಿಗಳನ್ನು ಕುರಿತು ಹೇಳಬೇಕೆಂದರೆ ಅವುಗಳಿಗೆ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಅಧಿಕಾರಗಳನ್ನು ಕೊಡಬೇಕು. ಸರ್ಕಾರ ಅವುಗಳಿಗೆ ಹರಾಜು ಹಾಕುವ ಮತ್ತು ಭೂಕಂದಾಯ ವಸೂಲು ಮಾಡುವ ಅಧಿಕಾರ ಕೊಡಬೇಕು. ಅದು ಸಮಗ್ರವಾದ ಅಭಿವೃದ್ಧಿಯಾಗುತ್ತದೆ.

ಶ್ರೀ ಚೆನ್ನಿಗರಾಮಯ್ಯ – ಅವು ವಿವೇಚನಾ ಅಧಿಕಾರಿಗಳು.

ಶ್ರೀ ಎಚ್.ವಿ. ಕೌಜಲಗಿ – ನನಗೆ, ಪಂಚಾಯತಿಗಳಿಗೆ ಯಾವುದೇ ನ್ಯಾಯಾಂಗ ಅಧಿಕಾರಗಳನ್ನು ನೀಡಿದಂತೆ, ಕಂಡುಬರಲಿಲ್ಲ, ನನ್ನ ನಮ್ರ ಅಭಿಪ್ರಾಯವೆಂದರೆ ಸರ್ಕಾರವು ಸಣ್ಣಪುಟ್ಟ ಅಪರಾಧಗಳ ಬಗ್ಗೆ ಮತ್ತು ಸಣ್ಣಪುಟ್ಟ ವಿವಾದಗಳ ಬಗ್ಗೆ ಗ್ರಾಮದ ಹಿರಿಯರೇ ಇತ್ಯರ್ಥಪಡಿಸುವುದು ಒಳ್ಳೆಯದೆಂಬ ಅಭಿಪ್ರಾಯ ಆಶಯವನ್ನು ಹೊಂದಿರುವುದರಿಂದ ಅಂತಹುಗಳನ್ನು ಇತ್ಯರ್ಥಪಡಿಸುವ ಅಧಿಕಾರ ಪಂಚಾಯತಿಗಳಿಗೆ ಇರಬೇಕು. ಅಂತಹ ದೂರುಗಳು ಸಣ್ಣ ಅಪರಾಧಗಳಾಗಿರಬಹುದು ಅಥವಾ ಸಿವಿಲ್ ದಾವಾಗಳಾಗಿರಬಹುದು. . ಆದರೆ ಇಲ್ಲಿ ಉದ್ಭವಿಸಬಹುದಾದ ಪ್ರಶ್ನೆಯೆಂದರೆ ಎಲ್ಲ ಪಂಚಾಯತಿಗಳಿಗೂ ಅಂತಹ ಅಧಿಕಾರಗಳನ್ನು ಕೊಡಬಹುದೇ ಎಂಬುದು.

ಈ ಪಂಚಾಯತಿ ಕಾಯಿದೆಯಲ್ಲಿ ಹೊಸದಾಗಿ ಸೇರಿಸಲಾದ ಎರಡು ವಿಧಿಗಳಿವೆ.

ಶ್ರೀ ಡಿ. ದೇವರಾಜ ಅರಸು (ಹುಣಸೂರು)– ಯಾವ ಬಗೆಯ ಪಂಚಾಯತಿಗಳಿಗೆ ನ್ಯಾಯಾಂಗ ಅಧಿಕಾರಗಳನ್ನು ನೀಡಬಹುದೆಂಬುದನ್ನು ತಿಳಿಯಬಹುದೇ?

ಶ್ರೀ ಹೆಚ್.ವಿ. ಕೌಜಲಗಿ – ಕಿರು ಅಪರಾಧಗಳು. ಪ್ರಕರಣ 323 ಅಥವಾ 500 ರ ವ್ಯಾಪ್ತಿಯಲ್ಲಿ ಬರುವವು.

ಶ್ರೀ ಎ. ಭೀಮಪ್ಪ ನಾಯಕ – 323 ನೇ ಪ್ರಕರಣದಲ್ಲಿ ಬರುವ ಅಪರಾಧಗಳು ಕಿರಿಯ ಅಪರಾಧಗಳಲ್ಲ. ನಾವು ಅಂತಹ ಅಧಿಕಾರಗಳನ್ನು ಪುರಸಭೆಗಳಿಗೆ ವಹಿಸಬಹುದೆ?

ಶ್ರೀ ಹೆಚ್.ವಿ. ಕೌಜಲಗಿ – ನನ್ನ ಸ್ನೇಹಿತರಾದ ಶ್ರೀ ಭೀಮಪ್ಪನಾಯಕರ ಬಗ್ಗೆ ಗೌರವವಿಟ್ಟು ಹೇಳುವುದಾದರೆ ಅಂತಹ ವಿಷಯ ಯೋಚಿಸಲಾರದ್ದಲ್ಲ. ಜಿಲ್ಲಾ ಮಂಡಳಿಗಳಿಗೆ ಸಂಬಂಧಿಸಿದಂತೆ ಅದು ಒಂಬತ್ತು ವರ್ಷಗಳ ಕಾಲ ಚೆನ್ನಾಗಿ ನಡೆದಿದೆ. ನನಗೆ ಆ ಬಗ್ಗೆ ವೈಯಕ್ತಿಕ ಅನುಭವವಿದೆ. ಆದರೆ ಅಂತಹ ಅಧಿಕಾರಗಳನ್ನು ಎಲ್ಲಾ ಪಂಚಾಯತಿಗಳಿಗೂ ನೀಡತಕ್ಕದ್ದಲ್ಲ. ಅವನ್ನು ಜಿಲ್ಲಾಧಿಕಾರಿಗಳು ಶಿಫಾರಸು ಮಾಡಿದ ಪಂಚಾಯತಿಗಳಿಗೆ ಮಾತ್ರ ನೀಡಬೇಕು. ಒಳ್ಳೆಯ ಸದಸ್ಯರಿರುವ ಮತ್ತು ಪಕ್ಷ ಮೇಲಾಟಗಳು ಇಲ್ಲದಿರುವ ಪಂಚಾಯತಿಗಳಿಗೆ ಈ ಅಧಿಕಾರ ವಹಿಸಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯ – ಮಾನ್ಯ ಸದಸ್ಯರು ನ್ಯಾಯಾಂಗ ಅಧಿಕಾರಗಳನ್ನು ಪಂಚಾಯತಿಗಳಿಗೆ ನೀಡಲು ಬಯಸುತ್ತೀರಾ ಅಥವಾ ನ್ಯಾಯ ಪಂಚಾಯತಿಗಳೆಂಬ ಪ್ರತ್ಯೇಕ ಸಂಸ್ಥೆಗಳಿಗೆ ನೀಡಲು ಬಯಸುತ್ತೀರೋ?

ಶ್ರೀ ಎಚ್.ವಿ. ಕೌಜಲಗಿ – ನ್ಯಾಯ ಪಂಚಾಯತಿ ಎಂಬುದು ಪಂಚಾಯತಿಯ ಉಪ ಸಮಿತಿ. ನ್ಯಾಯ ಪಂಚಾಯತಿ ಸ್ಥಾಯಿಸಮಿತಿ ಅಥವಾ ಆರೋಗ್ಯ ಸಮಿತಿಯಂತೆಯೇ ಒಂದು ಉಪ ಸಮಿತಿ. ಅದು ಮುಖ್ಯ ಪಂಚಾಯತಿಯಿಂದ ಬೇರೆಯಲ್ಲ. ಈ ಅಧಿಕಾರವನ್ನು ನ್ಯಾಯಪಂಚಾಯತಿಯ ಸದಸ್ಯರಿಗೆ ನೀಡಲಾಗಿರುತ್ತದೆಯೇ ಹೊರತು ಪಂಚಾಯತಿಯ ಎಲ್ಲ ಸದಸ್ಯರಿಗೂ ನೀಡಲಾಗಿರುವುದಿಲ್ಲ. ಇದು ಪಂಚಾಯತಿಯ ಉಪ ಸಮಿತಿ ಇದ್ದಂತೆ.

ನಾನು ಈ ಹಿಂದೆ ಹೇಳಿದಂತೆ ಕೆಲವು ಹೊಸ ವಿಧಿಗಳನ್ನು ಸೇರಿಸಲಾಗಿದೆ. ಪಂಚಾಯತಿ ಕಾಯಿದೆಯಲ್ಲಿ ಅವಿಶ್ವಾಸ ನಿರ್ಣಯ ತರಲು ಅವಕಾಶ ಕಲ್ಪಿಸಲಾಗಿದೆ. ಈ ವಿಧಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಕೆಲವೊಮ್ಮೆ ಸರಪಂಚ ಮತ್ತು ಸದಸ್ಯರ ನಡುವೆ ಹೊಂದಾಣಿಕೆ ಇರುವುದಿಲ್ಲ. ಸರಪಂಚ ಬಹುಮತದ ಸದಸ್ಯರ ಬೆಂಬಲ ಕಳೆದುಕೊಂಡಿರುತ್ತಾನೆ. ಆಗ ಅಲ್ಲಿನ ಕಾರ್ಯನಿರ್ವಹಣೆ ಸ್ಥಗಿತಗೊಳ್ಳುತ್ತದೆ. ಸರಪಂಚನಿಗೆ ಅನೇಕ ಕಾರ್ಯಗಳನ್ನು ವಹಿಸಲಾಗಿರುತ್ತದೆ. ಅವನು ಖಜಾನೆಯಿಂದ ಹಣ ತರಬೇಕು; ವಿತರಿಸಬೇಕು ಇನ್ನೂ ಇತ್ಯಾದಿ ಕೆಲಸಗಳನ್ನು ನಿರ್ವಹಿಸಬೇಕು. ಶೇಕಡ 90 ರಷ್ಟು ಸದಸ್ಯರು ಒಂದು ಕಡೆ ಇದ್ದು ಶೇಕಡ 10 ರಷ್ಟು ಸದಸ್ಯರು ಇನ್ನೊಂದು ಕಡೆ ಇದ್ದ ಪಕ್ಷದಲ್ಲಿ ಸರಪಂಚನು ಬಿಕ್ಕಟ್ಟನ್ನು ಸೃಷ್ಟಿಸಬಲ್ಲ. ಅಂತಹ ಸಂದರ್ಭಗಳಲ್ಲಿ ಈ ಅವಿಶ್ವಾಸ ಮಂಡನೆಗೆ ಅವಕಾಶವಿರುವುದು ಉತ್ತಮ. ಆಗ ಪಂಚಾಯತಿಯ ಕೆಲಸ ಕಾರ್ಯಗಳ ಮಂಡನೆಗೆ ಅವಕಾಶವಿರುವುದು ಉತ್ತಮ. ಆಗ ಪಂಚಾಯತಿಯ ಕೆಲಸ ಕಾರ್ಯಗಳು ಸುಗಮ ನಿರ್ವಹಣೆಗಾಗಿ ಸರಪಂಚನನ್ನು ಅಧಿಕಾರದಿಂದ ತೆಗೆಯಬಹುದು. ಅನೇಕ ಸಂದರ್ಭಗಳಲ್ಲಿ ಮುಂಬಯಿ ಪ್ರದೇಶದಲ್ಲಿ ಸರಪಂಚನು ಹಣ ದುರುಪಯೋಗ ಮಾಡಿರದಿದ್ದರೆ ಜಿಲ್ಲಾಧಿಕಾರಿಯಾಗಲಿ ಸರ್ಕಾರವಾಗಲಿ ಅವನ ಮೇಲೆ ಯಾವುದೇ ಕ್ರಮ ಕೈಗೊಳ್ಳಲು ಕಾಯಿದೆಯಲ್ಲಿ ಅವಕಾಶವಿರಲಿಲ್ಲ. ಅವನು ಕರ್ತವ್ಯವನ್ನು ನಿರ್ಲಕ್ಷಿಸಿ ಬಿಕ್ಕಟ್ಟು ಸೃಷ್ಟಿಸಿದರೆ ಅಂತಹವನನ್ನು ತೆಗೆದುಹಾಕಲು ಅವಕಾಶವಿರಲಿಲ್ಲ. ಅಂತಹ ಸಂದರ್ಭಗಳಲ್ಲಿ ಬಹುಸಂಖ್ಯೆಯ ಸದಸ್ಯರು ಸರಪಂಚನನ್ನು ಪದಚ್ಯುತಗೊಳಿಸುವ ಅಧಿಕಾರವಿರುವುದು ಸೂಕ್ತವೆಂದು ನನ್ನ ಅಭಿಮತ.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ) – ಸರಪಂಚನ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸಲು ಅನುಮತಿ ಅಗತ್ಯವಿಲ್ಲವೆ?

ಶ್ರೀ ಆರ್. ಚನ್ನಿಗರಾಮಯ್ಯ – ಯಾವುದೇ ಸದಸ್ಯನು ಗೊತ್ತುವಳಿ ಮಂಡಿಸಬಹುದು.

ಶ್ರೀ ಎಚ್.ವಿ. ಕೌಜಲಗಿ – ಅಡ್ಡ ಪ್ರಶ್ನೆಗಳನ್ನು ಕೇಳುವುದು ಮತ್ತು ನಿರ್ಣಯಗಳನ್ನು ಮಂಡಿಸುವ ಬಗ್ಗೆ ನನ್ನದೊಂದು ಸಲಹೆ ಇದೆ. ಪಂಚಾಯತಿಗಳಲ್ಲಿ ಈಗಿರುವ ಪದ್ಧತಿಯೆಂದರೆ ಸರಪಂಚನು ಅಪೇಕ್ಷೆಯ ಮೇರೆಗೆ ಕಾರ್ಯದರ್ಶಿಯು ಕಾಲಸೂಚಿಯನ್ನು ಸಿದ್ಧಪಡಿಸುವುದು. ಇದರಿಂದ ಸದಸ್ಯರು ಪಂಚಾಯತಿಯ ವ್ಯವಹಾರಗಳನ್ನು ತಿಳಿದಿರಬಹುದು ಇಲ್ಲವೇ ತಿಳಿಯದಿರಬಹುದು. ಅಂತಹ ಸಂದರ್ಭದಲ್ಲ ಗ್ರಾಮಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಅವರು

ಪ್ರಶ್ನೆಗಳನ್ನು ಕೇಳಲು ಮತ್ತು ನಿರ್ಣಯಗಳನ್ನು ಮಂಡಿಸಲು ಅವಕಾಶವಿರುತ್ತದೆ ಇದು ಹಳೆಯ ಕಾಯಿದೆಯನ್ನು ಉತ್ತಮಪಡಿಸಿದಂತಾಗುತ್ತದೆ.

ಕಾಯಿದೆಯ ಇನ್ನು ಕೆಲವು ಪರಿಚ್ಛೇದಗಳ ಬಗ್ಗೆ ಹೇಳಬೇಕೆಂದರೆ ಅವು ಕಾನೂನು ಬದ್ಧವಾಗಿವೆಯೇ ಇಲ್ಲವೇ ಎಂಬುದು ನನಗೆ ತಿಳಿಯದು. ಈ ಕರಡು ಮಸೂದೆಯಲ್ಲಿ ವಿಶೇಷ ಕಾಮಗಾರಿಗಳನ್ನು ಕೈಗೊಳ್ಳುವಾಗ ಟ್ರಸ್ಟಿಗಳಿಂದ ಮತ್ತು ಮಠಗಳಿಂದ ವಂತಿಗೆ ಕೋರಿ ಪಡೆಯಲು ಅವಕಾಶವಿದೆ. ಹಾಗೆಯೇ ಸದಸ್ಯನಲ್ಲದ ಹೊರಗಿನವನು ಅಧಿಶುಲ್ಕ ವಿಧಿಸುವುದು ಸಾಧ್ಯವಿದೆ. ಈ ಪರಿಚ್ಛೇದಗಳು ಕಾನೂನು ಸಮ್ಮತವೇ ಎಂಬ ಬಗ್ಗೆ ನನಗೆ ಸಂದೇಹವಿದೆ. ಆಯ್ಕೆ ಸಮಿತಿಯು ಅದರ ಬಗ್ಗೆ ಗಮನಹರಿಸುತ್ತದೆಂದು ನಾನು ನಂಬಿದ್ದೇನೆ.

ಸ್ವಾಮಿ, ಈ ಪಂಚಾಯತಿ ಕಾಯಿದೆಯಲ್ಲಿ ಬಾವಿಗಳಿಂದ ಮತ್ತು ಕೆರೆಗಳಿಂದ ನೀರನ್ನು ಸರಬರಾಜು ಮಾಡುವುದಕ್ಕೆ ಶುಲ್ಕ ವಿಧಿಸುವ ಅವಕಾಶವಿದೆ. ಅದು ಇರಬಾರದು. ಕುಡಿಯುವ ನೀರನ್ನು ಪೂರೈಸುವುದು ಪಂಚಾಯತಿಯ ಪ್ರಾಥಮಿಕ ಕರ್ತವ್ಯ. ಪಂಚಾಯತಿಗಳು ಕೊಳವೆಗಳ ಮೂಲಕ ನೀರು ಸರಬರಾಜು ಮಾಡಿದರೆ ಅದು ಬೇರೆಯ ವಿಷಯ. ಆದರೆ ಬಾವಿ ಅಥವಾ ಕೆರೆಯಿಂದ ನೀರು ಪಡೆಯುವುದಕ್ಕೆ ತೆರಿಗೆ ವಿಧಿಸಬಾರದು. ಹಳ್ಳಿಗರ ಹಿತದೃಷ್ಟಿಯಿಂದ ಅಂತಹ ವಿಧಿ ಇರಬಾರದು. ನೀರು ಸರಬರಾಜು ಮಾಡುವುದು ಪಂಚಾಯತಿಯ ಪ್ರಾಥಮಿಕ ಕರ್ತವ್ಯ. ತಾಲ್ಲೂಕು ಮಂಡಳಿಗಳ ವಿಷಯಕ್ಕೆ ಬಂದರೆ ಮುಂಬಯಿ ಪ್ರದೇಶಕ್ಕೆ ಸಂಬಂಧಿಸಿದಂತೆ ವಿಶಿಷ್ಟ ಸನ್ನಿವೇಶಗಳಿವೆ. ಇವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ನಮ್ಮ ಕಡೆ ಮೊಹಲ್ಲಾಗಳು ಮತ್ತು ಪೇಟಗಳಿವೆ. ಅವು ತಾಲ್ಲೂಕಿಗೆ ಸಮನಾದವು. ಕಂದಾಯ ಅಧಿಕಾರಿಯನ್ನು ಮಹಲ್‌ಕಾರಿ ಎಂದು ಕರೆಯುತ್ತಾರೆ. ಅವರ ಕರ್ತವ್ಯಗಳು ತಹಸಿಲ್ದಾರರಿಗೆ ಸಮನಾದವು. ದೊಡ್ಡ ಪ್ರದೇಶಗಳನ್ನು ಎರಡಾಗಿ ವಿಂಗಡಿಸಲಾಗಿದೆ; ಸಣ್ಣ ಪ್ರದೇಶಗಳನ್ನು ಮೊಹಲ್ ಅಥವಾ ಪೇಟಗಳೆಂದು ಕರೆಯಲಾಗುತ್ತಿದೆ. ಈ ಪ್ರದೇಶಗಳಿಗೆ ಸಂಬಂಧಿಸಿದಂತೆ ಕಾಯಿದೆಯಲ್ಲಿ ಯಾವುದೇ ಅವಕಾಶವನ್ನು ಕಲ್ಪಿಸಲಾಗಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ – ಹೋಬಳಿಯಾಗಿ

ಶ್ರೀ ಎಚ್.ವಿ. ಕೌಜಲಗಿ – ಹೋಬಳಿ ತಹಸಿಲ್‌ನ ಅಧಿಕಾರ ವ್ಯಾಪ್ತಿಯೊಳಗಿರುತ್ತವೆ. ಆದರೆ ಮೊಹಲ್ ಅಥವಾ ಪೇಟಾವು ಅದೇ ಒಂದು ಸ್ವತಂತ್ರ ತಹಸಿಲ್ ಆಗಿರುತ್ತದೆ. ಅದೊಂದು ವಿಶೇಷ ತಾಲ್ಲೂಕು. ಚಿಕ್ಕ ತಾಲ್ಲೂಕು; ಅದು! ಒಂದು ಸ್ವತಂತ್ರ ಕಂದಾಯ ಘಟಕ. ಅದನ್ನು ತಾಲ್ಲೂಕು ಕಾರ್ಯವ್ಯಾಪ್ತಿಯೊಳಗೆ ಸೇರಿಸುವುದು ಉತ್ತಮ. ಇವುಗಳಿಗೆ ಒಂದೇ ತಾಲ್ಲೂಕು ಮಂಡಳಿ ಇರಬೇಕೇ ಅಥವಾ ಪ್ರತ್ಯೇಕ ಮಂಡಳಿ ಇರಬೇಕೆ ಎಂದು ಈಗಲೇ ನಿರ್ಧರಿಸಬೇಕು.

ಶ್ರೀ ಆರ್ ಚೆನ್ನಿಗರಾಮಯ್ಯ – ಜನಸಂಖ್ಯೆ ಬಗ್ಗೆ ಏನು?

ಶ್ರೀ ಎಚ್.ವಿ. ಕೌಜಲಗಿ – ಸುಮಾರು ನಲವತ್ತು ಗ್ರಾಮಗಳು ಸೇರಿದಂತೆ ನಲವತ್ತರಿಂದ ಐವತ್ತು ಸಾವಿರ ಜನಸಂಖ್ಯೆ ಇದೆ. ಹಳೆಯ ಮುಂಬಯಿ ಪ್ರದೇಶದಲ್ಲಿ ತಾಲ್ಲೂಕು ಮಂಡಳಿಗಳು ಅಸ್ತಿತ್ವದಲ್ಲಿದ್ದಾಗ ಇವನ್ನು ತಾಲ್ಲೂಕಿನಲ್ಲೇ ಸೇರಿಸಿದ್ದರು. ತಾಲ್ಲೂಕು ಮತ್ತು ಮೊಹಲ್ಲಾಕ್ಕೆ ಒಂದು ತಾಲ್ಲೂಕು ಮಂಡಳಿ ಇರುತ್ತಿದ್ದಿತು. ಆ ಏರ್ಪಾಟನ್ನು ಮುಂದುವರಿಸಬಹುದು.

ಎರಡನೆಯದಾಗಿ, ತಾಲ್ಲೂಕು ಮಂಡಳಿಗಳ ಪರೋಕ್ಷ ಚುನಾವಣೆಗಳನ್ನು ಜಾರಿಗೊಳಿಸಲಾಗಿದೆ. ನನ್ನ ಅಭಿಪ್ರಾಯದಲ್ಲಿ ನೇರ ಚುನಾವಣೆಗಳನ್ನು ಜಾರಿಗೊಳಿಸುವುದು ಒಳ್ಳೆಯದು. ಒಂದು ಪಕ್ಷ 100 ರಿಂದ 110 ಹಳ್ಳಿಗಳಿರುವ ಮತ್ತು ಒಂದು ಲಕ್ಷದ ಇಪ್ಪತ್ತೈದು ಸಾವಿರ ಜನಸಂಖ್ಯೆ ಇರುವ ತಾಲ್ಲೂಕಿದ್ದಿತೆಂದಿಟ್ಟುಕೊಳ್ಳಿ. ಆಗ ಒಂದು ಪೇಟಾದಲ್ಲಿ 1500 ಜನಸಂಖ್ಯೆ ಇರಬೇಕೆಂಬ ತತ್ವವನ್ನು ಅನ್ವಯಿಸಿದರೆ ಕೇವಲ 20 ರಿಂದ 25 ಹಳ್ಳಿಗಳು ಮಾತ್ರ ಪ್ರಾತಿನಿಧ್ಯ ಪಡೆಯುತ್ತವೆ. ಇತರ 60 ರಿಂದ 65 ಹಳ್ಳಿಗಳಿಗೆ ಪ್ರಾತಿನಿಧ್ಯವಿರುವುದಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ – ಎಲ್ಲ ಹಳ್ಳಿಗಳನ್ನು ಸಮೂಹ ಪಂಚಾಯಿತಿಗಳು ಅಥವಾ ಒಂದೇ ಪಂಚಾಯಿತಿಯಿಂದ ಪ್ರತಿನಿಧಿಸಬೇಕು.

ಶ್ರೀ ಎಚ್.ವಿ. ಕೌಜಲಗಿ – ಪ್ರಸ್ತುತ 1500 ಜನಸಂಖ್ಯೆಗೆ ಒಂದು ಪಂಚಾಯತಿಯಂತೆ ಮಾಡಿದ್ದೀರಿ.

ಶ್ರೀ ಆರ್. ಚೆನ್ನಿಗರಾಮಯ್ಯ – 500 ಅಥವಾ 1000 ಜನಸಂಖ್ಯೆಗೆ ಒಂದು ಪಂಚಾಯಿತಿ ಇದ್ದರೆ ಅಂತಹ ಪಂಚಾಯಿತಿಗಳನ್ನು ಸ್ವತಂತ್ರ ಪಂಚಾಯಿತಿಗಳೆಂದು ಪರಿಗಣಿಸುವುದಿಲ್ಲ. 1500 ಜನಸಂಖ್ಯೆ ಇರುವ ಯಾವುದೇ ಪಂಚಾಯತಿಯನ್ನು ಪ್ರತ್ಯೇಕ ಪಂಚಾಯತಿ ಎಂದು ಪರಿಗಣಿಸಲಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ – (ಮೈಸೂರು)

ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಒಳಗಾಗದ ಯಾವುದೇ ಹಳ್ಳಿ ಇಲ್ಲ. ವಿಶ್ಲೇಷಿಸಿದಾಗ ತಿಳಿಸುಬರುವುದೆಂದರೆ ತಾಲ್ಲೂಕು ಮಂಡಳಿ ಸದಸ್ಯರು ಇಂತಿಂಥ ಕೆಲಸಗಳನ್ನು ಕೈಗೊತ್ತಿಕೊಳ್ಳಬಹುದೆಂದು ಶಿಫಾರಸು ಮಾಡುವುದು ಹಾಗೂ ಬಡ್ಜೆಟ್ ಅಂಗೀಕರಿಸುವ ಕಾರ್ಯಗಳಷ್ಟನ್ನು ಮಾತ್ರ ಮಾಡಬಹುದು. ಅದರ ಮೇಲೆ ಅವರಿಗೆ ಇನ್ನಾವುದೇ ನಿಯಂತ್ರಣವಿಲ್ಲ. ನನ್ನ ವಿನಮ್ರ ಸಲಹೆ ಎಂದರೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಹೆಚ್ಚಿನ ಅಧಿಕಾರಗಳನ್ನು ನೀಡುವ-ಬದಲು ಆ ಅಧಿಕಾರಗಳನ್ನು ತಾಲ್ಲೂಕು ಮಂಡಳಿಗೆ ನೀಡಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯ – ಅದು ಹೆಚ್ಚು ಕಡಿಮೆ ಕಾರ್ಪೊರೇಷನ್

ಶ್ರೀ ಎಚ್.ವಿ. ಕೌಜಲಗಿ – ಇನ್ನೊಂದು ವಿಷಯವೆಂದರೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸರ್ಕಾರಿ ನೌಕರ ಈ ಮಂಡಳಿ ಚುನಾಯಿತಿ ಸಂಸ್ಥೆ. ಗ್ರಾಮೀಣರು ಅನಕ್ಷರಸ್ಥರು ಮತ್ತು ಮುಗ್ದರು. ಈ ಅಧಿಕಾರಿ ವಿದ್ಯಾವಂತ ಮತ್ತು ಸರ್ಕಾರಿ ನೌಕರರಾಗಿದ್ದು ಮಂಡಳಿಯ ಸದಸ್ಯರ ಮೇಲೆ ಯಜಮಾನಿಕೆ ಮಾಡುವ ಸನ್ನಿವೇಶವಿರುತ್ತದೆ. ಈ ಅಧಿಕಾರಿಯನ್ನು ನಿಯಂತ್ರಿಸುವುದು ಕಷ್ಟ. ಈ ಇಬ್ಬರ ನಡುವೆ ಸಹಕಾರ ಮೂಡಲು ಸಾಧ್ಯವಿಲ್ಲ.

ಶ್ರೀ ಎಚ್.ಎಂ. ಚನ್ನಬಸಪ್ಪ – (ಕೃಷ್ಣರಾಜನಗರ) ಈ ಮಂಡಳಿಗೆ ಎಷ್ಟರಮಟ್ಟಿನ ಅಧಿಕಾರಗಳನ್ನು ನೀಡಬೇಕೆಂದು ನೀವು ಅಪೇಕ್ಷಿಸುತ್ತೀರಿ. ನಿಮ್ಮ ಅಭಿಪ್ರಾಯದಲ್ಲಿ ಯಾವ ಬಗೆಯ ಅಧಿಕಾರಗಳನ್ನು ತಾಲ್ಲೂಕು ಮಂಡಳಿಗೆ ಅಥವಾ ಅದರ ಅಧ್ಯಕ್ಷರಿಗೆ ವಹಿಸಬೇಕು.

ಶ್ರೀ ಎಚ್.ವಿ. ಕೌಜಲಗಿ – ಅಲ್ಲಿ ಅನೇಕ ನಿಬಂಧನೆಗಳಿವೆ. ಅವುಗಳಲ್ಲಿ ಪ್ರತಿಯೊಂದನ್ನು ವಿವರವಾಗಿ ಚರ್ಚಿಸಬೇಕಾಗುತ್ತದೆ. ಅದು ಒಂದು ಅಥವಾ ಎರಡು ನಿಬಂಧನೆಗಳನ್ನು ಚರ್ಚಿಸುವ ವಿಷಯವಲ್ಲ. ಮುಖ್ಯ ಕಾರ್ಯನಿರ್ವಾಣಾಧಿಕಾರಿಗೆ ಅಷ್ಟೊಂದು ಅಧಿಕಾರಗಳನ್ನು ಕೊಡಲಾಗಿದೆ. ಅವನ್ನು ಪ್ರತಿಯೊಂದನ್ನು ವಿವರಣಾವಾಗಿ ಚರ್ಚಿಸಿದ ಅನಂತರ ಅಧಿಕಾರಿಯ ಸ್ಥಾನವೇನೆಂಬ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ – ನಾನು ಈ ವಿಷಯದಲ್ಲಿ ಹೆಚ್ಚು ತಿಳಿಯಲು ಇಚ್ಛಿಸುತ್ತೇನೆ. ತಾಲ್ಲೂಕು ಮಂಡಳಿಯ ನಿಶ್ಚತವಾಗಿಯೂ ಖಂಡಿತವಾಗಿಯೂ ನಿರ್ದಿಷ್ಟ ಕಾರ್ಯನೀತಿಗಳನ್ನು ಕೈಗೊಳ್ಳುತ್ತದೆ. ಅದು ನಿರ್ದಿಷ್ಟ ಕಾಮಗಾರಿಯನ್ನು ಕೈಗೊಳ್ಳಲು ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಹೊಂದಿದೆ. ಅಲ್ಲಿಗೆ ವಿಷಯ ಮುಗಿಯಿತು. ನೀವು ದಿನನಿತ್ಯದ ಕಾರ್ಯಾನುಷ್ಠಾನದಲ್ಲಿ ಸದಸ್ಯರು ಹಸ್ತಕ್ಷೇಪ ಮಾಡುವುದನ್ನು ಬಯಸುತ್ತಿರಾ ಅಥವಾ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಸಮಗ್ರ ಜವಾಬ್ದಾರಿಯನ್ನು ಅಧಿಕಾರಿಗೆ ಬಿಡಲು ಇಚ್ಛಿಸುತ್ತೀರಾ?

ಶ್ರೀ ಎಚ್.ವಿ. ಕೌಜಲಗಿ – ಸದಸ್ಯರನ್ನು ಚುನಾಯಿಸುವ ಉದ್ದೇಶವೇನು? ಅವರಿಗೆ ಕಾರ್ಯ ನೀತಿಯನ್ನು ರೂಪಿಸುವಲ್ಲಿ ಮತ್ತು ಕಾಮಗಾರಿಯನ್ನು ಜಾರಿಗೊಳಿಸುವಲ್ಲಿ ಪಾತ್ರವಿರಬೇಕು.

**ಶ್ರೀ ಡಿ ದೇವರಾಜ ಅರಸು (ಹುಣಸೂರು)**

ಅಧ್ಯಕ್ಷರ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅವರು ಮಂಡಳಿಯ ಸಭೆಗಳ ಮತ್ತು ಅದರ ಉಪಸಮಿತಿಗಳ ಅಧ್ಯಕ್ಷತೆ ವಹಿಸುತ್ತಾರೆ. ಮಂಡಳಿಯ ಹಣಕಾಸು ಮತ್ತು ಕಾರ್ಯಾಂಗ ಆಡಳಿತದ ಮೇಲೆ ನಿಗಾ ಇಡುತ್ತಾರೆ ಹಾಗೂ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಅಧಿಕಾರ ಹೊಂದಿರುತ್ತಾರೆ. ಮಿಗಿಲಾಗಿ, ಕಾರ್ಯ ನಿರ್ವಹಣಾಧಿಕಾರಿಯ ಅಧಿಕಾರಿಗಳಿಗೆ ಅಧ್ಯಕ್ಷರು ಈ ಬಗೆಯ ಅಧಿಕಾರಗಳನ್ನು ಹೊಂದಿರುತ್ತಾರೆ. ನೀವು ಅಧ್ಯಕ್ಷರು ಇನ್ನಾವ ರೀತಿಯ ಅಧಿಕಾರ ಪಡೆದಿರಬೇಕೆಂದು ಅಪೇಕ್ಷಿಸುತ್ತೀರಿ?

ಶ್ರೀ ಎಚ್.ವಿ. ಕೌಜಲಗಿ – ನಾನು ಹೇಳಿದಂತೆ ಇವೆಲ್ಲ ವಿವರಗಳಲ್ಲಿ ನೋಡಬೇಕಾದ ವಿಚಾರಗಳು ನಾನು ಅವನ್ನು ವಿವರಿಸಬೇಕು. ಸದ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಕೊಟ್ಟಿರುವ

ಅಧಿಕಾರಿಗಳು ಹಲವಾರಿದ್ದು ಅವು ತುಂಬಾ ಹೆಚ್ಚಾದವು. ಅವರಿಗೆ ಅಷ್ಟೊಂದು ಅಧಿಕಾರಗಳನ್ನು ಕೊಡಬಾರದು.

ಮುಂದಿನ ಅಂಶ ಸಿಬ್ಬಂದಿಗೆ ಸಂಬಂಧಪಟ್ಟದ್ದು. ಕಾರ್ಯದರ್ಶಿ ಅಥವಾ ಕಾರ್ಯನಿರ್ವಹಣಾಧಿಕಾರಿ ಅಥವಾ ಸಿಬ್ಬಂದಿ ಸದಸ್ಯರಿಗೆ ಸಂಬಂಧಿಸಿದಂತೆ ಒಂದು ಪ್ರತ್ಯೇಕ ಸೇವಾ ಶ್ರೇಣಿಯನ್ನು ಒದಗಿಸಲಾಗಿದೆ. ಅವರು ನಾಮಕರಣಗೊಂಡ ಅಥವಾ ಚುನಾಯಿತ ಸಮಿತಿಯ ಅಧೀನದಲ್ಲಿ ಕೆಲಸಮಾಡಬೇಕು. ಅವರು ಸರ್ಕಾರಕ್ಕಗಲಿ, ಅಂದರೆ ಜಿಲ್ಲಾಧಿಕಾರಿಗಾಗಲಿ ಇಲ್ಲವೆ ತಾಲ್ಲೂಕು ಮಂಡಳಿಗಳಿಗಾಗಲಿ ಅಥವಾ ಪಂಚಾಯತಿಗಳಿಗಾಗಲಿ ಅಧೀನವಲ್ಲ. ಸಾಮರಸ್ಯವಿಲ್ಲದಿದ್ದಲ್ಲಿ ಕೆಲಸ ಸರಾಗವಾಗಿ ಆಗುವುದಿಲ್ಲ. ಅವು ಕೇವಲ ಮುಂಬಯಿ ಪ್ರಾಂತದಲ್ಲಿರುವ ಜಿಲ್ಲಾ ಶಾಖಾ ಮಂಡಳಿಗಳಿದ್ದಂತೆ. ಅಲ್ಲಿ ಆಡಳಿತಾಧಿಕಾರಿ ಅಂದರೆ ಕಛೇರಿಯ ಮುಖ್ಯರು ಸರ್ಕಾರಿ ನೌಕರರಾಗಿದ್ದರೆ ಶಾಲೆ ಮಂಡಳಿಯ ಸದಸ್ಯರು ಚುನಾಯಿತರಾದವರಾಗಿರುತ್ತಾರೆ. ಅವರಿಗೆ ಕಛೇರಿಯ ಮೇಲೆ ಹಿಡಿತವಿರುವುದಿಲ್ಲ. ಮುಖ್ಯಾಧಿಕಾರಿಯ ಮೇಲೆ ಏನಾದರೂ ಕ್ರಮಕೈಗೊಳ್ಳಬೇಕೆಂದಿದ್ದಲ್ಲಿ ಅವರು ಸರ್ಕಾರಕ್ಕೆ ವರದಿ ಮಾಡಬೇಕು. ಸರ್ಕಾರಿ ನೌಕರನಾಗಿ ಆತನ ಮೇಲೆ ಕ್ರಮ ಜರುಗಿಸಲು ತುಂಬಾ ಸಮಯ ಹಿಡಿಯುತ್ತದೆ. ಜೊತೆಗೆ ಅವನು ಸಾಮಾನ್ಯವಾಗಿ ಶಿಕ್ಷೆಯಿಂದ ತಪ್ಪಿಸಿ ಕೊಳ್ಳುತ್ತಾನೆ ಮತ್ತು ಏನನ್ನೂ ಮಾಡಲಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಅಂತಹ ಅಧಿಕಾರಿಯು ಶುದ್ಧವಾಗಿ ಸರ್ಕಾರಿ ನೌಕರನಾಗಿರಬೇಕು. ಇಲ್ಲವೆ ಮಂಡಳಿಯ ನೌಕರನಾಗಿರಬೇಕು. ಆಗ ಅಲ್ಲಿ ಕೆಲಸ ಸರಾಗವಾಗಿ ನಡೆಯುತ್ತವೆ. ಎರಡನೆಯ ಅಂಶವೆಂದರೆ ಈ ಅಧಿಕಾರಿಗಳನ್ನು ವರ್ಗಾವಣೆ ಮಾಡುವಂತಿರಬೇಕು.

ಶ್ರೀ ಆರ್. ಚನಿಗರಾಮಯ್ಯ – ಅವರನ್ನು ವರ್ಗಾವಣೆ ಮಾಡಬಹುದು.

ಶ್ರೀ ಎಚ್.ವಿ. ಕೌಜಲಗಿ – ವರ್ಗಾವಣೆಯ ವಿಷಯ ತುಂಬಾ ಕಠಿಣವಾದುದು. ಅದನ್ನು ಜಾರಿಗೆ ತರುವುದು ಸಂಬಂಧಿಸಿದ ವ್ಯಕ್ತಿ ಸರ್ಕಾರಿ ನೌಕರನಾಗಿದ್ದಾಗ ಮಾತ್ರ ಸಾಧ್ಯ. ಆದರೆ ಆತ ಸ್ಥಳೀಯ ಪ್ರಾಧಿಕಾರದ ನೌಕರನಾಗಿದ್ದರೆ ಅದೂ ಕಷ್ಟ. ಉದಾಹರಣೆಗೆ ಬೆಳಗಾಂವಿ ಜಿಲ್ಲೆಗೆ ಒಬ್ಬ ಎಂಜಿನಿಯರಿರುತ್ತಾರೆ. ಹಾಗೆಯೇ ಚಿಕ್ಕಮಗಳೂರು ಜಿಲ್ಲೆಗೂ ಒಬ್ಬ ಇಂಜಿನಿಯರ್ ಇರುತ್ತಾನೆ. ಬೆಳಗಾವಿ ಜಿಲ್ಲೆ ದೊಡ್ಡದಾಗಿದ್ದು ಅಲ್ಲಿನ ಕೆಲಸ ಕಾರ್ಯಗಳೂ ಅಧಿಕವಿರುತ್ತವೆ. ಅವರಿಗೆ 800 ರೂ. ಪಗಾರವಿರುತ್ತದೆ. ಅದೇ ಚಿಕ್ಕದಾಗಿರುವ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಲಸ ಕಾರ್ಯಗಳು ಕಡಿಮೆ ಇದ್ದು ಅಲ್ಲಿನ ಕೆಲಸಗಳು ಡೆಪ್ಯೂಟಿ ಎಂಜಿನಿಯರ್‌ನ ಕೆಲಸಕ್ಕೆ ಸಮಾನವಾಗಿರುತ್ತವೆ.

ಶ್ರೀ ಚೆನ್ನಿಗರಾಮಯ್ಯ – ಅದಕ್ಕೆ ಯಾವುದೇ ಸಮರೂಪದ ಕಾನೂನಿಲ್ಲ.

ಶ್ರೀ ಎಚ್.ವಿ. ಕೌಜಲಗಿ – ನೀವು ಇನ್ನು ಹತ್ತು ವರ್ಷಗಳ ಅನಂತರ ಸಮರೂಪದ ವಿಸ್ತೀರ್ಣವುಳ್ಳ ಜಿಲ್ಲೆಗಳನ್ನು ರಚಿಸಬಹುದು. ಆದರೆ ಅದು ಇಂದು ಇರುವಂತೆ ಕಾನೂನನ್ನು ಜಾರಿ ಮಾಡಬೇಕು. ಬೆಳಗಾಂವಿ ಜಿಲ್ಲೆಯ ಎಂಜಿನಿಯರನ್ನು ನೀವು ಕಾರವಾರದಂತಹ ಸಣ್ಣ ಜಿಲ್ಲೆಗೆ ವರ್ಗಾಯಿಸಬಹುದು ಅಥವಾ ಕಾರವಾರ ಜಿಲ್ಲೆಯ ಎಂಜಿನಿಯರನ್ನು ಇತರ ಜಿಲ್ಲೆಗೆ ಹಾಕಬಹುದು. ವೇತನ ಶ್ರೇಣಿಗಳ ಬಗ್ಗೆ ಏನು? ಇಲ್ಲಿ ಅವರು 200–300 ರೂ.ಗಳ ಸಂಬಳ ಪಡೆದರೆ ಅಲ್ಲಿ 800 ರೂ.ಗಳ ಸಂಬಳವಿರುತ್ತದೆ.

ಎರಡನೆಯದಾಗಿ ಅಧಿಕಾರಿಗಳನ್ನು ವರ್ಗಾ ಮಾಡುವರಾರು? ಉದಾಹರಣೆಗೆ, ತಾಲ್ಲೂಕು ಮಂಡಳಿಯೊಂದು ತಾನು ಸ್ವತಂತ್ರವಾಗಿರುವುದರಿಂದ ತನಗೆ ಮುಖ್ಯಾಧಿಕಾರಿ ಬೇಕಾಗಿಲ್ಲ ಎಂದು ಹೇಳುತ್ತದೆ. ಅಂತಹ ಸನ್ನಿವೇಶದಲ್ಲಿ ನಾವೇನು ಮಾಡಬಹುದು? ಮುಂಬಯಿನಲ್ಲಿ ಅಂತಹ ಒಂದು ಕಾನೂನು ಮಾಡಿದರು; ಆದರೆ ಅದನ್ನು ಆಚರಣೆಗೆ ತರುವುದು ಸಾಧ್ಯವಿಲ್ಲವೆಂದು ಜಾರಿಗೆ ತರಲಿಲ್ಲ. ಸರ್ಕಾರಿ ಅಧಿಕಾರಿಗಳಿದ್ದಲ್ಲಿ ಅವರನ್ನು ವರ್ಗಾವಣೆ ಮಾಡಬಹುದು. ಇಲ್ಲವಾದರೆ ವರ್ಗಾವಣೆಯ ನಿಯಮಗಳು ನಿಯಮಾವಳಿಗಳ ಗ್ರಂಥದಲ್ಲಷ್ಟೇ ಇರುತ್ತವೆ ಅವನ್ನು ಅನುಷ್ಠಾನಕ್ಕೆ ತರಲಾಗುವುದಿಲ್ಲ. ತಾಲ್ಲೂಕು ಮಂಡಳಿ ಒಂದು ಸ್ವತಂತ್ರ ಸಂಸ್ಥೆ ಅವರು ಇಂತಹ ವ್ಯಕ್ತಿ ಬೇಡವೆಂದರೆ ನಾವು ಅವನನ್ನು ಅವರ ಮೇಲೆ ಹೇರಲು ಸಾಧ್ಯವಿಲ್ಲ.

ಕೊನೆಯದಾಗಿ ಕಂದಾಯ ಅಧಿಕಾರಿಗಳನ್ನು ಕುರಿತು ಎರಡು ಮಾತು ಹೇಳುತ್ತೇನೆ. ಈ ಅಧಿಕಾರಿಗಳಿಗೆ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಮಾಡುವ ಕೆಲಸ ವಹಿಸಲಾಗಿರುತ್ತದೆ. ಈ ಕಾಯಿದೆಯನ್ನು ಜಾರಿಗೊಳಿಸುವುದು ಕಂದಾಯ ಅಧಿಕಾರಿಗಳ ಸಹಕಾರ ಮತ್ತು ಮಾರ್ಗದರ್ಶನವನ್ನು ಅವಲಂಬಿಸಿದೆ. ಕಂದಾಯ ಅಧಿಕಾರಿಗಳ ಸ್ಥಾನವೇನು? ಅವರು ಈಗಾಗಲೇ ಅತಿ ಕಾರ್ಯಭಾರದಿಂದ ಕೂಡಿದ್ದು ಆ ಕೆಲಸವನ್ನು ಮಾಡಿ ಎಂದು ಕೇಳುವುದು ಸೂಕ್ತವೆ? ಕಾಲಕ್ರಮದಲ್ಲಿ ಅವರ ಕೆಲಸದ ಹೊರೆ ಕಡಿಮೆಯಾದರೆ ಅದು ಪರಿಗಣನೆಯ ವಿಷಯವಾಗುತ್ತದೆ. ಆದರೆ ಈಗಿರುವಂತೆ ಅವರಿಗೆ ಕೈತುಂಬಾ ಕೆಲಸವಿದ್ದು ಅದರೊಂದಿಗೆ ಈ ಕೆಲಸವನ್ನು ವಹಿಸಿದರೆ ಕಾರ್ಯಗಳ ಅನುಷ್ಠಾನ ಕೇವಲ ಕಾಗದದಲ್ಲಿಯೇ ಉಳಿಯುತ್ತದೆ. ಉದಾಹರಣೆಗೆ, ಜಿಲ್ಲಾಧಿಕಾರಿಗಳಿಗೆ ವರದಿ ಮಡಿದರೆ ಅವರಿಗೆ ಅದ್ನು ನೋಡಲು ಸಮಯವಿಲ್ಲ. ಅವರು ತಮ್ಮ ಗುಮಾಸ್ತ ಇದನ್ನು ನೋಡುವಂತೆ ಸೂಚಿಸುತ್ತಾರೆ. ಗುಮಾಸ್ತನು ಪರಿಶೀಲನೆ ಮಾಡಿ ಒಂದು ಟಿಪ್ಪಣಿ ಬರೆದು ಜಿಲ್ಲಾಧಿಕಾರಿಗಳ ಮುಂದಿಟ್ಟರೆ ಅವರು ಅದಕ್ಕೊಂದು ಸಹಿ ಮಾಡುತ್ತಾರೆ. ಇದಕ್ಕಿರುವ ಪರ್ಯಾಯ ಸಲಹೆಯೆಂದರೆ ಸ್ಥಳೀಯ ಪ್ರಾಧಿಕಾರಿಗಳ ವ್ಯವಹಾರಗಳನ್ನು ಕಮೀಷನರ್ ದರ್ಜೆಯ ಅಧಿಕಾರಿ ಪರಿಶೀಲಿಸುವಂತಾಗಬೇಕು. ಅವರು ಪ್ರತ್ಯೇಕ ಸಿಬ್ಬಂದಿ ಹೊಂದಿದ್ದು ಈ ಕೆಲಸಕ್ಕಾಗಿಯೇ ನಿಗದಿತನಾಗಿರಬೇಕು. ಇಲ್ಲವಾದರೆ ಕಂದಾಯ ಅಧಿಕಾರಿಗಳಿಗೆ ಈ ಕಾರ್ಯಗಳನ್ನು ವಹಿಸಿದರೆ ಕಾಲಾಭಾವದಿಂದ ಅವರಿಗೆ ಈ ಕಡೆ ಗಮನಹರಿಸುವುದು ಕಷ್ಟವಾಗುತ್ತದೆ.

ಅಧ್ಯಕ್ಷರು – ಈ ಸಭೆ ಅರ್ಧ ಗಂಟೆಯ ಬಿಡುವಿನ ಅನಂತರ ಮತ್ತೆ ಪ್ರಾರಂಭವಾಗುತ್ತದೆ.

ಶ್ರೀ ಎಚ್.ವಿ. ಕೌಜಲಗಿ – ಸ್ವಾಮಿ, ನಾನು ಬಹುತೇಕವಾಗಿ ನಮ್ಮ ಭಾಷಣದ ಕೊನೆಗೆ ಬಂದಿದ್ದೇನೆ. ಈ ಕಾರ್ಯ ಭಾರವನ್ನು ಯಾರಿಗೆ ವಹಿಸಬೇಕು ಎಂಬ ಪ್ರಶ್ನೆ ಏಳುತ್ತದೆ. ನನ್ನ ಸಲಹೆ ಎಂದರೆ ಪ್ರತಿಯೊಂದು ಜಿಲ್ಲೆಗೂ ಈ ವ್ಯವಹಾರಗಳನ್ನು ನೋಡಿಕೊಳ್ಳಲು ಒಬ್ಬ ಸ್ವತಂತ್ರ ಅಧಿಕಾರಿ ಇರಬೇಕು. ನೀವು ಈ ಹುದ್ದೆಯನ್ನು ಸ್ಥಳೀಯ ಸಂಸ್ಥೆಗಳ ಅಧಿಕಾರಿ ಎಂದು ಹೆಸರಿಸಿ ಇಲ್ಲವೇ ಇನ್ನಾವುದೇ ಹೆಸರಿನಿಂದ ಕರೆಯಿರಿ. ಅಂತಹ ಅಧಿಕಾರಿಗೆ ಸಾಕಷ್ಟು ಸಿಬ್ಬಂದಿ ಇದ್ದು ಲೆಕ್ಕ ಪರಿಶೀಲಕರು ಇರಬೇಕು. ಈ ಅಧಿಕಾರಿ ಪಂಚಾಯತಿಗಳು ಮತ್ತು ತಾಲ್ಲೂಕು ಮಂಡಳಿಗಳ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡಲು ಮತ್ತು ಲೆಕ್ಕಪರಿಶೋಧನೆ ಮಾಡಲು ಜವಾಬ್ದಾರನಾಗಿರಬೇಕು. ಆಗ ಮಾತ್ರ

ತಕ್ಷಣ ಗಮನಹರಿಸಲು ಸಾಧ್ಯವಾಗುತ್ತದೆ. ಪಂಚಾಯತಿಗೆ ಏನಾದರೂ ಸಹಾಯ ಬೇಕಿದ್ದರೆ ಅಥವಾ ಪಂಚಾಯತಿಯಲ್ಲಿ ಏನಾದರೂ ತಪ್ಪುಗಳು ಘಟಿಸಿದ್ದರೆ ಆತನು ಕೂಡಲೇ ಅಲ್ಲಿಗೆ ತೆರಳಿ ದೋಷಗಳನ್ನು ಸರಿಪಡಿಸುವಂತಿರಬೇಕು. . ಕೆಲಸವನ್ನು ಕಮಿಷನರುಗಳಿಗೆ ಅಥವಾ ಜಿಲ್ಲಾಧಿಕಾರಿಗೆ ವಹಿಸಿದರೆ ನಾನು ಈಗಾಗಲೇ ಹೇಳಿದಂತೆ ಅದನ್ನು ಅವರ ಕಛೇರಿಯ ಒಬ್ಬ ಗುಮಾಸ್ತ ಪರಿಶೀಲಿಸುತ್ತಾನೆ. ಅವನು ಈ ವಿಷಯದ ಬಗ್ಗೆ ಸಲ್ಲಿಸಿದ ವರದಿಗೆ ಸಹಾಯಕ ಕಲೆಕ್ಟರರೋ ಅಥವಾ ಇನ್ನಾರೋ ಸುಮ್ಮನೆ ಸಹಿ ಮಾಡಿ ಅದನ್ನು ಪಾಸು ಮಾಡುತ್ತಾರೆ. ಆ ಸಂದರ್ಭದಲ್ಲಿ ಸರಿಯಾಗಿ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುವುದಿಲ್ಲ. ಈ ಕಾಯಿದೆಯಿಂದಾಗಿ ಜಿಲ್ಲೆ ತುಂಬ ಪಂಚಾಯಿತಿಗಳು ಮತ್ತು ತಾಲ್ಲೂಕು ಮಂಡಳಿಗಳು ಆಸ್ತಿತ್ವಕ್ಕೆ ಬರುತ್ತವೆ. ಈ ಕಾಯಿದೆಯನ್ನು ಅನುಷ್ಠಾನಗೊಳಿಸಲು ಅಥವಾ ಈ ಸಂಸ್ಥೆಗಳನ್ನು ನಿಯಂತ್ರಿಸಲು ಪ್ರತ್ಯೇಕ ಇಲಾಖೆಯ ಅಗತ್ಯವಿದೆ. ಈ ಉದ್ದೇಶಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ರಚಿಸಬೇಕು. ಅಲ್ಲಿರತಕ್ಕಂತಹ ಅಧಿಕಾರಿಗಳು ಕಂದಾಯ ಅಧಿಕಾರಿಗಳಾಗಿರಲಿ ಅಥವಾ ಇತರ ಯಾವುದೇ ಅಧಿಕಾರಿಯಾಗಿರಲಿ ಅಂತಹವರು ಈ ಕೆಲಸಕ್ಕಾಗಿಯೇ ಸಮಗ್ರ ಜವಾಬ್ದಾರಿ ಹೊತ್ತವರಾಗಿರಬೇಕು.

ಶ್ರೀ ಎ.ಎಸ್. ಪಾಟೀಲ್ (ನರಗುಂದ) ಅವರು ಈ ಕಾಯಿದೆಯ ಅನುಷ್ಠಾನದೊಂದಿಗೆ ಹೇಗೆ ಸಂಬಂಧ ಹೊಂದಿದ್ದಾರೆ?

ಶ್ರೀ ಎಚ್.ವಿ. ಕೌಜಲಗಿ – ಗೌರವಾನ್ವಿತ ಸದಸ್ಯರು ಈ ಕಾಯಿದೆಯ ಹನ್ನೆರಡನೇ ಅಧ್ಯಾಯವನ್ನು ನೋಡಿದರೆ ತಿಳಿಯುತ್ತದೆ. ಸ್ಥಳೀಯ ಸಂಸ್ಥೆಯ ಪರಿವೀಕ್ಷಣೆಯನ್ನು ಕಮೀಷನರ್ ಅಥವಾ ಡೆಪ್ಯೂಟಿ ಕಮಿಷನರ್ ಮಾಡಬೇಕೆಂದಿರುವುದು. ಅಂತಹ ಇನ್ನು ಹಲವು ಇಲಾಖೆಗಳು ನಿಯಂತ್ರಣ ಹೊಂದಲು ಅವಕಾಶ ಕಲ್ಪಿಸಲಾಗಿದೆ. ಕೆಲವು ಬಾಬುಗಳಲ್ಲಿ ಕಂದಾಯ ಅಧಿಕಾರಿಗಳ ನಿಯಂತ್ರಣವಿದ್ದರೆ ಇನ್ನು ಕೆಲವು ಬಾಬುಗಳಲ್ಲಿ ಲೆಕ್ಕಪರಿಶೋಧನಾ ಇಲಾಖೆಯ ನಿಯಂತ್ರಣವಿದೆ. ಆದ್ದರಿಂದ ನಿಯಂತ್ರಣ ಅಧಿಕಾರವು ಹಲವು ಕಡೆ ಇರುವುದಕ್ಕಿಂತ ಒಂದು ಇಲಾಖೆಯಲ್ಲಿರುವುದು ಉತ್ತಮ.

ಶ್ರೀ ಜೆ.ಎಚ್. ಪಂಪುದ್ದೀನ್ – ಜಿಲ್ಲಾ ಮಟ್ಟದಲ್ಲಿ ಪಂಚಾಯತಿ ಅಧಿಕಾರಿಯನ್ನು ನೇಮಿಸಿದರೆ ಅದರಿಂದ ಉದ್ದೇಶ ಈಡೇರುವುದೆ?

ಶ್ರೀ ಎಚ್.ವಿ. ಕೌಜಲಗಿ – ನನ್ನ ಪ್ರಶ್ನೆಯೆಂದರೆ ಜಿಲ್ಲಾಧಿಕಾರಿಗಳು ಈಗಾಗಲೇ ಹೆಚ್ಚು ಕಾರ್ಯಭಾರ ಹೊತ್ತಿದ್ದಾರಾದ್ದರಿಂದ ಅವರು ಪಂಚಾಯತಿ ಅಧಿಕಾರಿಗಳಿಂದ ಕೆಲಸ ಮಾಡಿಸಲು ಶಕ್ತರಾಗುವುದಿಲ್ಲ. ಮುಂಬಯಿ ಸರ್ಕಾರದಲ್ಲಿ ಈ ಮಸೂದೆಯಲ್ಲಿ ಸೂಚಿಸಿರುವಂತೆ ಕಮಿಷನರುಗಳಿಗೆ ಈ ಕಾರ್ಯವನ್ನು ವಹಿಸಲಾಗುತ್ತಿತ್ತು. ಅದು ನಿರ್ವಹಿಸಲಾರದ ಸ್ಥಿತಿಗೆ ಬಂದಿತು. ಪ್ರತಿಯೊಂದು ಜಿಲ್ಲೆಯಲ್ಲೂ ಅನೇಕ ಗ್ರಾಮ ಪಂಚಾಯತಿಗಳು ಮತ್ತು ತಾಲ್ಲೂಕು ಮಂಡಳಿಗಳಿವೆ. ಕಮಿಷನರುಗಳು ಪಂಚಾಯಿತಿಗಳು ಮತ್ತು ತಾಲ್ಲೂಕು ಮಂಡಳಿಗಳಿವೆ. ಕಮಿಷನರುಗಳು ಪಂಚಾಯಿತಿಗಳನ್ನು ನಿಯಂತ್ರಿಸಲಾಗಲಿಲ್ಲ; ಅದರಿಂದಾಗಿ ಅವರು ಸ್ಥಳೀಯ ಸಂಸ್ಥೆಗಳಿಗೆ ನಿಮ್ಮದೇ ಆದ

ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳಿ ಅಂದರು. ಅಲ್ಲಿ ಎರಡು ಗುಂಪಿನ ಲೆಕ್ಕಪರಿಶೋಧಕರಿದ್ದರು. ಒಂದು ತಂಡ ಸ್ಥಳೀಯ ಮಂಡಗಳಿಗೆ ಸಂಬಂಧಿಸಿದ್ದರೆ ಇನ್ನೊಂದು ತಂಡ ಕಲೆಕ್ಟರ್ ಅಥವಾ ಕಮಿಷನರುಗಳ ಅಧೀನದಲ್ಲಿರುತ್ತಿತ್ತು. ಯಾವುದೇ ಅಕ್ರಮ ಅಥವಾ ದುರಾಡಳಿತ ಅಥವಾ ಅವ್ಯವಸ್ಥೆ ನಡೆದಿದ್ದಾಗಲೂ ಅವರು ಕೂಡಲೇ ಅತ್ತ ಗಮನಹರಿಸಲಾಗುತ್ತಿರಲಿಲ್ಲ. ತರುವಾಯ ಅದಕ್ಕೊಂದು ಪ್ರತ್ಯೇಕ ಇಲಾಖೆ ಇರಬೇಕು ಅಥವಾ ಪ್ರತ್ಯೇಕ ಅಧಿಕಾರಿ ಇರಬೇಕು ಎಂದು ಭಾವಿಸಿ ಒಂದು ಹುದ್ದೆಯನ್ನು ಸೃಷ್ಟಿಸಲಾಯಿತು. ಆ ಹುದ್ದೆಗೆ ಸ್ಥಳೀಯ ಪ್ರಾಧಿಕಾರದ ಕಮಿಷನರ್ ಎಂಬ ಪದನಾಮ ಕೊಡಲಾಯಿತು. ಆ ಅಧಿಕಾರಿಗೆ ಸಮಗ್ರ ಕೆಲಸ ವಹಿಸಲಾಯಿತು. ಆಗ ಆಡಿಟರ್‌ಗಳು, ಪರಿವೀಕ್ಷಣಾ ಸಿಬ್ಬಂದಿ ಮತ್ತು ಮೇಲ್ವಿಚಾರಣಾ ಸಿಬ್ಬಂದಿ ಅವರ ಅಧೀನಕ್ಕೆ ಬಂದುದರಿಂದ ಅವರು ತಕ್ಷಣ ಯಾವುದೇ ವಿಷಯಕ್ಕಾದರೂ ಗಮನಹರಿಸುವುದು ಸಾಧ್ಯವಾಯಿತು. ನಾನು ಜಿಲ್ಲಾಧಿಕಾರಿಗಳು ಕಾರ್ಯ ಮಾಡಲು ಅಸಮರ್ಥರಂದಾಗಲಿ, ಅಥವಾ ಅದು ಅವರಿಗೆ ಸಂಬಂಧಿಸಿದ ವಿಷಯವೆಂದಾಗಲಿ ಹೇಳುತ್ತಿಲ್ಲ. ಆದರೆ ನನ್ನ ಮುಖ್ಯ ಅಂಶವೆಂದರೆ ಈಗಾಗಲೇ ಅವರಿಗೆ ಅನೇಕ ಜವಾಬ್ದಾರಿಗಳಿರುವುದರಿಂದ ಅವರ ಆ ಬಹುಮುಖ ಕರ್ತವ್ಯಗಳಲ್ಲಿ ಕಾಯಿದೆಯ ವಿಧಿಗಳನ್ನು ಕಾರ್ಯಗತಗೊಳಿಸಲು ಅವರಿಗೆ ಸಾಧ್ಯವಾಗುವುದಿಲ್ಲವೆಂದು ಮಾತ್ರ ಹೇಳುವುದು.

ಶ್ರೀ ಆರ್. ಚೆನ್ನಿಗರಾಮಯ್ಯ – ದಿನನಿತ್ಯದ ಕೆಲಸಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಅಥವಾ ಮುಖ್ಯಾಧಿಕಾರಿಗಳು ನೋಡಿಕೊಳ್ಳುತ್ತಾರೆ. ಜಿಲ್ಲಾಧಿಕಾರಿಗಳು ಮಧ್ಯ ಪ್ರವೇಶಿಸುವ ಸಂದರ್ಭಗಳು ವಿರಳವಾಗಿ ಮಾತ್ರ ಬರುತ್ತವೆ.

ಶ್ರೀ ಎಚ್.ವಿ. ಕೌಜಲಗಿ – ಲೆಕ್ಕ ಪರಿಶೋಧನೆ ವಿಷಯ ಬಂದೇ ಬರುತ್ತದೆ.

ಶ್ರೀ ಆರ್. ಚೆನ್ನಿಗರಾಮಯ್ಯ – ಅದಕ್ಕಾಗಿ ಪ್ರತ್ಯೇಕ ಇಲಾಖೆಯೇ ಇದೆ.

ಶ್ರೀ ಎಚ್.ವಿ. ಕೌಜಲಗಿ – ಲೆಕ್ಕಪರಿಶೋಧಕರು ಒಂದು ಇಲಾಖೆಯಲ್ಲಿ ಮತ್ತು ನಿಯಂತ್ರಣ ಅಧಿಕಾರಿ ಇನ್ನೊಂದು ಇಲಾಖೆಯಲ್ಲಿ ಏಕೆ ಕೆಲಸ ಮಾಡಬೇಕು? ಅವರನ್ನು ಒಂದೇ ಇಲಾಖೆಯಾಗಿ ಏಕೆ ತರಬಾರದು. ಲೆಕ್ಕಪರಿಶೋಧನೆ ಲೆಕ್ಕ ಪರಿಶೋಧನೆಯ ಜೊತೆಗೆ ಆಡಳಿತ ವ್ಯವಹಾರಗಳ ಬಗ್ಗೆ ನಿಯತವಾದ ಪರಿಶೀಲನೆ ಇರುವುದು ಅಗತ್ಯ. ಆಗ ಮಾತ್ರ ನಿಯಮಗಳು ಮತ್ತು ಉಪನಿಯಮಗಳಿಗನುಗುಣವಾಗಿ ಕಾಯಿದೆಯನ್ನು ಜಾರಿಗೊಳಿಸಬಹುದು. ನಾವು ಮುಖ್ಯಾಧಿಕಾರಿಗೆ ಇಡೀ ಕೆಲಸದ ಜವಾಬ್ದಾರಿಯನ್ನು ಕೊಟ್ಟರೆ ಆತನ ಕೆಲಸವನ್ನು ತಪಾಸಿಸುವವರೇ ಇಲ್ಲದಂತಾಗುತ್ತದೆ. ನಾನು ಪ್ರಾರಂಭದಲ್ಲೇ ಹೇಳಿದಂತೆ ಕಾರ್ಯದರ್ಶಿ ಅಥವಾ ಮುಖ್ಯಾಧಿಕಾರಿ ಇಲ್ಲವೆ ಸಂಬಂಧಿಸಿದ ಎಂಜಿನಿಯರ್ ಈ ಮಂಡಳಿಗಳ ಅಧೀನದಲ್ಲಿ ಕೆಲಸ ಮಾಡುವವರಾಗಿರುತ್ತಾರೆ. ಅವರು ಸರ್ಕಾರಿ ನೌಕರರಾಗಿದ್ದರೆ ಅವರನ್ನು ಸ್ಥಳೀಯ ಪ್ರಾಧಿಕಾರ ಅಥವಾ ಜಿಲ್ಲೆಯ ಅಧಿಕಾರಿ ನಿಯಂತ್ರಿಸಲು ಸಾಧ್ಯವಾಗುತ್ತದೆ. ಕೊನೆಯ ಪಕ್ಷ ಈ ಅಧಿಕಾರಿಗಳನ್ನು ನಿಯಂತ್ರಿಸಲು ಇಲಾಖಾ ಮುಖ್ಯರೊಬ್ಬರಿರಬೇಕು. ಇಲ್ಲದಿದ್ದರೆ ಅವರು ಮಂಡಳಿಯ ನೌಕರರಾಗಲಿ ಇಲ್ಲವೇ ಸರ್ಕಾರದ ನೌಕರರಾಗಲಿ ಆಗಿರುವುದಿಲ್ಲ.

ಶ್ರೀ ಸಿ.ಕೆ. ರಾಮಯ್ಯ ಶೆಟ್ಟಿ (ಚಿಕ್ಕ ನಾಯಕನಹಳ್ಳಿ) ಈ ಸಂಬಂಧವಾಗಿ ನಿಮ್ಮ ಸಲಹೆ ಏನು? ಅವರು ಯಾರ ಅಧೀನದಲ್ಲಿ ಕೆಲಸ ಮಾಡಬೇಕು?

ಶ್ರೀ ಎಚ್.ವಿ. ಕೌಜಲಗಿ – ಅವರು ಸರ್ಕಾರದ ನೌಕರರಾಗಿರಬೇಕು. ಆಗ ಸ್ವಾಭಾವಿಕವಾಗಿಯೇ ಅವರು ಜಿಲ್ಲೆಯ ಅಧಿಕಾರಿಯ ಅಧೀನದಲ್ಲಿರುತ್ತಾರೆ.

ಮಸೂದೆಯಲ್ಲಿ 1500 ಜನಸಂಖ್ಯೆಯಿಂದ 10,000 ಜನಸಂಖ್ಯೆಯವರೆಗೂ ಒಂದು ಗ್ರಾಮ ಪಂಚಾಯತಿ ಇರಲು ಅವಕಾಶ ಕಲ್ಪಿಸಲಾಗಿದೆ. ಆದರೆ ಈ ಜನ ಸಂಖ್ಯಾವಾರು ಪಂಚಾಯತಿಗಳ ನಡುವೆ ಯಾವುದೇ ವ್ಯತ್ಯಾಸ ನಮೂದಿಸಿಲ್ಲ. ಈ ಪಂಚಾಯತಿಗಳು ಚೆನ್ನಾಗಿ ಕೆಲಸ ಮಾಡುವಂತಾಗಲು ಅವುಗಳನ್ನು ಆದಾಯಕ್ಕನುಗುಣವಾಗಿ ವರ್ಗೀಕರಿಸುವುದು ಸೂಕ್ತ. ಉದಾಹರಣೆಗೆ ರೂ. 5000 ದವರೆಗೆ ಆದಾಯವಿರುವ ಪಂಚಾಯತಿಗಳನ್ನು ಒಂದು ವರ್ಗಕ್ಕೂ ರೂ 5000 ರಿಂದ ರೂ. 10,000 ರವರೆಗೆ ಆದಾಯವಿರುವ ಪಂಚಾಯತಿಗಳನ್ನು ಇನ್ನೊಂದು ವರ್ಗಕ್ಕೂ ರೂ 10000ದ ಮೇಲೆ ಆದಾಯವಿರುವ ಪಂಚಾಯತಿಗಳನ್ನು ಮೂರನೆ ವರ್ಗಕ್ಕೂ ಸೇರಿಸಿ ವಿಂಗಡಿಸಬೇಕು. ಇದು ಪಂಚಾಯತಿಗಳ ಸುಗಮ ನಿರ್ವಹಣೆಗೆ ಅನುಕೂಲ ಕಲ್ಪಿಸುತ್ತದೆ. ಏಕೆಂದರೆ ಇಲ್ಲಿ ಕಾರ್ಯದರ್ಶಿ ಮತ್ತಿತರ ಸಿಬ್ಬಂದಿಗೆ ಸಂಬಳ ನೀಡಬೇಕಾದ ವಿಷಯ ಎದುರಾಗುತ್ತದೆ. ಮಸೂದೆಯಲ್ಲಿ ಕಾರ್ಯದರ್ಶಿಯನ್ನು ನೇಮಕ ಮಾಡುವ ಅವಕಾಶವಿದ್ದು ಅವರ ಸಂಬಳಕ್ಕೆ ಸಂಬಂಧಿಸಿದಂತೆ ಯಾವುದೇ ತಾರತಮ್ಯವನ್ನು ಮಾಡುವಂತಿಲ್ಲ. ಒಂದು ಪಕ್ಷ 1500 ಜನಸಂಖ್ಯೆ ಇರುವ ಒಂದು ಗ್ರಾಮ ಪಂಚಾಯತಿ ಇದೆ ಎಂದಿಟ್ಟುಕೊಳ್ಳಿ, ಅದಕ್ಕೆ ವಾರ್ಷಿಕವಾಗಿ ರೂ. 3000 ಗಳಿಗಿಂತ ಹೆಚ್ಚಿನ ಆದಾಯವಿರುವುದು ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ದೊಡ್ಡ ಸಂಪಾಯತಿ ತನ್ನ ಕಾರ್ಯದರ್ಶಿಗೆ ನೀಡುವಷ್ಟು ಸಂಬಳವನ್ನು ಈ ಕಿರಿಯ ಪಂಚಾಯತಿ ನೀಡಲಾರದು. ಆದ್ದರಿಂದ ನಾವು ವೇತನ ಶ್ರೇಣಿಯ ದೃಷ್ಟಿಯಿಂದ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳ ನಡುವೆ ವ್ಯತ್ಯಾಸವನ್ನು ಗುರುತಿಸಬೇಕು. ಮಿಗಿಲಾಗಿ ಸಣ್ಣ ಪಂಚಾಯತಿಗಳಲ್ಲಿ ಕೆಲಸವೂ ಕಡಿಮೆ ಇರುತ್ತದೆ. ಆದ್ದರಿಂದ ಈ ಪಂಚಾಯತಿಗಳನ್ನು ಆದಾಯದ ಆಧಾರದ ಮೇರೆಗೆ ವರ್ಗೀಕರಿಸುವುದು ಉತ್ತಮ.

ಅಧಿಕಾರಾವಧಿಯ ವಿಷಯವು ಅಲ್ಪ ವಿವರಗಳ ವಿಷಯವಾಗಿದ್ದು ಆ ಸಣ್ಣ ವಿವರಗಳ ಬಗ್ಗೆ ನಾನು ಈ ಹಂತದಲ್ಲಿ ಪ್ರಸ್ತಾಪಿಸಬಯಸುವುದಿಲ್ಲ.

ನನಗೆ ಮಾತನಾಡಲು ಇಷ್ಟೊಂದು ಸಮಯ ನೀಡಿದ್ದಕ್ಕಾಗಿ ಅಧ್ಯಕ್ಷರಿಗೆ ಕೃತಜ್ಞತೆ ಸಲ್ಲಿಸುತ್ತ ನಾನು ನನ್ನ ಮಾತನ್ನು ಮುಗಿಸುತ್ತೇನೆ.

(ಕನ್ನಡಕ್ಕೆ ಡಾ॥ ಡಿ.ಎಸ್. ಜಯಪ್ಪಗೌಡ)

(ದಿನಾಂಕ: 6–5–1958)

# ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ

1957

**ಶ್ರೀ ಹೆಚ್.ವಿ. ಕೌಜಲಗಿ (ಪರಸಗಡ)** – ಮಾನ್ಯ ಸಭಾಧ್ಯಕ್ಷರೇ, ನಾನು ಈ ತಿದ್ದುಪಡಿ ಮಸೂದೆಯನ್ನು ಬೆಂಬಲಿಸುತ್ತೇನೆ. ಆದಾಗ್ಯೂ, ನಾನು ಬಾಂಬೆ ಸಹಕಾರಿ ಸಂಘಗಳ ಅಧಿನಿಯಮದ ಪ್ರಕರಣ 51ಕ್ಕೆ ತಿದ್ದುಪಡಿ ಮಾಡಲು ಬಯಸಿರುವ ಖಂಡ 6ನ್ನು ಕುರಿತು ಕೆಲವು ಅಭಿಪ್ರಾಯಗಳನ್ನು ತಿಳಿಸಬಯಸುತ್ತೇನೆ.

ಅಧಿನಿಯಮದಡಿಯಲ್ಲಿ ಗೊತ್ತುಪಡಿಸಿದ ಅವದಿಯೊಳಗೆ ರಿಜಿಸ್ಟ್ರಾರ್‌ರ ಮೂಲಕ ಅಥವಾ ಅವರ ನಾಮನಿರ್ದೇಶಿತನ ಮೂಲಕ ಚುನಾವಣಾ ವಿವಾದಗಳನ್ನು ವಿಲೇ ಮಾಡಿರುವುದಿಲ್ಲ ಎಂಬುದನ್ನು ಸರ್ಕಾರ ತಿಳಿದುಕೊಂಡಿರುವುದಕ್ಕೆ ನನಗೆ ಸಂತೋಷವಾಗಿದೆ. ಅವಶ್ಯವಾಗಿ, ಈ ಅಧಿನಿಯಮದಲ್ಲಿ, ಉದ್ಭವಿಸುವ ಎಲ್ಲಾ ವಿವಾದಗಳನ್ನು, ಇವುಗಳನ್ನು ನೋಂದಾಯಿಸಿದ ದಿನಾಂಕದಿಂದ ಎರಡು ತಿಂಗಳುಗಳೊಳಗೆ ವಿಲೆ ಮಾಡಬೇಕೆಂದು ಗೊತ್ತುಪಡಿಸಿರುತ್ತದೆ. ಆದರೆ ವಾಸ್ತವವಾಗಿ ಈ ವಿವಾದಗಳು ಯಾವುದೇ ರೀತಿಯಾಗಿ ಎರಡು ತಿಂಗಳುಗಳೊಳಗೆ ವಿಲೆಯಾಗಿಲ್ಲ. ಆದ್ದರಿಂದ ಸರ್ಕಾರವು ಈ ಎಲ್ಲಾ ವಿವಾದಗಳನ್ನು 30 ದಿನಗಳೊಳಗೆ ನೋಂದಾಯಿಸಬೇಕೆಂದು ಮತ್ತು ಇವುಗಳನ್ನು ನೋಂದಾಯಿಸಿದ ದಿನಾಂಕದಿಂದ ಎರಡು ತಿಂಗಳುಗಳ ಅವಧಿಯೊಳಗೆ ವಿಲೆ ಮಾಡಬೇಕೆಂದು ಗೊತ್ತುಪಡಿಸಿರುವಲ್ಲಿ ಒಳ್ಳೆಯ ಕಾರ್ಯವನ್ನು ಮಾಡಿರುತ್ತದೆ.

ಆದಾಗ್ಯೂ, ನಾನು, ಇದರ ಸಣ್ಣ ತಿದ್ದುಪಡಿಯನ್ನು ಮಾಡಿದ್ದರೂ, ಚುನಾವಣಾ ವಿವಾದಗಳನ್ನು ಎರಡು ತಿಂಗಳುಗಳೊಳಗೆ ವಿಲೆ ಮಾಡಲು ಸಾಧ್ಯವಿಲ್ಲವೆಂದು ನಿವೇದಿಸುತ್ತೇನೆ. ಸಾಮಾನ್ಯವಾಗಿ ಅಧಿಕಾರದಲ್ಲಿರುವ ಪಕ್ಷವು ತನ್ನ ಅಧಿಕಾರವನ್ನು ತ್ಯಜಿಸಲು ಇಚ್ಛಿಸುವುದಿಲ್ಲ ಮತ್ತು ಇದು ಯಾವಾಗಲು ಚುನಾವಣಾ ತಂತ್ರಗಳನ್ನು ಮಾಡುತ್ತದೆ ಎಂಬುದು ನಮಗೆಲ್ಲರಿಗೂ ಗೊತ್ತಿರುವಂತಹ ಸಂಗತಿ. ಈ ಸಂಬಂಧದಲ್ಲಿ ನಾನು ಒಂದು ಉದಾಹರಣೆಯನ್ನು ನೀಡುತ್ತೇನೆ. ಮಾನ್ಯ ಸಹಕಾರ ಸಚಿವರು ಒಮ್ಮೆ ಕೆಲವು ವರ್ಷಗಳ ಹಿಂದೆ ಜಿಲ್ಲಾ ಸಹಕಾರಿ ಬ್ಯಾಂಕಿನ ನಿರ್ದೇಶಕರ ಸ್ಥಾನಕ್ಕಾಗಿ ಬೆಳಗಾವಿ ಜಿಲ್ಲೆಯಿಂದ ಅಭ್ಯರ್ಥಿಯಾಗಿದ್ದರು. ಇವರ ಚುನಾವಣಾ ಅರ್ಜಿಯನ್ನು ಇವರು ದೇಶಾಟನೆ ಮಾಡಿದ ಆಧಾರದ ಮೇಲೆ ಅಂದರೆ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಅವರನ್ನು ಅಪರಾಧಿಯೆಂದು ತೀರ್ಮಾನಿಸಿದ ಆಧಾರದ ಮೇಲೆ ವಜಾ ಮಾಡಲಾಯಿತು. ಈ ವಿಷಯವನ್ನು ರಿಜಿಸ್ಟ್ರಾರರ ನಾಮನಿರ್ದೇಶಿತನಿಗೆ ಕಳುಹಿಸಲಾಯಿತು ಹಾಗೂ ಮಂಡಳಿಯ ಅವಧಿಯು ಮುಗಿದಿದ್ದರೂ ಕೂಡಾ, ಚುನಾವಣಾ ಅರ್ಜಿಯ ವಿಚಾರಣೆಯನ್ನು ಮಾಡಲಾಗಲಿಲ್ಲ. ಇದು ನನ್ನ ಜಿಲ್ಲೆಯಲ್ಲಿ ನಡೆಯುವ ವ್ಯವಸ್ಥಿತವಾದ ಮುಖ್ಯ ನೋಟವಾಗಿರುತ್ತದೆ. ಚುನಾವಣೆಗಳು ಬಂದಾಗಲೆಲ್ಲಾ ನಾಮಪತ್ರಗಳನ್ನು ಕೆಲವು ಕಾರಣಗಳಿಗಾಗಿ ಅಥವಾ ಇತರೆ ಕಾರಣಗಳಿಗೆ ಅಂಗೀಕರಿಸುವುದಿಲ್ಲ ಮತ್ತು ಕಟ್ಟಕಡೆಯದಾಗಿ ಇವುಗಳು ತಿರಸ್ಕೃತವಾಗುತ್ತವೆ.

ಈ ಸಂಬಂಧವಲ್ಲಿ ಈ ಅಧಿನಿಯಮದಡಿಯಲ್ಲಿ ಗೊತ್ತುಪಡಿಸಲಾದ ಪ್ರಕ್ರಿಯೆಯು ಸಹ ಹೆಚ್ಚು ತೊಡಕಿನದೆಂದು ನಾನು ಹೇಳಬಹುದಾಗಿರುತ್ತದೆ. ಏಕೆಂದರೆ, ಈ ಅಧಿನಿಯಮದಡಿಯಲ್ಲಿ, ಪಕ್ಷಕಾರನು ಮಂಡಳಿಯ ನೇಮಕಕ್ಕಾಗಿ ಕೇಳಲು ಹಕ್ಕನ್ನು ಹೊಂದಿರುತ್ತಾನೆ ಹಾಗು ಮಂಡಲಿಯ ರಚನೆಯಾದ ನಂತರ ಈ ವಿಷಯದ ಬಗ್ಗೆ ವಿಚಾರ ಮಾಡಲು ಸ್ವಲ್ಪ ಕಾಲಾವಕಾಶವು ಬೇಕಾಗುತ್ತದೆ ಮತ್ತು ವಿರೋಧ ಪಕ್ಷದವರು ಹೊಂದಾಣಿಕೆಗಾಗಿ ವಿಚಾರಿಸಲು ಮುಂದುವರಿಯುತ್ತಾರೆ. ಅಲ್ಲದೆ, ಮಂಡಳಿಯು ರಚನೆಯಾದಾಗ ಅಪೀಲುದಾರನ ಪರವಾಗಿ ನಾಮನಿರ್ದೇಶಿತನು, ಹಾಗೆಯೇ ಅಪೀಲು ಪ್ರತಿವಾದಿಯ ಪರವಾಗಿ ನಾಮನಿರ್ದೇಶಿತನು ಸಹ ಇರುತ್ತಾರೆ. ಮಂಡಳಿಯ ಸದಸ್ಯರೂ ಕೂಡ ಚುನಾವಣಾ ತಂತ್ರಗಳನ್ನು ಮಾಡಲು ಮುಂದುವರಿಯುತ್ತಿತ್ತಾರೆ ಹಾಗೂ ಇವರು ನಿರ್ದಿಷ್ಟ ಅಭ್ಯರ್ಥಿಯನ್ನು ಬೆಂಬಲಿಸಲು ಪ್ರಯತ್ನಿಸುತ್ತಾರೆ ಎಂಬುದಾಗಿ ನಾನು ಹೇಳುತ್ತೇನೆ. ಈ ಪ್ರಕಾರ, ಚುನಾವಣಾ ವಿವಾದಗಳ ವಿಲೆಯ ಸಂಬಂಧವಾಗಿ ಅಧಿನಿಯಮದ ಪ್ರಕರಣ 54ರ ಅಡಿಯಲ್ಲಿ ಹೇಳಲಾದ ಪ್ರಕ್ರಿಯೆಯು ಹೆಚ್ಚು ತೊಡಕಿನದೆಂದು ಮತ್ತು ವಿಳಂಬಕಾರಿಯಾಗಿದೆ ಎಂಬುದಾಗಿ ನಾನು ನಿವೇದಿಸುತ್ತೇನೆ ಮತ್ತು ಸೂಚಿಸಲಾದಂತಹ ಸಣ್ಣ ತಿದ್ದುಪಡಿಯನ್ನು ಸೇರಿಸುವುದರಿಂದ ಏನನ್ನಾದರೂ ಹೆಚ್ಚಿಗೆ ಸಾಧಿಸಬಹುದೋ ಏನೋ ನನಗೆ ಗೊತ್ತಿಲ್ಲ.

ಈ ಅಧಿನಿಯಮದಲ್ಲಿ ಮಾಡಲಾದಂತಹ ಯಾವುದೇ ಉಪಬಂಧಕ್ಕೆ ಕಟ್ಟುನಿಟ್ಟಾಗಿ ಬದ್ಧವಾಗಿರಬೇಕೆಂದು ನಾನು ಸೂಚಿಸುತ್ತೇನೆ. ಈ ಚುನಾವಣಾ ವಿವಾದಗಳನ್ನು ಆರು ತಿಂಗಳು ಅಥವಾ ವರ್ಷದ ನಂತರವೂ ಕೂಡ ವಿಲೇ ಮಾಡಿರುವುದಿಲ್ಲ ಎಂಬುದು ನನ್ನ ಅನುಭವವಾಗಿರುತ್ತದೆ. ವಿಧಿಸಲಾಗಿರುವ ತೊಡಕಿನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಪರೀಕ್ಷಿಸಬೇಕು ಮತ್ತು ಈ ಪ್ರಶ್ನೆಯ ಬಗ್ಗೆ ವಿಚಾರ ಮಾಡಲು ತುಲನಾತ್ಮಕವಾಗಿ ಹೊಸ ಮತ್ತು ಸುಲಭ ವಿಧಾನವನ್ನು ಕಂಡುಕೊಳ್ಳಬೇಕೆಂದು ನಾನು ನಿವೇದಿಸುತ್ತೇನೆ. ನಿರ್ದೇಶಕ ಮಂಡಳಿಯ ಸದಸ್ಯರು ಸ್ವತಃ ತಾವೇ ಚುನಾವಣೆಯನ್ನು ನಡೆಸಿದ್ದು ಇದು ಕಾನೂನಿನ ತತ್ವಕ್ಕೆ ವಿರುದ್ಧವಾಗಿರುತ್ತದೆ. ಇದರಿಂದಾಗಿ ಆ ವ್ಯಕ್ತಿಯು ತನ್ನ ಸ್ವಂತ ಕ್ರಮಗಳ ಬಗ್ಗೆ ತನ್ನನ್ನೇ ವಿಮರ್ಶೆಗೆ ಒಳಗು ಮಾಡಬೇಕಾಗುತ್ತದೆ ಎಂಬುದಾಗಿಯೂ ಸಹ ನಾನು ಹೇಳುತ್ತೇನೆ. ಹಾಗಾಗಿ ಇದು ಕೇವಲ ಸ್ಥಳೀಯ ಸಂಸ್ಥೆ ಅಥವಾ ಪಂಚಾಯತ್ ರೀತಿಯಲ್ಲಿದೆ.

ಚುನಾವಣೆಗಳನ್ನು ಕಾರ್ಯಾಂಗದ ಮೂಲಕ ನಡೆಸಲಾಗುತ್ತದೆ. ಈ ಚುನಾವಣೆಗಳನ್ನೂ ಸಹ ಸಾಮಾನ್ಯವಾಗಿ ಚುನಾವಣಾ ಅಭ್ಯರ್ಥಿಗಳಾಗಿರುವ ಸ್ವತಃ ನಿರ್ದೇಶಕರುಗಳ ಮಂಡಳಿ ಮೂಲಕ ನಡೆಸಕೂಡದು. ಅದರೆ ಸಹಕಾರಿ ಇಲಾಖೆ ಅಥವಾ ಯಾವುದೇ ಇತರ ಇಲಾಖೆಯಂತಹ ಕೆಲವು ಸ್ವಾಯಮಾಡಳಿತದ ಸಂಸ್ಥೆಗಳ ಮೂಲಕ ನಡೆಸಬೇಕು. ಆಗಮಾತ್ರ ಈ ಸಮಸ್ಯೆಯು ಪರಿಹಾರವಾಗುತ್ತದೆ. ಅನ್ಯಥಾ, ಈ ತಿದ್ದುಪಡಿ ವಿಧೇಯಕವನ್ನು ಮಾಡಿದ್ದಾದರೂ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ಅದ್ದರಿಂದ ಸರ್ಕಾರವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಅಂಥ ಚುನಾವಣಾ ವಿವಾದಗಳನ್ನು ಕೊನೆಗಾಣಿಸಬೇಕೆಂದು ನಾನು ಕೋರಿಕೊಳ್ಳುತ್ತೇನೆ.

(ದಿನಾಂಕ: 21.9.1957)

# ಮುನ್ಸೀಫರ ನೇಮಕ

1959

**25.** **ಶ್ರೀ ಹೆಚ್.ವಿ. ಕೌಜಲಗಿ (ಸಂಪಗಾಂವ್)** – ಸರ್ಕಾರವು, ಈ ಮುಂದಿನವುಗಳ ಬಗ್ಗೆ ತಿಳಿಸುವುದೇ?

ಎ) ಏಕೀಕರಣದ ದಿನಾಂಕದಿಂದ ಇಂದಿನವರೆಗೆ ಮೈಸೂರು ಉಚ್ಚ ನ್ಯಾಯಾಲಯದ ನೇಮಕಗೊಂಡ ಮುನ್ಸೀಫ್ (ಸಿವಿಲ್ ನ್ಯಾಯಾಧೀಶರು)ರ ಸಂಖ್ಯೆ;

ಬಿ) ನೇಮಕಗೊಂಡ ಮುನ್ಸೀಫರ ಒಟ್ಟು ಸಂಖ್ಯೆಯ ಪೈಕಿ ಎಷ್ಟು ಮಂದಿ ಗುಮಾಸ್ತ ಉದ್ಯೋಗ ವೃಂದದಿಂದ ಬಂದಿರುವವರಾಗಿರುತ್ತಾರೆ?

ಸಿ) ನೇಮಕಾತಿಗಾಗಿ ಅರ್ಜಿಗಳನ್ನು ಕರೆಯಲಾಗಿತ್ತೇ. ಹಾಗಿದ್ದರೆ, ಯಾವ ದಿನಾಂಕಗಳಂದು?

ಡಿ) ಅರ್ಜಿಗಳನ್ನು ಕರೆಯದೆಯೇ ಯಾವುದೇ ಮುನ್ಸೀಫರ ನೇಮಕಾತಿಗಳನ್ನು ಮಾಡಿಕೊಳ್ಳಲಾಗಿದೆಯೇ ಹಾಗಿದ್ದರೆ, ಎಷ್ಟು?

**ಉತ್ತರ: ಶ್ರೀ ಬಿ.ಡಿ. ಜತ್ತಿ (ಮುಖ್ಯ ಮಂತ್ರಿಗಳು) –**

ಎ) ಉಚ್ಚ ನ್ಯಾಯಾಲಯದಿಂದ ನೇಮಕಾತಿಗಳನ್ನು ಮಾಡಿಕೊಂಡಿರುವುದಿಲ್ಲ. ಸರ್ಕಾರವು 1958ರ ಮೈಸೂರು ಮುನ್ಸೀಫ್ಸ್ (ನೇಮಕಾತಿ) ನಿಯಮಗಳ, ನಿಯಮ 15–ಎಯ ಉಪ–ನಿಯಮ (2)ರ ಪ್ರಕಾರ ಇವುಗಳಲ್ಲಿ ನಿಹಿತವಾದ ಅಧಿಕಾರವನ್ನು ಚಲಾಯಿಸಿ 26 ತಾತ್ಕಾಲಿಕ ಮುನ್ಸೀಫರನ್ನು ನೇಮಕ ಮಾಡಿರುತ್ತದೆ.

ಬಿ) ಹದಿನೈದು.

ಸಿ) 16 ಹುದ್ದೆಗಳ ನೇಮಕಾತಿ ಸಂಬಂಧದಲ್ಲಿ, ಅರ್ಜಿಗಳನ್ನು ಕರೆಯಲಾಗಿರಲಿಲ್ಲ ಮತ್ತು 10 ಹುದ್ದೆಗಳ ನೇಮಕಾತಿಯ ಸಂಬಂಧದಲ್ಲಿ ಉಚ್ಚ ನ್ಯಾಯಾಲಯದಿಂದ 1959ರ ಮಾರ್ಚ್‌ನಲ್ಲಿ ಅರ್ಜಿಗಳನ್ನು ಕರೆಯಲಾಗಿತ್ತು.

(ಡಿ) ಹೌದು, 16.

**ಶ್ರೀ ಹೆಚ್.ವಿ. ಕೌಜಲಗಿ** – 16 ಹುದ್ದೆಗಳ ನೇಮಕಾತಿಯನ್ನು ಅರ್ಜಿಗಳನ್ನು ಕರೆಯದೆ ಏಕೆ ಮಾಡಲಾಯಿತು ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಬಿ.ಡಿ. ಜತ್ತಿ** – ನಿಯಮಗಳಡಿ ಉಚ್ಚ ನ್ಯಾಯಾಲಯವು, ಉಚ್ಚ ನ್ಯಾಯಾಲಯ ಅಥವಾ ಇತರೆ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲಿಪಿಕ ಸಿಬ್ಬಂದಿಯ ಹೆಸರುಗಳನ್ನು

ಪಡೆದುಕೊಳ್ಳಲು ಹಕ್ಕುಳ್ಳದ್ದಾಗಿರುತ್ತದೆ ಮತ್ತು ಇವರು ಈ ನಿಯಮಗಳಡಿಯಲ್ಲಿ ಅವಶ್ಯಕವಾಗಿರುವ ಎಲ್ಲಾ ಷರತ್ತುಗಳನ್ನು ಪೂರೈಸಿದರೆ, ಇವರುಗಳ ಬಗ್ಗೆ ಸರ್ಕಾರಕ್ಕೆ ಶಿಫಾರಸು ಮಾಡಲಾಗುತ್ತದೆ ಮತ್ತು ಸರ್ಕಾರವು ಅವರನ್ನು ನೇಮಕ ಮಾಡಿಕೊಳ್ಳುತ್ತದೆ.

**ಶ್ರೀ ಜಿ. ವೆಂಕಟಾಯಿ ಗೌಡ** – ಈ ಎಲ್ಲಾ ಸಂದರ್ಭಗಳಲ್ಲಿಯೂ ನೇಮಕಾತಿಗಳನ್ನು ಲಿಪಿಕ ಉದ್ಯೋಗಿ ವೃಂದದಿಂದಲೇ ಮಾಡಲಾಗಿದೆಯೋ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಬಿ.ಡಿ. ಜತ್ತಿ** – ಅವರೆಲ್ಲರೂ ಲಿಪಿಕ ದರ್ಜೆಯಿಂದ ಬಂದವರಾಗಿರುತ್ತಾರೆ ಮತ್ತು ಅವರೆಲ್ಲರೂ ಪದವೀಧರರಲ್ಲ.

**ಶ್ರೀ ಎ.ಆರ್. ಕರಿಸಿದ್ದಪ್ಪ** – ವಿಧಾನ ಮಂಡಲ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಕಾನೂನು ಪದವೀಧರರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವುದರಿಂದ ಅವರನ್ನು ಅಡ್ಡಿಪಡಿಸಿರುವುದು ನಿಜವೇ?

**ಶ್ರೀ ಬಿ.ಡಿ. ಜತ್ತಿ** – ನಿಯಮಗಳಡಿಯಲ್ಲಿ, ಕಾನೂನು ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯು ಅರ್ಜಿ ಸಲ್ಲಿಸಲು ಹಕ್ಕುಳ್ಳವರಾಗಿರುತ್ತಾರೆ. ಆದರೆ ಇತರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯು ಹಕ್ಕುಳ್ಳವರಾಗಿರುವುದಿಲ್ಲ.

**ಶ್ರೀ ಜಿ. ಶಿವಪ್ಪ** – ಸರ್ಕಾರವು, ಉಚ್ಚ ನ್ಯಾಯಾಲಯದ ಶಿಫಾರಸ್ಸಿಲ್ಲದೆ ನೇಮಕಾತಿಗಳನ್ನು ಮಾಡಿದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಬಿ.ಡಿ. ಜತ್ತಿ** – ಸರ್ಕಾರವು, ಉಚ್ಚ ನ್ಯಾಯಾಲಯದ ಶಿಫಾರಸ್ಸಿಲ್ಲದೆ ನೇಮಕಾತಿ ಮಾಡಿಕೊಳ್ಳುವಂತಿಲ್ಲ.

**ಶ್ರೀ ಜಿ. ಶಿವಪ್ಪ** – ಉಚ್ಚ ನ್ಯಾಯಾಲಯದಿಂದ ಮಾಡಲಾದ ಶಿಫಾರಸುಗಳನ್ನು ಸರ್ಕಾರದಿಂದ ಸಮಗ್ರವಾಗಿ ಅಂಗೀಕರಿಸಲಾಗಿದೆಯೇ?

**ಶ್ರೀ ಬಿ.ಡಿ. ಜತ್ತಿ** – ನನಗೆ ತಿಳಿದಿರುವಮಟ್ಟಿಗೆ, ನಾವು ಸಾಮಾನ್ಯವಾಗಿ ಉಚ್ಚ ನ್ಯಾಯಾಲಯದಿಂದ ಮಾಡಲಾದ ಶಿಫಾರಸುಗಳನ್ನು ಸಮಗ್ರವಾಗಿ ಅಂಗೀಕರಿಸುತ್ತೇವೆ.

**ಶ್ರೀ ವಿ.ಪಿ. ದೀನದಯಾಳು ನಾಯ್ಡು** – ಅವರಿಗೆ ದೀರ್ಘಾವಧಿ ಸೇವೆ, ಅನುಭವ ಮತ್ತು ವಿದ್ಯಾರ್ಹತೆ ಇದ್ದರೂ, ಕೆಲವು ಪರೀಕ್ಷೆಗಳಿಗೆ ಕೂರುವಂತೆ ಅವರನ್ನು ಕೇಳುವುದು ಅಂಗೀಕಾರಾರ್ಹವೇ?

**ಶ್ರೀ ಬಿ.ಡಿ. ಜತ್ತಿ** – ಇದನ್ನು ಅಂಗೀಕರಿಸಬಹುದು ಅಥವಾ ಅಂಗೀಕರಿಸದಿರಬಹುದು. ಆದರೆ ಅವರಿಗೆ ಒಳ್ಳೆಯ ಅನುಭವವು ಇರುವಾಗ, ಅವರು ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಕಷ್ಟವಾಗುವುದಿಲ್ಲ.

**ಶ್ರೀ ಜಿ. ಶಿವಪ್ಪ** – ನೇಮಕಾತಿಗಳು ತಾತ್ಕಾಲಿಕವಾಗಿದ್ದರೆ, ಸಿವಿಲ್ ನ್ಯಾಯಾಧೀಶರು ಅಥವಾ ಮುನ್ಸೀಫರಾಗಿ ಅವರು ಎಷ್ಟು ಅವಧಿಯವರೆಗೆ ಬದಲಿಯಾಗಿ ಕಾರ್ಯವನ್ನು ನಿರ್ವಹಿಸಬೇಕು?

**ಶ್ರೀ ಬಿ.ಡಿ. ಜತ್ತಿ** – ಒಂದು ಬಾರಿಗೆ ಒಂದು ವರ್ಷದ ಅವಧಿಯವರೆಗೆ ಮಾತ್ರ.

**ಶ್ರೀ ಜಿ.ಬಿ. ಶಂಕರ್ ರಾವ್** – ಈ ಸಿವಿಲ್ ನಾನ್ಯಾಯಾಧೀಶರುಗಳನ್ನು ಕೆಲವು ಅವಧಿಯವರೆಗೆ ನೇಮಕ ಮಾಡಿಕೊಳ್ಳಲಾಗುವುದು ಎಂಬುದಾಗಿ ಹೇಳಲಾಗಿದೆ. ಅವಧಿಯು ಮುಗಿದ ನಂತರ ಅವರ ಸೇವೆಯನ್ನು ಕೊನೆಗೊಳಿಸಲಾಗುತ್ತದೆಯೇ ಮತ್ತು ಹೊಸ ನೇಮಕಾತಿಗಳನ್ನು ಮಾಡಿಕೊಳ್ಳಲಾಗುತ್ತದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಬಿ.ಡಿ. ಜತ್ತಿ** – ಅವಧಿಯು ಮುಗಿದ ನಂತರ, ಅವರನ್ನು ಸೇವೆಯಿಂದ ತೆಗೆದು ಹಾಕಬಹುದಾಗಿರುತ್ತದೆ.

**ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ** – ಸರ್ಕಾರವು ಈ ತಾತ್ಕಾಲಿಕ ನೇಮಕಾತಿಗಳನ್ನು ಮಾಡಿಕೊಳ್ಳಲು ಪ್ರೇರಣೆ ಏನು?

**ಶ್ರೀ ಬಿ.ಡಿ. ಜತ್ತಿ** – ಹುದ್ದೆಗಳು ಖಾಲಿಯಾಗಿದ್ದು, ಇವುಗಳನ್ನು ತಕ್ಷಣ ಭರ್ತಿ ಮಾಡಿಕೊಳ್ಳಬೇಕಾಗಿತ್ತು. ಇದಕ್ಕಾಗಿ ನಿಯಮಗಳು ಮತ್ತು ವಿನಿಯಮನಗಳನ್ನು ರಚಿಸಬೇಕಾಗಿದ್ದು, ನಿಯಮ ಮತ್ತು ವಿನಿಯಮನಗಳ ರಚನೆಯು ಇತ್ಯರ್ಥದಲ್ಲಿರುವಾಗ, ಸರ್ಕಾರವು ಈ ತಾತ್ಕಾಲಿಕ ನೇಮಕಾತಿಗಳನ್ನು ಮಾಡಿಕೊಳ್ಳುವುದು ಅವಶ್ಯಕವಾಗಿರುವುದಾಗಿ ಭಾವಿಸಿತು.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ** – ಯಾವ ನಿಯಮದ ಅಡಿಯಲ್ಲಿ ಅರ್ಜಿಯನ್ನು ಕರೆಯದೆಯೇ 16 ಜನರನ್ನು ಮುನ್ಸೀಫರನ್ನಾಗಿ ನೇಮಕ ಮಾಡಿಕೊಂಡಿರುತ್ತದೆ?

**ಶ್ರೀ ಬಿ.ಡಿ. ಜತ್ತಿ** – ಈ ಪ್ರಶ್ನೆಗೆ ಈಗಾಗಲೇ ನಾನು ಉತ್ತರಿಸಿದ್ದೇನೆ. ಮಾನ್ಯ ಸದಸ್ಯರು ಮೈಸೂರು ಮುನ್ಸೀಫ್ (ನೇಮಕಾತಿ) ನಿಯಮಗಳು, 1958ನ್ನು ಪರಿಶೀಲಿಸಬೇಕಾಗಿ ನಾನು ವಿನಂತಿಸುತ್ತೇನೆ.

**ಶ್ರೀ ಸಿ.ಜೆ. ಮುಕ್ಕಣ್ಣಪ್ಪ** – (ಸಿ)ಗೆ ಪೂರಕವಾಗಿ, ಹಾಗೆ ಮಾಡಿರುವಲ್ಲಿ ಯಾವ ತತ್ವವನ್ನು ಅಳವಡಿಸಿಕೊಳ್ಳಲಾಗಿರುತ್ತದೆ?

**ಶ್ರೀ ಬಿ.ಡಿ. ಜತ್ತಿ** – ಈ ಪ್ರಶ್ನೆಗೆ ನಾನು ಈಗಾಗಲೇ ಉತ್ತರಿಸಿದ್ದೇನೆ. ಅರ್ಜಿಗಳನ್ನು ಕರೆಯಬೇಕೇ ಮತ್ತು ಸಂದರ್ಶನವನ್ನು ನಡೆಸಬೇಕೆ ಅಥವಾ ಉಚ್ಚ ನ್ಯಾಯಾಲಯ ಅಥವಾ ಇತರೇ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಶಿಫಾರಸು ಮಾಡಬೇಕೆ ಎಂಬುದು ಉಚ್ಚ ನ್ಯಾಯಾಲಯದ ವಿವೇಚನೆಯಾಗಿರುತ್ತದೆ.

**ಶ್ರೀ ಜಿ. ದುಗ್ಗಪ್ಪ** – ಸರ್ಕಾರವು, ಉಚ್ಚ ನ್ಯಾಯಾಲಯಕ್ಕೆ ಹೇಳದೆಯೇ ನೇಮಕಾತಿಗಳನ್ನು ಮಾಡಲು ಸಕ್ಷಮವಾಗಿರುತ್ತದೆಯೇ?

**ಶ್ರೀ ಬಿ.ಡಿ. ಜತ್ತಿ** – ಉಚ್ಚ ನ್ಯಾಯಾಲಯದ ಶಿಫಾರಸ್ಸಿನ ಮೇಲೆ ಮಾತ್ರ ಸರ್ಕಾರವು ನೇಮಕಾತಿಯನ್ನು ಮಾಡಿರುತ್ತದೆ ಎಂಬುದಾಗಿ ನಾನು ಈಗಾಗಲೇ ಉತ್ತರಿಸಿದ್ದೇನೆ.

**ಶ್ರೀ ಜೆ.ಎನ್. ಪುಟ್ಟಣ್ಣ** – ಕಾನೂನು ಸಚಿವಾಲಯದ ಲಿಪಿಕ ಸಿಬ್ಬಂದಿ ಮಾತ್ರ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನೀಡಲಾಗಿದೆ. ವಿಧಾನ ಮಂಡಲದ ಸಚಿವಾಲಯದ ಸಿಬ್ಬಂದಿಯು ತೀರ ಅಲ್ಪ ಪ್ರಮಾಣದ ಕಾರ್ಯಕ್ಷೇತ್ರವನ್ನು ಹೊಂದಿರುತ್ತದೆ. ಬಹುಶಃ ಇಲ್ಲಿ ಸೂಕ್ತ ವಿದ್ಯಾರ್ಹತೆಗಳನ್ನು ಹೊಂದಿರುವ ವ್ಯಕ್ತಿಗಳು ಇರಬಹುದು, ಇವರು ಪರೀಕ್ಷೆಗೆ ಕುಳಿತುಕೊಳ್ಳಲು ಯಾವ ಅಡಚಣೆಗಳಿವೆ? ಎಷ್ಟು ಹೇಳಿದರೂ, ಇದೊಂದು ಸರ್ಕಾರಿ ಆದೇಶವಾಗಿದ್ದು ಸರ್ಕಾರಿ ಆದೇಶವು ಮಾನವ ನಿರ್ಮಿತ ಆದೇಶವೇ ಹೊರತು ಬೇರೇನೂ ಅಲ್ಲ. ಆದ್ದರಿಂದ, ಸರ್ಕಾರವು ಇದನ್ನು ಬದಲಾವಣೆ ಮಾಡಲು ಸಕ್ಷಮವಾಗಿರುವುದಿಲ್ಲವೇ?

**ಶ್ರೀ ಬಿ.ಡಿ. ಜತ್ತಿ** – ಇಲ್ಲಾ ಅಧಿನಿಯಮಗಳೂ ಮಾನವನಿರ್ಮಿತವೇ ಆಗಿದ್ದು ಈ ಘನತೆವೆತ್ತ ಸದನದ ಮೂಲಕವೇ ಮಾಡಲಾಗಿರುತ್ತದೆ. ಪ್ರಸಕ್ತ ನಿಯಮಗಳಿಗನುಸಾರವಾಗಿ, ಇದೊಂದು ವ್ಯವಸ್ಥೆಯಾಗಿರುತ್ತದೆ.

**ಶ್ರೀ ಜೆ.ಎನ್. ಪುಟ್ಟಣ್ಣ** – ಸರ್ಕಾರವು ಈ ನಿಯಮಗಳನ್ನು ಬದಲಾವಣೆ ಮಾಡಲು ಇಚ್ಛಿಸುತ್ತದೆಯೇ?

**ಶ್ರೀ ಬಿ.ಡಿ. ಜತ್ತಿ** – ಅದು ಕ್ರಮಕೈಗೊಳ್ಳುವುದರ ಸೂಚನೆಯಾಗಿರುತ್ತದೆ.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಯಾವ ಸಂದರ್ಭಗಳಲ್ಲಿ ಉಚ್ಚ ನ್ಯಾಯಾಲಯವು, 10 ನೇಮಕಾತಿಗಳ ಸಂಬಂಧದಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ ಮತ್ತು 16 ನೇಮಕಾತಿಗಳ ಸಂಬಂಧದಲ್ಲಿ ಶಿಫಾರಸುಗಳನ್ನು ಮಾಡಿರುತ್ತದೆ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಯವರು ನಮಗೆ ತಿಳಿಸುವರೆ?

**ಶ್ರೀ ಬಿ.ಡಿ. ಜತ್ತಿ** – ಉಚ್ಚ ನ್ಯಾಯಾಲಯದಲ್ಲಾಗಲಿ ಅಥವಾ ಇತರ ನ್ಯಾಯಾಲಯಗಳಲ್ಲಾಗಲಿ ಕಾರ್ಯ ನಿರ್ವಹಿಸುತ್ತಿರುವ ವ್ಯಕ್ತಿಗಳ ಸಂಬಂಧದಲ್ಲಿ ಶಿಫಾರಸುಗಳನ್ನು ಮಾಡಲಾಗಿರುತ್ತದೆ ಮತ್ತು ನ್ಯಾಯವಾದಿ ವರ್ಗದ ಸದಸ್ಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಉಚ್ಚ ನ್ಯಾಯಾಲಯವು ಅರ್ಜಿಗಳನ್ನು ಆಹ್ವಾನಿಸದೆ ನೇಮಕ ಮಾಡುವ ಸ್ವಂತ ವಿವೇಚನೆಯನ್ನು ಹೊಂದಿದೆಯೆ? ಹಾಗಿದ್ದರೆ, ಕಾನೂನಿನ ಯಾವ ಉಪಬಂಧಗಳಡಿಯಲ್ಲಿ ಇದನ್ನು ಹೊಂದಿರುತ್ತವೆ?

**ಶ್ರೀ ಬಿ.ಡಿ. ಜತ್ತಿ** – ಉಚ್ಚ ನ್ಯಾಯಾಲಯ ಮತ್ತು ಇತರ ನ್ಯಾಯಾಲಯಗಳಲ್ಲಿ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿರುವವರ ಪೂರ್ವಾಪರಗಳು ಮತ್ತು ಇತಿಹಾಸ ಅವರಿಗೆ ಗೊತ್ತಿರುತ್ತದೆ. ಆದ್ದರಿಂದ ಇವರು ಅವರಿಂದ ಅರ್ಜಿಗಳನ್ನು ಸಲ್ಲಿಸುವುದಕ್ಕಾಗಿ ಒತ್ತಿ ಹೇಳಿರುವುದಿಲ್ಲ. ನೇರ ನೇಮಕಾತಿಯ ಸಂದರ್ಭದಲ್ಲಿ ಅವರಿಗೆ ಅರ್ಜಿದಾರರ ಬಗ್ಗೆ ಈ ವಿಷಯಗಳು ತಿಳಿದಿಲ್ಲದಿರುವುದರಿಂದ ಅವರು ಅರ್ಜಿಗಳನ್ನು ಆಹ್ವಾನಿಸುತ್ತಾರೆ.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಕೆಲವು ನೇಮಕಾತಿಗಳ ಸಂಬಂಧದಲ್ಲಿ ಅರ್ಜಿಗಳನ್ನು ಆಹ್ವಾನಿಸಲು ಮತ್ತು ಅರ್ಜಿಗಳನ್ನು ಆಹ್ವಾನಿಸದೆಯೇ ಕೆಲವು ನೇಮಕಾತಿಗಳನ್ನು ಮಾಡಲು ಉಚ್ಚ ನ್ಯಾಯಾಲಯದಲ್ಲಿ ನಿಹಿತವಾಗಿರುವ ಅಧಿಕಾರ ಯಾವುದು?

**ಶ್ರೀ ಬಿ.ಡಿ. ಜತ್ತಿ** – ಉಚ್ಚ ನ್ಯಾಯಾಲಯವು, ಶಿಫಾರಸು ಮಾಡುವ ಅಥವಾ ಅರ್ಜಿಗಳನ್ನು ಆಹ್ವಾನಿಸುವ ವಿವೇಚನಾಧಿಕಾರವನ್ನು ಹೊಂದಿದೆ.

**ಶ್ರೀ ಜಿ.ಬಿ. ಶಂಕರ್‌ರಾವ್** – ಈ ಸರ್ಕಾರವು ಮುನ್ಸೀಫರು ಮತ್ತು ಜಿಲ್ಲಾ ನ್ಯಾಯಾಧೀಶರ ನೇಮಕಾತಿ ವಿಷಯದಲ್ಲಿ ಏಕರೂಪದ ನಿಯಮಗಳನ್ನು ರೂಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಆಲೋಚಿಸುತ್ತಿದೆಯೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಬಿ.ಡಿ. ಜತ್ತಿ** – ಇದನ್ನು ತುಂಬಾ ಪ್ರಾಮಾಣಿಕವಾಗಿ ಪರಿಶೀಲಿಸಲಾಗಿದ್ದು, ನಂತರ ಮಾಡಲಾಗಿದೆ.

**ಶ್ರೀ ಕೆ. ಪುಟ್ಟಸ್ವಾಮಿ** – ಉಚ್ಚ ನ್ಯಾಯಾಲಯವು ಶಿಫಾರಸು ಮಾಡುವ ಮೊದಲು ನಿರ್ದಿಷ್ಟಪಡಿಸಿದ ಪ್ರಕ್ರಿಯೆಯನ್ನು ಅನುಸರಿಸುವುದು ಅದರ ಮೇಲಿರುವ ಜವಾಬ್ದಾರಿಯಾಗಿರುತ್ತದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಬಿ.ಡಿ. ಜತ್ತಿ** – ನಾವು ಉಚ್ಚ ನ್ಯಾಯಾಲಯಕ್ಕೆ ಯಾವುದೇ ಪ್ರಕ್ರಿಯೆಯನ್ನು ಗೊತ್ತುಪಡಿಸಿಲ್ಲ. ಆದರೆ, ತುರ್ತು ಸಂದರ್ಭಗಳಲ್ಲಿ ಅದು ತಾತ್ಕಾಲಿಕ ನೇಮಕಾತಿಗಳಿಗೆ ಶಿಫಾರಸು ಮಾಡುತ್ತದೆ.

**ಶ್ರೀ ಕೆ. ಪುಟ್ಟಸ್ವಾಮಿ** – ಈ ವಿಷಯದಲ್ಲಿ ಸ್ವತಃ ಉಚ್ಚ ನ್ಯಾಯಾಲಯವು ಪ್ರಕ್ರಿಯೆಯನ್ನು ಗೊತ್ತುಪಡಿಸಿದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಬಿ.ಡಿ. ಜತ್ತಿ** – ಅದು ಅನುಸರಿಸುವ ಪ್ರಕ್ರಿಯೆಯ ಬಗ್ಗೆ ಸರ್ಕಾರಕ್ಕೆ ಯಾವುದೇ ಮಾಹಿತಿ ಇಲ್ಲ.

**ಶ್ರೀ ಆಲೂರ್ ಹನುಮಂತಪ್ಪ** – ಅಧಿಕಾರಿ ಪದವೃಂದದಿಂದ ಅಥವಾ ನ್ಯಾಯವಾದಿ ವರ್ಗದಿಂದ ಮುನ್ಸೀಫರನ್ನು ನೇಮಕ ಮಾಡುವಾಗ ವಯೋಮಿತಿಯನ್ನು ನಿಗದಿಪಡಿಸುವ ಯಾವುದೇ ಪ್ರಸ್ತಾವವು ಸರ್ಕಾರದ ಮುಂದಿದೆಯೆ?

**ಶ್ರೀ ಬಿ.ಡಿ. ಜತ್ತಿ** – ಅದು ತಿಳಿದಿರುವ ವಿಚಾರವೇ ಆಗಿದೆ.

**ಶ್ರೀ ಎ.ಎಸ್. ಪಾಟೀಲ್** – ಖಾಯಂ ನೇಮಕಾತಿಗಳಿಗಾಗಿ ನಿಯಮಗಳನ್ನು ರೂಪಿಸುವಲ್ಲಿ ಅಂಥ ವಿಪರೀತವಾದ ವಿಳಂಬವಾಗುತ್ತಿರುವುದೇಕೆ?

**ಶ್ರೀ ಬಿ.ಡಿ. ಜತ್ತಿ** – ಮಾನ್ಯ ಸದಸ್ಯರಿಗೆ ತಿಳಿದಿರುವಂತೆ, ಅದು ರಾಜ್ಯಗಳ ಪುನರ್ರಚನೆಯ ಪರಿಣಾಮವಾಗಿ ಬೇರೆಬೇರೆ ಆಡಳಿತ ಘಟಕಗಳನ್ನು ಮಾಡುವ ಕಾರಣದಿಂದಾಗಿ ಆಗಿದ್ದು, ಈಗ ವಿಳಂಬವು ಆಗಿರುವುದಿಲ್ಲ.

**ಶ್ರೀ ಹೆಚ್.ವಿ. ಕೌಜಲಗಿ** – ಈ ಹತ್ತು ನೇಮಕಾತಿಗಳ ಸಂದರ್ಭದಲ್ಲಿ ನಿಯಮಗಳು ಸಿದ್ಧವಾಗಿದ್ದರೂ ಅವುಗಳನ್ನು ಅಂಗೀಕರಿಸದೆಯೆ ಈ ಹತ್ತು ಅಧಿಕಾರಿಗಳನ್ನು ನೇಮಕ ಮಾಡಿರುವುದು ನಿಜವಲ್ಲವೆ?

**ಶ್ರೀ ಬಿ.ಡಿ. ಜತ್ತಿ** – ಇದು ತಾತ್ಕಾಲಿಕ ನೇಮಕಾತಿಗಳಿಗೆ ಅಗತ್ಯವಿಲ್ಲ.

**ಶ್ರೀ ಜಿ.ಬಿ. ಶಂಕರ್‌ರಾವ್** – ಏಕರೂಪ ನಿಯಮಗಳನ್ನು ರೂಪಿಸಲು ಸರ್ಕಾರಕ್ಕೆ ಇನ್ನೂ ಎಷ್ಟು ಕಾಲ ಬೇಕಾಗಬಹುದು?

**ಶ್ರೀ ಬಿ.ಡಿ. ಜತ್ತಿ** – ನಾನು ಈಗಾಗಲೇ ಉತ್ತರ ನೀಡಿದ್ದೇನೆ. ಪ್ರಾಯಶಃ ಮನ್ಯ ಸದಸ್ಯರು ಇದನ್ನು ಸರಿಯಾಗಿ ಕೇಳಿಸಿಕೊಂಡಿಲ್ಲ. ನಿಯಮಗಳನ್ನು ಈಗಾಗಲೇ ರೂಪಿಸಲಾಗಿದ್ದು, ಲೋಕಸೇವಾ ಆಯೋಗವು ಅರ್ಜಿಗಳನ್ನು ಕರೆದಿರುತ್ತದೆ ಮತ್ತು ಅದು ಅಭ್ಯರ್ಥಿಗಳ ಸಂದರ್ಶನವನ್ನು ನಡೆಸುತ್ತದೆ. ಹತ್ತನೇ ತಾರೀಖು ಕಡೇ ದಿನಾಂಕವಾಗಿರುತ್ತದೆ.

**ಶ್ರೀ ವೈ. ವೀರಪ್ಪ** – ಲೋಕ ಸೇವಾ ಆಯೋಗವು, ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತದೆಯೆ ಅಥವಾ ಅವುಗಳನ್ನು ಸಡಿಲಿಸುತ್ತದೆಯೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಬಿ.ಡಿ. ಜತ್ತಿ** – ಅಲ್ಲಿ ನಿಯಮಗಳನ್ನು ಪಾಲಿಸಲಾಗುತ್ತದೆ.

**ಶ್ರೀ ಜಿ.ಬಿ. ಶಂಕರರಾವ್** – ಖಾಯಂ ಮಾಡದಿರುವ ಈ ತಾತ್ಕಾಲಿಕ ಮುನ್ಸೀಫರ ಸಂಬಂಧದಲ್ಲಿ ಅವರು ಏನು ಮಾಡುತ್ತಾರೆ?

**ಶ್ರೀ ಬಿ.ಡಿ. ಜತ್ತಿ** – ಇದು ಲೋಕಸೇವಾ ಆಯೋಗದ ಮೇಲೆ ಅವಲಂಬಿಸಿದೆ.

**ಶ್ರೀ ಜಿ.ಬಿ. ಶಂಕರ್‌ರಾವ್** – ಅವರು ಅರ್ಜಿಗಳನ್ನು ಮಾತ್ರ ಆಹ್ವಾನಿಸಿದ್ದರೆ, ಲಿಪಿಕ ವೃಂದದಿಂದ ಹೆಚ್ಚು ಅರ್ಜಿಗಳು ಬಂದಿರಬಹುದು ಎಂಬುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೆ?

**ಶ್ರೀ ಬಿ.ಡಿ. ಜತ್ತಿ** – ಇದು ಮಾನ್ಯ ಸದಸ್ಯರ ಕಲ್ಪನೆ ಆಗಿರಬಹುದು.

(ದಿನಾಂಕ: 4.8.1959)

# ಟಿಪ್ಪಣಿ

ರಾಜ್ಯದ ಶ್ರೇಷ್ಠ ನ್ಯಾಯಾಲಯದ ಶಿಫಾರಸ್ಸಿನ ಮೇರೆಗೆ ಸರ್ಕಾರ 26 ಮುನ್ಸೀಫರ ನೇಮಕ ಮಾಡಿತ್ತು. ಈ ನೇಮಕಗಳನ್ನು ಕುರಿತು ಎಚ್.ವಿ. ಕೌಜಲಗಿಯವರು ಪ್ರಶ್ನಾವಳಿಯನ್ನು ಕಳುಹಿಸಿದ್ದರು. ಅದಕ್ಕೆ ಮುಖ್ಯಮಂತ್ರಿಗಳು ಲಿಖಿತ ಉತ್ತರ ನೀಡಿದ ಮೇಲೆ ಆ ಬಗ್ಗೆ ಸದನದಲ್ಲಿ ಚರ್ಚೆ ನಡೆಯಿತು. ಈ ನೇಮಕಗಳನ್ನು ನ್ಯಾಯಾಂಗದ ಆಡಳಿತ ಸಿಬ್ಬಂದಿವರ್ಗದಿಂದ ಮಾಡಿಕೊಳ್ಳಲಾಗಿದೆ ಎಂದೂ ಈ ನೇಮಕಗಳನ್ನು ತಾತ್ಕಾಲಿಕವೆಂದು ಸರ್ಕಾರ ಸ್ಪಷ್ಟಪಡಿಸಿತು. ಆದರೆ ಇಂತಹ ನೇಮಕಗಳಿಗೆ ಒಂದು ಸಾಮಾನ್ಯ ನಿಯಮಾವಳಿಯನ್ನು ರಚಿಸಬೇಕೆಂದೂ ನೇರವಾಗಿ ಅಭ್ಯರ್ಥಿಗಳಿಂದ ಅರ್ಜಿ ಕರೆದು ನೇಮಕಗಳನ್ನು ಮಾಡಿಕೊಳ್ಳಬೇಕೆಂದು ಸದಸ್ಯರು ಸರ್ಕಾರವನ್ನು ಒತ್ತಾಯಿಸಿದರು. ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುತ್ತಿದೆ ಎಂದೂ ಮುಂದೆ ಅದನ್ನು ಜಾರಿಗೆ ತರಲಾಗುವುದೆಂದು ಸರ್ಕಾರದಿಂದ ಉತ್ತರ ಬಂದಿತು.

ಈಗಿನ ಸರ್ಕಾರ ಈ ಗೌಡ್ರುಗಳಿಂದ ಪ್ರತಿಯೊಂದು ಚುನಾವಣೆಗಳಲ್ಲೂ ಸಂಪೂರ್ಣ ಪ್ರಯೋಜನ ಪಡೆದಿದ್ದಾರೆ. ಈಗಲಾದರೂ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ನಾನು ಇಲ್ಲಿಯತನಕ ಹೇಳಿರುವ ವಿಚಾರಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಮುಂದೆ ಅವರ ಒಳ್ಳೆಯದಕ್ಕಾಗಿ ಈ ಗೌಡ್ರುಗಳನ್ನು ಕೆಲಸದಿಂದ ತೆಗೆಯಬಾರದೆಂದು ಹೇಳುತ್ತೇನೆ. ಇಲ್ಲಿಯತನಕ ವಂಶಪಾರಂಪರ್ಯವಾಗಿ ಬಂದಿರತಕ್ಕ ಈ ಗೌಡ್ರುಗಳನ್ನು ತೆಗೆದುಹಾಕಿದರೆ ಮುಂದೆ ದೇಶದಲ್ಲಿ ಅರಾಜಕತೆ ತಲೆದೋರುತ್ತೆ. ಈಗ ಸರ್ಕಾರದವರು ನೇಮಿಸಬೇಕೆಂದಿರುವ ಬಾಡಿಗೆ ಗೌಡ್ರುಗೆ ಜನರು ಅಂಜುವ ಕಾಲ ಹೋಯಿತು. ಆ ಕಾಲವಿನ್ನಿಲ್ಲ. ಬಾಡಿಗೆ ಗೌಡರಿಗೆ ದೇಶವನ್ನು ಅಷ್ಟು ವಿತರಣೆಯಿಂದ ನೋಡಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಮುಂದಿನ ಕಥೆ ಕಂಡ ಹಾಗೆ ಇಡೀ ದೇಶದಲ್ಲಿ ಅರಾಜಕತೆ! ದೇಶದ ಭವಿಷ್ಯ ಸುಗಮವಾಗುವುದಿಲ್ಲ. ನಮಗೆ ಇಷ್ಟು ವ್ಯಥೆಯನ್ನುಂಟು ಮಾಡಿದರೂ ಈ ಮಸೂದೆ ಸರ್ಕಾರಕ್ಕೆ ಚಲೋದೇ ಇರುತ್ತದೆ? ಏನೇ ಆಗಲಿ ನಾನು ಮಾತ್ರ ಈ ಗೌಡ್ರನ್ನು ತೆಗೆಯುವುದಕ್ಕೆ ಒಪ್ಪುವುದಿಲ್ಲ. ನಮ್ಮ ರೆವಿನ್ಯೂ ಮಂತ್ರಿಗಳು ಈಗಲೇ ಬಹಳ ತೆಳ್ಳಗಿದ್ದಾರೆ – ಮುಂದೆ ಇದರ ಒಂದು ಯೋಚನೆ ಅವರ ಮನಸ್ಸಿಗೆ ಅಂಟಬಿಟ್ಟರೆ ಅವರ ತಲೆ ತೀರಾ ಆಲೋಚನೆಗೆ ಗುರಿಯಾಗಿ ಅವರಿನ್ನೂ ತೆಳ್ಳಗಾಗುತ್ತಾರಲ್ಲ.

**ಶ್ರೀ ಎಂ.ಸಿ ನರಸಿಂಹನ್** – ನಾವು ಒಂದು ಕಾನೂನನ್ನು ಅಂಗೀಕರಿಸಿದ ತರುವಾಯವೂ, ಆ ಕಾನೂನು ಸರಿಯಾಗಿಲ್ಲವೆಂದು ಈಗಲೂ ಸಹ ಹೇಳಬಹುದಾಗಿದೆ: ಆದರೆ ಅದನ್ನು ಅಧಿನಿಯಮಿಸಲಾಗಿರುವ ಅರ್ಥದಲ್ಲಿ ಸೇರಿಸಬೇಕಾಗುತ್ತದೆ. ಚರ್ಚೆಯ ಮೇಲೆ ಎತ್ತಿರುವ ಕ್ರಿಯಾಲೋಪ ಹಾಗೂ ಬಲವಂತವಾಗಿ ಹೊರಿಸಲು ಹವಣಿಸಿರುವಂತಹ ಟೀಕೆಯು ಉದ್ಭವಿಸುವುದಿಲ್ಲ.

**ಉಪಾಧ್ಯಕ್ಷರು** – ಜಾಯಿಂಟ್ ಸೆಲೆಕ್ಟ್ ಕಮಿಟಿಯಿಂದ ಬಂದಿರುವ ವರದಿಯ ಮೇಲೆ ಮಾತ್ರ ತಾವು ಮಾತನಾಡಬೇಕು. ಗ್ರಾಮಾಧಿಕಾರಿಗಳ ಹುದ್ದೆ ಇರಬೇಕೇ ಬೇಡವೇ ಎನ್ನುವುದು ಈಗ ಬರುವುದಿಲ್ಲ.

**ಶ್ರೀ ಬಿ.ಕೆ. ನಾಗೂರ್** – ಸ್ವಾಮಿ, ನಾನು ಭಾಷಣವನ್ನೇ ಮುಗಿಸುತ್ತಿದ್ದೇನೆ. ನಾನು ಹೇಳಿದ ಅಂಶಗಳನ್ನು ವಿಚಾರ ಮಾಡಲಿಕ್ಕೆ ಹೆಚ್ಚು ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಸಭಾಪತಿಗಳು ನನಗೆ ಕಾಲಾವಕಾಶ ಕೊಟ್ಟಿದ್ದಕ್ಕೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಹೆಚ್.ವಿ. ಕೌಜಲಗಿ** – ಮಾನ್ಯ ಸಭಾಧ್ಯಕ್ಷರೆ, ಸ್ವಾಮಿ, ಈ ವಿಧೇಯಕದ ಸ್ಥೂಲ ತತ್ವಗಳನ್ನು ಎಲ್ಲ ರೀತಿಯಲ್ಲಿಯೂ ಅಂಗೀಕರಿಸಲಾಗಿದೆ ಮತ್ತು ಇಂದಿನ ದಿನಗಳಲ್ಲಿ ಈ ಪಟ್ಟಾಭದ್ರಹಿತಾಸಕ್ತಿಯು ಉಳಿಯಬೇಕೆಂದು ಯಾರೊಬ್ಬರೂ ಹೇಳುವುದಿಲ್ಲ. ಪಟ್ಟಭದ್ರ ಹಿತಾಸಕ್ತಿಗಳನ್ನು ಎಷ್ಟು ಬೇಗನೆ ಕೊನೆಗಾಣಿಸಲಾಗುವುದೋ ಅಷ್ಟೂ ಒಳ್ಳೆಯದು. ಈ ವಿಧೇಯಕಕ್ಕೆ ಸಂಬಂಧಿಸುವಷ್ಟರಮಟ್ಟಿಗೆ, ಉದ್ಭವಿಸುವ ಮುಖ್ಯ ಪ್ರಶ್ನೆ ಎಂದರೆ ಅಧಿಕಾರಿಗಳಿಗೆ ಯಾವುದೇ ಸೂಕ್ತ ನಷ್ಟ ಪರಿಹಾರವನ್ನು ನೀಡಬೇಕೆ ಅಥವಾ ಬೇಡವೆ ಎಂಬುದು. ಆಯ್ಕೆ ಸಮಿತಿಯ ವರದಿ ಅನುಸಾರವಾಗಿ ಮತ್ತು ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಆಧಾರದ ಮೇಲೆ ನೀಡಿರುವ ತೀರ್ಪಿನ ಅನುಸಾರವಾಗಿ, ಅವರು ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವರಾಗಿರುತ್ತಾರೆ. ಆದರೆ ಹೆಚ್ಚೆಂದರೆ, ಸರ್ಕಾರವು ಅವರಿಗೆ ಪರಿಹಾರದ ರೂಪದಲ್ಲಿ ಸ್ವಲ್ಪ ಹಣವನ್ನು ಅಥವಾ ಅನುಗ್ರಹಪೂರ್ವ ಮೊಬಲಗನ್ನು ನೀಡಬಹುದು ಎಂಬುದಾಗಿ ಅವುಗಳು ಅಭಿಪ್ರಾಯಪಟ್ಟಿರುತ್ತವೆ. ಈಗ ಈ ಪ್ರಶ್ನೆಯು, ಮುಂಬಯಿ ಪ್ರದೇಶಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ ಮಾಲೀಕರು ಹೊಂದಿರುವ ಭೂ ಸ್ವತ್ತಿನ ಮೇಲೆ ಅವಲಂಬಿತವಾಗಿದ್ದು ಹಳೆಯ ಮೈಸೂರು ಪ್ರದೇಶದಲ್ಲಿ ನಿರ್ದಿಷ್ಟವಾದ ಯಾವ ಕಾನೂನು ಇದೆ ಎಂಬುದು ನನಗೆ ಗೊತ್ತಿಲ್ಲ.

ಆದರೆ ಮುಂಬಯಿ ಪ್ರದೇಶಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಪ್ರಶ್ನೆಯು ಸಂಪೂರ್ಣವಾಗಿ ಭಿನ್ನವಾಗಿರುತ್ತದೆ. ಉದಾಹರಣೆಗೆ, ಸನ್ನದಿ ಎಂಬ ಹೆಸರಿನಲ್ಲಿ ಹೊಂದಿರುವ ಜಮೀನನ್ನು ಆತನ ಸ್ವಂತ ಜಮೀನು ಎಂದು ಪರಿಗಣಿಸಬೇಕೆ ಅಥವಾ ಅದು ಸರ್ಕಾರಕ್ಕೆ ಸೇರಿದ ಜಮೀನು ಎಂದು ಪರಿಗಣಿಸಬೇಕೆ, ಇದು ಸಹ ಪರಿಶೀಲಿಸಬೇಕಾಗಿರುವಂಥ ಅಂಶವಾಗಿದೆ. ಸೇವೆಯ ರದ್ದಿಯಾತಿಯ ಪ್ರಶ್ನೆಗೆ ಸಂಬಂಧಪಡುವಷ್ಟರಮಟ್ಟಿಗೆ ಹೇಳುವುದಾದರೆ, ಅದು ಬೇರೆ ವಿಚಾರವೇ ಆಗಿದೆ. ಆದರೆ ಇಲ್ಲಿ ಉದ್ಭವಿಸುವಂಥ ಪ್ರಶ್ನೆ ಎಂದರೆ, ನೀವು ಜಮೀನನ್ನು ಮರುಸ್ವಾಧೀನಕ್ಕೆ ತೆಗೆದುಕೊಂಡು ಇದನ್ನು ನೀವು ಕೆಲವು ಷರತ್ತುಗಳ ಅಡಿಯಲ್ಲಿ ಅಂದರೆ ಕಂದಾಯ ಹಾಕುವ ಮೂಲಕ ಆತನಿಗೆ ಸ್ವಲ್ಪ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಅಥವಾ ನಮ್ಮ ಉಚ್ಚನ್ಯಾಯಾಲಯದ ಮತ್ತು ಮುಂಬಯಿ ಉಚ್ಛ ನ್ಯಾಯಾಲಯದ ಅಧಿಭೋಗದ ನಂತರ ಮರುಮಂಜೂರು ಮಾಡಿರುವಿರಾ ಎಂಬುದು. ಅವರು ಸತ್ ಸನ್ನಧಿಗಳು ಹೊಂದಿರುವ ಜಮೀನುಗಳು ಸರ್ಕಾರಿ ಜಮೀನುಗಳಾಗಿರುತ್ತವೆ ಎಂಬುದಾಗಿ ಅವರು ಹೇಳಿದ್ದಾರೆ. ಕೆಲವು ನಿರ್ಬಂಧಗಳನ್ನು ಮಾತ್ರ ವಿಧಿಸಲಾಗಿದೆಯೆಂದು ಅವರು ಹೇಳುತ್ತಾರೆ. ಮೈಸೂರು ಲಾ ಜರ್ನಲ್‌ನ ಪುಟ 346ರಲ್ಲಿ 1960ರ ಜುಲೈ 10ರಂದು ವರದಿಯಾಗಿರುವ ಯೆಲ್ಲಪ್ಪ – ವಿರುದ್ಧ – ಫಕೀರಪ್ಪ ಮೊಕದ್ದಮೆಯಲ್ಲಿ ನೀಡಿರುವ ಇತ್ತೀಚಿನ ತೀರ್ಪನ್ನು ನಾನು ಉಲ್ಲೇಖಿಸುತ್ತೇನೆ. ಈ ಮೊಕದ್ದಮೆಯಲ್ಲಿ ನೀಡಿರುವ ಮುಂಬಯಿ ಉಚ್ಚ ನ್ಯಾಯಲಯದ ತೀರ್ಪನ್ನು ಸಹ ಉಲ್ಲೇಖಿಸಲಾಗಿದೆ. ಅವರು ಹೀಗೆ ಹೇಳಿದ್ದಾರೆ:–

"ವತನ್ ಜಮೀನುಗಳನ್ನು ಸರ್ಕಾರಿ ಜಮೀನುಗಳೆಂದು ಹೇಳುವಂತಿಲ್ಲ ಅಥವಾ ಇದನ್ನು ವತನ್ ದಾರನಿಗೆ ಸರ್ಕಾರವು ಗೇಣಿಗೆ ಕೊಟ್ಟಿರುತ್ತದೆ ಎಂದೂ ಹೇಳುವಂತಿಲ್ಲ. ಕೆಲವು ಸಂದರ್ಭಗಳ ಅಡಿಯಲ್ಲಿ ಸರ್ಕಾರವು ಪ್ರಶ್ನೆಯಲ್ಲಿನ ಜಮೀನನ್ನು ಮರುಸ್ವಾಧೀನ ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ. ಆದರೆ ಸರ್ಕಾರವನ್ನು ಈ ಜಮೀನುಗಳ ಮಾಲೀಕನನ್ನಾಗಿ ಮಾಡಲಾಗುವುದಿಲ್ಲ"

ಈ ಹೇಳಿಕೆಯನ್ನು ಮುಂಬಯಿ ಪ್ರದೇಶದಲ್ಲಿನ ಸತ್ ಸನ್ನಧಿ ಜಮೀನುಗಳ ಸಂಬಂಧದಲ್ಲಿ, ನೀಡಲಾಗಿದೆ. ಮುಂಬಯಿ ನಿರ್ಣಯ ಏನಂದ್ರೆ ವತನ್ ಜಮೀನಿನಲ್ಲಿ ವತನ್‌ದಾರನು ಹೊಂದಿರುವಂತಹ ಹಕ್ಕು ಗೇಣಿದಾರನ ಹಕ್ಕಾಗುವುದಿಲ್ಲ. ಆದರೆ, ಆತನು ಅದರ ಮಾಲೀಕನಾಗಿರುತ್ತಾನೆ ಎಂಬುದು. ಇದನ್ನೇ ಅವರು ಹೇಳಿರುವುದು. ಇದೇ ಪ್ರಕರಣ ಆಗಿದ್ದ ಪಕ್ಷದಲ್ಲಿ ಉದ್ಭವಿಸುವ ಪ್ರಶ್ನೆ ಎಂದ್ರೆ ನಾವು ಅದನ್ನು ಹೇಗೆ ಮರು ಸ್ವಾಧೀನ ಮಾಡಿಕೊಳ್ಳಬಹುದು ಮತ್ತು ನಾವು ಇದನ್ನು ಮರುಸ್ವಾಧೀನ ಮಾಡಿಕೊಳ್ಳಬಹುದೆ ಹಾಗೂ ನಾವು ಆತನನ್ನು ನಷ್ಟಪರಿಹಾರ ಅಥವಾ ಅಧಿಭೋಗದ ಬೆಲೆಯನ್ನು ಸಂದಾಯ ಮಾಡುವಂತೆ ಕೇಳಬಹುದೇ ಎಂಬುದಾಗಿದೆ. ಈ ಬಗ್ಗೆ ಪ್ರಶ್ನೆಯು ಉದ್ಭವಿಸಿದ್ದು, ಇದು ಅಧಿಕಾರವನ್ನು ಹೊಂದಿರುವ ಸನ್ನಧಿಗಳ ಜಮೀನುಗಳಿಗೆ ಸಂಬಂಧಿಸಿದ್ದಾಗಿದೆ. ಸತ್ ಸನ್ನಧಿಗಳ ಜಮೀನುಗಳು ಎರಡನೇ ವರ್ಗದ ಜಮೀನುಗಳು ಆಗಿರುತ್ತವೆ. 1910ರಲ್ಲಿ ಮುಂಬಯಿ ಪ್ರದೇಶದಲ್ಲಿ ಅನೇಕ ಸನ್ನಧಿಗಳಿಗೆ ಜಮೀನುಗಳು ಅಗತ್ಯವಿರಲಿಲ್ಲವೆಂದು ಅವರು, ಇವುಗಳನ್ನು ಅನುಭೋಗಿಸಲು ಅವಕಾಶ ನೀಡಲಾಗಿತ್ತೆಂದು, ಆದರೆ, ಅವರಿಗೆ ಪೂರ್ತಿ ಕಂದಾಯವನ್ನು ವಿಧಿಸಲಾಗಿತ್ತೆಂದು ಆದರೆ ಈ ಜಮೀನುಗಳನ್ನು ಹಕ್ಕುಗಳ ದಾಖಲೆಯಲ್ಲಿ ವತನ್ ಜಮೀನುಗಳೆಂದು ವಿವರಿಸಲಾಗಿರುತ್ತದೆ ಎಂಬುದಾಗಿ ಅಂದಿನ ಸರ್ಕಾರವು ಹೇಳಿದೆ. ನಾನು ಸತ್ ಸನ್ನಧಿ ಜಮೀನುಗಳು ಅಥವಾ ಜಪ್ತಿ ಮಾಡಿದ, ಜಮೀನಿನ ಬಗ್ಗೆ ಮಾತನಾಡುತ್ತಿದ್ದೇನೆ. ಪೂರ್ತಿ ಕಂದಾಯ ವಿಧಿಸಲಾಗಿತ್ತು. ಆತನನ್ನು ಮಾಲೀಕನೆಂಬುದಾಗಿ ಪರಿಗಣಿಸಲಾಗಿತ್ತು. ಇದೀಗ ಉಚ್ಚನ್ಯಾಯಾಲಯವು, ಆ ಜಮೀನಿಗೆ ಅಧಿಭೋಗದಾರನು ಸತ್‌ಸನ್ನಧಿ ಜಮೀನಿನ ಅಥವಾ ಜಪ್ತಿ ಮಾಡಿದ ಜಮೀನಿನ ಮಾಲೀಕನಾಗಿದ್ದು ಅದನ್ನು ಮಾರಬಹುದು ಎಂದು ತೀರ್ಪು ನೀಡಿರುತ್ತದೆ. ಆದರೆ ದುರದೃಷ್ಟವಶಾತ್ ಮುಂಬಯಿ ಸರ್ಕಾರವು ಆ ಅಭಿಪ್ರಾಯವನ್ನು ಒಪ್ಪಿರುವುದಿಲ್ಲ ಹಾಗೂ ಆ ವಿಷಯವನ್ನು ಇತ್ಯರ್ಥ ಮಾಡಲು ಸಾಧ್ಯವಾಗಲೇ ಇಲ್ಲ. ಆದರೆ ಜಮೀನಿಗೆ ಪೂರ್ತಿ ಕಂದಾಯ ನಿರ್ಧಾರ ಮಾಡಲಾಗಿರುವಾಗ ಮತ್ತು ಉಚ್ಚನ್ಯಾಯಾಲಯವು ಈತನನ್ನು ಭೂ ಮಾಲೀಕನೆಂದು ಪರಿಗಣಿಸಿರುವಾಗ, ಅಧಿಭೋಗದ ಬೆಲೆಯನ್ನು ವಸೂಲು ಮಾಡುವ ಪ್ರಶ್ನೆ ಎಲ್ಲಿದೆ?

**ಶ್ರೀ ಕಡಿದಾಳ್ ಮಂಜಪ್ಪ**:- ವತನ್ ರದ್ದಿಯಾತಿ ಅಧಿನಿಯಮ ಅಥವಾ 1958ರ ಮುಂಬಯಿ ಕೆಳ ಗ್ರಾಮ ವತನ್‌ಗಳ ಅಧಿನಿಯಮದ ಅನುಸಾರವಾಗಿ ಅವರು,·ಕುಲಕರ್ಣಿಗಳು ಮತ್ತು ಕೆಳ ಗ್ರಾಮ ಸೇವಕರು ಇವರಿಬ್ಬರಿಂದಲೂ ಅಧಿಭೋಗದ ಬೆಲೆಯನ್ನು ವಸೂಲಿ ಮಾಡಿರುವುದಿಲ್ಲವೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

ಶ್ರೀ ಪಿ.ಜಿ. ಸಿದ್ಧಾಂತಿ – ಆ ಅಧಿನಿಯಮದಲ್ಲಿ ಅನೇಕ ಕಾನೂನು ತೊಂದರೆಗಳು ಇರುವುದರಿಂದ ಸಂವಿಧಾನದ ಮೊದಲನೇ ತಿದ್ದುಪಡಿಯ ಮೇರೆಗೆ ಅನುಸೂಚಿ ಸಂಖ್ಯೆ ಖಘಿರ ಅಡಿಯಲ್ಲಿ ಆ ಅಧಿನಿಯಮವನ್ನು ಕಾನೂನು ಸಮ್ಮತಗೊಳಿಸಲಾಯಿತು. ಅದನ್ನು ಸಹ ಗಣನೆಗೆ ತೆಗೆದುಕೊಳ್ಳಬೇಕು, ಏಕೆಂದರೆ ಪರಗಣ ಮತ್ತು ಕುಲಕರ್ಣಿ ರದ್ದಿಯಾತಿ ಅಧಿನಿಯಮವನ್ನು ಸಂವಿಧಾನದ ಮೊದಲನೇ ತಿದ್ದುಪಡಿಯ ಮೇರೆಗೆ ಖಘಿನೇ ಅನುಸೂಚಿ ಮತ್ತು 31 (ಬಿ) ಅಡಿಯಲ್ಲಿ ಕಾನೂನು ಸಮ್ಮತಗೊಳಿಸಲಾಗಿದೆ.

ಶ್ರೀ ಹೆಚ್.ವಿ. ಕೌಜಲಗಿ – ಮಾನ್ಯ ಸಚಿವರಿಗೆ ಮುಂಬಯಿ ಪ್ರದೇಶದಲ್ಲಿ ಅನೇಕ ವೈಯಕ್ತಿಕ ಇನಾಂ ಗ್ರಾಮಗಳಿರುವ ಸಂಗತಿ ಚೆನ್ನಾಗಿ ಗೊತ್ತಿದೆ. ವೈಯಕ್ತಿಕ ಇನಾಂ ಗ್ರಾಮಗಳಲ್ಲಿ ಸನ್ನಧಿಗಳಿದ್ದು ಅವರು ಯಾವುದೇ ಕಂದಾಯವನ್ನು ಸಂದಾಯ ಮಾಡುತ್ತಿರಲಿಲ್ಲ; ಅವರು 'ಜೂಡಿ' ಎಂದು ಕರೆಯುವ ಸಣ್ಣ ಮೊತ್ತವನ್ನು ಮಾತ್ರ ಸಂದಾಯ ಮಾಡುತ್ತಿದ್ದರು. ಆ ಅಧಿನಿಯಮದ ರದ್ದಿಯಾತಿಯ ನಂತರ, ಅಂತಹ ಜಮೀನುಗಳಿಗೆ ಈಗ ಪೂರ್ತಿಯಾಗಿ ಕಂದಾಯ ನಿರ್ಧಾರ ಮಾಡಲಾಗಿದ್ದು; ಅವರು ಯಾವುದೇ ಅನುಭೋಗದ ಬೆಲೆಯನ್ನು ಸಂದಾಯ ಮಾಡುವ ಅಗತ್ಯವಿಲ್ಲ. ಆದರೆ ಪೂರ್ತಿ ಕಂದಾಯವನ್ನು ಮಾತ್ರ ಸಂದಾಯ ಮಾಡಬೇಕು.

ಶ್ರೀ ಸಿ.ಜೆ. ಮುಕ್ಕಣ್ಣಪ್ಪ – ನೀವು ಎರಡು ತೀರ್ಪುಗಳನ್ನು ಓದಿ ಹೇಳಿದ್ದೀರಿ. ನೀವು ಯಾವ ತೀರ್ಪಿನ ಮೇಲೆ ಅವಲಂಬಿಸಿದ್ದೀರಿ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

ಶ್ರೀ ಹೆಚ್.ವಿ. ಕೌಜಲಗಿ – ಎರಡರ ಮೇಲೂ

(ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ)

ಈ ತೀರ್ಪಿನಲ್ಲಿ, ಮೈಸೂರು ಉಚ್ಚನ್ಯಾಯಾಲಯದ ತೀರ್ಮಾನವು ಸಹ ಇದೆ ಮತ್ತು ಅವರು ಸಹ ಮುಂಬಯಿ ಉಚ್ಚನ್ಯಾಯಾಲಯದ ನಿರ್ಣಯದ ಮೇಲೆ ಅವಲಂಬಿತರಾಗಿದ್ದಾರೆ. ಪ್ರಸ್ತುತ ನಮ್ಮ ಮುಖ್ಯ ನ್ಯಾಯಮೂರ್ತಿಗಳು ಅವರು ಹಿಡುವಳಿಗಳ ಹಿಡುವಳಿದಾರರಾಗಿದ್ದು ಅವು ಸರ್ಕಾರಕ್ಕೆ ಸೇರಿರುವುದಿಲ್ಲ ಎಂಬ ಮುಂಬಯಿ ಉಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿತಸಿದ್ದರು. ಅವುಗಳು ಸರ್ಕಾರಕ್ಕೆ ಸೇರಿರದಿದ್ದರೆ. ಅಧಿಭೋಗದ ಹಕ್ಕಿನ ಮೊತ್ತವನ್ನು ವಸೂಲು ಮಾಡುವ ಪ್ರಶ್ನೆ ಉದ್ಭವಿಸುತ್ತದೆ. ವೈಯಕ್ತಿಕ ಇನಾಮುಗಳ ಅಧಿನಿಯಮವು ಜಾರಿಗೆ ಬಂದಾಗ, ಅಧಿಭೋಗದಾರರನ್ನು ಕಂದಾಯಕ್ಕೆ ಸಮಾನವಾದ ಮೊತ್ತವನ್ನು ಮಾತ್ರ ಸಂದಾಯ ಮಾಡುವಂತೆ ಕೇಳಲಾಗಿತ್ತು. ಈ ಅಧಿನಿಯಮವನ್ನು ಜಾರಿಗೆ ತರುವ ಮೂಲಕವಾಗಿ ಅವರು ಹೆಚ್ಚು ಸಂದಾಯಮಾಡಬೇಕಾಗುತ್ತದೆ. ಹಾಗಾಗಿ, ಇದು ಒಂದು ತರಹದ ತಾರತಮ್ಯವನ್ನು ಸೃಷ್ಟಿ ಮಾಡುತ್ತದೆ.

ಶ್ರೀ ಆರ್.ಎಂ. ಪಾಟೀಲ್ (ನವಲಗುಂದ) – ಸರ್ವೋಚ್ಚ ನ್ಯಾಯಾಲಯದ ತೀರ್ಪು ನಮ್ಮ ಉಚ್ಚ ನ್ಯಾಯಾಲಯದ ತೀರ್ಪಿಗಿಂತಲೂ ಇತ್ತೀಚಿನದಾಗಿದೆ. ಈ ರಿಟ್ ಅರ್ಜಿಯನ್ನು 1959ರಲ್ಲಿ ವಿಲೇವಾರಿ ಮಾಡಲಾಗಿದ್ದು ಮೈಸೂರು ಉಚ್ಚ ನ್ಯಾಯಾಲಯದ ಮಾನ್ಯ ನ್ಯಾಯಮೂರ್ತಿಗಳು ಈ ಅಂಶವನ್ನು ಪರಿಗಣಿಸಿದ್ದಾರೆಯೇ ಎಂಬುದು ನಮಗೆ ಗೊತ್ತಿಲ್ಲ. ಒಮ್ಮೆ

ಹುದ್ದೆಯು ಹೋದರೆ, ಹುದ್ದೆಗೆ ಲಗತ್ತಾದ ಎಲ್ಲಾ ಸವಲತ್ತುಗಳು ಸಹ ಹೋಗುತ್ತವೆ. ಇದೇ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಖಚಿತವಾಗಿ ನಿರೂಪಿಸಿರುವ ಮೂಲತತ್ವವಾಗಿರುತ್ತದೆ. ಜಮೀನು ಹುದ್ದೆಗೆ ಲಗತ್ತಾಗಿದ್ದು ಆ ಹುದ್ದೆಯು ಹೋದಾಗ ಮಾಲೀಕತ್ವವು ಮುಂದುವರೆಯುತ್ತದೆಯೇ ಎಂಬುದು ಪ್ರಶ್ನೆಯಾಗಿದೆ.

**ಶ್ರೀ ಹೆಚ್.ವಿ. ಕೌಜಲಗಿ** – ಇಲ್ಲಿ ಎರಡು ವಿಷಯಗಳಿವೆ ಸ್ವಾಮಿ, ಏನೆಂದರೆ ಸನ್ನಿಧಿ ಜಮೀನುಗಳಿದ್ದು ಅಲ್ಲಿ ಆತ ಸೇವೆ ಸಲ್ಲಿಸಲು ಬದ್ಧನಾಗಿರುತ್ತಾನೆ. ಆದರೆ, ಜಪ್ತಿ ಸನ್ನಧಿಗಳಿದ್ದು ಅಲ್ಲಿ ಪೂರ್ತಿ ಕಂದಾಯವನ್ನು ವಸೂಲಿ ಮಾಡಲಾಗುತ್ತಿದೆ. ದಾಖಲೆಗಳಲ್ಲಿ ಅವುಗಳನ್ನು ವತನ್ ಜಮೀನುಗಳೆಂದು ತೋರಿಸಲಾಗಿದ್ದು ಸರ್ಕಾರವು ಅದನ್ನು ವತನ್ ಜಮೀನೆಂದು ಪರಿಗಣಿಸುತ್ತದೆ ಮತ್ತು ಉಚ್ಚ ನ್ಯಾಯಾಲಯದ ಅನುಸಾರ ಅವುಗಳು ಅಧಿಭೋಗದಾರರ ಒಡೆತನದ ಜಮೀನುಗಳು ಅಗಿರುತ್ತವೆ. ಆದ್ದರಿಂದ ಯಾವುದೇ ಉಪಬಂಧವನ್ನು ಮಾಡಿರದಿದ್ದು ಅಂಥ ಜಮೀನುಗಳಿಗೆ ಸಂಬಂಧಿಸುವಷ್ಟರಮಟ್ಟಿಗೆ ಉಚ್ಚ ನ್ಯಾಯಾಲಯದ ಈ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾದರೆ ಅಧಿಭೋಗದ ಬೆಲೆಯನ್ನು ವಸೂಲು ಮಾಡುವ ಪ್ರಶ್ನೆಯು ಯಾವುದೇ ರೀತಿಯಾಗಿ ಉದ್ಭವಿಸದಿರಬಹುದು. ಪೂರ್ತಿಯಾಗಿ ಕರನಿರ್ಧಾರ ಮಾಡಲಾಗಿಲ್ಲದಿರುವ ಪಟೇಲ್ಕಿ ಜಮೀನುಗಳಿದ್ದು ಅವರು ಯಾವುದೇ ಸೇವೆಗೆ ಹೊಣೆಯಾಗಿರುವುದಿಲ್ಲ. ಇಂತಹ ಜಮೀನುಗಳ ಬಗ್ಗೆ ಏನು ಮಾಡಬೇಕು? ಸಂಕ್ಷಿಪ್ತವಾಗಿ ಹೇಳುವುದಾದರೆ ಜಂಟಿ ಆಯ್ಕೆ ಸಮಿತಿಯು ಈ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ ಹಾಗೂ ಅಂಥ ವಿಷಯಗಳ ಬಗ್ಗೆ ಯಾವುದೇ ಉಪಬಂಧವನ್ನು ಮಾಡಲಾಗಿರುವುದಿಲ್ಲ.

**ಶ್ರೀ ಕಡಿದಾಳ್ ಮಂಜಪ್ಪ** – ಸ್ವಾಮಿ, ಉಪಲಬ್ಧಿಗಳ ಪರಿಭಾಷೆ ಬಗ್ಗೆ ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಶ್ರೀ ಹೆಚ್.ವಿ. ಕೌಜಲಗಿ** – ಸ್ವಾಮಿ, ಇದೆಲ್ಲಾ ಕಾನೂನಿನ ವಿಷಯವಾಗಿದ್ದು, ಇದಕ್ಕಿಂತಲೂ ಹೆಚ್ಚಾಗಿ ಇದು ಕಾನೂನಿನ ಪ್ರಶ್ನೆಯಾಗಿರುತ್ತದೆ ಮತ್ತು ಇದನ್ನು ಬಹಳ ಸಮಾಧಾನಚಿತ್ತದಿಂದ ಚರ್ಚಿಸಬೇಕಾಗುತ್ತದೆ.

**ಶ್ರೀ ಬಿ.ಜಿ. ಖೋತ್** – ನಾನು ಒಂದು ಅಂಶವನ್ನು ಪ್ರಸ್ತಾಪಿಸುತ್ತೇನೆ. ಹೆಚ್ಚು ಸೇವೆಗಳು ಬೇಡವಾದರೂ ಕೂಡ ಜಮೀನುಗಳನ್ನು ಇನ್ನೂ ಮರುಸ್ವಾಧೀನ ಮಾಡಿಕೊಂಡಿಲ್ಲ. ಹಿಡುವಳಿದಾರರನ್ನು ಜಮೀನಿನ ಮಾಲೀಕರೆಂಬುದಾಗಿ ಭಾವಿಸಲಾಗಿದ್ದು ಅಧಿಭೋಗದ ಬೆಲೆಯನ್ನು ಕೇಳಿರುವುದಿಲ್ಲ.

**ಶ್ರೀ ಹೆಚ್.ವಿ. ಕೌಜಲಗಿ** – ಅದು ಮುಂಬಯಿ ಸರ್ಕಾರದ ಕಾರ್ಯನೀತಿಯಾಗಿತ್ತು. ಅವರು ಎಂದಿಗೂ ಜಮೀನನ್ನು ಮರುಸ್ವಾಧೀನ ಮಾಡಿಕೊಂಡಿಲ್ಲ. ಆದ್ದರಿಂದ ಈ ಪ್ರಶ್ನೆಯ ಬಗ್ಗೆ ವಿಚಾರ ಮಾಡಬೇಕಾಗಿದ್ದು ಅಗತ್ಯ ಉಪಬಂಧವನ್ನು ಸೇರಿಸಬೇಕಾಗುತ್ತದೆ. ವಿಶೇಷವಾಗಿ, ಜಪ್ತಿ ಸನ್ನಧಿ ಜಮೀನುಗಳ ಸಂದರ್ಭದಲ್ಲಿ ಸರ್ಕಾರವು, ಅವರು ಜಮೀನಿನ ಮಾಲೀಕರು ಆಗಿರುತ್ತಾರೆ ಎಂಬ ಅಭಿಪ್ರಾಯವನ್ನು ಅಂಗೀಕರಿಸಿದರೆ, ಅವರು ಯಾವುದೇ ಅಧಿಭೋಗದ ಬೆಲೆಯನ್ನು

ಸರ್ಕಾರಕ್ಕೆ ಸಂದಾಯ ಮಾಡುವ ಅಗತ್ಯವಿಲ್ಲ. ಮಾನ್ಯ ಸಚಿವರು ಇದಕ್ಕೆ ಉತ್ತರ ನೀಡುವಾಗ ಈ ಅಂಶವನ್ನು ಒಪ್ಪಿಕೊಂಡಿದ್ದಾರೆಂದು ನಾನು ಭಾವಿಸಿದ್ದೇನೆ.

**ಶ್ರೀ ಕಡಿದಾಳ್ ಮಂಜಪ್ಪ** – ಇಲ್ಲ. ನಾನು ಒಪ್ಪಿಕೊಂಡಿಲ್ಲ.

**ಶ್ರೀ ಹೆಚ್.ವಿ. ಕೌಜಲಗಿ** – ನೀವು ಹಾಗೆ ಹೇಳಿದ್ದಿರೆಂದು ನನ್ನ ಭಾವನೆ.

**ಶ್ರೀ ಕಡಿದಾಳ್ ಮಂಜಪ್ಪ** – ಜಮೀನನ್ನು ವತನ್ ಜಮೀನೆಂದು ನಿರ್ಧರಿಸಿದ್ದರೆ ಮತ್ತು ವಿಧೇಯಕದಲ್ಲಿ ಪರಿಭಾಷಿಸಿರುವಂತೆ ಇದನ್ನು ಒಂದು ಉಪಲಬ್ಧಿಯೆಂಬುದಾಗಿ ನಿರ್ಧರಿಸಿದರೆ, ಆಗ ಅಂಥ ಜಮೀನುಗಳು ವಿಧೇಯಕದ ವ್ಯಾಪ್ತಿಯೊಳಗೆ ಬರುವುದಿಲ್ಲ.

**ಶ್ರೀ ಬಿ.ಜಿ. ಖೋತ್** – ಅದರ ಮೇಲೆ ಆಧಿಭೋಗದ ಬೆಲೆಯನ್ನು ಕೇಳಬಹುದೇ ಅಥವಾ ಇಲ್ಲವೆ ಎಂಬುದು ಪ್ರಶ್ನೆಯಾಗಿದೆ:

**ಶ್ರೀ ಹೆಚ್.ವಿ. ಕೌಜಲಗಿ** – ಪ್ರಶ್ನೆಯ ಆ ಅಂಶವನ್ನು ಈ ವಿಧೇಯಕದಲ್ಲಿ ಚರ್ಚಿಸಿರುವುದಿಲ್ಲ, ಇದು ನನ್ನ ಅಸಮಾಧಾನದ ಕಾರಣವಾಗಿದೆ. ಎಲ್ಲಕಿಂತ ಹೆಚ್ಚಾಗಿ ಇದು ಸಂದಿಗ್ಧವಾಗಿದೆ ಮತ್ತು ಇದು ಸಂದೇಹಾಸ್ಪದ ವ್ಯಾಖ್ಯಾನಕ್ಕೆ ದಾರಿ ಮಾಡಿಕೊಡುತ್ತವೆ ಹಾಗೂ ಪಕ್ಷಕಾರರು ಅನಗತ್ಯವಾಗಿ ನ್ಯಾಯಾಲಯದ ನೆರವನ್ನು ಕೋರಬೇಕಾಗಿ ಬರುತ್ತದೆ. ಆ ಅಂಶವನ್ನು ಸ್ಪಷ್ಟಪಡಿಸಬೇಕಾಗಿರುತ್ತದೆ.

ಪರಿಹಾರಕ್ಕೆ ಸಂಬಂಧಪಟ್ಟಂತೆ, ಸ್ವಾಮಿ, ನನ್ನ ಅಭಿಪ್ರಾಯ ಏನಂದ್ರೆ ಅವರು ಕಾನೂನುಬದ್ಧವಾಗಿ ಹಕ್ಕುಳ್ಳವರಾಗಿರಲಿ ಅಥವಾ ಇಲ್ಲದಿರಲಿ ಅವರು ಸಲ್ಲಿಸಿರುವಂತಹ ದೀರ್ಘಾವಧಿಯ ಮತ್ತು ಒಳ್ಳೆಯ ಸೇವೆಯನ್ನು ಪರಿಗಣಿಸಿ, ಅವರಿಗೆ ಸರ್ಕಾರದ ವತಿಯಿಂದ ಸರಿಯಾದ ರೀತಿಯಲ್ಲಿ ಪರಿಹಾರವನ್ನು ನೀಡುವುದು ನೈತಿಕ ಕರ್ತವ್ಯವಾಗಿರುತ್ತದೆ ಎಂಬುದು. ಮೂಲ ವಿಧೇಯಕದಲ್ಲಿ ಕಲ್ಪಿಸಿರುವಂತೆ, ಹೊಣೆಯರಿತ ಪರಿಹಾರದ ಮೊತ್ತವನ್ನು ಈ ಗ್ರಾಮ ಹುದ್ದೆಗಳಿಗೆ ಸಂದಾಯ ಮಾಡತಕ್ಕದ್ದು. ಇದು ಒಂದೇ ಮೊತ್ತದ ರೂಪದಲ್ಲಿ ಇರಬೇಕಾದ ಅಗತ್ಯವೇನೂ ಇಲ್ಲ. ಆದರೆ ಇದು ಕೆಲವು ತತ್ವಗಳನ್ನು ಅವಲಂಬಿಸಿರಬೇಕು. ಮುಂಬಯಿ ಪ್ರದೇಶದಲ್ಲಿ ಅವರು ವಾರ್ಷಿಕವಾಗಿ ಪೊಟಗಿ ರೂಪದಲ್ಲಿ ಕೆಲವು ಸಂಭಾವನೆಯನ್ನು ಪಡೆಯುತ್ತಿದ್ದು ಅದು ಅವರು ಮಾಡುತ್ತಿದ್ದ ಕೆಲಸದ ಪ್ರಮಾಣವನ್ನು ಅವಲಂಬಿಸಿರುತ್ತದೆ.

ಈ ನಷ್ಟ ಪರಿಹಾರವನ್ನು ಅವರು ಸರ್ಕಾರಕ್ಕೆ ಸಲ್ಲಿಸುತ್ತಿರುವ ಕೆಲಸಕ್ಕೆ ಪ್ರತಿವರ್ಷವು ಆತನು ಪಡೆಯುತ್ತಿದ್ದ ಪೊಟಗಿಯ ಎರಡು ಅಥವಾ ಆರು ಅಥವಾ ಏಳು ಪಟ್ಟಿನ ಪ್ರಮಾಣದಲ್ಲಿರುವಂತೆ ನಿಗದಿಪಡಿಸಬೇಕು. ಬೇರೆ ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಒಂದೇ ಮೊತ್ತವನ್ನು ಸಂದಾಯ ಮಾಡಬೇಕು. ಇಲ್ಲವಾದಲ್ಲಿ ತಾರತಮ್ಯ ಉಂಟಾಗುತ್ತದೆ ಮತ್ತು ಇದು ಸರಿಯಾಗಿರುವುದಿಲ್ಲ.

**ಶ್ರೀ ಎಂ.ಸಿ ನರಸಿಂಹನ್** – ನೀವು ಸೂಚಿಸುವ ಕರಾರುವಾಕ್ಕಾದ ಮೊತ್ತ ಯಾವುದು?

**ಶ್ರೀ ಹೆಚ್.ವಿ. ಕೌಜಲಗಿ** – ನನ್ನ ಅಭಿಪ್ರಾಯದಲ್ಲಿ ಇದು ಅವರು ಪ್ರತಿವರ್ಷವು ಪಡೆಯುತ್ತಿರುವ ಸಂಭಾವನೆಯು ಏಳರಿಂದ ಹತ್ತು ಪಟ್ಟಾಗಿರಬೇಕು. ಮೂಲ ವಿಧೇಯಕದಲ್ಲಿ ಉಪಬಂಧ ಕಲ್ಪಿಸಿರುವಂತೆ, ಇದು ರೂ.100/– ಆಗಿದ್ದರೆ ಆತನು ಸರಿಸುಮಾರಾಗಿ ಕಡೇಪಕ್ಷ ರೂ.700 ಅಥವಾ ರೂ. 1,000/– ವನ್ನು ಪಡೆಯಬೇಕು.

ಪಾಲಾಗಿರುವ ಜಮೀನುಗಳಿಗೆ ಸಂಬಂಧಿಸಿದಂತೆ, ಜಮೀನುಗಳನ್ನು ಸಹೋದರರ ನಡುವೆ ಪಾಲು ಮಾಡಬಹುದಾಗಿದೆ. ಈ ಜಮೀನನ್ನು ಅವರವರ ನಡುವೆ ಹಸ್ತಾಂತರಿಸಬಹುದಾಗಿದೆ. ಅಪರಿಚಿತರಿಗೆ ಮಾತ್ರ ಹಸ್ತಾಂತರ ಮಾಡುವುದುದನ್ನು ನಿಷೇಧಿಸಲಾಗಿರುತ್ತದೆ. ಆದರೆ ಪಾಲು ಮಾಡುವುದಕ್ಕಾಗಿ ಅಥವಾ ಹಸ್ತಾಂತರ ಮಾಡುವುದಕ್ಕಾಗಿ ನೀವು ಅವರನ್ನು ಅನುಭೋಗದ ಬೆಲೆಯ 20ಪಟ್ಟು ಹಣವನ್ನು ಸಂದಾಯ ಮಾಡುವಂತೆ ಕೇಳಬೇಕು. ಇದು ತುಂಬಾ ಹೆಚ್ಚಾಗಿದ್ದು ಇದನ್ನು ಕಡಿಮೆ ಮಾಡಬೇಕೆಂದು ನಾನು ವಿನಂತಿಸುತ್ತೇನೆ.

ಈ ಅಭಿಪ್ರಾಯಗಳೊಂದಿಗೆ ಆಯ್ಕೆ ಸಮಿತಿಯ ವರದಿಯನ್ನು ಪ್ರಶಂಸೆ ಮಾಡುತ್ತೇನೆ ಹಾಗೂ ಕೆಲವು ಸಂಶಯಗಳ ಬಗ್ಗೆ ಸ್ಪಷ್ಟೀಕರಿಸಬೇಕೆಂದು ನಾನು ಸರ್ಕಾರವನ್ನು ಕೋರುತ್ತೇನೆ.

(ದಿನಾಂಕ: 18–4–1961)

## ಟಿಪ್ಪಣಿ

ಹಿಂದಿನ ಗ್ರಾಮಾಧಿಕಾರಿಗಳ ಸವಲತ್ತುಗಳನ್ನು ರದ್ದು ಮಾಡುವ ಮಸೂದೆ ಬಗ್ಗೆ ಚರ್ಚೆ ನಡೆಯಿತು. ಸರ್ಕಾರದ ಕ್ರಮಗಳಿಂದ ಗ್ರಾಮಗಳಲ್ಲಿದ್ದ ಗೌಡ, ಪಟೇಲಿ ಕುಲಕರ್ಣಿ, ತಳವಾರ ಹುದ್ದೆಗಳನ್ನು ಕಳೆದುಕೊಂಡವರಿಗೆ ನೀಡಬೇಕಾದ ಪರಿಹಾರದ ಬಗ್ಗೆ ಸದಸ್ಯರು ವಿವಿಧ ಸಲಹೆಗಳನ್ನು ನೀಡಿದರು. ಸರ್ಕಾರ ಇಂತಹವರಿಗೆ ತಮ್ಮ ಸೇವೆಗಾಗಿ ನೀಡಲಾಗಿದ್ದ ಭೂಮಿಯನ್ನು ಬೊಂಬಾಯಿಯೆಂದೂ ಕರ್ನಾಟಕದಲ್ಲಿ ವತನ್ ಭೂಮಿ ಮತ್ತು ಸನ್ನದಿಗಳೆಂದೂ ಹಳೆಯ ಮೈಸೂರಿನಲ್ಲಿ ಇನಾಂ ಭೂಮಿ ಎಂದು ಕರೆಯಲಾಗುತ್ತಿದ್ದಿತು. ಇಂತಹ ಭೂಮಿಯನ್ನು ಸಂಬಂಧಪಟ್ಟವರಿಗೆ ಖಾಯಂಗೊಳಿಸುವಾಗ ಅದು ಸರ್ಕಾರಿ ಭೂಮಿಯಾಗಿದ್ದು ಅವರಿಂದ ಅನುಭೋಗ ಬೆಲೆಯನ್ನು ಪಡೆದುಕೊಳ್ಳಬೇಕೆಂದು ಸರ್ಕಾರ ಪ್ರತಿಪಾದಿಸಿದರೆ ಸದಸ್ಯರು ಈಗಾಗಲೇ ವಿವಿಧ ನ್ಯಾಯಾಲಯಗಳು ಈ ಅನುಭೋಗದಾರರಿಗೆ ಈ ಭೂಮಿಯ ಮೇಲೆ ಒಡೆತನದ ಹಕ್ಕಿರುವುದನ್ನು ಎತ್ತಿ ಹಿಡಿದಿರುವುದರಿಂದ ಅವರಿಂದ ಕಂದಾಯ ಮಾತ್ರ ತೆಗೆದುಕೊಳ್ಳಬೇಕೆಂದು ಪ್ರತಿಪಾದಿಸಿದರು. ಕೌಜಲಗಿಯವರು ಬೊಂಬಾಯಿ ಕರ್ನಾಟಕದಲ್ಲಿ ಅನೇಕ ವೈಯಕ್ತಿಕ ಸನ್ನದಿ ಭೂಮಿಗಳಿವೆ. ಅವರಿಗೆಲ್ಲ ನಾಮಮಾತ್ರ 'ಜೂಡಿ' ಎಂಬ ತೆರಿಗೆ ವಿಧಿಸಲಾಗುತ್ತಿತ್ತು. ಆದ್ದರಿಂದ ಈ ಎಲ್ಲ ಸನ್ನದಿಕಾರರಿಗೆ ಕಂದಾಯ ಮಾತ್ರ ವಿಧಿಸಬೇಕೆ ಹೊರತು ಅನುಭೋಗ ಬೆಲೆ ಹಾಕುವಂತಿಲ್ಲ ಎಂದು ಹೇಳಿದರು.

# ಮುಂಬಯಿ ಕರ್ನಾಟಕದ ಜಿಲ್ಲೆಗಳಿಗೆ ಶಾಲಾ ಶಿಕ್ಷಕರ ನೇಮಕ
## 1961

ಪ್ರಶ್ನೆ: **913**, ಶ್ರೀ ಎಚ್. ವಿ. ಕೌಜಲಗಿ (ಸಂಪಗಾವ್-I) –

ಸರ್ಕಾರವು ಈ ಮುಂದಿನವುಗಳ ಬಗ್ಗೆ ದಯವಿಟ್ಟು ತಿಳಿಸುತ್ತದೆಯೆ:–

ಎ) 1956–57ರಿಂದ 1959–60ರವರೆಗಿನ ಅವಧಿಯಲ್ಲಿ ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಕಾರವಾರದ ಜಿಲ್ಲಾ ಶಾಲಾ ಮಂಡಳಿಗಳು ಬೇಡಿಕೆ ಸಲ್ಲಿಸಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ;

ಬಿ) ಮಂಜೂರು ಮಾಡಿರುವ ಶಿಕ್ಷಕರ ಸಂಖ್ಯೆ;

ಎ) ಶ್ರೀ ಅಣ್ಣಾರಾವ್ ಗಣಮುಖಿ (ಶಿಕ್ಷಣ ಸಚಿವರು):–

ಎ) ಬೇಡಿಕೆ ಸಲ್ಲಿಸಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆಯು ಈ ಮುಂದಿನಂತಿದೆ:

| | 1956-57 | 1957-58 | 1958-59 | 1959-60 |
|---|---|---|---|---|
| 1) ಜಿಲ್ಲಾ ಶಾಲಾ ಮಂಡಳಿಗಳು ಬೆಳಗಾಂ | 85 | 116 | 212 | 264 |
| 2) ಜಿಲ್ಲಾ ಶಾಲಾ ಮಂಡಳಿಗಳು ಬಿಜಾಪುರ | 140 | 94 | 366 | 343 |
| 3) ಜಿಲ್ಲಾ ಶಾಲಾ ಮಂಡಳಿಗಳು ಧಾರವಾಡ | 29 | 80 | 92 | 263 |
| 4) ಜಿಲ್ಲಾ ಶಾಲಾ ಮಂಡಳಿಗಳು ಉತ್ತರಕನ್ನಡ | 4 | 171 | 122 | 170 |

| | 1956-57 | 1957-58 | 1958-59 | 1959-60 |
|---|---|---|---|---|
| 1) ಜಿಲ್ಲಾ ಶಾಲಾ ಮಂಡಳಿಗಳು ಬೆಳಗಾಂ | 85 | 75 | 242 | ... |
| 2) ಜಿಲ್ಲಾ ಶಾಲಾ ಮಂಡಳಿಗಳು ಬಿಜಾಪುರ | 140 | 62 | 297 | 194 |
| 3) ಜಿಲ್ಲಾ ಶಾಲಾ ಮಂಡಳಿಗಳು ಧಾರವಾಡ | 29 | 101 | 297 | ... |
| 4) ಜಿಲ್ಲಾ ಶಾಲಾ ಮಂಡಳಿಗಳು ಉತ್ತರಕನ್ನಡ | 4 | 101 | 244 | ... |

**ಶ್ರೀ ಹೆಚ್.ವಿ. ಕೌಜಲಗಿ** – ಅಗತ್ಯವಿರುವಷ್ಟು ಸಂಖ್ಯೆಯ ಶಿಕ್ಷಕರನ್ನು ದೊರಕಿಸಿಕೊಡಲು ಅವರು ಅಸಮರ್ಥವಾಗಿರುವ ಕಾರಣದಿಂದ ಆ ಪ್ರದೇಶದಲ್ಲಿ ಶಿಕ್ಷಣ ಹಿಂದೆ ಬಿದ್ದಿರುವುದು ಸರ್ಕಾರಕ್ಕೆ ತಿಳಿದಿದೆಯೇ?

**ಶ್ರೀಮತಿ ಗ್ರೇಸ್ ಟಕ್ಕರ್** – ಹಣದ ಕೊರತೆಯ ಕಾರಣದಿಂದ ಶಿಕ್ಷಕರನ್ನು ನೀಡಲು ಸಾಧ್ಯವಾಗಿಲ್ಲ. ಎರಡನೇ ಯೋಜನೆಯ ಅವಧಿಯಲ್ಲಿ, ಈ ಉದ್ದೇಶಕ್ಕಾಗಿನ ಗರಿಷ್ಠಮಿತಿಯನ್ನು ಘೋಷಿತಾ ಮಾಡಿರುತ್ತದೆ ಎಂಬುದು ಮಾನ್ಯ ಸದಸ್ಯರಿಗೆ ತಿಳಿದಿದೆ.

**ಶ್ರೀ ಎಫ್.ಎಚ್. ಮೊಹಿಸಿನ್** – ಹಣದ ಕೊರತೆ ಇದ್ದರೂ ಇದು ಬಿಜಾಪುರ ಜಿಲ್ಲೆಗೆ 194 ಶಿಕ್ಷಕರನ್ನು ಮಂಜೂರು ಮಾಡುವಲ್ಲಿ ಸರ್ಕಾರವನ್ನು ತಡೆದಿಲ್ಲ. ಈ ತಾರತಮ್ಯ ನಡವಳಿಕೆಯ ಕಾರಣಗಳನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀಮತಿ ಗ್ರೇಸ್ ಟಕ್ಕರ್** – ಮಾನ್ಯ ಸದಸ್ಯರು 1958–59ರ ಅಂಕಿಅಂಶಗಳನ್ನು ನೋಡಿದರೆ, ನಾವು ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಕೋರಲಾದ ಸಂಖ್ಯೆಗಿಂತಲೂ ಹೆಚ್ಚಿನ ಶಿಕ್ಷಕರನ್ನು ನೀಡಿರುವುದು ಅವರಿಗೆ ಕಂಡುಬರುತ್ತದೆ. ಏತನ್ಮಧ್ಯೆ ಬಿಜಾಪುರ ಜಿಲ್ಲೆಯಿಂದ ಬೇಡಿಕೆ ಹೆಚ್ಚಾಗಿದ್ದು 1959–60ರಲ್ಲಿ ಅವರ ಬೇಡಿಕೆಯು ಇನ್ನೂ ತೀವ್ರಗೊಂಡಿತು. ಶಾಲೆಗಳನ್ನು ನಿರ್ವಹಿಸಿಕೊಂಡು ಹೋಗುವ ದೃಷ್ಟಿಯಿಂದ, ನಾವು ಅವರಿಗೆ ಕನಿಷ್ಟ ಸಂಖ್ಯೆಯ ಶಿಕ್ಷಕರನ್ನು ನೀಡಬೇಕಾಯಿತು. ನಾವು ಅವರಿಗೆ ಅವರು ಕೇಳಿರುವಷ್ಟನ್ನು ಕೊಟ್ಟಿಲ್ಲ.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಕೆಲವು ಜಿಲ್ಲೆಗಳಿಗೆ ಹೆಚ್ಚಿನ ಸಂಖ್ಯೆಯ ಶಿಕ್ಷಕರನ್ನು ಕೊಟ್ಟಿರುವುದಕ್ಕೆ ಕಾರಣವೇನು? ಉದಾಹರಣೆಗೆ ಧಾರವಾಡವನ್ನು ತೆಗೆದುಕೊಳ್ಳಿ. 1957–58ರಲ್ಲಿ ಅವರು 80 ಶಿಕ್ಷಕರನ್ನು ಕೋರಿದ್ದು ನೀವು ಅವರಿಗೆ 101 ಶಿಕ್ಷಕರನ್ನು ಕೊಟ್ಟಿದ್ದೀರಿ. ಉತ್ತರ ಕನ್ನಡದಲ್ಲಿ; ನೀವು ಅವರಿಗೆ, ಅವರು ಕೋರಿರುವುದಕ್ಕಿಂತ ಕಡಿಮೆ ಅಂದರೆ 70 ಶಿಕ್ಷಕರನ್ನು ಕೊಟ್ಟಿದ್ದೀರಿ. ಬೆಳಗಾಂ, ಧಾರವಾಡ ಮತ್ತು ಉತ್ತರಕನ್ನಡ ಈ ಮೂರು ಜಿಲ್ಲೆಗಳಿಗೆ ಇಡೀ ವರ್ಷಕ್ಕಾಗಿ ಶಿಕ್ಷಕರನ್ನು ಕೊಟ್ಟಿರುವಲ್ಲಿ ಏಕರೂಪದ ತತ್ವವನ್ನು ಅನುಸರಿಸಿಲ್ಲ. ಅವುಗಳು ಪ್ರಾಥಮಿಕ ಶಿಕ್ಷಣದ ಅಡಿಯಲ್ಲಿ, ಶಿಕ್ಷಕರನ್ನು ಹೊಂದಿರಲೇಬಾರದೇ? ಪ್ರಾಥಮಿಕ ಶಿಕ್ಷಣಕ್ಕಾಗಿ ಯಾವುದೇ ಸೌಲಭ್ಯ ಇರಲೇಬಾರದೆಂದು ಮಾನ್ಯ ಸಚಿವರ ಅಭಿಪ್ರಾಯವೇ?

**ಶ್ರೀಮತಿ ಗ್ರೇಸ್ ಟಕ್ಕರ್** – ನಿರ್ದಿಷ್ಟವಾಗಿ ಯಾವ ವರ್ಷದಲ್ಲಿ?

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಖಾಲಿಸ್ಥಳ ತೋರಿಸುತ್ತಿರುವ ವರ್ಷದಲ್ಲಿ ಮಾನ್ಯ ಸಭಾಧ್ಯಕ್ಷರು 1959–60

**ಶ್ರೀಮತಿ ಗ್ರೇಸ್ ಟಕ್ಕರ್** – ಯೋಜನಾ ವೆಚ್ಚದಲ್ಲಿನ ಕಡಿತದಿಂದಾಗಿ ಹೀಗೆ ಮಾಡಲಾಗಿದೆ ಎಂದು ಈಗಷ್ಟೇ ನಾನು ಹೇಳಿದ್ದೇನೆ. ಇದನ್ನು ಕಡಿಮೆ ಮಾಡಲಾಗಿದೆ ಹಾಗೂ ಆ ವರ್ಷದಲ್ಲಿ ನಾವು ಅವುಗಳಿಗೆ ಶಿಕ್ಷಕರನ್ನು ಕೊಡಲು ಸಾಧ್ಯವಾಗಲಿಲ್ಲ.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಶಾಲೆಗಳನ್ನು ಮುಚ್ಚಲಾಗಿದ್ದು ಶಾಲೆಗಳು ಕಾರ್ಯನಿರ್ವಹಿಸಿಲ್ಲ ಎಂಬುದು ಮಾನ್ಯ ಸಚಿವರ ಸೂಚನೆಯೇ?

**ಶ್ರೀಮತಿ ಗ್ರೇಸ್ ಟಕ್ಕರ್** – ಮುಂಬಯಿ ಕರ್ನಾಟಕ ಪ್ರದೇಶದಲ್ಲಿ, ನಾವು ಒಂದು ಅನುಕೂಲವನ್ನು ಹೊಂದಿದ್ದು ಅದೇನೆಂದರೆ ಬೇರೆ ಜಿಲ್ಲೆಗಳಿಗಿಂತಲೂ ಅಲ್ಲಿ ಶಿಕ್ಷಕ ವಿದ್ಯಾರ್ಥಿ ಪ್ರಮಾಣವು ಸ್ವಲ್ಪ ಸುಧಾರಣೆಯನ್ನು ತೋರಿಸುತ್ತದೆ: ಅಂದರೆ ಅದು:40 ಆಗಿತ್ತು. ಹೀಗಾಗಿ ನಾವು

ಸ್ಥಳಾವಕಾಶ ಮಾಡಿಕೊಡಲು ಹಾಗೂ ಶಾಲೆಗಳನ್ನು ನಿರ್ವಹಿಸಿಕೊಂಡು ಹೋಗಲು ಸಾಮರ್ಥ್ಯವುಳ್ಳವರಾಗಿದ್ದೆವು.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಅಂತಹ ಜಿಲ್ಲೆಗಳ ಸಂಬಂಧದಲ್ಲಿ ಬೋಧನಾ ಸಿಬ್ಬಂದಿಯ ಬಗ್ಗೆ ವೈಚಾರಿಕ ದೃಷ್ಟಿಕೋನವನ್ನು ಯಾತಕ್ಕೆ ಅಳವಡಿಸಿಕೊಂಡಿಲ್ಲ.

**ಶ್ರೀ ಅಣ್ಣಾರಾವ್ ಗಣಮುಖಿ** -- ಸರ್ಕಾರದ ಮಟ್ಟದಲ್ಲಿ ಬೇಡಿಕೆಯನ್ನು ಪರಿಶೀಲಿಸಿರುವ ಬಗ್ಗೆ ನಾನು ಹೇಳಬೇಕಿದೆ. ವಿದ್ಯಾರ್ಥಿಗಳ ಅನುಪಾತವು ಕಡಿಮೆಯೆಂದು ಕಂಡುಬಂದಂಥ ಕಡೆಗಳಲ್ಲಿ ನಾವು ಅವರಿಗೆ ಶಿಕ್ಷಕರನ್ನು ಒದಗಿಸಿಲ್ಲ. ಎಲ್ಲೆಲ್ಲಿ ಅನುಪಾತ ಸಮನಾಗಿದ್ದಿತೋ ಅಲ್ಲಿ ನಾವು ಶಿಕ್ಷಕರನ್ನು ಒದಗಿಸಿಲ್ಲ. ಹಾಗೆಯೇ ಶಿಕ್ಷಕರು ಕಡಿಮೆ ಇದ್ದ ಕಡೆಗಳಲ್ಲೆಲ್ಲಾ ನಾವು ಅವರಿಗೆ ಶಿಕ್ಷಕರನ್ನು ಒದಗಿಸಿದ್ದೇವೆ. ಬಿಜಾಪುರದ ಸಂದರ್ಭದಲ್ಲಿಯೂ ಸಹ, ನಾವು ಪರಿಶೀಲಿಸಿದ್ದೇವೆ. ಅವುಗಳು ತೃಪ್ತಿಕರವಾದ ಉತ್ತರಗಳನ್ನು ನೀಡಿದ್ದು ಸಚಿವಾಲಯದಿಂದ ನಾವು ಸ್ಪಷ್ಟೀಕರಣವನ್ನು ಕಳುಹಿಸಿದ್ದೇವೆ. ಇತರ ಜಿಲ್ಲೆಗಳು ತೃಪ್ತಿಕರವಾಗಿ ಉತ್ತರಿಸಿಲ್ಲ. ಶಿಕ್ಷಕ – ವಿದ್ಯಾರ್ಥಿಗಳ ಅನುಪಾತದ ಅವಶ್ಯಕತೆಯನ್ನು ಸರ್ಕಾರವು ಒಪ್ಪಿಕೊಂಡಿದೆ. ಆದುದರಿಂದ ಈ ವ್ಯತ್ಯಾಸವಾಗಿದೆ.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – 1959–60ನೇ ವರ್ಷದಲ್ಲಿ ಬೆಳಗಾಂ, ಧಾರವಾಡ ಮತ್ತು ಉತ್ತರಕನ್ನಡ – ಈ ಮೂರು ಜಿಲ್ಲೆಗಳ ಸಂಬಂಧದಲ್ಲಿ ವಿದ್ಯಾರ್ಥಿ–ಶಿಕ್ಷಕರ ಅನುಪಾತದ ಅಗತ್ಯ ಇರಲಿಲ್ಲವೆಂಬ ಮಾನ್ಯ ಸಚಿವರ ಹೇಳಿಕೆಯನ್ನು ನಾನು ಒಪ್ಪಿಕೊಳ್ಳಲು ಕಷ್ಟವಾಗುತ್ತದೆ.

**ಶ್ರೀ ಅಣ್ಣಾರಾವ್ ಗಣಮುಖಿ** – ನಾನು ಅದನ್ನು ಹೇಳಿಲ್ಲ. ಶಿಕ್ಷಕ–ವಿದ್ಯಾರ್ಥಿ ಅನುಪಾತದ ಹಿನ್ನೆಲೆಯಲ್ಲಿ ನಾವು ಬೇಡಿಕೆಯನ್ನು ಪರಿಶೀಲಿಸಿದ್ದೇವೆ. ಶಾಲೆಗಳಲ್ಲಿನ ವಾಸ್ತವಿಕ ಹಾಜರಾತಿಯನ್ನು ಮತ್ತು ಇಡಿಯಾಗಿ ವಿದ್ಯಾರ್ಥಿಗಳ ಸಂಖ್ಯೆಯನ್ನು ತೆಗೆದುಕೊಂಡು, ಶಿಕ್ಷಕರ ಪೂರೈಕೆಯನ್ನು ಸರಿಹೊಂದಿಸಿದ್ದೇವೆ.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಮಾನ್ಯ ಉಪಮಂತ್ರಿಗಳು ಶಿಕ್ಷಕರನ್ನು ಮಂಜೂರು ಮಾಡಲು ತಮ್ಮ ಬಳಿ ಸಾಕಷ್ಟು ಹಣವಿಲ್ಲವೆಂದು ಹೇಳಿದ್ದಾರೆ. ಆದರೆ ಮಾನ್ಯ ಸಚಿವರು ಇದನ್ನು ಪರಿಶೀಲಿಸಿದ್ದು ತೃಪ್ತಿಕರವಾದ ಉತ್ತರಗಳನ್ನು ಪಡೆದಿಲ್ಲದಿರುವ ಕಡೆಗಳ ಶಿಕ್ಷಕರನ್ನು ಕಳುಹಿಸುವ ತತ್ವವನ್ನು ಅವರು ಒಪ್ಪಿಕೊಂಡಿಲ್ಲವೆಂದು ಹೇಳಿದ್ದಾರೆ.......

**ಶ್ರೀ ಅಣ್ಣಾರಾವ್ ಗಣಮುಖಿ** – ನಾನು ಅದನ್ನು ಹೇಳಿಲ್ಲ. ಬೇಡಿಕೆ ಹೆಚ್ಚಾಗಿರುವಂತಹ ಕಡೆಗಳಲ್ಲಿ ಅವರ ಪೂರ್ಣ ಬೇಡಿಕೆಯನ್ನು ನಾವು ಈಡೇರಿಸಿರದಿದ್ದರೂ, ಕೆಲವು ಶಿಕ್ಷಕರನ್ನು ಕಳುಹಿಸಿದ್ದೇವೆ. ಆದರೆ ಅದೇ ಸಮಯದಲ್ಲಿ, ನಾವು ಈ ಅಂಶವನ್ನು ಸಹ ಪರಿಶೀಲಿಸಿದ್ದೇವೆ.

**ಶ್ರೀ ಹೆಚ್.ವಿ. ಕೌಜಲಗಿ** – ಈ ಪ್ರದೇಶದಲ್ಲಿ, ಪ್ರಾಥಮಿಕ ಶಾಲೆಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಬಾಲಕರಿಗೆ ಪ್ರವೇಶ ನೀಡಬಾರದೆಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು (ಡಿಪಿಐ) ರಹಸ್ಯವಾಗಿ ಸೂಚನೆಗಳನ್ನು ನೀಡಿರುವುದು ವಾಸ್ತವ ಸಂಗತಿಯಲ್ಲವೆ?

**ಶ್ರೀಮತಿ ಗ್ರೇಸ್ ಟಕ್ಕರ್** – ಇಲ್ಲ ಸ್ವಾಮಿ.

**ಶ್ರೀ ಎಫ್.ಎಚ್. ಮೊಹ್ಸಿನ್** – ಆ ವರ್ಷದಲ್ಲಿ ಉತ್ತರ ಕನ್ನಡ ಪ್ರದೇಶದಲ್ಲಿ ಯಾವ ಶಾಲೆಗಳನ್ನೂ ಪ್ರಾರಂಭಿಸಬಾರದೆಂದು ಸೂಚನೆಯನ್ನು ನೀಡಿರುವುದು ನಿಜವೆ?

**ಶ್ರೀಮತಿ ಗ್ರೇಸ್ ಟಕ್ಕರ್** – ನಾವು ಶಾಲೆಗಳ ಒಟ್ಟು ಸಂಖ್ಯೆಯನ್ನು ನಿರ್ಧರಿಸುತ್ತಿದ್ದು ಗ್ರಾಮೀಣ ಬೇಡಿಕೆ ಎಷ್ಟಿದೆ ಎಂಬುದನ್ನು ಅವಲೋಕಿಸಲು ಪ್ರಯತ್ನಿಸುತ್ತಿದ್ದೇವೆ. ತೆರೆಯಬಹುದಾಗಿರುವ ಯಾವುದೇ ಶಾಲೆಗಳಲ್ಲಿ ಮುಚ್ಚಲು ನಮಗೆ ಇಷ್ಟವಿಲ್ಲ. ಆದರೆ ನಾವು ಶಾಲೆಗಳನ್ನು ಮಂಜೂರು ಮಾಡುವುದಕ್ಕೆ ಮುಂಚೆ ಶಾಲೆಗಳ ನಿಜವಾದ ಅಗತ್ಯತೆಯನ್ನು ನಿರ್ಧಾರ ಮಾಡಬೇಕು.

**ಶ್ರೀ ಟಿ.ಕೆ. ಕಂಬ್ಳಿ** – ಹಿಂದೆ ಹಳೆಯ ಮೈಸೂರಿನಲ್ಲಿ ಒತ್ತಾಯ ಶಿಕ್ಷಣವನ್ನು ಜಾರಿಗೆ ಬರುತ್ತಿರುವಾಗ 1956–57, 57–58 ಮತ್ತು 58–59ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯೊಳಗೆ ಶಾಲಾ ಶಿಕ್ಷಕರನ್ನು ಮಂಜೂರು ಮಾಡಿದ್ದೀರಿ. 59–60ನೇ ಸಾಲಿನಲ್ಲಿ ಕೇವಲ ವಿಜಾಪುರ ಜಿಲ್ಲೆಗೆ 191 ಶಾಲಾ ಉಪಾಧ್ಯಾಯರುಗಳನ್ನು ಮಾತ್ರ ಮಂಜೂರು ಮಾಡಿದೆ ಎಂದು ಉತ್ತರದಲ್ಲಿ ಹೇಳಿದೆ. ಇತರ ಪ್ರದೇಶಗಳಿಗೆ 1959–60ನೇ ಸಾಲಿನಲ್ಲಿ ಉಪಾಧ್ಯಾಯರುಗಳನ್ನು ಮಂಜೂರು ಮಾಡದೇ ಇರಲು ಕಾರಣಗಳೇನು?

**ಅಧ್ಯಕ್ಷರು** – ಅದಕ್ಕೆ ಮಂತ್ರಿಗಳು ಆಗಲೇ ಉತ್ತರ ಹೇಳಿದ್ದಾರೆ.

**ಶ್ರೀಮತಿ ಗ್ರೇಸ್ ಟಕ್ಕರ್** – ಶ್ರೀ ಮೊಹಿಸಿನ್ ರವರ ಪ್ರಶ್ನೆಗೆ ಸಂಬಂಧಿಸಿದಂತೆ, ಮುಂಬಯಿ ಕರ್ನಾಟಕ ಪ್ರದೇಶದ ಒಂದು ಮೈಲಿ ಪರಿಧಿಯೊಳಗೆ ಅನೇಕ ಪ್ರಾಥಮಿಕ ಶಾಲೆಗಳಿದ್ದು ಅಲ್ಲಿ ಸರಿಯಾದ ಶಿಕ್ಷಕ–ವಿದ್ಯಾರ್ಥಿ ಅನುಪಾತ ಹೊಂದಿಲ್ಲದಂಥ ವಾತಾವರಣ ಇತ್ತೆಂದು ನಾನು ಹೇಳಬೇಕಾಗಿದೆ. ತದನುಸಾರವಾಗಿ ನಾವು ಶಾಲೆಗಳನ್ನು ಕೊಟ್ಟಿದ್ದೇವೆ.

**ಶ್ರೀ ಎಸ್.ಡಿ. ಕೊಥವಾಲೆ** – ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಅನುಷ್ಠಾನಗೊಳಿಸುವ ತೀರ್ಮಾನವನ್ನು ಕೈಗೊಂಡಿರುವ ದೃಷ್ಟಿಯಲ್ಲಿ, ಈ ವರ್ಷದಲ್ಲಿ ಎಲ್ಲಾ ಶಾಲೆಗಳಿಗೆ ಸಾಕಷ್ಟು ಸಂಖ್ಯೆಯ ಶಿಕ್ಷಕರನ್ನು ಮಂಜೂರು ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

**ಶ್ರೀಮತಿ ಗ್ರೇಸ್ ಟಕ್ಕರ್** – ವಿಶೇಷವಾಗಿ ಈ ವರ್ಷದಲ್ಲಿ ನಾವು ಗಣನೀಯವಾದ ಸಂಖ್ಯೆಯ ಶಿಕ್ಷಕರನ್ನು ಮಂಜೂರು ಮಾಡಿದ್ದೇವೆ ಹಾಗೂ ವಾಸ್ತವವಾಗಿ ನಾವು ಇನ್ನೂ ಹೆಚ್ಚಿನ ಶಿಕ್ಷಕರ ಬೇಡಿಕೆಯನ್ನು ಪೂರೈಸುವಂತೆ ನೋಡಿಕೊಳ್ಳುವ ದೃಷ್ಟಿಯಿಂದ 162 ಶಿಕ್ಷಕರನ್ನು ಮೀಸಲಾಗಿಟ್ಟಿದ್ದೇವೆ ಮತ್ತು ಪ್ರಾಥಮಿಕ ಶಾಲೆಗಳನ್ನು ಬಲಗೊಳಿಸುವ ದೃಷ್ಟಿಯಿಂದ ಸರಿಯಾಗಿ ಶಾಲೆಗಳಿಗೆ ನೇಮಿಸಲು ನಾವು ಕೂಡಲೇ ಶಿಕ್ಷಕರನ್ನು ಕೊಟ್ಟಿದ್ದೇವೆ.

**ಶ್ರೀ ಪಿ.ಜಿ. ಸಿದ್ಧಾಂತಿ** – ಈಗ ನಿಮ್ಮ ಉತ್ತರದ ಪ್ರಕಾರ ಸ್ಕೂಲುಗಳನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ. ಕೆಲವು ಹಳ್ಳಿಗಳಲ್ಲಿ ಒಂದು ಸ್ಕೂಲು ಇಲ್ಲ. ಮಾಸ್ಟರುಗಳ ಸಂಖ್ಯೆ ಕಡಿಮೆ ಇದೆ ಎಂದು ಹೇಳುತ್ತಾ ನೀವು ಶಾಲೆಗಳನ್ನು ಮತ್ತು ಶಿಕ್ಷಕರನ್ನು ಸಾಕಷ್ಟು ಇನ್ನೂ ಈಗ ಕೊಡುತ್ತೇವೆಂದು ಹೇಳುತ್ತೀರಿ. ಹಳ್ಳಿಗಳಿಗೆ ಸುಮ್ಮನೆ ಶಾಲೆಗಳನ್ನು ಕೊಟ್ಟು ಮಾಸ್ಟರುಗಳೇ ಇಲ್ಲದೇ ಇರುವ ನಿದರ್ಶನಗಳು ಬೇಕಾದಷ್ಟಿವೆ. ಅಂದ ಮೇಲೆ ಇದರಲ್ಲಿ ಯಾವುದು ಖರೆ ಎಂಬುದನ್ನು ಹೇಳುತ್ತೀರಾ?

**ಶ್ರೀಮತಿ ಗ್ರೇಸ್ ಟಕ್ಕರ್** – ನಾವು ಮುಂಬಯಿ–ಕರ್ನಾಟಕ ಪ್ರದೇಶಕ್ಕಾಗಿಯೇ ಮಂಜೂರು ಮಾಡಿರುವ 937 ಶಿಕ್ಷಕರನ್ನು ಹೊಂದಿದ್ದೇವೆ ಮತ್ತು ನಾವು ಕೆಲವರನ್ನು ಮೀಸಲಾಗಿಟ್ಟಿದ್ದೇವೆ.

**ಶ್ರೀ ಎಫ್.ಎಚ್. ಮೊಹಿಸಿನ್** – ಈ ವರ್ಷದಲ್ಲಿ ಧಾರವಾಡ ಜಿಲ್ಲೆಗೆ ಎಷ್ಟು ಜನ ಶಿಕ್ಷಕರನ್ನು ಕೊಡಲಾಗಿದೆ?

**ಶ್ರೀಮತಿ ಗ್ರೇಸ್ ಟಕ್ಕರ್** – ನಮ್ಮಲ್ಲಿ ಜಿಲ್ಲಾ ಶಾಲಾ ಮಂಡಳಿಗಳಿಗಾಗಿ 224 ಶಿಕ್ಷಕರು ಹಾಗೂ ಪುರಸಭಾ ಶಾಲಾ ಮಂಡಳಿಗಳಿಗಾಗಿ 41 ಶಿಕ್ಷಕರು ಇದ್ದಾರೆ.

**ಶ್ರೀ ಹೆಚ್.ವಿ. ಕೌಜಲಗಿ** – 1960–61ರ ವರ್ಷಕ್ಕಾಗಿ ಕೋರಲಾದ ಅಗತ್ಯ ಸಂಖ್ಯೆಯ ಶಿಕ್ಷಕರನ್ನು ಮಂಜೂರು ಮಾಡಿರುವುದಿಲ್ಲ ಎಂಬ ಸಂಗತಿಯು ನಿಜವೆ?

**ಶ್ರೀಮತಿ ಗ್ರೇಸ್ ಟಕ್ಕರ್** – ತೊಂದರೆಗಳ ಕಾರಣದಿಂದಾಗಿ ಅವುಗಳನ್ನು ಮಂಜೂರು ಮಾಡಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಎ.ಆರ್. ಪಂಚಗವಿ** – ಮಾನ್ಯ ಸಚಿವರು ಮೂರು ಜಿಲ್ಲೆಗಳಿಂದ ಯಾವುದೇ ತೃಪ್ತಿಕರವಾದ ಉತ್ತರಗಳು ಬಂದಿಲ್ಲವೆಂದು, ಮತ್ತು ಆದ್ದರಿಂದ ಶಿಕ್ಷಕರನ್ನು ಒದಗಿಸಿಲ್ಲವೆಂಬುದನ್ನು ಹೇಳಲಿಚ್ಛಿಸಿದ್ದಾರೆ.

**ಮಾನ್ಯ ಸಭಾಧ್ಯಕ್ಷರು** – ಅವರು, ತಾವು ಹಾಗೆ ಹೇಳಲಿಲ್ಲ ಎಂದಿದ್ದಾರೆ.

**ಶ್ರೀ ಎ.ಆರ್. ಪಂಚಗವಿ** – ಆ ಜಿಲ್ಲೆಗಳಿಂದ ತೃಪ್ತಿಕರವಾದ ಮಾಹಿತಿ ಪಡೆದುಕೊಂಡಿರುವುದನ್ನು ಗಮನಿಸಲು ಸರ್ಕಾರ ತೆಗೆದುಕೊಂಡ ಕ್ರಮ ಯಾವುದು?

**ಶ್ರೀ ಅಣ್ಣಾರಾವ್ ಗಣಮುಖಿ** – ತೃಪ್ತಿಕರವಾದ ಮಾಹಿತಿಯನ್ನು ಪಡೆದುಕೊಂಡನಂತರ ನಾವು ಅವುಗಳಿಗೆ ಶಿಕ್ಷಕರನ್ನು ಕೊಡುತ್ತೇವೆ.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಇದು ಕಡ್ಡಾಯ ಪ್ರಾಥಮಿಕ ಶಿಕ್ಷಣ ಪ್ರದೇಶವಾಗಿರುವುದಾಗಿ ನಾನು ಭಾವಿಸಿದ್ದೇನೆ ಮತ್ತು ಈಗಿರುವ ಕಡ್ಡಾಯ ಶಿಕ್ಷಣ ಪ್ರದೇಶದಲ್ಲಿಯೂ ಕೂಡ ನೀವು ಸಾಕಷ್ಟು ಸಂಖ್ಯೆಯಲ್ಲಿ ಶಿಕ್ಷಕರನ್ನು ಒದಗಿಸಿರುವುದಿಲ್ಲ, ಅದ್ಯಂತವಾಗಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ವಿಸ್ತರಿಸುವ ನೀತಿ ಎಂದರೇನು?

**ಮಾನ್ಯ ಸಭಾಧ್ಯಕ್ಷರು** – ಒಟ್ಟಾರೆ ಅದು ತೀರಾ ಭಿನ್ನವಾದ ಪ್ರಶ್ನೆಯಾಗಿದೆ.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಎರಡು ಜಿಲ್ಲೆಗಳಿಗೆ ಸಂಬಂಧಿಸಿದಂತೆ – ಬೆಳಗಾಂ ಜಿಲ್ಲೆಗೆ ಈ ಐದು ವರ್ಷಗಳ ಅವಧಿಯಲ್ಲಿ 677 ಶಿಕ್ಷಕರು ಬೇಕಾಗಿತ್ತು. ನೀವು ಅವರಿಗೆ 402 ಶಿಕ್ಷಕರನ್ನು ಕೊಟ್ಟಿದ್ದೀರಿ. ಮುಖ್ಯಮಂತ್ರಿಯವರು ಬಂದಿರುವ ಜಿಲ್ಲೆಯಾದ ಬಿಜಾಪುರದ ಸಂದರ್ಭದಲ್ಲಿ ಅವರು 944 ಶಿಕ್ಷಕರನ್ನು ಕೋರಿದ್ದು ನೀವು 603 ಶಿಕ್ಷಕರನ್ನು ಕೊಟ್ಟಿದ್ದೀರಿ. ಅದೇರೀತಿಯಾಗಿ, ಇತರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಲೆಕ್ಕಹಾಕಲು ನನಗೆ ಸಮಯವಿರಲಿಲ್ಲ. ಪ್ರಾಥಮಿಕ ಶಿಕ್ಷಣವು ಸಿಬ್ಬಂದಿಯಿಲ್ಲದೆಯೇ ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂಬುದು ಸರ್ಕಾರದ ಅಭಿಪ್ರಾಯವೇ? ಸಾಮಗ್ರಿ ಇತ್ಯಾದಿ ಇಲ್ಲದಿರುವ ನೂರಾರು ಶಾಲೆಗಳಿವೆ ಎಂಬುದಾಗಿ ಸದನದಲ್ಲಿ ನಮಗೆ ಹೇಳಲಾಗಿದೆ. ಈಗಿರುವ ಪ್ರದೇಶಕ್ಕೂ ಕೂಡ ನೀವು ಸಾಕಷ್ಟು ಸಿಬ್ಬಂದಿಯನ್ನು ಕೊಟ್ಟಿಲ್ಲ. ಹೇಗೆ ತಾನೆ ಪ್ರಾಥಮಿಕ ಶಿಕ್ಷಣವು ಯಶಸ್ವಿಯಾಗಲು ಸಾಧ್ಯ?

**ಶ್ರೀ ಅಣ್ಣಾರಾವ್ ಗಣಮುಖಿ** – ಸರಿಯಾದ ಪ್ರಮಾಣದಲ್ಲಿ ಶಿಕ್ಷಕರಿರುವ ಕಡೆಗಳಲ್ಲಿ ನಮಗೆ ಹಾಜರಾತಿಯ ಅಗತ್ಯವಿರುತ್ತದೆ. ಹಾಗಿದ್ದರೆ, ಶಾಲಾ ಮಂಡಳಿಗಳಿಂದ ಮಂಡಿಸಿರುವ ಎಲ್ಲಾ ಬೇಡಿಕೆಗಳನ್ನು ನಾವು ಪೂರೈಸಬೇಕು ಎಂದು ಹೇಳುವುದು ಸರಿಯಲ್ಲ. ಶಿಕ್ಷಕರ ಅಗತ್ಯವಿದೆಯೆ ಅಥವಾ ಇಲ್ಲವೆ ಎಂಬುದನ್ನು ನಾವು ಪರಿಶೀಲನೆ ಮಾಡಿನೋಡುತ್ತೇವೆ. ಅಗತ್ಯವಿದ್ದರೆ, ನಾವು ಅವುಗಳಿಗೆ ಶಿಕ್ಷಕರನ್ನು ಕೊಡಲು ಸಿದ್ಧರಿದ್ದೇವೆ. ಪುನರ್ವಿನಿಯೋಗದ ಮೂಲಕ ಒದಗಿಸಿದ ಶಿಕ್ಷಕರನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸುತ್ತೇವೆ ಮತ್ತು ನಾವು ಯೋಜನೆಯನ್ನು ಯಶಸ್ವಿಗೊಳಿಸಲು ಅಪೇಕ್ಷಿಸುತ್ತೇವೆ.

**ಶ್ರೀ ಜೆ.ಬಿ. ಮಲ್ಲಾರಾಧ್ಯ** – ಬೆಳಗಾಂ ಜಿಲ್ಲೆಯಲ್ಲಿ 677 ಶಿಕ್ಷಕರ ಬೇಡಿಕೆಗೆ ಪ್ರತಿಯಾಗಿ ಶಿಕ್ಷಕ–ವಿದ್ಯಾರ್ಥಿಗಳ ಅನುಪಾತವನ್ನು ಪರಿಗಣಿಸಿ ಅತ್ಯಂತ ಕಡಿಮೆಯಾದ 402 ಶಿಕ್ಷಕರನ್ನು ಮಾತ್ರ ನಿಗದಿಪಡಿಸಿರುತ್ತದೆ ಎಂಬುದು ಮಾನ್ಯ ಸಚಿವರ ಸೂಚನೆಯಾಗಿರುತ್ತದೆಯೆ? ಕಳೆದ 5 ವರ್ಷಗಳಲ್ಲಿ ನಾಲ್ಕು ಜಿಲ್ಲೆಗಳಿಗೆ ಕೊಟ್ಟಿರುವ ಶಿಕ್ಷಕರ ಸಂಖ್ಯೆಯು ಅವರಿಂದ ನಿರೀಕ್ಷಿಸಿದ ಕನಿಷ್ಠ ಬೇಡಿಕೆಯಾಗಿರುತ್ತದೆ ಎಂಬುದಾಗಿ ಸಚಿವರಿಂದ ನಾನು ಖಚಿತವಾದ ಹೇಳಿಕೆಯನ್ನು ಅಪೇಕ್ಷಿಸುತ್ತೇನೆ.

**ಶ್ರೀ ಅಣ್ಣಾರಾವ್ ಗಣಮುಖಿ** – ಇನ್ನೂ ಕೆಲವು ಹೆಚ್ಚಿನ ಬೇಡಿಕೆಯು ಇರುವುದಾಗಿ ನಾನು ಭಾವಿಸಿದ್ದೇನೆ. ನಾವು ಅವರ ಬೇಡಿಕೆಗಳನ್ನು ಶಿಕ್ಷಕ ವಿದ್ಯಾರ್ಥಿಗಳ ಅನುಪಾತದ ಹಿನ್ನೆಲೆಯಲ್ಲಿ ಪರಿಶೀಲಿಸಿದ್ದೇವೆ. ಅವರ ಬೇಡಿಕೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಪೂರೈಸಿದ್ದೇವೆ ಎಂಬುದಾಗಿ ನಾನು ಭಾವಿಸಿದ್ದೇನೆ.

(ದಿನಾಂಕ 2.9.1961)

# ಟಿಪ್ಪಣಿ

ಮುಂಬಯಿ ಕರ್ನಾಟಕದ ಜಿಲ್ಲೆಗಳಿಗೆ 1956–57 ರಿಂದ 1959–60ರವರೆಗಿನ ಸಾಲಿನಲ್ಲಿ ಜಿಲ್ಲಾ ಶಾಲಾ ಮಂಡಳಿಗಳು ಬೇಡಿಕೆ ಸಲ್ಲಿಸಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಮತ್ತು ಸರ್ಕಾರ ಮಂಜೂರು ಮಾಡಿರುವ ಶಿಕ್ಷಕರ ಹುದ್ದೆಗಳ ಸಂಖ್ಯೆಯನ್ನು ತಿಳಿಸಬೇಕೆಂದು ಎಚ್.ವಿ.ಕೌಜಲಗಿಯವರು ಪ್ರಶ್ನೆ ಕೇಳಿದ್ದರು. ಸರ್ಕಾರ ಈ ಬಗ್ಗೆ ಒಂದು ವಿವರ ನೀಡಿತು. ಈ ಅಂಕಿಅಂಶಗಳಿಂದ ತೃಪ್ತರಾಗದ ಶ್ರೀಯುತರು ನಿಮಗೆ ಸಾಕಷ್ಟು ಶಿಕ್ಷಕರನ್ನು ನೇಮಿಸಲು ಸಾಧ್ಯವಾಗದಿದ್ದರಿಂದ ಈ ಪ್ರದೇಶದಲ್ಲಿ ಶಿಕ್ಷಣ ಹಿಂದೆ ಬಿದ್ದಿದೆ ಎಂಬ ಅರಿವಿದೆಯೇ ಎಂದು ಸದನದಲ್ಲಿ ಪ್ರಶ್ನಿಸಿದರು. ಹೀಗೆ ಪ್ರಾರಂಭವಾದ ವಿಷಯದ ಚರ್ಚೆಯಲ್ಲಿ ಶ್ರೀಮತಿ ಗ್ರೇಸ್ ಟಕ್ಕರ್, ಶ್ರೀಯುತರಾದ ಎಫ್.ಎಚ್. ಮೊಹಿಸಿನ್, ಜಿ.ಬಿ. ಮಲ್ಲಾರಾಧ್ಯ, ಎಸ್.ಡಿ. ಕೋಥಾವಳೆ, ಪಿ.ಜಿ. ಸಿದ್ಧಾಂತಿ ಮೊದಲಾದ ಸದಸ್ಯರು ಪಾಲ್ಗೊಂಡರು. ಮುಖ್ಯವಾಗಿ ಈ ಭಾಗದಲ್ಲಿ ಸರ್ಕಾರ ಬಿಜಾಪುರ ಜಿಲ್ಲೆಗೆ ಹೆಚ್ಚು ಶಿಕ್ಷಕ ಹುದ್ದೆಗಳನ್ನು ನೀಡಿ ಉಳಿದ ಧಾರವಾಡ ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಅಗತ್ಯವಾದ ಶಿಕ್ಷಕರ ಹುದ್ದೆಗಳನ್ನು ನೀಡದೆ ತಾರತಮ್ಯ ಎಸಗಿದೆ ಎಂದು ಕೆಲವು ಸದಸ್ಯರು ಆಕ್ಷೇಪಿಸಿದರು. ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿದ ಶಿಕ್ಷಣ ಸಚಿವರಾಗಿದ್ದ ಶ್ರೀ ಅಣ್ಣಾರಾವ್ ಗಣಮುಖಿಯವರು ಈ ಜಿಲ್ಲೆಗಳಿಗೆ ಅಲ್ಲಿನ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಅನುಪಾತದ ಮೇಲೆ ಶಿಕ್ಷಕರ ಹುದ್ದೆಗಳನ್ನು ನೀಡಲಾಗಿದೆ. ಸರ್ಕಾರಕ್ಕೆ ಆರ್ಥಿಕ ಸಂಪನ್ಮೂಲದ ಕೊರತೆಯೂ ಇದೆ. ಇಲ್ಲಿ ಯಾವ ತಾರತಮ್ಯ ನಡೆದಿಲ್ಲ. ನಾವು ಅಲ್ಲಿನ ಬೇಡಿಕೆಯನ್ನು ಗರಿಷ್ಠ ಮಟ್ಟದಲ್ಲಿ ಈಡೇರಿಸಿದ್ದೇವೆ ಎಂದು ಸಮಾಧಾನ ಹೇಳಿದರು.

**ಶ್ರೀ ಹೆಚ್.ವಿ. ಕೌಜಲಗಿ** – ಇದರಲ್ಲಿ ರೆಕರಿಂಗ್ ನಾನ್ ರೆಕರಿಂಗ್ ನಾನ್ ರೆಕರಿಂಗ್ ಎಕ್ಸ್‌ಪೆಂಡಿಚರ್ ಬರುತ್ತದೆ ಮತ್ತು ಅನೇಕ ಕಟ್ಟಡಗಳ ಅವಶ್ಯಕತೆ ಇದೆ.

**ಶ್ರೀ ಪಿ.ವಿ. ಐತಾಳ** – ಇಡೀ ರಾಜ್ಯದಲ್ಲಿ, 1969ರಲ್ಲಿ ಯಾವುದೇ ಹೊಸ ತಾಲ್ಲೂಕನ್ನು ರಚನೆ ಮಾಡಲಾಗುತ್ತದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಹೆಚ್.ವಿ. ಕೌಜಲಗಿ** – ನಿಧಿಗಳ ಕೊರತೆಯಿಂದಾಗಿ 1969ಕ್ಕಿಂತ ಮುಂಚೆ ಯಾವುದೇ ಹೊಸ ತಾಲ್ಲೂಕನ್ನು ರಚಿಸಲು ಸಾಧ್ಯವಿಲ್ಲ.

**ಶ್ರೀ ಪಿ.ವಿ. ಐತಾಳ** – ಮಾನ್ಯ ಸಚಿವರು ನಿಧಿಗಳ ಕೊರತೆಯಿಂದಾಗಿ ಯಾವುದೇ ಹೊಸ ತಾಲ್ಲೂಕನ್ನು ರಚಿಸಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಇದು ಇಡೀ ರಾಜ್ಯಕ್ಕೆ ಸಂಬಂಧಿಸಿರುವ ನೀತಿಯಾಗಿರುತ್ತದೆಯೇ ಎಂಬುದನ್ನು ನಾನು ತಿಳಿಯಬಹುದೆ?

**ಶ್ರೀ ಹೆಚ್.ವಿ. ಕೌಜಲಗಿ** – ಇದು ಇಡೀ ರಾಜ್ಯಕ್ಕೆ ಸಂಬಂಧಿಸುವ ನೀತಿಯಾಗಿದೆ.

**ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ** – ಹೊಸ ತಾಲ್ಲೂಕನ್ನು ರಚಿಸಲು ಅನುಸರಿಸಲಾಗಿರುವ ಮಾನದಂಡ ಯಾವುದು?

**ಶ್ರೀ ಹೆಚ್.ವಿ. ಕೌಜಲಗಿ** – ಕೆಲವು ದೊಡ್ಡವು ಮತ್ತು ಕೆಲವು ಸಣ್ಣ ಸ್ಥಳಗಳಾಗಿವೆ. ಹೊಸ ತಾಲ್ಲೂಕುಗಳನ್ನು ರಚಿಸುವುದಕ್ಕಾಗಿ ಆಡಳಿತ ಅನುಕೂಲ ಮತ್ತು ಭೌಗೋಳಿಕ ಅನುಕೂಲಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಪ್ರದೇಶಗಳಿಗಾಗಿ ಪುನರ್ ರಚನೆ ಮಾಡುವ ಪ್ರಸ್ತಾವವಿದೆ.

**ಶ್ರೀ ಎಸ್. ಶಿವಪ್ಪ** – ಇದು ತಾಲ್ಲೂಕು ಜನಸಂಖ್ಯೆಯ ದೊಡ್ಡ ಪ್ರಮಾಣದ ಅಥವಾ ಸಣ್ಣ ಪ್ರಮಾಣದ ಮಾನದಂಡವೆ ಅಥವಾ ಜಿಲ್ಲೆಯಲ್ಲಿ ವಾಸಿಸುತ್ತಿರುವ ಕಾಂಗ್ರೆಸ್ ಜನರ ದೊಡ್ಡಸ್ತಿಕೆ ಅಥವಾ ಸಣ್ಣತನದ ಮಾನದಂಡವೆ?

**ಶ್ರೀ ಹೆಚ್.ವಿ. ಕೌಜಲಗಿ** – ಇದು ಆಡಳಿತದ ಅನುಕೂಲಕ್ಕೆ ಆಗಿರುತ್ತದೆ.

**ಶ್ರೀ ಕೆ.ಎಚ್. ಪಾಟೀಲ್** – ತಾಲ್ಲೂಕು ಕೇಂದ್ರ ಸ್ಥಾನಗಳು ಮತ್ತು ಜಿಲ್ಲಾ ಕೇಂದ್ರ ಸ್ಥಾನಗಳ ರಚನೆಯ ಸಂಬಂಧದಲ್ಲಿ ರಾಜ್ಯ ಸರ್ಕಾರದ ಖಚಿತವಾದ ಕಾರ್ಯನೀತಿಯನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಹೆಚ್.ವಿ. ಕೌಜಲಗಿ** – ನಾನು ಈ ಮೊದಲೇ ಹೇಳಿದಂತೆ ಆಡಳಿತ ಅನುಕೂಲದ ಸಲುವಾಗಿ, ಕೆಲವು ತಾಲ್ಲೂಕುಗಳಿಗೆ ಮರುಜೋಡಿಸುವ ಸಂದರ್ಭವಿರುತ್ತದೆ. ಆದರೆ, ಇದಕ್ಕೆ ನಾವು ತರುವಾಯದ ಹಂತದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ, ಆದರೆ ಈಗಲ್ಲ.

(ದಿನಾಂಕ 3.9.1968)

# ಪಾಳು ಜಮೀನನ್ನು ಸಾಗುವಳಿಗೆ ಬಳಸುವ ಬಗ್ಗೆ

1968

**ಶ್ರೀ ಎನ್.ಬಿ. ಸರ್‌ದೇಸಾಯಿ** (ಖಾನಾಪುರ) – ಕಂದಾಯ ಸಚಿವರು ಈ ಮುಂದಿನವುಗಳ ಬಗ್ಗೆ ದಯವಿಟ್ಟು ತಿಳಿಸುವರೇ:–

ಎ) 1966ರಿಂದ 1968ರ ವರೆಗೆ ಬೆಳಗಾಂ ಜಿಲ್ಲೆಯ, ಖಾನಾಪುರ ತಾಲ್ಲೂಕಿನಲ್ಲಿ ಸಾಗುವಳಿಗಾಗಿ ಬಿಡುಗಡೆ ಮಾಡಲಾದ ಕಂದಾಯ ಪಾಳು ಜಮೀನುಗಳ ಒಟ್ಟು ಎಕರೆಗಳ ಸಂಖ್ಯೆ ಮತ್ತು ಇನ್ನೂ ಬಿಡುಗಡೆ ಮಾಡಬೇಕಾದ ಕಂದಾಯ ಪಾಳು ಜಮೀನುಗಳ ಒಟ್ಟು ಎಕರೆಗಳ ಸಂಖ್ಯೆ:

ಬಿ) ಯಾವ ಆಧಾರದ ಮೇಲೆ ಸಾಗುವಳಿದಾರರಿಗೆ ಕಂದಾಯ ಪಾಳು ಜಮೀನುಗಳನ್ನು ಮಂಜೂರು ಮಾಡಲಾಗಿದೆ.

ಸಿ) ಕಂದಾಯ ಪಾಳು ಜಮೀನುಗಳ ಸಾಗುವಳಿದಾರರು, ಸರ್ಕಾರದಿಂದ ಯಾವುದೇ ಲಿಖಿತ ಅಥವಾ ಸೂಚಿತ ಅನುಮತಿಯಿಲ್ಲದೆ ಸ್ವಾಧೀನವನ್ನು ಹೊಂದಿರುವಾಗ, ಅವರನ್ನು ಅತಿಕ್ರಮಣಕಾರರು ಎಂಬುದಾಗಿ ಪರಿಗಣಿಸಲಾಗಿದ್ದು ಅವರಿಗೆ ಜಮೀನುಗಳನ್ನು ಮರುಮಂಜೂರು ಮಾಡುವುದಕ್ಕೆ ಮುಂಚೆ ಅವರನ್ನು ದಂಡ ಸಂದಾಯ ಮಾಡುವಂತೆ ಕೋರಲಾಗಿದೆಯೇ?

ಡಿ) ಅಂಥ ಅತಿಕ್ರಮ ಪ್ರವೇಶಕ್ಕಾಗಿ ಯಾವ ಆಧಾರದ ಮೇಲೆ ಮತ್ತು ಯಾರಿಂದ ದಂಡದ ದರವನ್ನು ನಿಗದಿ ಮಾಡಲಾಗಿದೆ?

**ಉತ್ತರ: ಶ್ರೀ ಹೆಚ್.ವಿ. ಕೌಜಲಗಿ (ಕಂದಾಯ ಸಚಿವರು) –**

ಎ) i) 1,411–23 ಎಕರೆಗಳು

ii) 6,879–36 ಎಕರೆಗಳು

ಬಿ) ಕಂದಾಯ ಇಲಾಖೆಯ ನಿಯಂತ್ರಣದಲ್ಲಿರುವ ಜಮೀನುಗಳನ್ನು 1968ರ ಮೈಸೂರು ಭೂ ಮಂಜೂರಾತಿ ನಿಯಮಗಳ ಉಪಬಂಧಗಳು ಜಾರಿಗೊಂಡ ದಿನಾಂಕದಿಂದ 1968ರ ಮಾರ್ಚ್ 28ರ ವರೆಗೆ 1960ರ ಮುಂಬಯಿ ಭೂ ಕಂದಾಯ (ಮೈಸೂರು ತಿದ್ದುಪಡಿ) ನಿಯಮಗಳ ಪ್ರಕಾರ ಮಂಜೂರು ಮಾಡಲಾಗುತ್ತಿದೆ.

ಸಿ) 1964ರ ಮೈಸೂರು ಭೂಕಂದಾಯ ಅಧಿನಿಯಮದ ಪ್ರಕರಣ 94ರ ಉದ್ದೇಶಕ್ಕಾಗಿ, ಅವರನ್ನು ಸರ್ಕಾರಿ ಜಮೀನಿನ ಅನಧಿಕೃತ ಅಧಿಭೋಗದಾರರು ಎಂಬುದಾಗಿ ಪರಿಗಣಿಸಲಾಗಿದೆ.

ಡಿ) 1964ರ ಮೈಸೂರು ಭೂಕಂದಾಯ ಅಧಿನಿಯಮದ ಪ್ರಕರಣ 94ರ ಪ್ರಕಾರ ದಂಡವನ್ನು ನಿಗದಿಪಡಿಸುವ ಅಧಿಕಾರವನ್ನು ತಹಸೀಲ್ದಾರರಿಗೆ ವಹಿಸಿಕೊಡಲಾಗಿದೆ.

**ಶ್ರೀ ಎಸ್. ಬಿ. ಸರ್‌ದೇಸಾಯಿ** – 1956ರಿಂದ ಜಮೀನಿನ ವಾಸ್ತವಿಕ ಸ್ವಾಧೀನದಲ್ಲಿರುವ ಮತ್ತು ನಿಯತವಾಗಿ ಭೂಕಂದಾಯವನ್ನು ಸಂದಾಯ ಮಾಡುತ್ತಿರುವ ಖಾನಾಪುರ ತಾಲ್ಲೂಕಿನ ಕಂದಾಯ ಪಾಳು ಜಮೀನುಗಳ ಸಾಗುವಳಿದಾರರನ್ನು ಅತಿಕ್ರಮಣಕಾರರು ಅಥವಾ ಅನಧಿಕೃತ ಸಾಗುವಳಿದಾರರು ಎಂಬುದಾಗಿ ಹೇಗೆ ಪರಿಗಣಿಸಬಹುದು ಮತ್ತು ಟಿ.ಟಿ. ಜುಲ್ಮಾನೆ ಅಥವಾ ದಂಡವನ್ನು ಅವರಿಗೆ ಹೇಗೆ ವಿಧಿಸಬಹುದೆಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಹೆಚ್.ವಿ. ಕೌಜಲಗಿ** – ಸರ್ಕಾರದ ಅಧಿಕಾರವಿಲ್ಲದೆಯೇ ಜಮೀನುಗಳನ್ನು ಬಳಸಿಕೊಂಡಿರುವ ವ್ಯಕ್ತಿಗಳಿಂದ ಸ್ವಲ್ಪ ದಂಡವನ್ನು ವಸೂಲಿ ಮಾಡಿದ್ದು ಅವರು ಇನ್ನೂ ಕಾನೂನು ಬಾಹಿರ ಅಧಿಭೋಗದಾರರಾಗಿರುತ್ತಾರೆ.

**ಶ್ರೀ ಎಂ.ಎಸ್. ಕೃಷ್ಣನ್** – ಖಾನಾಪುರ ತಾಲ್ಲೂಕಿನಲ್ಲಿ ಎಷ್ಟು ಮಂದಿ ಅಂಥ ಅನಧಿಕೃತ ಸಾಗುವಳಿದಾರರು ಇದ್ದಾರೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಹೆಚ್.ವಿ. ಕೌಜಲಗಿ** – 1,441 ಎಕರೆಗಳು ಕಾನೂನುಬಾಹಿರ ಅಧಿಭೋಗದಲ್ಲಿವೆ.

**ಶ್ರೀ ಎಂ.ಎಸ್. ಕೃಷ್ಣನ್** – ಸರ್ಕಾರವು ಅವರ ಅಧಿಭೋಗವನ್ನು ಈ ದಂಡವಿಲ್ಲದೆಯೇ ಖಾಯಂಗೊಳಿಸುವ ಬಗ್ಗೆ ಪರಿಗಣಿಸಲು ಇಚ್ಛಿಸುತ್ತದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಅವರಿಂದ ಸ್ವಲ್ಪ ಹಣವನ್ನು ತೆಗೆದುಕೊಂಡು ಈ ಜಮೀನುಗಳನ್ನು ಅವರಿಗೆ ಮಂಜೂರು ಮಾಡತಕ್ಕುದಾದ ಸೂಕ್ತ ವಿಷಯವಾಗಿರುತ್ತದೆಯೇ ಎಂಬುದನ್ನು ಸರ್ಕಾರ ಯೋಚಿಸುತ್ತಿದೆ.

**ಶ್ರೀ ಎನ್.ಬಿ. ಸರ್‌ದೇಸಾಯಿ** – ಸರ್ಕಾರವು, ಸಾಗುವಳಿದಾರರಿಂದ ನಿಯತವಾಗಿ ಸಲ್ಲಿಸುತ್ತಿರುವ ಭೂಕಂದಾಯವನ್ನು ಅಂಗೀಕರಿಸುವ ಮೂಲಕ ಈಗಾಗಲೇ ಪ್ರತ್ಯೇಕವಾಗಿ ಅಥವಾ ಪರೋಕ್ಷವಾಗಿ ಅವರ ಅಧಿಭೋಗದ ಹಕ್ಕನ್ನು ಸ್ಥಾಪಿಸಿರುವುದರಿಂದ, ಸರ್ಕಾರವು ಜುಲ್ಮಾನೆ ಮತ್ತು ದಂಡವನ್ನು ಮನ್ನಾ ಮಾಡುವಷ್ಟರಮಟ್ಟಿಗೆ ಅನುಗ್ರಹ ತೋರುವುದೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಹೆಚ್.ವಿ. ಕೌಜಲಗಿ** – ಪ್ರತಿವರ್ಷ ಅವರಿಂದ ದಂಡವನ್ನು ಮಾತ್ರ ವಸೂಲಿ ಮಾಡಲಾಗುತ್ತಿದೆ.

**ಶ್ರೀ ವಿ.ಎಸ್. ಪಾಟೀಲ್** – ರಾಜ್ಯದಲ್ಲಿ ಆಹಾರಧಾನ್ಯಗಳ ಕೊರತೆಯಾಗಿರುವ ದೃಷ್ಟಿಯಿಂದ ಸರ್ಕಾರವು ಈ ಅನಧಿಕೃತ ಅಧಿಭೋಗದಾರರಿಗೆ ಕಾಯಂ ಅಧಿಭೋಗದ ಆಧಾರದ ಮೇಲೆ ಅವರಿಗೆ ಭೂಕಂದಾಯದ 10 ಪಟ್ಟು ಶುಲ್ಕವನ್ನು ವಿಧಿಸುವ ಮೂಲಕ ಒಂದು ಕನಿಷ್ಠ ಬೆಲೆಯಲ್ಲಿ ಈ ಜಮೀನುಗಳನ್ನು ಮಂಜೂರು ಮಾಡುವ ಬಗ್ಗೆ ಪರಿಗಣಿಸುತ್ತದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ನಾನು ಈಗತಾನೇ ಹೇಳಿದಂತೆ, ಸರ್ಕಾರವು, ಈ ಅಧಿಭೋಗದಾರರಿಗೆ ಅಂಥ ಜಮೀನುಗಳನ್ನು ಮಂಜೂರು ಮಾಡುವ ಬಗ್ಗೆ ಯೋಚಿಸುತ್ತಿದೆ. ಆದರೆ, ಅವರಿಂದ ಎಷ್ಟು ಮೊತ್ತವನ್ನು ವಸೂಲಿ ಮಾಡಬೇಕು ಎಂಬುದನ್ನು ಅದರ ವಿಧೇಯಕವು ಪರಿಗಣನೆಗಾಗಿ ಸದನದ ಮುಂದೆ ಬಂದಾಗ ಆಲೋಚಿಸಲಾಗುವುದು.

**ಶ್ರೀ ಬಿ.ಪಿ. ಗಂಗಾಧರ್** – ಎಷ್ಟು ಕಾಲದಿಂದ ಈ ಜಮೀನುಗಳು ಅನಧಿಕೃತ ಅಧಿಭೋಗದಲ್ಲಿವೆ ಮತ್ತು ಅಷ್ಟೇ ಅಲ್ಲದೆ ಯಾರಾದರೂ ವ್ಯಕ್ತಿಗಳು 6 ವರ್ಷಗಳಿಗಿಂತ ಹೆಚ್ಚು ಅವಧಿಯಿಂದ ಅನಧಿಕೃತ ಸಾಗುವಳಿಯಲ್ಲಿದ್ದರೆ, ಸದರಿ ಜಮೀನುಗಳನ್ನು ಅವರ ಹೆಸರಿನಲ್ಲಿ ಕಾಯಂ ಮಾಡಲಾಗುತ್ತದೆ ಎಂಬುದಾಗಿ ಈಗಾಗಲೇ ಹೊರಡಿಸಿರುವ ಸರ್ಕಾರಿ ಸುತ್ತೋಲೆ ಇರುವ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಹೆಚ್.ವಿ. ಕೌಜಲಗಿ** – ಈ ಪ್ರಶ್ನೆಯು ಖಾನಾಪುರ ತಾಲ್ಲೂಕಿಗೆ ಸಂಬಂಧಪಡುವುದಾಗಿದೆ. ಅವರು 1958ರಿಂದ ಕಾನೂನು ಬಾಹಿರ ಅಧಿಭೋಗದಲ್ಲಿದ್ದಾರೆ.

**ಶ್ರೀ ಎಚ್. ಸಿದ್ಧವೀರಪ್ಪ** – ಖಾನಾಪುರ ತಾಲ್ಲೂಕಿನಲ್ಲಿ ಅನ್‌ಆಥರೈಸ್ಡ್ ಕಲ್ಟಿವೇಶನ್ ಆಗಿ ಇನ್ನು ಎಷ್ಟು ಭೂಮಿ ಉಳಿದಿದೆ.

**ಶ್ರೀ ಹೆಚ್.ವಿ. ಕೌಜಲಗಿ** – ಅನ್‌ಆಥರೈಸ್ಡ್ ಕಲ್ಟಿವೇಶನ್ ಇಲ್ಲಿ 1441 ಎಕರೆಯಾಗಿದೆ. ಇಲ್ಲಿ ಇನ್ನು 6888 ಎಕರೆಗಳಷ್ಟು ಭೂಮಿ ಉಳಿದಿದೆ.

**ಶ್ರೀ ಎನ್.ಜಿ. ಹಾಲಪ್ಪ** – ಈ ಅನಧಿಕೃತ ಸಾಗುವಳಿದಾರರಲ್ಲಿ ಎಷ್ಟು ಮಂದಿ ಸಮರ್ಥ ಭೂ ಹಿಡುವಳಿದಾರರಾಗಿದ್ದಾರೆ ಮತ್ತು ಎಷ್ಟು ಮಂದಿ ಭೂರಹಿತರಾಗಿದ್ದಾರೆ?

**ಶ್ರೀ ಹೆಚ್.ವಿ. ಕೌಜಲಗಿ** – ಆ ಮಾಹಿತಿ ನನ್ನಲ್ಲಿಲ್ಲ.

**ಶ್ರೀ ಎ.ಆರ್. ಬದರಿನಾರಾಯಣ್** – ಅನಧಿಕೃತ ಅಧಿಭೋಗದಾರರು ಭೂರಹಿತರಾಗಿರುವ ನಿಯತ ಅರ್ಜಿದಾರರಾಗಲು ಒಪ್ಪಿದ್ದಾರೆಯೆ?

**ಶ್ರೀ ಹೆಚ್.ವಿ. ಕೌಜಲಗಿ** – ಇಲ್ಲ.

**ಶ್ರೀ ಡಿ.ಬಿ. ಕಲ್ಮಣ್‌ಕರ್** – 1960ರ ನಂತರ ಜಮೀನುಗಳ ಅನಧಿಕೃತ ಅಧಿಭೋಗದಲ್ಲಿದ್ದು ಅವುಗಳ ಸಾಗುವಳಿ ಮಾಡುತ್ತಿರುವ ವ್ಯಕ್ತಿಗಳ ಪ್ರಕರಣಗಳನ್ನು ಸರ್ಕಾರ ಪರಿಗಣಿಸಿದೆಯೆ ಮತ್ತು ಅವರಿಗೆ 'ಪಟ್ಟಾ'ವನ್ನು ಮಂಜೂರು ಮಾಡಲಾಗುತ್ತಿದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಹೆಚ್.ವಿ. ಕೌಜಲಗಿ** – ಈ ಪ್ರಶ್ನೆಯನ್ನು ಅವರಿಗೆ ಜಮೀನುಗಳನ್ನು ಮಂಜೂರು ಮಾಡುವಾಗ ಪರಿಗಣಿಸಬೇಕಾಗುತ್ತದೆ.

(ದಿನಾಂಕ: 3.9.1968)

# ರಿಟ್ ಅರ್ಜಿಗಳ ಕುರಿತು

1968

**ಶ್ರೀ ಕೆ.ಎಚ್. ಶ್ರೀನಿವಾಸ್ (ಸಾಗರ) (ಐ. ಸೋಮಶೇಖರಪ್ಪನವರ ಪರವಾಗಿ) (ಹೊಸದುರ್ಗ)**

ಕಂದಾಯ ಸಚಿವರು ದಯಮಾಡಿ ಈ ಕೆಳಗಿನ ವಿಷಯಗಳ ಬಗ್ಗೆ ಉತ್ತರಿಸುವರೆ?

1968ರ ಜುಲೈ 31ರಂದು ಇದ್ದಂತೆ, ಮೈಸೂರು ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿದ್ದ ಸರ್ಕಾರದ ವಿರುದ್ಧದ ರಿಟ್ ಅರ್ಜಿಗಳ ಸಂಖ್ಯೆ?

**ಉತ್ತರ – ಶ್ರೀ ಹೆಚ್.ವಿ. ಕೌಜಲಗಿ (ಕಂದಾಯ ಸಚಿವರು) 3,427**

**ಶ್ರೀ ಕೆ.ಎಚ್. ಶ್ರೀನಿವಾಸ್** – ಸರ್ಕಾರದ ವಿರುದ್ಧ ಇಷ್ಟು ರಿಟ್ ಅರ್ಜಿಗಳು ಪೆಂಡಿಂಗ್ ಇರುವುದಕ್ಕೆ ಕಾರಣವೇನು?

**ಶ್ರೀ ಹೆಚ್.ವಿ. ಕೌಜಲಗಿ** – ಅರ್ಜಿದಾರರ ಅರ್ಜಿಗಳಿಗನುಸಾರವಾಗಿ, ಅವರು ಸರ್ಕಾರದ ವಿರುದ್ಧವಾಗಿ ಕೆಲವು ಕುಂದುಕೊರತೆಗಳನ್ನು ಹೊಂದಿದ್ದರು ಎಂಬುದಾಗಿ ನಾನು ಭಾವಿಸಿದ್ದೇನೆ.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಇತ್ಯರ್ಥದಲ್ಲಿರುವ ಈ 3,427 ಅರ್ಜಿಗಳಲ್ಲಿ ಇಲಾಖಾವಾರು ರಿಟ್ ಅರ್ಜಿಗಳ ಸಂಖ್ಯೆ ಎಷ್ಟಿದೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ ಸ್ವಾಮಿ?

**ಶ್ರೀ ಹೆಚ್.ವಿ. ಕೌಜಲಗಿ** – ಆ ಮಾಹಿತಿ ಲಭ್ಯವಿಲ್ಲ ಸ್ವಾಮಿ.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಇತ್ಯರ್ಥದಲ್ಲಿರುವ ಈ ರಿಟ್ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳು ಸರ್ಕಾರಿ ನೌಕರರ ಜ್ಯೇಷ್ಠತೆಯ ಕ್ಲೇಮಿಗೆ ಸಂಬಂಧಪಟ್ಟಿವೆ ಸ್ವಾಮಿ?

**ಶ್ರೀ ಹೆಚ್.ವಿ. ಕೌಜಲಗಿ** – ಆ ಮಾಹಿತಿ ಲಭ್ಯವಿಲ್ಲ.

**ಶ್ರೀ ಎಸ್.ಆರ್. ಬೊಮ್ಮಾಯಿ** – ಈ 3,427 ರಿಟ್ ಅರ್ಜಿಗಳಲ್ಲಿ ಎಷ್ಟನ್ನು ಸರ್ಕಾರದ ಪರವಾಗಿ ಮತ್ತು ಎಷ್ಟನ್ನು ಸರ್ಕಾರದ ವಿರುದ್ಧವಾಗಿ ತೀರ್ಮಾನ ಮಾಡಲಾಗಿದೆ ಸ್ವಾಮಿ?

**ಶ್ರೀ ಹೆಚ್.ವಿ. ಕೌಜಲಗಿ** – ಇವೆಲ್ಲವೂ ಇತ್ಯರ್ಥದಲ್ಲಿರುವ ಪ್ರಕರಣಗಳಾಗಿವೆ.

**ಶ್ರೀ ಎಸ್. ಬಂಗಾರಪ್ಪ** – ಇಷ್ಟು ರಿಟ್ ಅರ್ಜಿಗಳು ಪೆಂಡಿಂಗ್ ಇರುವುದಕ್ಕೆ ಕಾರಣ ನ್ಯಾಯಾಲಯದಲ್ಲಿ ಕೇಸು ನಡೆಸುವುದು ತಡವಾಗುತ್ತಿದೆ. ಸರಕಾರದ ಪರವಾಗಿ ಇರುವ ಲಾಯರುಗಳು ಹಾಜರಾಗುವುದು ಅಬ್ಜೆಕ್ಷನ್ ಹಾಕುವುದು ಮುಂತಾದವುಗಳ ಬಗ್ಗೆ ನಿಧಾನ ಮಾಡುತ್ತಿದ್ದಾರೆ ಎಂದು ಹೇಳುವುದು ನಿಜವೇ?

**ಶ್ರೀ ಹೆಚ್.ವಿ. ಕೌಜಲಗಿ** – ಅದು ಸರಿಯಲ್ಲ ಸ್ವಾಮಿ

**ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ** – ಜೇಷ್ಠತೆಯ ಪಟ್ಟಿಯನ್ನು ಅಂತಿಮಗೊಳಿಸುವಲ್ಲಿ ಆಗಿರುವ ವಿಳಂಬದ ಕಾರಣದಿಂದ ಮತ್ತು ಸರ್ಕಾರವು ಮನಬಂದಂತೆ ಬಡ್ತಿಗಳನ್ನು ನೀಡಿರುವ ಕಾರಣದಿಂದಲೂ ಸಹ ಅನೇಕ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿರುತ್ತದೆ ಎಂಬುದು ವಾಸ್ತವ ಸಂಗತಿಯಲ್ಲವೆ?

**ಶ್ರೀ ಹೆಚ್.ವಿ. ಕೌಜಲಗಿ** – ಅದು ಕಾರಣವಲ್ಲ, ಸ್ವಾಮಿ

**ಶ್ರೀ ಎನ್.ಎ. ಚನ್ನೇಗೌಡ** – ಇಷ್ಟು ರಿಟ್ ಅರ್ಜಿಗಳಲ್ಲಿ ಅನುಕೂಲವಾಗುವಂತೆ ಕಂದಾಯದ ಬಗ್ಗೆ ಒಂದು ಜನರಲ್ ಸ್ಟೇಟ್‌ಮೆಂಟು ಕೊಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಇದು ಸರಿಯಲ್ಲ.

**ಶ್ರೀ ಕೆ.ಹೆಚ್. ಪಾಟೀಲ್** – ಕೆಲವು ರಿಟ್ ಅಜಿಗಳಲ್ಲಿ ಉಚ್ಚ ನ್ಯಾಯಾಲಯದ ಆಜ್ಞೆಗಳನ್ನು ಉಲ್ಲಂಘಿಸಲಾಗಿದೆ, ಮತ್ತು ಸರ್ಕಾರವು ನ್ಯಾಯಾಲಯ ನಿಂದನೆ ವ್ಯವಹರಣೆಗಳನ್ನು ಎದುರಿಸಬೇಕಾಯಿತು ಎಂಬುದು ದೊಡ್ಡ ವಿಷಯವಲ್ಲವೇ? ಹಾಗಿದ್ದರೆ, ಉಚ್ಚ ನ್ಯಾಯಾಲಯದ ಆಜ್ಞೆಗಳನ್ನು ಉಲ್ಲಂಘನೆ ಮಾಡಿರುವುದಕ್ಕಾಗಿ ಜವಾಬ್ದಾರರಾದವರ ವಿರುದ್ಧ ಯಾವ ಕ್ರಮವನ್ನು ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ?

**ಶ್ರೀ ಹೆಚ್.ವಿ. ಕೌಜಲಗಿ** – ಈ ಪ್ರಶ್ನೆಯು, ಬಾಕಿ ಇರುವ ಮೊಕದ್ದಮೆಗಳಿಗೆ ಸಂಬಂಧಿಸಿದ ವಿಷಯದ್ದಾಗಿದೆ.

**ಶ್ರೀ ಕೆ.ಹೆಚ್. ಪಾಟೀಲ್** – ಈ ಪ್ರಕರಣಗಳಲ್ಲಿ ಮಾತ್ರ, ಉಚ್ಚ ನ್ಯಾಯಾಲಯವು ಹೊರಡಿಸಿದ ಕೆಲವು ಮಧ್ಯಂತರ ಆಜ್ಞೆಗಳ ಪ್ರಕರಣಗಳಲ್ಲಿ ಅಂಥ ಆಜ್ಞೆಗಳನ್ನು ಉಲ್ಲಂಘಿಸಲಾಗಿದೆ, ಮತ್ತು ಅದರಿಂದಾಗಿ ವಿಶೇಷವಾಗಿ ಉದ್ಯೋಗದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ನ್ಯಾಯಾಲಯ ನಿಂದನೆ ವ್ಯವಹರಣೆಗಳನ್ನು ಸರ್ಕಾರವು ಎದುರಿಸಬೇಕಾಯಿತು. ಅಲ್ಲವೇ ಸ್ವಾಮಿ?

**ಶ್ರೀ ಹೆಚ್.ವಿ. ಕೌಜಲಗಿ** – ಮಾನ್ಯ ಸದಸ್ಯರು ಪ್ರತ್ಯೇಕ ಸೂಚನೆಯನ್ನು ನೀಡಿದರೆ, ನಾನು ಅದಕ್ಕೂ ಉತ್ತರಿಸಲು ಸಮರ್ಥನಾಗಿದ್ದೇನೆ.

**ಶ್ರೀ ಹೆಚ್. ಸಿದ್ಧವೀರಪ್ಪ** – ಈ ಎಲ್ಲ ರಿಟ್ ಅರ್ಜಿಗಳು ಸಕಾರದ ಆದೇಶಗಳನ್ನು ಪ್ರಶ್ನಿಸುತ್ತಿಲ್ಲವೇ? ಕಂದಾಯ ನಿರೀಕ್ಷಕರೂ ಕೂಡ ಸರ್ಕಾರದ ವರ್ಗಾವಣೆಯ ಆದೇಶಗಳ ವಿರುದ್ಧ ರಿಟ್ ಅರ್ಜಿಗಳನ್ನು ಸಲ್ಲಿಸಿರುವಂಥ ಪ್ರಕರಣಗಳು ಇಲ್ಲವೇ?

**ಶ್ರೀ ಹೆಚ್.ವಿ. ಕೌಜಲಗಿ** – ಹೌದು, ಕೆಲವು ಇವೆ. ಎಲ್ಲ ರಿಟ್ ಅರ್ಜಿಗಳಲ್ಲಿ ಸರ್ಕಾರದ ಆದೇಶಗಳನ್ನು ಪ್ರಶ್ನಿಸಿದ್ದಾರೆ.

**ಶ್ರೀ ಹೆಚ್. ಸಿದ್ಧವೀರಪ್ಪ** – ಆದರೆ, ಕಂದಾಯ ನಿರೀಕ್ಷಕರು ವರ್ಗಾವಣೆಯ ಆದೇಶಗಳನ್ನು ಪ್ರಶ್ನಿಸಿದ್ದಾರೆ.

**ಶ್ರೀ ಎಸ್.ಎಂ. ಗುರೆಡ್ಡಿ** – ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಕೆಲವರು ರಿಟ್ ಪಿಟಿಷನ್‌ಗಳನ್ನು ಹಾಕಿದ್ದು ಅದರ ಮೇಲೆ ಹೈಕೋರ್ಟಿನವರು ಆರ್ಡರು ಮಾಡಿದರೂ ಅದನ್ನು ಇದೂವರೆಗೂ ಇಂಪ್ಲಿಮೆಂಟು ಮಾಡದೇ ಇರುವುದು ತಮಗೆ ಗೊತ್ತಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಪ್ರಶ್ನೆಯು ಬಾಕಿ ಪ್ರಕರಣಗಳಿಗೆ ಸಂಬಂಧಿಸಿವೆ, ವಿಲೇವಾರಿ ಆದವುಗಳಿಲ್ಲ.

**ಶ್ರೀ ಬಿ.ಪಿ. ಕದಂ** – ಭವಿಷ್ಯದಲ್ಲಿ ಸರ್ಕಾರಿ ನೌಕರರು ರಿಟ್ ಅರ್ಜಿಗಳನ್ನು ಸಲ್ಲಿಸುವುದನ್ನು ಸಾಕಷ್ಟು ಕಡಿಮೆ ಮಾಡಲು, ಸರ್ಕಾರದವರು ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ?

**ಶ್ರೀ ಹೆಚ್.ವಿ. ಕೌಜಲಗಿ** – ತೊಂದರೆಗೊಳಗಾದ ಪ್ರತಿಯೊಬ್ಬ ವ್ಯಕ್ತಿಗೆ, ನ್ಯಾಯಾಲಯಕ್ಕೆ ಹೋಗುವ ಹಕ್ಕಿದೆ. ಅವರ ಹಕ್ಕನ್ನು ಕಿತ್ತುಕೊಳ್ಳುವ ಪ್ರಶ್ನೆಯೇ ಇಲ್ಲ.

**ಶ್ರೀ ಎಂ. ನಾಗಪ್ಪ** – ತಾವು ಮಾಡತಕ್ಕ ರೂಲ್ಸುಗಳು ಹಾಗೂ ನೋಟಿಫಿಕೇಶನ್‌ಗಳು ಅಸ್ಪಷ್ಟವಾಗಿರುವುದರಿಂದ ಮತ್ತು ಕಾನೂನಿಗೆ ವಿರೋಧವಾಗಿರುವುದರಿಂದ ಇಷ್ಟೊಂದು ರಿಟ್ ಪಿಟಿಷನ್‌ಗಳು ಹೈಕೋರ್ಟಿಗೆ ಬರುತ್ತಿವೆ. ಇದನ್ನು ಬಂದ್ ಮಾಡಲಿಕ್ಕೆ ಸರ್ಕಾರ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ನಾನು ಈ ಪ್ರಸ್ತಾಪವನ್ನು ಒಪ್ಪಿಕೊಳ್ಳುವುದಿಲ್ಲ.

(ದಿನಾಂಕ 14.9.1968)

## ಟಿಪ್ಪಣಿ

ಸರ್ಕಾರದ ವಿರುದ್ಧ ನ್ಯಾಯಾಲಯಗಳಲ್ಲಿ ಸಲ್ಲಿಸಲಾಗಿರುವ ರಿಟ್ ಅರ್ಜಿಗಳ ಕುರಿತು ಶಾಸಕ ಕೆ.ಎಚ್. ಶ್ರೀನಿವಾಸರವರು ಪ್ರಶ್ನೆ ಕೇಳಿದರು. ಅದಕ್ಕೆ ಉತ್ತರವಾಗಿ 1968ರ ಜುಲೈ 31ರಂತೆ 3427 ರಿಟ್ ಅರ್ಜಿಗಳು ಸಕಾರದ ವಿರುದ್ಧ ಸಲ್ಲಿಸಲ್ಪಟ್ಟಿವೆ ಎಂದು ಕೌಜಲಗಿಯವರು ಸದನದಲ್ಲಿ ಉತ್ತರಿಸಿದರು. ಈ ವಿಷಯಕ್ಕೆ ಸಂಬಂಧಿಸಿದ ಚರ್ಚೆಯಲ್ಲಿ ಶ್ರೀಯುತರಾದ ಡಿ.ಬಿ. ಕಲ್ಮಣಕರ್, ಎಸ್. ಬಂಗಾರಪ್ಪ, ಎಸ್. ಆರ್. ಬೊಮ್ಮಾಯಿ, ಸಿ.ಕೆ. ರಾಜಯ್ಯ ಶೆಟ್ಟಿ, ಎನ್.ಎ. ಚೆನ್ನೇಗೌಡ, ಕೆ.ಎಚ್. ಪಾಟೀಲ್, ಎಚ್. ಸಿದ್ಧವೀರಪ್ಪ, ಎಸ್.ಎಂ. ಗುರೆಡ್ಡಿ, ಬಿ.ಪಿ. ಕದಂ ಮತ್ತು ಎಂ. ನಾಗಪ್ಪನವರು ಪಾಲ್ಗೊಂಡಿದ್ದರು. ಈ ಚರ್ಚೆಯಲ್ಲಿ ಮುಖ್ಯವಾಗಿ ನೌಕರರ ಸೇವಾಜೇಷ್ಠತೆ, ನೇಮಕಗಳು, ಕಂದಾಯ ನಿಗದಿ ಇವುಗಳ ಬಗ್ಗೆ ಬಹುತೇಕ ರಿಟ್ ಅರ್ಜಿಗಳು ಸಲ್ಲಿಸಲ್ಪಟ್ಟಿವೆ; ಆದ್ದರಿಂದ ಸರ್ಕಾರ ಈ ವಿಚಾರಗಳಲ್ಲಿ ನಿಯಮ ನಿಷ್ಠವಾಗಿ ಕೆಲಸ ಮಾಡಬೇಕೆಂದು ಸದಸ್ಯರು ಸೂಚಿಸಿದರು. ಅದಕ್ಕೆ ಕೌಜಲಗಿಯವರು ಸರ್ಕಾರ ಸರಿಯಾಗಿಯೆ ಕಾರ್ಯ ನಿರ್ವಹಿಸುತ್ತದೆ, ತಮ್ಮ ಕುಂದುಕೊರತೆಗಳ ಬಗ್ಗೆ ಮೇಲ್ಮನವಿ ಸಲ್ಲಿಸುವುದಕ್ಕೆ ಪ್ರತಿಯೊಬ್ಬರಿಗೂ ಹಕ್ಕಿದೆ ಎಂದು ಹೇಳಿದರು. ಇದೆಲ್ಲ ನ್ಯಾಯಾಲಯಕ್ಕೆ ಸಂಬಂಧಿಸಿದ ವಿಷಯವಾದುದರಿಂದ ಯಾವುದೇ ಕ್ರಮದ ಭರವಸೆ ಸಚಿವರಿಂದ ಬರಲಿಲ್ಲ.

## ಖಾತಾ ಪುನರ್ ಊರ್ಜಿತ ಪ್ರಕರಣಗಳು

1968

**159.** **ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ):–** ಕಂದಾಯ ಮಂತ್ರಿಗಳು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ:

ಎ) ಮಾಗಡಿ ತಾಲ್ಲೂಕಿನಲ್ಲಿ ಖಾತೆಯನ್ನು ಅವರ ಹೆಸರಿಗೆ ವಾಪಸು ಕೊಡುವ ಬಗ್ಗೆ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು?

ಬಿ) ಅವು ಎಷ್ಟು ವರ್ಷಗಳಿಂದ ಬಾಕಿ ಉಳಿದಿವೆ;

ಸಿ) ಖಾತೆಗಳನ್ನು ಅವರ ಹೆಸರಿಗೆ ಮಾಡಲು ಯಾವ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ?

**ಉತ್ತರ – ಶ್ರೀ ಹೆಚ್. ವಿ. ಕೌಜಲಗಿ – (ಕಂದಾಯಮಂತ್ರಿಗಳು)**

ಎ) ಮಾಗಡಿ ತಾಲ್ಲೂಕಿನಲ್ಲಿ 106 ಖಾತೆ ಅವರ ಹೆಸರಿಗೆ ಪಾಸು ಮಾಡುವ ಪ್ರಕರಣಗಳು ಬಾಕಿ ಉಳಿದಿವೆ.

ಬಿ) 1961–62ರಿಂದ ಈಚೆಗೆ

ಸಿ) ಬಹುತೇಕ ಪ್ರಕರಣಗಳಲ್ಲಿ ದಾಖಲೆಗಳನ್ನು ಸಿದ್ಧಪಡಿಸಲಾಗಿದೆ ಮತ್ತು ಖಾತೆಗಳನ್ನು ಅವರ ಹೆಸರಿಗೆ ಮಾಡುವ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಸಿ. ಆರ್. ರಂಗೇಗೌಡ** – 1961–62ರಿಂದಲೂ ಈ ಖಾತಾ ರೆಸ್ಟೋರೇಶನ್ ಮಾಡದಿರುವುದಕ್ಕೆ ಕಾರಣವೇನು?

**ಶ್ರೀ ಹೆಚ್.ವಿ. ಕೌಜಲಗಿ** – ಮಾಗಡಿ ತಾಲ್ಲೂಕಿನಲ್ಲಿ ಖಾತಾ ರೆಸ್ಟೋರೇಶನ್ ಕೇಸುಗಳು 106 ಮಾತ್ರ ಇದೆ. ಆದಷ್ಟು ಬೇಗ ಮಾಡಲಾಗುತ್ತದೆ.

**ಶ್ರೀ ಸಿ. ಆರ್. ರಂಗೇಗೌಡ** – ಖಾತಾ ರೆಸ್ಟೋರೇಶನ್ ಆಗದೇ ಇರುವುದರಿಂದ ಆ ರೈತರಿಗೆ ಸಾಲ ವಗ್ಯೈರೆ ಎತ್ತುವುದಕ್ಕೆ ಸಾಧ್ಯವಿಲ್ಲದೆ ಬಹಳ ವರ್ಷಗಳಿಂದ ತೊಂದರೆಗೊಳಗಾಗಿದ್ದಾರೆಂದು ತಮ್ಮ ಗಮನಕ್ಕೆ ಬಂದಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಖಾತಾ ರೆಸ್ಟೋರೇಶನ್ ಎನ್ನುವುದೇ ಬೇರೆ, ಮ್ಯುಟೇಷನ್ ಅನ್ನುವುದೇ ಬೇರೆ. ಆದರೆ ಮಾಗಡಿ ತಾಲ್ಲೂಕಿನಲ್ಲಿ ಖಾತಾ ರೆಸ್ಟೋರೇಶನ್ ಕೇಸುಗಳು 106 ಇವೆ. ಅವನ್ನು ಆದಷ್ಟು ಬೇಗ ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಮಾಡಲಾಗುವುದು.

**ಶ್ರೀ ಸಿ.ಆರ್. ರಂಗೇಗೌಡ** – ನಾನು ಮ್ಯುಟೇಷನ್ ವಿಚಾರಕ್ಕೆ ಈಗ ಹೋಗಿಲ್ಲ. ಆದರೆ ಖಾತಾ ರೆಸ್ಟೋರೇಶನ್ ಆಗದೆ ಉಳಿದಿರತಕ್ಕ ನಿದರ್ಶನಗಳು ಬಹಳವಾಗಿವೆ. ಅವುಗಳನ್ನು ಬೇಗ ರೆಸ್ಟೋರ್ ಮಾಡುವುದಕ್ಕೆ ಯತ್ನ ಮಾಡುತ್ತಾರೆಯೇ?

**ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ** – 1061–62ರಿಂದ ಇಷ್ಟು ಅರ್ಜಿಗಳು ಬಾಕಿ ಉಳಿದಿವೆ ಎಂದು ನೀವು ಹೇಳಿದ್ದೀರಿ. ಇಷ್ಟು ದೀರ್ಘ ಕಾಲದವರೆಗೆ ವಿಳಂಬವಾಗಿರುವುದು ಸರ್ಕಾರದ ತಪ್ಪಲ್ಲವೆ?

**ಶ್ರೀ ಹೆಚ್.ವಿ. ಕೌಜಲಗಿ** – ಇಲ್ಲ ಸ್ವಾಮಿ, ಅರ್ಜಿದಾರರು ಪೂರ್ಣ ಹಣವನ್ನು ಜಮೆ ಮಾಡಿರುವುದಿಲ್ಲ. ಅವರು ಅಗತ್ಯವಿರುವ ಮಾಹಿತಿಯನ್ನು ಒದಗಿಸಿರುವುದಿಲ್ಲ. ಆದ್ದರಿಂದ ವಿಳಂಬಕ್ಕೆ ಕಾರಣವಾಗಿದೆ.

(ದಿನಾಂಕ 14.9.1968)

## ಟಿಪ್ಪಣಿ

ಮಾಗಡಿ ತಾಲ್ಲೂಕಿನಲ್ಲಿ ಖಾತಾಪುನರ್ ಊರ್ಜಿತ ಪ್ರಕರಣಗಳು ಎಷ್ಟಿವೆ ಎಂಬ ಪ್ರಶ್ನೆಯನ್ನು ಶಾಸಕರಾದ ಶ್ರೀ ಸಿ.ಆರ್. ರಂಗೇಗೌಡರು ಕೇಳಿದ್ದರು. 1961–62ರಿಂದ ಇತ್ಯರ್ಥವಾಗದಿರುವ 106 ಪ್ರಕರಣಗಳಿವೆ ಎಂದು ಸಚಿವರಾದ ಹೆಚ್.ವಿ. ಕೌಜಲಗಿಯವರು ಉತ್ತರಿಸಿದರು. ಒಬ್ಬ ವ್ಯಕ್ತಿಗೆ ಮಂಜೂರಾಗಿದ್ದ ಭೂಮಿಯ ಮೇಲೆ ಕಂದಾಯ ಬಾಕಿಗಾಗಿ ಅಥವಾ ಮತ್ತಿನ್ನಾವುದೇ ಕಾರಣಕ್ಕಾಗಿ ಆ ವ್ಯಕ್ತಿಯು ಹಕ್ಕನ್ನು ಕಳೆದುಕೊಂಡಿದ್ದರೆ, ಅಂತಹ ಜಮೀನನ್ನು ಸಂಬಂಧಪಟ್ಟವರಿಂದ ಸೂಕ್ತ ಹಣವನ್ನು ಕಟ್ಟಿಸಿಕೊಂಡು ಅದನ್ನು ಅವರ ಹೆಸರಿಗೆ ಖಾತೆ ಮಾಡಿಕೊಡುವ ಕಾರ್ಯಕ್ಕೆ ಖಾತಾಪುನರ್ ಊರ್ಜಿತಗೊಳಿಸುವುದು ಎನ್ನಲಾಗುತ್ತದೆ. ಇದು ಖಾತಾ ರೆಸ್ಟೋರೇಶನ್ ಎಂಬ ಹೆಸರಿನಿಂದ ಪರಿಚಿತವಾಗಿದೆ. ಅರ್ಜಿದಾರರು ನಿಗದಿತ ಹಣ ಕಟ್ಟಿದರೆ ಅವರ ಹೆಸರಿಗೆ ಖಾತೆ ಮಾಡಿ ಕೊಡಲಾಗುತ್ತದೆ ಎಂದು ಸಚಿವರು ಉತ್ತರಿಸಿದರು.

# ಕೊಡಗಿನ ತಲಕಾವೇರಿ ಕೊಳದ ಬಗ್ಗೆ

1968

**151.** **ಶ್ರೀ ಎನ್. ಲೋಕಯ್ಯ ನಾಯಕ (ವೀರರಾಜಪೇಟೆ)** ಕಂದಾಯ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:-

ಎ) ಕೊಡಗಿನಲ್ಲಿ ತಲಕಾವೇರಿ ಕೊಳಕ್ಕೆ ಸ್ಟೀಲ್ ಮುಚ್ಚಳವನ್ನು ಅಳವಡಿಸಿದಾಗ ಅಲ್ಲಿ ಪವಿತ್ರಜಲ (ತೀರ್ಥೋತ್ಸವ) ಎಲ್ಲಿ ಚಿಮ್ಮಿತ್ತು?

ಬಿ) ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು?

**ಶ್ರೀ ಹೆಚ್.ವಿ. ಕೌಜಲಗಿ – (ಕಂದಾಯ ಮಂತ್ರಿಗಳು)**

(ಎ) ಕೊಳದಲ್ಲಿ ಎಸೆಯುವ ಬೆಲೆಬಾಳುವ ಕಾಣಿಕೆಗಳ ಕಳ್ಳತನವನ್ನು ತಡೆಗಟ್ಟಲು 3,200 ರೂಪಾಯಿಗಳ ವೆಚ್ಚದಲ್ಲಿ ತಲಕಾವೇರಿ ಕೊಳಕ್ಕೆ ಸ್ಟೈನ್‌ಲೆಸ್ ಸ್ಟೀಲ್ ಹೊದಿಕೆ ಅಳವಡಿಸುವುದನ್ನು ಕೊಡಗು ದೇವಸ್ಥಾನ ನಿಧಿನಿರ್ವಹಣೆ ಸಮಿತಿಯು ತೀರ್ಮಾನಿಸಿದೆ. ಈ ವ್ಯವಸ್ಥೆಗೆ ಕೆಲವು ಭಕ್ತಾದಿಗಳು ಆಕ್ಷೇಪಣೆ ಮಾಡಿದ್ದರಿಂದ ಇದನ್ನು ಸುಮಾರು ಎರಡು ತಿಂಗಳವರೆಗೆ ಅಳವಡಿಸಲು ಪ್ರಯತ್ನಿಸಿದ ತರುವಾಯ, ಅದನ್ನು ತೆಗೆದು ಹಾಕಲಾಗಿದೆ. ಸ್ಟೀಲ್ ಹೊದಿಕೆಯನ್ನು ಖಚಿತವಾಗಿ ಯಾವಾಗ ಜೋಡಿಸಿದ್ದರು ಎಂಬ ಬಗ್ಗೆ ಸರ್ಕಾರಕ್ಕೆ ಖಚಿತ ಮಾಹಿತಿ ಇಲ್ಲ.

ಬಿ) 1,600 ರೂಪಾಯಿಗಳನ್ನು ಮುಂಗಡವಾಗಿ ಸಂದಾಯ ಮಾಡಲಾಗಿದೆ.

**ಶ್ರೀ ಲೋಕಯ್ಯ ನಾಯಕ** – ಕೆಲವು ಭಕ್ತಾದಿಗಳ ಆಕ್ಷೇಪವಿದ್ದುದರಿಂದ ಈ ಮುಚ್ಚಳವನ್ನು ತೆಗೆದುಹಾಕಲಾಯಿತು ಎಂದು ತಾವು ಹೇಳಿದ್ದೀರಿ. ಈ ಮುಚ್ಚಳವನ್ನು ಹಾಕುವಾಗಲೇ, ಭಕ್ತಾದಿಗಳ ಅಭಿಪ್ರಾಯವನ್ನು ಕೇಳಿದ್ದೀರಾ ಮತ್ತು ಅದರ ಪವಿತ್ರತೆಗೆ ಧಕ್ಕೆ ಬರುತ್ತದೆಂದು ಅಲ್ಲವೇ ಆಕ್ಷೇಪ ಬಂದದ್ದು?

**ಶ್ರೀ ಹೆಚ್.ವಿ. ಕೌಜಲಗಿ** – ಇದು ಹಳೆಯ ಕೂರ್ಗ್ ಸಂಸ್ಥಾನದ ಕಾಲದಲ್ಲಿ ಆದದ್ದು. ಆ ಮಾಹಿತಿ ಈಗ ಇಲ್ಲ.

**ಶ್ರೀ ಲೋಕಯ್ಯ ನಾಯಕ** – ಇದರಲ್ಲಿ ಒಟ್ಟು 1,600 ರೂಪಾಯಿ ಮುಂಗಡ ಹಣವನ್ನು ಕೊಟ್ಟಿದೆ ಎಂದು ಹೇಳಿದ್ದೀರಿ. ನಿಜವಾಗಿ ಎಷ್ಟು ಖರ್ಚಾಗಿದೆ.

**ಶ್ರೀ ಹೆಚ್.ವಿ. ಕೌಜಲಗಿ** – ಆ ಮಾಹಿತಿ ನನ್ನಲ್ಲಿ ಇಲ್ಲ. ಅದು ಹಳೆ ಕೂರ್ಗ್ ಸಂಸ್ಥಾನದ ಕಾಲದಲ್ಲಿ ಆದದ್ದು.

**ಶ್ರೀ ಸಿದ್ಧಯ್ಯ ಕಾಶೀಮಠ** – ಈಗ ದೇವಸ್ಥಾನಗಳಲ್ಲಿ ಬಹಳ ಅವ್ಯವಸ್ಥೆ ನಡೆಯುತ್ತಿರುವುದರಿಂದ ಸರ್ಕಾರಕ್ಕೆ ಇದರಲ್ಲಿದ್ದ ಜವಾಬ್ದಾರಿ ಏನು, ಇವರ ಮೇಲೆ ಏನು ಅಧಿಕಾರ ಸರ್ಕಾರಕ್ಕೆ ಇದೆ?

**ಶ್ರೀ ಹೆಚ್.ವಿ. ಕೌಜಲಗಿ** – ಈಗ ಈ ಬಗ್ಗೆ ಸಂಸ್ಥಾನಾದ್ಯಂತ ಒಂದು ಕಾಯಿದೆ ಮಾಡಬೇಕೆಂದು ಇದೆ. ಈಗಾಗಲೇ ಸರ್ಕಾರದ ಮುಂದೆ ಒಂದು ಬಿಲ್ ಇದೆ.

**ಶ್ರೀ ಲೋಕಯ್ಯ ನಾಯಕ** – ಈ ಉಕ್ಕಿನ ಮುಚ್ಚಳ ಹಾಕಿರುವುದು ಇತ್ತೀಚೆಗೆ ಸಾಧಾರಣ ಒಂದೂವರೆ ವರ್ಷಗಳ ಕೆಳಗೆ, ಆವಾಗಲೇ ಭಕ್ತಾದಿಗಳು ಹಾಕಕೂಡದು, ಹಾಕಿದರೆ, ಹೂವು, ಬಾಳೆ ಹಣ್ಣುಗಳು ಕೊಳೆಯುವುದರಿಂದ, ಅದರ ಪವಿತ್ರತೆಗೆ ಧಕ್ಕೆ ಬರುತ್ತದೆ ಎಂದು ವಿರೋಧ ಮಾಡಿದ್ದರಲ್ಲವೆ?

**ಶ್ರೀ ಹೆಚ್.ವಿ. ಕೌಜಲಗಿ** – ಅದಕ್ಕೆ ಜನರ ತಕರಾರು ಬಂದುದರಿಂದ ಅದನ್ನು ತೆಗೆದುಹಾಕಲಾಗಿದೆ.

**ಸಭಾಧ್ಯಕ್ಷರು** – ರಾಜ್ಯದ ಸಚಿವರಾದ ಮಾನ್ಯ ಶ್ರೀ ಎ.ಜೆ. ದೊಡ್ಡಮೇಟಿಯವರು ಬೆಳಿಗ್ಗೆ 9.00 ಗಂಟೆಗೆ ಮೇಲ್ಮನೆಯಲ್ಲಿ ಹಾಜರಾಗಿದ್ದಾರೆ. ಆದುದರಿಂದ ನಾನು ಈಗ ಅವರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ : 160 ಶ್ರೀ ಎಂ.ಎಸ್. ರಾಮಣ್ಣ**, – ಮಾನ್ಯ ಸದಸ್ಯರು ಹಾಜರಾಗಿಲ್ಲ. ಪ್ರಶ್ನೆ ಸಂಖ್ಯೆ **167 ಶ್ರೀ. ಜಿ.ದುಗ್ಗಪ್ಪ**, ಮಾನ್ಯ ಸದಸ್ಯರು ಕೂಡ ಹಾಜರಾಗಿಲ್ಲ. ಕಾಲಾವಕಾಶ ಇದ್ದರೆ, ನಾನು ಎರಡು ಪ್ರಶ್ನೆಗಳನ್ನು ಕೊನೆಯಲ್ಲಿ ಕರೆಯುತ್ತೇನೆ. ಇಲ್ಲದಿದ್ದರೆ ಪ್ರಶ್ನೆಗಳು ರದ್ದಾಗುತ್ತವೆ.

(ದಿನಾಂಕ 14.9.1968)

## ಟಿಪ್ಪಣಿ

ವಿರಾಜಪೇಟೆ ಕ್ಷೇತ್ರದ ಶಾಸಕರಾದ ಶ್ರೀ ಎಸ್. ಲೋಕಯ್ಯ ನಾಯಕ್ ಅವರು ತಲಕಾವೇರಿ ಕೊಳಕ್ಕೆ ಹಾಕಿದ್ದ ಉಕ್ಕಿನ ಮುಚ್ಚಳದ ಬಗ್ಗೆ ಪ್ರಶ್ನೆ ಕೇಳಿದರು. ಅದಕ್ಕೆ ಉತ್ತರಿಸದ ಸಚಿವ ಕೌಜಲಗಿಯವರು ಆ ಮುಚ್ಚಳವನ್ನು ಕಾಣಿಕೆಗಳ ರಕ್ಷಣೆಗಾಗಿ ಕೊಡಗಿನ ಸಂಸ್ಥಾನದ ಕಾಲದಲ್ಲಿ ಹಾಕಿದ್ದು ಭಕ್ತಾದಿಗಳಿಗೆ ಅನಾನುಕೂಲವಾದುದರಿಂದ ಅದನ್ನು ತೆಗೆದುಹಾಕಲಾಯಿತೆಂದು ತಿಳಿಸಿದರು.

# ನೀರಾವರಿ ಬಾವಿಗಳು

**ಶ್ರೀ ಕೆ. ಸಂಗನಗೌಡ (ಲಿಂಗಸುಗೂರು)** ಮಾನ್ಯ ಕಂದಾಯ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:-

ಎ) 1960-61, 1961-62, 1962-63, 1963-64, 1964-65, 1965-66, 1966-67, 1967-68ನೇ ಸಾಲಿನಲ್ಲಿ ಗುಲ್ಬರ್ಗಾ ವಿಭಾಗದಲ್ಲಿ ಮಂಜೂರಾದ ನೀರಾವರಿ ಬಾವಿಗಳ ಸಂಖ್ಯೆ ಎಷ್ಟು?

ಬಿ) ಆ ಪೈಕಿ ಪೂರ್ಣಗೊಳಿಸಲಾದ ಬಾವಿಗಳ ಸಂಖ್ಯೆ ಎಷ್ಟು;

ಸಿ) ನೀರು ಬೀಳದ ಬಾವಿಗಳ ಸಂಖ್ಯೆ ಎಷ್ಟು

ಡಿ) ಗುಲ್ಬರ್ಗಾ ವಿಭಾಗದಲ್ಲಿ ಅಂಥ ಬಾವಿಗಳುಳ್ಳ ಎಷ್ಟು ಮಂದಿ ಸಾಗುವಳಿದಾರರಿಗೆ ಸಹಾಯಧನ ನೀಡಲಾಗಿದೆ (ತಾಲ್ಲೂಕುವಾರು, ಜಿಲ್ಲಾವಾರು ಮಾಹಿತಿಯನ್ನು ನೀಡುವುದು):

**ಉತರ – ಹೆಚ್.ವಿ. ಕೌಜಲಗಿ – (ಕಂದಾಯ ಮಂತ್ರಿಗಳು)**

(ಎ)ಯಿಂದ (ಡಿ)ವರೆಗೆ ಅಗತ್ಯವಿರುವ ಮಾಹಿತಿಯನ್ನು ಸದನದಲ್ಲಿ ಮಂಡಿಸಲಾಗಿದೆ.

**ಶ್ರೀ ಕೆ. ಸಂಗನಗೌಡ** – ಬ್ಲಾಸ್ಟಿಂಗ್ ಮತ್ತು ಡ್ರಿಲ್ಲಿಂಗ್ ಮೆಷಿನುಗಳು ಸಿಗಲಿಲ್ಲವೆಂದು ಬಾವಿಗಳನ್ನು ತೆಗೆಯುವುದಕ್ಕಾಗಲಿಲ್ಲ ಮತ್ತು ನೀರನ್ನು ಬಿಡುವುದಕ್ಕಾಗಲಿಲ್ಲವೆಂದು ಹೇಳುತ್ತೀರಿ. ಹಾಗೇ ನೀರು ಬೀಳದಿರಲು ಕಾರಣವೇನು?

**ಶ್ರೀ ಹೆಚ್.ವಿ. ಕೌಜಲಗಿ** – ಗಟ್ಟಿ ಬಂಡೆಗಳನ್ನು ಹೊಡೆಯುವುದು. ಕಾಲಿಕ ಋತುಮಾನಗಳ ಪ್ರತಿಕೂಲ ಹವಾಮಾನ ಪರಿಸ್ಥಿತಿಯಿಂದಾಗಿ ಇನ್ನೂ ಹೆಚ್ಚು ಖರ್ಚು ಮಾಡಲಿಕ್ಕೆ ಸಾಲಗಾರರು ಅಸಮರ್ಥರಾಗಿರುವುದು. ಕಾರ್ಮಿಕರ ವೆಚ್ಚದಲ್ಲಿ ಹೆಚ್ಚಳವಾಗಿರುವುದು. ಕೆಲವು ಸಂದರ್ಭಗಳಲ್ಲಿ, ಮಂಜೂರಾದ ಹಣವು ಸರಿಯಾಗಿ ಬಳಕೆಯಾಗದಿರುವುದು ಮತ್ತು ಇದನ್ನು ತಹಲ್‌ವರೆಗೆ ಅನುಷ್ಠಾನಗೊಳಿಸದಿರುವುದರಿಂದ.

**ಶ್ರೀ ಬಾಪುಗೌಡ** – ಗಟ್ಟಿ ಬಂಡೆಗಳನ್ನು ಹೊಡೆಯುವ ಕಾರಣದಿಂದಾಗಿ ಮತ್ತು ನಿಯಂತ್ರಣವನ್ನು ಮೀರಿದ ಇತರೆ ಕಾರಣಗಳಿಂದಾಗಿ ಬಾವಿಗಳು ಸಂಪೂರ್ಣವಾಗಿ ವಿಫಲಗೊಂಡಿರುವ ಕಡೆಗಳಲ್ಲಿ ಸಾಲದ ಹಣವನ್ನು ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ?

**ಶ್ರೀ ಹೆಚ್.ವಿ. ಕೌಜಲಗಿ** – ಪ್ರಸ್ತುತ, ಅಂಥ ಅವಕಾಶವಿಲ್ಲ. ಈ ಸಲಹೆ ಬಗ್ಗೆ ನಾವು ಯೋಚಿಸುತ್ತೇವೆ.

**ಶ್ರೀ ಕೆ. ಸಂಗನಗೌಡ** – ಈಗ ನೀರಾವರಿ ಬಾವಿಗಳಿಗೆ ಕೇವಲ 5 ಸಾವಿರ ರೂಪಾಯಿಗಳನ್ನು ಕೊಡುವುದರಿಂದ, ಬಾವಿಗಳ ಕೆಲಸ ಪೂರ್ತಿಯಾಗಿ ಮಾಡುವುದಕ್ಕಾಗುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

# ಮೋಜಣಿದಾರರ ನೇಮಕ ಕುರಿತು

1968

**ಶ್ರೀ ಡಿ.ಬಿ. ಕಲ್ಮಣ್‌ಕರ್** (ಆಳಂದ) ಕಂದಾಯ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ಎ) ಗುಲ್ಬರ್ಗಾ ವಿಭಾಗದಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಗೊತ್ತುಪಡಿಸಲಾದ ಕಂದಾಯ ಮೋಜಣಿದಾರರ ಸಂಖ್ಯೆ ಎಷ್ಟು;

ಬಿ) ಕೃಷಿ ಭೂಮಿಗಳನ್ನು ಮೋಜಣಿ ಮಾಡುವುದಕ್ಕಾಗಿ ಗುಲ್ಬರ್ಗಾ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿ ಸ್ವೀಕರಿಸಲಾದ ಸರಾಸರಿ ಅರ್ಜಿಗಳ ಸಂಖ್ಯೆ ಎಷ್ಟು ಮತ್ತು ಅವುಗಳಲ್ಲಿ ಪ್ರತಿ ತಿಂಗಳು ವಿಲೇವಾರಿಯಾದ ಸರಾಸರಿ ಅರ್ಜಿಗಳ ಸಂಖ್ಯೆ ಎಷ್ಟು?

ಸಿ) ಗುಲ್ಬರ್ಗಾ ಜಿಲ್ಲೆಯಲ್ಲಿ ಭೂ ಮಂಜೂರಾತಿ ಪ್ರಕರಣಗಳು, ಹಕ್ಕು ಬದಲಾವಣೆ, ಪೋಡಿ ಮತ್ತು ಭೂಸ್ವಾಧೀನ ಪ್ರಕರಣಗಳಿಗಾಗಿ ವಿಶೇಷ ಮೋಜಣಿದಾರರನ್ನು ನೇಮಕ ಮಾಡಿದ್ದಾರೆಯೇ ಅಥವಾ ಮೇಲೆ (ಎ) ನಲ್ಲಿ ನಮೂದಿಸಲಾದ ಅದೇ ಮೋಜಣಿದಾರರಿಂದ ಸದರಿ ಕಾರ್ಯವನ್ನು ಮಾಡಿಸಲಾಗಿದೆಯೇ?

ಡಿ) ಸರ್ಕಾರವು 1965ನೇ ಸಾಲಿನಲ್ಲಿ ಗುಲ್ಬರ್ಗಾ ವಿಭಾಗಕ್ಕಾಗಿ 150 ಮೋಜಣಿದಾರರ ಹೊಸ ಹುದ್ದೆಗಳನ್ನು ಮಂಜೂರು ಮಾಡಿದೆಯೇ? ಹಾಗಿದ್ದರೆ, ಇಲ್ಲಿಯವರೆಗೆ ಅವುಗಳನ್ನು ಭರ್ತಿ ಮಾಡದಿರಲು ಕಾರಣಗಳೇನು?

**ಉತ್ತರ: ಶ್ರೀ ಹೆಚ್.ವಿ. ಕೌಜಲಗಿ – (ಕಂದಾಯ ಮಂತ್ರಿಗಳು)**

ಎ) ಪ್ರತಿಯೊಂದು ತಾಲ್ಲೂಕಿಗೂ ಒಬ್ಬ ಮೋಜಣಿದಾರನಿದ್ದಾನೆ.

ಬಿ) ಗುಲ್ಬರ್ಗಾ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲಿ ಕೃಷಿ ಭೂಮಿಯ ಮೋಜಣಿಗಾಗಿ ತಿಂಗಳಲ್ಲಿ ಸ್ವೀಕರಿಸಿ ಮತ್ತು ವಿಲೆವಾರಿ ಪಡೆದ ಸರಾಸರಿ ಅರ್ಜಿಗಳ ಸಂಖ್ಯೆಯನ್ನು ಕೆಳಗೆ ನಮೂದಿಸಲಾಗಿದೆ:

| ತಾಲ್ಲೂಕಿನ ಹೆಸರು | ಸರಾಸರಿ ಸ್ವೀಕೃತಿಗಳು | ಸರಾಸರಿ ವಿಲೇವಾರಿ |
|---|---|---|
| 1. ಗುಲ್ಬರ್ಗಾ | 19 | 9 |
| 2. ಆಳಂದ | 11 | 7 |
| 3. ಅಫ್ಜಲ್ ಪುರ | 9 | 9 |
| 4. ಜೇವರ್ಗಿ | 16 | 15 |
| 5. ಶಹಪುರ | 6 | 6 |

| | | |
|---|---|---|
| 6. ಶೋರಾಪುರ | 8 | 7 |
| 7. ಯಾದಗಿ | 5 | 5 |
| 8. ಚಿಂಚೋಳಿ | 10 | 7 |
| 9. ಸೇಡಂ | 6 | 6 |
| 10. ಚಿತ್ತಾಪುರ | 42 | 14 |
| **ಒಟ್ಟು** | **132** | **85** |

ಸಿ) ಈ ಎಲ್ಲ ಪ್ರಕರಣಗಳಲ್ಲೂ ವಿಶೇಷ ಮೋಜಣಿದಾರರ ಸಿಬ್ಬಂದಿಯನ್ನು ನೇಮಕ ಮಾಡಿಲ್ಲ. ಆದರೆ, ಮೇಲಿನ (ಎ) ಉತ್ತರದಲ್ಲಿ ನಮೂದಿಸಿದಂತೆ ಅದೇ ಮೋಜಣಿದಾರರು ಈ ಕೆಲಸವನ್ನು ಮಾಡಿರುತ್ತಾರೆ.

ಡಿ) 150 ಹೊಸ ಹುದ್ದೆಗಳನ್ನು ಮಂಜೂರು ಮಾಡಿಲ್ಲ. ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಲು ಉದ್ದೇಶಿಸಲಾಗಿದೆ. ಹಾಗೆ ನೇಮಕ ಮಾಡಿದಾಗ 550 ಮೋಜಣಿದಾರರ ಪೈಕಿ 150 ಮೋಜಣಿದಾರರನ್ನು ಪ್ರಸ್ತುತ ಖಾಲಿ ಹುದ್ದೆ ಮತ್ತು ಸಂಭಾವನೀಯ ಖಾಲಿ ಸ್ಥಾನಗಳಿಗೆ ಭರ್ತಿ ಮಾಡುವ ಸಲುವಾಗಿ ಗುಲ್ಬರ್ಗಾ ವಿಭಾಗಕ್ಕೆ ಹಂಚಿಕೆ ಮಾಡಲಾಗುವುದು.

**ಶ್ರೀ ಡಿ.ಬಿ. ಕಲ್ಮಣ್‌ಕರ್** – (ಡಿ) ಗೆ ಪೂರಕವಾಗಿ ಈ ಪ್ರಸ್ತಾವನೆಯನ್ನು ಯಾವಾಗ ಮಾಡಿದ್ದಾರೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಹೆಚ್.ವಿ. ಕೌಜಲಗಿ** – ಕಳೆದ ವರ್ಷ ಇದು ಇನ್ನೂ ಪರಿಶೀಲನೆಯಲ್ಲಿದೆ. ಏಕೆಂದರೆ, ಕೆಲವು ನಿಯಮಗಳನ್ನು ಮಾಡಬೇಕಾಗಿದೆ. ಆದಷ್ಟು ಶೀಘ್ರವಾಗಿ ನೇಮಕಾತಿ ಮಾಡಲಾಗುವುದು.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಅವರ ಪೈಕಿ 150 ಮೋಜಣಿದಾರರನ್ನು ಗುಲ್ಬರ್ಗಾ ವಿಭಾಗದಲ್ಲಿ ನಿಯುಕ್ತಿಗೊಳಿಸಬೇಕಾಗಿದೆ ಎಂಬುದು ದೊಡ್ಡ ಸಂಗತಿಯಲ್ಲ ಮತ್ತು ಈ ತೀರ್ಮಾನವನ್ನು ಬಹಳ ಹಿಂದೆ ಅಂದರೆ 1965ರಲ್ಲಿಯೇ ತೆಗೆದುಕೊಂಡಿದ್ದಾರೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಇದು ನಿಜ. ಆದರೆ ಇಡೀ ರಾಜ್ಯಕ್ಕೆ ಬೇಕಾದ ಒಟ್ಟು ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು ನೇಮಕಾತಿಗಳನ್ನು ಮಾಡಬೇಕಾಗಿದೆ.

**ಶ್ರೀ ಎಂ. ನಾಗಪ್ಪ** – ಗುಲ್ಬರ್ಗಾ ಡಿವಿಜನ್‌ನಲ್ಲಿ ಸರ್ವೇಯರುಗಳನ್ನು ನೇಮಕ ಮಾಡಿದ್ದರೂ ಅಲ್ಲಿ ನಡೆಸಿರುವ ಕೆಲಸಗಳು ಬಹಳ ನಿಧಾನವಾಗಿರುವುದು ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಇದರ ಬಗ್ಗೆ ಶೀಘ್ರವಾಗಿ ಕೆಲಸ ಮಾಡಲು ಇನ್ನೂ ಸರ್ವೆಯರುಗಳನ್ನು ನೇಮಕ ಮಾಡುತ್ತೀರಾ ಹೇಗೆ?

**ಶ್ರೀ ಹೆಚ್.ವಿ. ಕೌಜಲಗಿ** – ಮಾನ್ಯ ಸದಸ್ಯರು ಏನು ಹೇಳಿದ್ದಾರೆ. ಅದು ಸ್ವಲ್ಪಮಟ್ಟಿಗೆ ನಿಜ. ಆದುದರಿಂದ, ಈ ಮೋಜಣಿದಾರರನ್ನು ನೇಮಕ ಮಾಡುವ ಈ ಪ್ರಸ್ತಾವನೆ ಮಾಡಲಾಗಿದೆ.

| | ತಾಲ್ಲೂಕಿನ ಹೆಸರು | ಸರಾಸರಿ ಸ್ವೀಕೃತಿಗಳು | ಸರಾಸರಿ ವಿಲೇವಾರಿ |
|---|---|---|---|
| 1. | ಗುಲ್ಬರ್ಗಾ | 19 | 9 |
| 2. | ಆಳಂದ | 11 | 7 |
| 3. | ಅಫ್ಜಲ್ ಪುರ | 9 | 9 |
| 4. | ಜೇವರ್ಗಿ | 16 | 15 |
| 5. | ಶಹಪುರ | 6 | 6 |
| 6. | ಶೋರಾಪುರ | 8 | 7 |
| 7. | ಯಾದಗಿ | 5 | 5 |
| 8. | ಚಿಂಚೋಳಿ | 10 | 7 |
| 9. | ಸೇಡಂ | 6 | 6 |
| 10. | ಚಿತ್ತಾಪುರ | 42 | 14 |
| | **ಒಟ್ಟು** | **132** | **85** |

ಸಿ) ಈ ಎಲ್ಲ ಪ್ರಕರಣಗಳಲ್ಲೂ ವಿಶೇಷ ಮೋಜಣಿದಾರರ ಸಿಬ್ಬಂದಿಯನ್ನು ನೇಮಕ ಮಾಡಿಲ್ಲ. ಮೇಲಿನವು ಉತ್ತರದಲ್ಲಿ ನಮೂದಿಸಿದಂತೆ, ಅದೇ ಮೋಜಣಿದಾರರು ಈ ಕೆಲಸವನ್ನು ಮಾಡಿರುತ್ತಾರೆ.

ಡಿ) 150 ಹೊಸ ಹುದ್ದೆಗಳನ್ನು ಮಂಜೂರು ಮಾಡಿಲ್ಲ. ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಬೇಕೆಂದು ಉದ್ದೇಶಿಸಲಾಗಿದೆ. ಹಾಗೆ ನೇಮಕ ಮಾಡಿದಾಗ 550 ಮೋಜಣಿದಾರರ ಪೈಕಿ 150 ಮೋಜಣಿದಾರರನ್ನು ಪ್ರಸ್ತುತ ಖಾಲಿ ಹುದ್ದೆ ಮತ್ತು ಸಂಭಾವನೀಯ ಖಾಲಿ ಸ್ಥಾನಗಳಿಗೆ ಭರ್ತಿ ಮಾಡುವ ಸಲುವಾಗಿ ಗುಲ್ಬರ್ಗಾ ವಿಭಾಗಕ್ಕೆ ಹಂಚಿಕೆ ಮಾಡಲಾಗುವುದು.

**ಶ್ರೀ ಡಿ.ಬಿ. ಕಲ್ಮಣ್‌ಕರ್** – (ಡಿ)ಗೆ ಪೂರಕವಾಗಿ, ಈ ಪ್ರಸ್ತಾವನೆಯನ್ನು ಯಾವಾಗ ಮಾಡಿದ್ದಾರೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಹೆಚ್.ವಿ. ಕೌಜಲಗಿ** – ಕಳೆದ ವರ್ಷ, ಇದು ಪರಿಶೀಲನೆಯಲ್ಲಿದೆ. ಏಕೆಂದರೆ, ಕೆಲವು ನಿಯಮಗಳನ್ನು ಮಾಡಬೇಕಾಗಿದೆ. ನೇಮಕಾತಿಗಳ ಬಗ್ಗೆ ನನಗೆ ಯೋಚನೆ ಇದೆ. ಆದಷ್ಟು ಶೀಘ್ರವಾಗಿ ನೇಮಕಾತಿ ಮಾಡಲಾಗುವುದು.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಅವರ ಪೈಕಿ 150 ಮೋಜಣಿದಾರರನ್ನು ಗುಲ್ಬರ್ಗಾ ವಿಭಾಗದಲ್ಲಿ ನಿಯುಕ್ತಿಗೊಳಿಸಬೇಕಾಗಿದೆ ಎಂಬುದು ದೊಡ್ಡ ಸಂಗತಿಯಲ್ಲ. ಆ ತೀರ್ಮಾನವನ್ನು ಬಹಳ ಹಿಂದೆಯೇ ಅಂದರೆ 1965ರಲ್ಲಿಯೇ ತೆಗೆದುಕೊಂಡಿದ್ದಾರೆಯೇ?

**ಶ್ರೀ ಆರ್. ನಾಗನಗೌಡ** – ಮೋಜಣಿದಾರರ ಹುದ್ದೆಗೆ ನೇಮಕ ಮಾಡುವ ವ್ಯಕ್ತಿಗಳಿಗೆ ತರಬೇತಿ ನೀಡುವ ಬಗ್ಗೆ ಯಾವುದಾದರು ವ್ಯವಸ್ಥೆಯನ್ನು ಮಾಡಲಾಗಿದೆಯೇ? ಅಥವಾ ಈ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಲು ತರಬೇತಿ ಪಡೆದ ಸಾಕಷ್ಟು ವ್ಯಕ್ತಿಗಳನ್ನು ನೀವು ಹೊಂದಿದ್ದೀರಾ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಹೆಚ್.ವಿ. ಕೌಜಲಗಿ** – ಖಂಡಿತ, ಅವರಿಗೆ ಸ್ವಲ್ಪ ತರಬೇತಿ ಬೇಕಾಗಿದೆ. ಆದರೆ, ಎರಡು–ಮೂರು ವರ್ಷಗಳ ಹಿಂದೆ ಭೂಮಾಪನ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಮೋಜಣಿದಾರನ ತರಬೇತಿಯನ್ನು ಪಡೆದ ಕೆಲವರನ್ನು ಅವರಿಗೆ ಅಲ್ಲಿ ಕೆಲಸವಿಲ್ಲವೆಂದು ತೆಗೆದುಹಾಕಲಾಗಿದೆ. ಹೊಸದಾಗಿ ಅಭ್ಯರ್ಥಿಗಳನ್ನು ನೇಮಕ ಮಾಡುವಾಗ, ಈಗಾಗಲೆ ತರಬೇತಿ ಪಡೆದಿರುವ ವ್ಯಕ್ತಿಗಳಿಗೆ ಆದ್ಯತೆ ನೀಡಲಾಗುವುದು.

**ಶ್ರೀ ಪಿ. ತಮ್ಮಯ್ಯ** – ಕೆಲವು ಕಡೆ ಸಾಗುವಳಿ ಮಾಡಲು ಚೀಟಿಯನ್ನು ಕೊಟ್ಟಿದ್ದರೂ ಅಲ್ಲಿರುವ ಮೋಜಣಿದಾರರುಗಳನ್ನು ಭೂಮಿಯನ್ನು ಅಳತೆ ಮಾಡಿಸಿ ಕೊಡಬೇಕೆಂದು ಕೇಳಿದರೂ, ಅವರು ಬಂದು ಸರಿಯಾಗಿ ಅಳತೆ ಮಾಡಿಕೊಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ?

**ಶ್ರೀ ಹೆಚ್.ವಿ. ಕೌಜಲಗಿ** – ಅದಕ್ಕಾಗಿಯೇ ನಾವು 550 ಮೋಜಣಿದಾರರನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ.

**ಶ್ರೀ ಸದಾಶಿವಪ್ಪ ಪಾಟೀಲ್** – ನನಗೆ ತಿಳಿದಮಟ್ಟಿಗೆ ವರ್ಷಾನುಗಟ್ಟಲೆ ಒಂದೊಂದು ತಾಲ್ಲೂಕಿನ ಸರ್ವೆ ಕೆಲಸಗಳು ಹಾಗೇ ನಿಂತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಇದು ಸರಿಯಲ್ಲ.

**ಶ್ರೀ ಎನ್. ಹುಚ್ಚಮಾಸ್ತಿಗೌಡ** – ಹಿಂದೆ ನಿವೃತ್ತಿ ಮಾಡಿದ ಸರ್ವೇಯರುಗಳನ್ನು ಪುನಃ ನೇಮಕ ಮಾಡಿಕೊಳ್ಳುತ್ತೇವೆಂದು ಹೇಳಿದಿರಿ. ಯಾವ ಯಾವ ವರ್ಗದಲ್ಲಿ ಅವರನ್ನು ನಿವೃತ್ತಿ ಮಾಡಿದಿರೋ ಅದೇ ಆರ್ಡರಿನಲ್ಲಿ ಅವರನ್ನು ತೆಗೆದುಕೊಳ್ಳುತ್ತೀರೋ ಹೇಗೆ?

**ಶ್ರೀ ಹೆಚ್.ವಿ. ಕೌಜಲಗಿ** – ಈ ರಿಸೆಟಲ್‌ಮೆಂಟು ಹಿಂದೆ ಆದನಂತರ ಇಲ್ಲಿ ಕೆಲಸವಿರಲಿಲ್ಲ ಎಂದು ಆಗ ಅವರನ್ನು ತೆಗೆದಿದ್ದರು. ಈಗ ಪುನಃ ಕೆಲಸ ಹೆಚ್ಚು ಬಂದಿರುವುದರಿಂದಾಗಿ ಇನ್ನೂ 560 ಮಂದಿಯನ್ನು ಹೆಚ್ಚು ನೇಮಕ ಮಾಡಬೇಕೆಂದು ಏರ್ಪಾಡು ಮಾಡಲಾಗುತ್ತಿದೆ.

**ಶ್ರೀ ಎಲ್. ಶ್ರೀಕಂಠಯ್ಯ** – ನಮ್ಮ ಹೆಗ್ಗಡದೇವನಕೋಟೆಯಲ್ಲಿ ಸರ್ವೆಯರ್ಸ್ ಅಭಾವದಿಂದ ಅಲ್ಲಿ ಒಬ್ಬರಿಗೆ ಕೊಟ್ಟ ಜಮೀನನ್ನು ಮತ್ತೊಬ್ಬರಿಗೆ ಕೊಟ್ಟು ಅಲ್ಲಿ ಇಬ್ಬರಿಗೂ ಜಗಳವಾಗುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ? ಒಂದೇ ಜಮೀನನ್ನು ನಾಲ್ಕು ಜನರಿಗೆ ಹಂಚಿಕೆ ಮಾಡಲಾಗಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಇದೊಂದು ವ್ಯೆಯಕ್ತಿಕ ವಿಷಯಕ್ಕೆ ಸಂಬಂಧಪಟ್ಟಿದೆ. ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಸಲ್ಲಿಸಿದರೆ, ನಾನು ಅದಕ್ಕೆ ಮಾಹಿತಿಯನ್ನು ನೀಡುತ್ತೇನೆ.

**ಶ್ರೀ ಎನ್. ಹುಚ್ಚಮಾಸ್ತಿಗೌಡ** – ಹಿಂದೆ ಅವರನ್ನು ಕೆಲಸದಿಂದ ತೆಗೆದಾಗ ಯಾರು ಯಾರನ್ನು ಯಾವ ಯಾವ ತಾರೀಖಿನಲ್ಲಿ ತೆಗೆಯಲಾಯಿತೋ ಅದೇ ಆರ್ಡರಿನಲ್ಲಿ ಈಗ ಪುನಃ ಅವರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತೀರಾ?

**ಶ್ರೀ ಎಚ್. ವಿ. ಕೌಜಲಗಿ** – ಆ ನೇಮಕದ ಕೆಲಸವನ್ನು ಪಿ.ಎಸ್.ಸಿ ಅವರು ಮಾಡುತ್ತಾರೆ.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಕೃಷಿ ಭೂಮಿಗಳ ಮೋಜಣಿಯ ವಿಳಂಬದ ಕಾರಣದಿಂದಾಗಿ ನಮ್ಮ ಜಿಲ್ಲೆಗಳಲ್ಲಿ ಅಧಿಕ ಸಿವಿಲ್ ವ್ಯಾಜ್ಯವಿರುವ ಸಂಗತಿಯು ಸರ್ಕಾರದ ಅರಿವಿಗೆ ಬಂದಿದೆಯೇ? ವಿಷಯದ ತುರ್ತನ್ನು ಗಮನದಲ್ಲಿಟ್ಟುಕೊಂಡು ಅವರು ಆದಷ್ಟು ಬೇಗನೆ ಈ 150 ಮೋಜಣಿದಾರರ ಹುದ್ದೆಗಳನ್ನು ತುಂಬುತ್ತಾರೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಸಾಧ್ಯವಾದಷ್ಟು ಬೇಗನೆ ವ್ಯವಸ್ಥೆ ಮಾಡಲಾಗುವುದು.

**ಶ್ರೀ ಎಂ. ನಾಗಪ್ಪ** – ಗುಲ್ಬರ್ಗಾ ಡಿವಿಜನ್ನಿನಲ್ಲಿ ಹಳೇ ಸರ್ವೇಯರ್ ಕಾಲದಲ್ಲಿದ್ದ ರೆಕಾರ್ಡುಗಳೇ ಇಲ್ಲ. ಆದ್ದರಿಂದ ಅಲ್ಲಿಗೆ ಒಬ್ಬ ಸ್ಪೆಷಲ್ ಸರ್ವೇಯರನ್ನು ನೇಮಕ ಮಾಡಿ ರಾಯಚೂರು, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಹೊಸದಾಗಿ ಸರ್ವೇ ಕೆಲಸ ಮಾಡಿಸುತ್ತೀರಾ?

**ಮಾನ್ಯ ಸಭಾಧ್ಯಕ್ಷರು** – ಇದು ಈ ಪ್ರಶ್ನೆಯ ವ್ಯಾಪ್ತಿಯಿಂದ ಹೊರಗಡೆ ಇದೆ. ಆದರೆ ಮಾನ್ಯಮಂತ್ರಿಗಳು ಉತ್ತರ ಕೊಡುತ್ತೇವೆಂದರೆ ನನ್ನ ಆಕ್ಷೇಪಣೆಯಿಲ್ಲ.

**ಶ್ರೀ ಹೆಚ್.ವಿ. ಕೌಜಲಗಿ** – ಅಲ್ಲಿ ಕೆಲಸ ಕೆಲವು ಮಟ್ಟಿಗೆ ಜಾಸ್ತಿ ಆಗಿದೆ. ಆದಾಗ್ಯೂ ಕಾಲಕ್ರಮದಲ್ಲಿ ಎಲ್ಲವೂ ಸರಿಹೋಗುತ್ತದೆ. ಆದ್ದರಿಂದ ಅದಕ್ಕೆ ಪ್ರತ್ಯೇಕ ಸರ್ವೇಯರ್ ಸಿಬ್ಬಂದಿ ಬೇಕಾಗಿಲ್ಲ.

**ಶ್ರೀಮತಿ ಲೀಲಾವತಿ ರೈ** – ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ ನವರಿಗೆ ಜಮೀನನ್ನು ಹಂಚಿ 10–12 ವರ್ಷಗಳಾದರೂ ಯಾವ ಯಾವ ಜಮೀನು ಯಾರಿಗೆ ಸೇರಿದ್ದು ಎಂಬುದನ್ನು ಅಳತೆ ಮಾಡುವುದಕ್ಕೆ ಅಲ್ಲಿ ಸರ್ವೇಯರಿಲ್ಲದೆ ತೊಂದರೆಯಾಗಿರತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ರಾಜ್ಯಾದ್ಯಂತವೂ ಆ ತೊಂದರೆಯಿದೆಯಂತಲೇ ಈಗ 550 ಜನ ಸರ್ವೇಯರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.

(ದಿನಾಂಕ: 12.9.1968)

## ಟಿಪ್ಪಣಿ

ಶಾಸಕ ಶ್ರೀ ಡಿ.ಬಿ. ಕಲ್ಮಣ್‌ಕರ್ ಮೋಜಣಿದಾರರ ನೇಮಕಕ್ಕೆ ಸಂಬಂಧಿಸಿದಂತೆ ಕೆಲವು ವಿವರಗಳನ್ನು ಕೇಳಿದರು. ಅವೆಂದರೆ

1) ಗುಲ್ಬರ್ಗ ವಿಭಾಗದಲ್ಲಿ ಪ್ರತಿ ತಾಲ್ಲೂಕುಗಳಿಗೂ ನಿಗದಿತವಾದ ರೆವಿನ್ಯೂ ಮೋಜಣಿದಾರರ (ಸರ್ವೇಯರುಗಳು) ಸಂಖ್ಯೆ:

# ಭೂ ಕಂದಾಯ ರದ್ಧತಿ

1968

**ಶ್ರೀ ಎಸ್. ಎಸ್. ನಂಜೇಗೌಡ (ಅರಕಲಗೂಡು)** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳ ಕುರಿತು ಉತ್ತರಿಸಬೇಕು–

ಎ) "ಭೂ ಕಂದಾಯ ರದ್ಧತಿ" ಮಾಡಬಹುದೇ ಇಲ್ಲವೇ ಎಂಬ ಬಗ್ಗೆ ಸರ್ಕಾರವು ಯೋಜನಾ ಆಯೋಗ ಅಥವಾ ಭಾರತ ಸರ್ಕಾರದ ಮಾರ್ಗದರ್ಶನ ಕೇಳಿದೆಯೇ?

ಬಿ) ಹೌದಾದಲ್ಲಿ ಅವರು ನೀಡಿದ ಮಾರ್ಗದರ್ಶನವೇನು?

ಸಿ) ಹಾಗೆ ಬಂದ ಮಾರ್ಗದರ್ಶನಕ್ಕೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ಏನು?

ಉತ್ತರ: **ಶ್ರೀ ಎಚ್. ವಿ. ಕೌಜಲಗಿ (ಕಂದಾಯ ಸಚಿವರು)**

ಎ) ಇಲ್ಲ

ಬಿ ಮತ್ತು ಸಿ) ಎ ಪ್ರಶ್ನೆಗೆ ಉತ್ತರಿಸಿರುವುದರಿಂದ ಉದ್ಭವಿಸುವುದಿಲ್ಲ.

**ಶ್ರೀ ಎಚ್. ಎಸ್. ನಂಜೇಗೌಡ** – ಹಿಂದೆ ಇದೇ ಸಭೆಯಲ್ಲಿ ಎಂದರೆ ಜನವರಿ ಅಥವಾ ಮಾರ್ಚ್ ತಿಂಗಳಲ್ಲಿ ಯೋಜನಾ ಆಯೋಗಕ್ಕೆ ಹಾಗೂ ಕೇಂದ್ರ ಸರಕಾರಕ್ಕೆ ಲ್ಯಾಂಡ್ ರೆವಿನ್ಯೂ ರದ್ದು ಮಾಡುವ ಬಗ್ಗೆ ಸಲಹೆಗಳನ್ನು ಕಳುಹಿಸಿರಲಿಲ್ಲವೆ?

**ಶ್ರೀ ಹೆಚ್.ವಿ. ಕೌಜಲಗಿ** – ನನ್ನಲ್ಲಿರುವ ಮಾಹಿತಿಯ ಪ್ರಕಾರ ಅಂತಹ ಯಾವುದೇ ಸಲಹೆಯನ್ನು ಕಳುಹಿಸಲಾಗಿಲ್ಲ.

**ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್** – 1967ರಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರಣಾಳಿಕೆಯಲ್ಲಿ ಭೂಕಂದಾಯವನ್ನು ರದ್ದು ಮಾಡುತ್ತೇವೆ ಎಂದು ಇದೇ ಸರಕಾರ ಪ್ರಚಾರ ಮಾಡಿತ್ತು. ಹಾಗೆ ಪ್ರಚಾರ ಮಾಡಿದ ಮಾತನ್ನು ಕಾರ್ಯಗತ ಮಾಡಿದೆಯೆ?

**ಶ್ರೀ ಎಚ್. ವಿ. ಕೌಜಲಗಿ** – ಭೂ ಕಂದಾಯದ ಈಗಿನ ಸ್ವರೂಪವನ್ನು ರದ್ದುಪಡಿಸಬೇಕೆಂದು ಸರ್ಕಾರ ಒಮ್ಮೆ ಆಲೋಚಿಸಿತ್ತು. ಆದರೆ, ಆಮೇಲೆ ಅದು ತನ್ನ ಅಭಿಪ್ರಾಯವನ್ನು ಬದಲಾಯಿಸಿಕೊಂಡಿತು. ಸರ್ಕಾರ ತನ್ನ ಅಭಿಪ್ರಾಯವನ್ನು ಬದಲಿಸಿಕೊಂಡಾಗ ಈ ಸಂಬಂಧದಲ್ಲಿ ಮಾನ್ಯ ಹಣಕಾಸು ಸಚಿವರು ಈ ಸದನದ ಸಭೆಯಲ್ಲಿ ಹಲವಾರು ಸಂದರ್ಭಗಳಲ್ಲಿ ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

**ಶ್ರೀ ಬಿ.ಪಿ. ಗಂಗಾಧರ್** – ಎಕ್ಸೈಸು ಬಾಬಿನಲ್ಲಿ ಸರಕಾರಕ್ಕೆ ಸುಮಾರು 18 ಕೋಟಿಯಷ್ಟು ವರಮಾನ ಬಂದಿರುವುದರಿಂದ ರೆವೆನ್ಯೂವನ್ನು ಈಗ ಕೈಬಿಡುವುದಕ್ಕೆ ಆಗುವುದಿಲ್ಲವೆ?

**ಶ್ರೀ ಹೆಚ್.ವಿ. ಕೌಜಲಗಿ** – ಇಲ್ಲ

**ಶ್ರೀ ಎಸ್.ಎ. ಚನ್ನೇಗೌಡ** – ಭೂಕಂದಾಯವನ್ನು ವಸೂಲು ಮಾಡಲು ಸುಮಾರು ಶೇಕಡಾ 40ರಷ್ಟು ಖರ್ಚು ಸರಕಾರಕ್ಕೆ ಬರುತ್ತಿರುವುದರಿಂದ ಈಗಿರುವ ಭೂಕಂದಾಯವನ್ನು ರದ್ದು ಮಾಡುವುದಕ್ಕಾಗುವುದಿಲ್ಲವೆ?

**ಶ್ರೀ ಹೆಚ್.ವಿ. ಕೌಜಲಗಿ** – ಇಲ್ಲ

**ಶ್ರೀ ಎಸ್. ಗೋಪಾಲಗೌಡ** – ಭೂಕಂದಾಯವನ್ನು ರದ್ದು ಮಾಡಿ ಕೃಷಿ ಆದಾಯ ತೆರಿಗೆ ಹೇರಬೇಕು ಎನ್ನುವ ಪ್ರಶ್ನೆ ಬಗ್ಗೆ ಕಾಂಗ್ರೆಸ್ಸಿನ ಸಂಸದೀಯ ಪಕ್ಷದಲ್ಲಿ ಚರ್ಚೆಯಾಗಿ, ಇದರಿಂದ ತೊಂದರೆಯಾಗುತ್ತದೆ ಎಂದು ಹೇಳಿ ಕಾಂಗ್ರೆಸ್ಸು ಪಕ್ಷದವರೇ ಇದನ್ನು ಕೈಬಿಟ್ಟರೆ ಹೇಗೆ?

**ಮಾನ್ಯ ಸಭಾಧ್ಯಕ್ಷರು** – ಮಾನ್ಯ ಸದಸ್ಯರ ಪೂರಕ ಹೇಳಿಕೆಯು ಲೋಕಸಭೆಯ ಸಂಸದೀಯ ಪಕ್ಷವು ತೆಗೆದುಕೊಂಡ ನಿರ್ಣಯಕ್ಕೆ ಸಂಬಂಧಿಸಿದ್ದಾಗಿದೆ. ಆ ಬಗ್ಗೆ ಇಲ್ಲಿ ಸಚಿವರು ಏನು ತಾನೆ ಉತ್ತರಿಸಿಯಾರು?

**ಶ್ರೀ ಎಸ್. ಗೋಪಾಲಗೌಡ** – ಒಂದು ಕಾಲದಲ್ಲಿ ಸರಕಾರದವರು ಕಂದಾಯ ಈಗಿರುವ ರೀತಿಯಲ್ಲಿ ಇರಬಾರದು ಎಂದು ಇದೇ ಸಭೆಯಲ್ಲಿ ಹೇಳಿದ್ದರು. ಇದಾದ ನಂತರ ಇದನ್ನು ಬದಲಾವಣೆ ಮಾಡಬೇಕು ಎಂದು ನಿರ್ಣಯ ಮಾಡಲು ಇದ್ದಂತಹ ಕಾರಣಗಳೇನು?

**ಶ್ರೀ ಹೆಚ್. ವಿ. ಕೌಜಲಗಿ** – ಇದನ್ನು ತೆಗೆದು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಹಾಕಬೇಕು ಎಂದು ಸರಕಾರದಲ್ಲಿ ಒಂದು ವಿಚಾರ ಇತ್ತು. ಆದರೆ ಅನೇಕ ಕಡೆಗಳಿಂದ ಈಗಿರುವಂತೆಯೇ ಇರಬೇಕು. ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಹಾಕಿದರೆ ಅದರಿಂದ ಜನರಿಗೆ ತೊಂದರೆಯಾಗುತ್ತದೆ ಎಂದು ಅಭಿಪ್ರಾಯಗಳು ಬಂದವು ಮತ್ತು ಇದನ್ನು ಬದಲಾವಣೆ ಮಾಡಕೂಡದು ಇನ್ನುವ ಮನವಿಗಳು ಸರಕಾರಕ್ಕೆ ಬಂದು ಅದು ಮನವರಿಕೆಯಾಗಿ ಸರಕಾರ ಇದನ್ನು ಬಿಟ್ಟು ಈಗಿನ ಪದ್ಧತಿಯನ್ನೇ ಮುಂದುವರಿಸಿದೆ.

**ಶ್ರೀ ಬಾಪೂಗೌಡ** – ಈಗ ಇರತಕ್ಕ ಕಂದಾಯದ ಪದ್ಧತಿಯಲ್ಲಿ ಅನೇಕ ಸೆಸ್‌ಗಳು ಸೇರಿರುತ್ತವೆ. ಅದರಿಂದ ಈ ಪದ್ಧತಿಯನ್ನು ತೆಗೆದುಹಾಕಿ ಇನ್ನೊಂದು ಹೊಸ ಪದ್ಧತಿಯನ್ನು ತರತಕ್ಕ ವಿಚಾರ ಏನಾದರೂ ಸರಕಾರದವರ ಪರಿಶೀಲನೆಯಲ್ಲಿದೆಯೇ?

**ಶ್ರೀ ಹೆಚ್. ವಿ. ಕೌಜಲಗಿ** – ಸದ್ಯಕ್ಕೆ ಅಂಥಾ ಯೋಚನೆಯಿಲ್ಲ.

**ಶ್ರೀ ಎಚ್. ಸಿದ್ಧವೀರಪ್ಪ** – 1967ನೆಯ ಮಹಾ ಚುನಾವಣೆಯ ಪ್ರಣಾಳಿಕೆಯಲ್ಲಿ ಆಳುವ ಪಕ್ಷದವರು ಈ ಕಂದಾಯವನ್ನು ರದ್ದುಪಡಿಸುವುದಾಗಿ ಖಡಾಖಡಿಯಲ್ಲಿ ಹೇಳಿಕೆ ಕೊಟ್ಟು ಈಗ ಓಟನ್ನು ಪಡೆದ ನಂತರ ಅದನ್ನು ತೆಗೆದುಹಾಕುವುದಿಲ್ಲ ಎಂದರೆ ಅದು ಜನರನ್ನು ಮೋಸ ಮಾಡಿದಂತೆ ಆಗುವುದಿಲ್ಲವೇ?

**ಶ್ರೀ ಹೆಚ್. ವಿ. ಕೌಜಲಗಿ** – ಹಾಗೇನೂ ಆಗುವುದಿಲ್ಲ.

**ಶ್ರೀ ಕೆ.ಎನ್. ವೀರಪ್ಪಗೌಡ** – ಅನೇಕ ಕಡೆಗಳಿಂದ ಅನೇಕ ಜನರಿಂದಲೂ ಹಾಗೂ ರೈತರಿಂದಲೂ ಸರ್ಕಾರಕ್ಕೇನಾದರೂ ಹಾಲಿ ಇರತಕ್ಕ ಕಂದಾಯವನ್ನು ರದ್ದು ಮಾಡಬಾರದು ಎಂಬುದಾಗಿ ಮನವಿಗಳೇನಾದರೂ ಬಂದಿವೆಯೇ?

**ಶ್ರೀ ಹೆಚ್. ವಿ. ಕೌಜಲಗಿ** – ಹಾಗೆ ಅನೇಕ ಮನವಿಗಳು ಬಂದಿವೆ.

**ಶ್ರೀ ಎಸ್. ಎಸ್. ಅರಕೇರಿ** – ಮಾನ್ಯ ಮಂತ್ರಿಗಳು ಅನೇಕ ಕಡೆಗಳಿಂದ ಮನವಿಗಳು ಬಂದಿವೆ ಎಂಬುದಾಗಿ ಉತ್ತರ ಕೊಟ್ಟಿದ್ದಾರೆ. ಆ ಮನವಿಗಳೇನು ಶಾಸನ ಸಭಾ ಸದಸ್ಯರಿಂದಲೋ – ಸಾಮಾನ್ಯ ಜನರಿಂದಲೋ ಅಥವಾ ರಾಜಕೀಯ ವ್ಯಕ್ತಿಗಳಿಂದಲೋ ಯಾರಿಂದ ಬಂದಿವೆ?

**ಶ್ರೀ ಹೆಚ್.ವಿ. ಕೌಜಲಗಿ** – ಎಲ್ಲ ಕಡೆಗಳಿಂದಲೂ ಎಲ್ಲ ಜನರಿಂದಲೂ ಬಂದಿವೆ.

**ಶ್ರೀ ಬಿ. ಭಾಸ್ಕರ ಶೆಟ್ಟಿ** – ನಮ್ಮ ರಾಜ್ಯದ 19 ಜಿಲ್ಲೆಗಳಲ್ಲಿ 17 ಜಿಲ್ಲೆಗಳಲ್ಲಿ ಅನಾವೃಷ್ಟಿಯೂ ಮತ್ತು ಇನ್ನುಳಿದ ಎರಡು ಜಿಲ್ಲೆಗಳಲ್ಲಿ ಅತಿವೃಷ್ಟಿಯೂ ಆಗಿ ಬೆಳೆಗಳೆಲ್ಲಾ ಹೋಗಿರುವುದರಿಂದ ಈ ವರ್ಷ ಎಲ್ಲೆಲ್ಲೂ ಕೋಲಹಲ ಎದ್ದಿರುವುದರಿಂದ ಕಂದಾಯವನ್ನು ಈ ವರ್ಷವಾದರೂ ತಾತ್ಕಾಲಿಕವಾಗಿ ರದ್ದು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಎಲ್ಲೆಲ್ಲಿ ಪೀಕು ಬಂದಿಲ್ಲವೋ ಅಲ್ಲಿ ಕಂದಾಯ ಸಸ್ಪೆಂಡ್ ಮಾಡುವುದಕ್ಕೆ ರಿಮಾಷನ್ ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ.

**ಶ್ರೀ ವಿ.ಎಸ್. ಪಾಟೀಲ್** – ಸರ್ಕಾರಕ್ಕೆ ಕಂದಾಯವನ್ನು ರದ್ದು ಮಾಡಬೇಡಿ ಎಂದು ಮನವಿಗಳನ್ನು ಕಳುಹಿಸಿರತಕ್ಕ ಸಂಘ ಸಂಸ್ಥೆಗಳು ಯಾವುವು ಎಂಬುದನ್ನು ತಿಳಿದುಕೊಳ್ಳಲು ಆ ವಿವರವನ್ನು ಈ ಹೌಸಿನ ಟೇಬಲ್ ಮೇಲೆ ಇಡಲಾಗುತ್ತದೆಯೇ?

**ಮಾನ್ಯ ಸಭಾಧ್ಯಕ್ಷರು** – ಮಾನ್ಯ ಸಚಿವರು ಎಲ್ಲ ಕಡೆಗಳಿಂದ ಮನವಿಗಳು ಬಂದಿವೆಯೆಂದು ಈಗಾಗಲೆ ತಿಳಿಸಿದ್ದಾರೆ.

**ಶ್ರೀ ವಿ.ಎಸ್. ಪಾಟೀಲ್** – ನನ್ನ ಪ್ರಶ್ನೆ ನಿರ್ದಿಷ್ಟವಾಗಿದೆ.

**ಮಾನ್ಯ ಸಭಾಧ್ಯಕ್ಷರು** – ಮಾನ್ಯ ಸಚಿವರು ಉತ್ತರಿಸಬಹುದು.

**ಶ್ರೀ ವಿ.ಹೆಚ್. ಕೌಜಲಗಿ** – ಪೀಠ ನಿರ್ದೇಶಿಸಿದರೆ, ನಾನು ದಾಖಲೆಗಳನ್ನು ಪರಿಶೀಲಿಸಿ ಮಾಹಿತಿಯನ್ನು ಸದನದಲ್ಲಿ ಮಂಡಿಸುತ್ತೇನೆ.

**ಶ್ರೀ ಬಿ. ಪರಮೇಶ್ವರಪ್ಪ** – ಸರ್ಕಾರದವರು ಒಂದು ಸಾರ್ತಿ ಕಂದಾಯವನ್ನು ವಸೂಲ್ಮಾಡಬೇಡಿ ಎಂದು ಅಧಿಕಾರಿಗೆ ತಿಳಿಸಿದ್ದರು. ಈಗ ಮತ್ತೆ ಅವರಿಗೆ ಕಂದಾಯವನ್ನು ವಸೂಲ್ಮಾಡಿ ಎಂದು ಹೇಳಿರುವುದರಿಂದ ಅವರಿಗೆ ಅದನ್ನು ವಸೂಲು ಮಾಡಲು ಎಷ್ಟು ಕಷ್ಟವುಂಟಾಗಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ? ಅಧಿಕಾರಿಗಳಲ್ಲಿ ಜಿಗುಪ್ಸೆ ಆಗಿಲ್ಲವೆ?

# ಬಾಡಿಗೆ ಮುಂಗಡ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಡುವುದು

1968

**ಶ್ರೀ ಎಸ್. ಎಸ್. ಶೆಟ್ಟರ್** (ಹುಬ್ಬಳ್ಳಿ) – ಮಾನ್ಯ ಕಂದಾಯ ಸಚಿವರು ಈ ವಿಷಯಗಳಿಗೆ ಉತ್ತರಿಸುವರೆ:–

(ಎ) ಮೈಸೂರು ಬಾಡಿಗೆ ನಿಯಂತ್ರಣ ಅಧಿನಿಯಮದ ಉಪಬಂಧಗಳು ಮತ್ತು ನಿಯಮಗಳ ಅಡಿಯಲ್ಲಿ ಬಾಡಿಗೆ ಮುಂಗಡ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಡುವಾಗ ಯಾರಾದರು ತೊಂದರೆಗೆ ಒಳಗಾಗಿರುವ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಬಿ) ಹಾಗಾದರೆ, ಪ್ರಕ್ರಿಯೆಗಳನ್ನು ಸರಳೀಕರಸುವ ಯಾವುದೇ ಪ್ರಸ್ತಾವವಿದೆಯೆ?

ಉತ್ತರ: **ಶ್ರೀ ಹೆಚ್.ವಿ. ಕೌಜಲಗಿ (ಕಂದಾಯ ಸಚಿವರು)** –

(ಎ) ಇಲ್ಲ

(ಬಿ) ಇಲ್ಲ

**ಶ್ರೀ ಎಸ್.ಎಸ್. ಶೆಟ್ಟರ್** – ಬಾಡಿಗೆ ಹಣವನ್ನು ಕೋರ್ಟಿನಲ್ಲಿ ತುಂಬುವ ಬಗ್ಗೆ ಹಿಂದೆ ಈ ಪರಿಪಾಠ ಇರಲಿಲ್ಲವೆ?

**ಶ್ರೀ ಹೆಚ್.ವಿ. ಕೌಜಲಗಿ** – ಇತ್ತು

**ಶ್ರೀ ಎಸ್.ಎಸ್. ಶೆಟ್ಟರ್** – ಹೊಸ ರೂಲ್ಸ್ ಬಂದ ಮೇಲೆ ಹಣವನ್ನು ಚಲನ್ ಮುಖಾಂತರ ತುಂಬಲು, ಕನಿಷ್ಠ 2 ಸಲ ಅರ್ಜಿ ಮಾಡಬೇಕು, ಸಾಧಾರಣ 41/2 ರೂಪಾಯಿ ಖರ್ಚು ಬರುತ್ತದೆ ಅಲ್ಲವೇ?

**ಶ್ರೀ ಹೆಚ್.ವಿ. ಕೌಜಲಗಿ** – ಸಾಮಾನ್ಯವಾಗಿ ಬೇರೆ ಯಾವುದಾದರೂ ತುಂಬುವಾಗ ಎಷ್ಟು ಖರ್ಚು ಬರುತ್ತದೋ, ಅಷ್ಟು ಬರುತ್ತದೆ.

**ಶ್ರೀ ಎಸ್.ಎಸ್. ಶೆಟ್ಟರ್** – ಅನೇಕ ಸಲ ನಾಲ್ಕು ರೂಪಾಯಿ ಬಾಡಿಗೆ ಕಟ್ಟಬೇಕಾದರೆ ಎಷ್ಟೋ ರೂಪಾಯಿ ಖರ್ಚು ಬರುತ್ತದೆ.

**ಶ್ರೀ ಹೆಚ್.ವಿ. ಕೌಜಲಗಿ** – ಈ ತರದ ಪ್ರಸಂಗ ನನ್ನ ಗಮನಕ್ಕೆ ಬಂದಿಲ್ಲ.

(ದಿ: 4.9.1968)

# ಭೂ ಮಾಲೀಕರ ಸಮಾವೇಶ ಕುರಿತು

1969

**ಶ್ರೀ ರತ್ನಕುಮಾರ್ ಕಟ್ಟೇಮಾರ್** (ಮೂಡಬಿದ್ರಿ) – ಮಾನ್ಯ ಕಂದಾಯ ಸಚಿವರು ಈ ವಿಷಯಗಳಿಗೆ ಉತ್ತರಿಸುವರೆ?

(ಎ) ಭೂ ಸುದಾರಣಾ ಅಧಿನಿಯಮಕ್ಕೆ ಕೂಡಲೆ ತಿದ್ದುಪಡಿ ತರಲು ಸರ್ಕಾರವನ್ನು ಅಗ್ರಹಿಸಿ, ರಾಜ್ಯದಲ್ಲಿ ನಡೆಸಲಾದ ಭೂ ಮಾಲೀಕರ ವಿವಿಧ ಸಮಾವೇಶಗಳಲ್ಲಿ ಅಂಗೀಕರಿಸಲಾದ ಯಾವುವೆ ನಿರ್ಣಯಗಳನ್ನು ಸರ್ಕಾರ ಸ್ವೀಕರಿಸಿದೆಯೆ?

(ಬಿ) ರೈತವಾರಿ ಭೂ ಮಾಲೀಕರು ಕಳೆದ ಐದು ವರ್ಷಗಳು ಎಂದರೆ 1965 ರಿಂದ ಗೇಣಿಗಳನ್ನು ಪಡೆಯದಿರುವ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿದೆಯೆ?

(ಸಿ) ಸರ್ಕಾರ ಅಂಥ ಭೂ ಮಾಲೀಕರ ಕುಂದುಕೊರತೆಗಳನ್ನು ನಿರ್ಲಕ್ಷಿಸಿ, ಅವರಿಂದ ಬಲವಂತವಾಗಿ ಭೂ ಕಂದಾಯವನ್ನು ವಸೂಲು ಮಾಡುತ್ತಿದೆಯೆ?

(ಡಿ) ಎಷ್ಟೊಂದು ಜನ ಗೇಣಿದಾರರು ಕಳೆದ ಎಂಟು ಅಥವಾ ಅದಕ್ಕೂ ಹೆಚ್ಚು ವರ್ಷಗಳಿಂದ ಜಮೀನನ್ನು ಬೀಳು ಬಿಟ್ಟಿರುವುದಕ್ಕೆ ಮತ್ತು ಅವರು ಲೆವಿಯನ್ನು ಸಹ ಸಂದಾಯ ಮಾಡದಿರುವುದಕ್ಕೆ ಸಂಬಂಧಪಟ್ಟಂತೆ ನಾನು ಸಲ್ಲಿಸಿರುವ ಮನವಿಗಳು ಸರ್ಕಾರಕ್ಕೆ ಬಂದಿರುವವೆ?

(ಇ), ಎರಡು ವರ್ಷಗಳಿಗೂ ಹೆಚ್ಚುಕಾಲ ಮತ್ತು ಭೂ ಸುಧಾರಣಾ ಅಧಿನಿಯಮಗಳ ಉಪಬಂಧಗಳಿಗೆ ತದ್ವಿರುದ್ಧವಾಗಿ ಪ್ರಸಕ್ತ ಕಳೆದ ಐದು ವರ್ಷಗಳವರೆಗೆ ಗೇಣಿಯನ್ನು ಬಾಕಿ ಉಳಿಸಿಕೊಂಡಿರುವಂಥ ಗೇಣಿದಾರರಿಗೆ ಹಿಡುವಳಿಯ ಸ್ವಾಧೀನತೆಯಲ್ಲಿ ಉಳಿಯಲು ಅವಕಾಶ ಮಾಡಿಕೊಡಲಾಗಿದೆಯೆ?

(ಎಫ್) ಕಡೇಪಕ್ಷ ಗರಿಷ್ಠ ಮಿತಿಯವರೆಗಾದರೂ ಗೇಣಿದಾರರಿಂದ ಸ್ವಯಂ – ಸಾಗುವಳಿಗಾಗಿ ಜಮೀನನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳಲು ರೈತವಾರಿ ಭೂ ಮಾಲೀಕರಿಗೆ ಅವಕಾಶ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ?

**ಶ್ರೀ ಹೆಚ್. ವಿ. ಕೌಜಲಗಿ (ಕಂದಾಯ ಸಚಿವರು) –**

(ಎ) ಹೌದು

(ಬಿ) ಇಲ್ಲ

(ಸಿ) ಭೂ ಕಂದಾಯವನ್ನು ಪಾವತಿಸುವ ಭೂಮಾಲೀಕನ ಹೊಣೆಗಾರಿಕೆಯು ಗೇಣಿಯನ್ನು ವಸೂಲು ಮಾಡುವ ಆತನ ಸಾಮರ್ಥ್ಯವನ್ನು ಅವಲಂಬಿಸಿರುವುದಿಲ್ಲ.

(ಡಿ) ಹೌದು

(ಇ) ಇಲ್ಲ

(ಎಫ್) 16ನೇ ಪ್ರಕರಣದೊಂದಿಗೆ ಓದಲಾದ 14ನೇ ಪ್ರಕರಣದ ಮೂಲಕ ಅನುಮತಿಸಲಾದಷ್ಟು ಜಮೀನುಗಳನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳಲು ಭೂ ಮಾಲೀಕರಿಗೆ ಅನುಮತಿ ನೀಡಲಾಗಿದೆ.

**ಶ್ರೀ ರತನ್‌ಕುಮಾರ್ ಕಟ್ಟೀಮಾರ್** – ಈ ಭೂಸುಧಾರಣೆ ಕಾನೂನಿನಿಂದ ನಮ್ಮ ರಾಜ್ಯದ ಎಲ್ಲಾ ಟ್ರಿಬ್ಯೂನಲ್ ಕೋರ್ಟುಗಳಲ್ಲಿ 1965ನೇ ಇಸವಿಯಿಂದ ಇಷ್ಟರವರೆಗೆ ಒಟ್ಟು ಎಷ್ಟು ಕೇಸುಗಳು ಪೆಂಡಿಂಗ್‌ನಲ್ಲಿವೆ?

**ಶ್ರೀ ಹೆಚ್.ವಿ. ಕೌಜಲಗಿ** – ಈ ಪ್ರಶ್ನೆಯೇ ಬೇರೆ. ಮತ್ತೊಂದು ಪ್ರಶ್ನೆ ಕೇಳಿದರೆ, ನಾನು ಉತ್ತರ ಕೊಡುತ್ತೇನೆ.

**ಶ್ರೀ ರತನ್ ಕುಮಾರ್ ಕಟ್ಟೀಮಾರ್** – ತಾವು ಹಿಂದೆ ಭೂಮಾಲೀಕರು ಏನೊಂದು ಮನವಿಗಳನ್ನು ಕೊಟ್ಟಿದ್ದಾರೋ ಆ ಬಗ್ಗೆ ತಿದ್ದುಪಡಿ ತರುತ್ತೇವೆಂದು ತಿಳಿಸಿದ್ದೀರಿ. ಅದರ ಬಗ್ಗೆ ಯಾವ ತರಹ ಕ್ರಮವನ್ನು ತೆಗೆದುಕೊಂಡಿದ್ದೀರಿ?

**ಶ್ರೀ ಹೆಚ್. ವಿ. ಕೌಜಲಗಿ** – ಸಣ್ಣ ಭೂ ಹಿಡುವಳಿದಾರರು ಮತ್ತು ದೊಡ್ಡ ಭೂ ಹಿಡುವಳಿದಾರರಿಂದ ನನಗೆ ಮನವಿ ಬಂದಿದೆ. ಆದರೆ ಸರ್ಕಾರ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಈ ಸಂಬಂಧದಲ್ಲಿ ತಿದ್ದುಪಡಿಗಳನ್ನು ಈ ಸದನದ ಮುಂದೆ ತರುತ್ತೇನೆಂದು ನಾನು ವಚನ ನೀಡಿರಲಿಲ್ಲ. ಆದರೆ ಕೆಲವು ತಿದ್ದುಪಡಿಗಳನ್ನು ತರಲಾಗುವುದು. ಆದರೆ ಅವೆಲ್ಲಾ ಔಪಚಾರಿಕ ತಿದ್ದುಪಡಿಗಳಷ್ಟೆ.

**ಶ್ರೀಮತಿ ಕೆ.ಎಸ್. ನಾಗರತ್ನಮ್ಮ** – ಇಲ್ಲಿ (ಇ)ಯಲ್ಲಿ ಭೂಮಾಲೀಕರು ಭೂಕಂದಾಯವನ್ನು ಕೊಡುವುದು ಅವರು ಗೇಣಿನ್ನು ವಸೂಲು ಮಾಡುವುದನ್ನು ಅವಲಂಬಿಸಿರುವುದಿಲ್ಲ ಎಂದು ಹೇಳಿದ್ದೀರಿ. ಕೆಲವು ಹೆಣ್ಣು ಮಕ್ಕಳು ಗೇಣಿ ಕೇಳುವುದಕ್ಕೆ ಹೋದರೆ, ಅವರು ಮಾನಹಾನಿಯಾಗುವ ಹಾಗೆ ಎಲ್ಲಾ ಬಯ್ದು ಕಳುಹಿಸುವುದರಿಂದ ಅವರು ಅವರ ಮಕ್ಕಳು ಮರಿಗಳನ್ನು ಸಾಕುವುದು ಕಷ್ಟವಾಗುತ್ತದೆ. ಇದಕ್ಕೂ ಅದಕ್ಕೂ ಸಂಬಂಧವಿಲ್ಲವೆಂದು ಹೇಳುವುದು ಸರ್ಕಾರ ನ್ಯಾಯವೆಂದು ಭಾವಿಸಿದೆಯೇ?

**ಶ್ರೀ ಹೆಚ್. ವಿ. ಕೌಜಲಗಿ** – ಭೂ ಕಂದಾಯದ ಸಂದಾಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಹೇಳುವುದಾದರೆ, ಅದು ಕಾನೂನಿನ ಮತ್ತು ಭೂ ಕಂದಾಯ ಅಧಿನಿಯಮದ ಅನುಸಾರ ಸಂದಾಯ ಮಾಡಬೇಕಾಗುತ್ತದೆ. ಭೂ ಕಂದಾಯವನ್ನು ಸಂದಾಯ ಮಾಡುವುದು ಭೂ ಮಾಲೀಕರನ ಹೊಣೆಯಾಗಿದೆ. ಗೇಣಿ ವಸೂಲಿ ಮಾಡುವುದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಅದೆಲ್ಲವೂ ಇಬ್ಬರ ನಡುವಿನ ಸಂಬಂಧವನ್ನು ಅವಲಂಬಿಸಿರುತ್ತದೆ ಅಥವಾ ಭೂ ಮಾಲೀಕ ಯುಕ್ತ ನ್ಯಾಯಾಲಯದಲ್ಲಿ ಪರಿಹಾರವನ್ನು ಕೋರಬೇಕು.

**ಶ್ರೀ ವಿ. ಭಾಸ್ಕರ ಶೆಟ್ಟಿ** – ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿ ಒಂದು ಬೇರೆ ರೀತಿಯೇ ಅಗಿದ್ದು, ಈ ಬಗ್ಗೆ ಈ ಮನೆಯ ಮತ್ತು ಮೇಲ್ಮನೆಯ ಸದಸ್ಯರು ಸರ್ಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸಿ, ಬಹಳ ಕಡಿಮೆ ಹಿಡುವಳಿದಾರರು ದಕ್ಷಿಣ ಕನ್ನಡದಲ್ಲಿ ಇದ್ದಾರೆ; ಅವರ ಮಟ್ಟಿಗೆ ನ್ಯಾಯ ಗೇಣಿ ಮಾಡಿ, ವಕ್ಕಲು ಎಬ್ಬಿಸದಂತೆ ಮಾಡಿ, ನ್ಯಾಯ ದೊರೆಯುವಂತೆ ಮಾಡಬೇಕೆಂದು, ಒಂದು ಮನವಿಯನ್ನು ಸಲ್ಲಿಸಿದ್ದು ನಿಜವೇ? ಮತ್ತು ಆ ವಿಷಯದಲ್ಲಿ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

**ಶ್ರೀ ಹೆಚ್. ವಿ. ಕೌಜಲಗಿ** – ಅಂಥ ಒಂದು ಮನವಿಯನ್ನು ಸ್ವೀಕರಿಸಲಾಗಿದೆ. ಆದರೆ ಸರ್ಕಾರ ಆ ಬಗ್ಗೆ ಇನ್ನೂ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ.

**ಶ್ರೀ ಬಿ.ಎಂ. ಇದ್ದಿನಬ್ಬ** – (ಇ)ಗೆ ಉತ್ತರವಾಗಿ ಭೂ ಕಂದಾಯ ಗೇಣಿ ವಸೂಲು ಮಾಡುವುದನ್ನು ಅವಲಂಬಿಸಿರುವುದಿಲ್ಲವೆಂದು ಹೇಳಿದ್ದೀರಿ. ಒಂದು ಕಡೆಯಿಂದ ಕಂದಾಯ ಕೊಡಲೇಬೇಕೆಂದು ಹೇಳುವುದು, ವಕ್ಕಲುಗಳು ಗೇಣಿಯನ್ನು ಕೊಡದಿರುವುದು ಮತ್ತು ಹೀಗೆ ನಾಲ್ಕೈದು ವರ್ಷ ಸಾಗುವಳಿ ಮಾಡದಿರುವುದು, ಇವನ್ನೆಲ್ಲಾ ತಪ್ಪಿಸಿ ದಣಿಗಳಿಗೂ ವಕ್ಕಲುಗಳಿಗೂ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸುವುದಕ್ಕೆ ಒಂದು ಒಳ್ಳೆಯ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುವುದು ಒಳ್ಳೆಯದಲ್ಲವೇ?

**ಶ್ರೀ ಹೆಚ್. ವಿ. ಕೌಜಲಗಿ** – ಭೂ ಒಡೆಯನು ಭೂ ಕಂದಾಯವನ್ನು ಸಂದಾಯ ಮಾಡುವ ಮತ್ತು ಭೂ ಒಡೆಯನು ಗೇಣಿಯನ್ನು ವಸೂಲಿ ಮಾಡುವ ಜವಾಬ್ದಾರಿಯು ಅನಾದಿ ಕಾಲದಿಂದಲೂ ಇದ್ದದ್ದೆ. ಇದು ಭೂ ಸುಧಾರಣಾ ಅಧಿನಿಯಮ ಜಾರಿಗೆ ಬಂದ ನಂತರ ಈ ರೀತಿ ಆಗಿದೆ.

**ಶ್ರೀ ಬೋಳ ರಘುರಾಮ ಶೆಟ್ಟಿ** – ಭೂ ಮಸೂದೆಯ ಕಾನೂನು ಪ್ರಕಾರ ನ್ಯಾಯಕ್ಕಿಂತ ಹೆಚ್ಚು ಗೇಣಿ ವಸೂಲು ಮಾಡುವುದು ತಪ್ಪು, ನ್ಯಾಯ ಗೇಣಿಯನ್ನು ತಹಸೀಲ್ದಾರರು ಉತ್ಪತ್ತಿ

ನೋಡಿ ನಿರ್ಣಯ ಮಾಡಬೇಕು. ಕೆಲವು ಕಡೆ ತಹಸೀಲ್ದಾರರು ಉತ್ಪತ್ತಿ ಎಷ್ಟು ಎಂದು ನಿರ್ಣಯ ಮಾಡಿಲ್ಲ ಮತ್ತು ನಾಲ್ಕು ವರ್ಷಗಳಿಂದ ಲ್ಯಾಂಡ್ ಟ್ರಿಬ್ಯೂನಲ್ ಕೋರ್ಟಿನಲ್ಲಿ ಎಲ್ಲಾ ಕೇಸುಗಳಿಗೂ ಕೂಡ ಕೇವಲ ಆಜರ್ನ್ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಕೆಲವು ಪ್ರಕರಣಗಳಲ್ಲಿ ತಹಶೀಲ್ದಾರರು ಅಧಿಸೂಚನೆಗಳನ್ನು ಹೊರಡಿಸಿದ್ದಾರೆ, ಉಚ್ಚ ನ್ಯಾಯಾಲಯವು ಅಧಿಸೂಚನೆಗಳನ್ನು ಅಸಿಂಧುವೆಂದು ಎತ್ತಿ ಹಿಡಿದಿದೆ. ನ್ಯಾಯಾಲಯದಲ್ಲಿ ವಿಷಯಗಳು ಬಾಕಿ ಇದ್ದು, ಮತ್ತು ಅವುಗಳ ವಿಚಾರಣೆ ನಡೆಯುತ್ತಿದ್ದರೆ, ಆ ಕಾನೂನು ವ್ಯವಹರಣೆಗೆ ಸರ್ಕಾರ ಜವಾಬ್ದಾರಿಯಲ್ಲ.

**ಶ್ರೀಮತಿ ವಿನ್ನಿಫ್ರೆಡ್ ಎಫ್. ಫರ್ನಾಂಡೀಸ್** – ಮೊಕದ್ದಮೆಗಳು ನ್ಯಾಯಮಂಡಲಿಗಳಲ್ಲಿ ಎರಡು ವರ್ಷಗಳಿಗಿಂತ ಹೆಚ್ಚಾಗಿ ಬಾಕಿ ಇದ್ದು ಅವು ವಿಲೇವಾರಿಯಾಗದೆ ಇದ್ದರೆ ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ?

**ಶ್ರೀ ಹೆಚ್. ವಿ. ಕೌಜಲಗಿ** – ಗೇಣಿದಾರ ಗೇಣಿಯನ್ನು ಎರಡು ವರ್ಷಗಳು ಸಂದಾಯ ಮಾಡದೆ ಇದ್ದರೆ, ಮೊಕದ್ದಮೆಗಳ ಶೀಘ್ರ ವಿಲೇವಾರಿ ಆಗುವಷ್ಟರಮಟ್ಟಿಗೆ ಅಧಿನಿಯಮದಲ್ಲಿ ಪರಿಹಾರವನ್ನು ಉಪಬಂಧಿಸಲಾಗಿದ್ದು, ಅದನ್ನು ಮೊಕದ್ದಮೆಗಳು ಬೇಗನೆ ವಿಲೆವಾರಿಯಗುವಂತೆ ನೋಡಿಕೊಳ್ಳುವ ಸಲುವಾಗಿ ನ್ಯಾಯಮಂಡಲಿಯನ್ನು ರೂಪಿಸಲಾಗಿದೆ

(ದಿನಾಂಕ: 21.8.1969)

## ಗ್ರಾಮಲೆಕ್ಕಿಗರು ಮತ್ತು ಪಂಚಾಯತಿ ಕಾರ್ಯದರ್ಶಿಗಳ ನೇಮಕ

1969

**ಶ್ರೀ ಕೆ.ಆರ್. ನಾಡಗೌಡ (ಯಾದಗೀರ್)** – ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳಿಗೆ ಉತ್ತರಿಸುವರೆ:–

(ಎ) ಆನುವಂಶಿಕ ಗ್ರಾಮ ನೌಕರರಾದ 'ಪಟ್ವಾರಿಗಳು' ತಮ್ಮ ಅನಿಶ್ಚಿತ ಪರಿಸ್ಥಿತಿಯಿಂದಾಗಿ ತಮ್ಮ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಮತ್ತು ದಕ್ಷತೆಯಿಂದ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಬಿ) ಸರ್ಕಾರವು ಆನುವಂಶಿಕ ಗ್ರಾಮ ನೌಕರರ ಹುದ್ದೆಯನ್ನು ಯಾವಾಗ ರದ್ದುಪಡಿಸುತ್ತದೆ ಮತ್ತು ಅವರ ಜಾಗದಲ್ಲಿ ಪಂಚಾಯತ್ ಕಾರ್ಯದರ್ಶಿಗಳ ಗ್ರಾಮ ಲೆಕ್ಕಿಗರನ್ನು ಯಾವಾಗ ನೇಮಕ ಮಾಡುತ್ತದೆ?

**ಶ್ರೀ ಹೆಚ್. ವಿ. ಕೌಜಲಗಿ – (ಕಂದಾಯ ಸಚಿವರು)**

(ಎ) ಅವರ ಸ್ಥಾನದ ಬಗ್ಗೆ ಯಾವುದೇ ಅನಿಶ್ಚಿತತೆ ಇಲ್ಲ. ಆನುವಂಶಿಕ ಗ್ರಾಮ ಹುದ್ದೆಗಳನ್ನು ರದ್ದುಪಡಿಸಲಾಗಿದೆ. ಆನುವಂಶಿಕ ಹಕ್ಕು ರಹಿತವಾಗಿ ಮುಂದುವರಿದಿರುವಂಥ ಸ್ಥಾನಗಳಲ್ಲಿ ತಪ್ಪದೆ ಬೇರೆಯವರನ್ನು ನಿಯೋಜಿಸಲಾಗುವುದು.

(ಬಿ) ಎಲ್ಲಾ ಗ್ರಾಮ ಹುದ್ದೆಗಳನ್ನು 1ನೇ ಫೆಬ್ರವರಿ, 1963 ರಿಂದ ಜಾರಿಗೆ ಬರುವಂತೆ ರದ್ದಾಗಿವೆ ಮತ್ತು ಅವರ ಸ್ಥಾನದಲ್ಲಿ ನಿಯತವಾಗಿ ನೇಮಕಗೊಂಡು, ತರಬೇತಿ ಪಡೆದಿರುವಂಥ ಗ್ರಾಮ ಲೆಕ್ಕಿಗರನ್ನು ನಿಯೋಜಿಸಲಾಗುತ್ತಿದೆ.

**ಶ್ರೀ ಕೆ.ಎನ್. ನಾಡಗೌಡ** – ಆನುವಂಶಿಕ ನೌಕರರನ್ನು ರದ್ದು ಮಾಡುವುದಕ್ಕೆ 1967ರಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆಯೆಂದು ಹೇಳಲಾಗಿದೆ. ಎಷ್ಟು ಗ್ರಾಮ ನೌಕರರನ್ನು ನೇಮಕ ಮಾಡಲಾಗಿದೆ ಮತ್ತು ಇನ್ನೂ ಎಷ್ಟು ಗ್ರಾಮ ನೌಕರರನ್ನು ನೇಮಕ ಮಾಡಿಕೊಳ್ಳಬೇಕಾಗಿದೆ ಎಂಬುದನ್ನು ನಾನು ತಿಳಿದುಕೊಳ್ಳಬಹುದೆ?

**ಶ್ರೀ ಹೆಚ್.ವಿ. ಕೌಜಲಗಿ** – ಮಾನ್ಯ ಸದಸ್ಯರು ಹೈದರಾಬಾದ್ ಪ್ರದೇಶದ ಬಗ್ಗೆ ಕೇಳುತ್ತಿರುವರೋ ಅಥವಾ ಇಡೀ ರಾಜ್ಯದ ಬಗ್ಗೆ ಕೇಳುತ್ತಿರುವರೋ ಅದು ನನಗೆ ತಿಳಿತಾ ಇಲ್ಲ.

**ಶ್ರೀ ಕೆ.ಆರ್. ನಾಡಗೌಡ** – ನಾನು ಇಡೀ ರಾಜ್ಯದ ಬಗ್ಗೆ ಉಲ್ಲೇಖಿಸುತ್ತಿದ್ದೇನೆ.

**ಶ್ರೀ ಹೆಚ್.ವಿ. ಕೌಜಲಗಿ** – ಬಾಂಬೆ ಪ್ರದೇಶಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಆ ಪ್ರದೇಶಗಳಲ್ಲಿ ಆನುವಂಶಿಕ ಹುದ್ದೆಗಳನ್ನು ಬಹಳ ಹಿಂದೆಯೇ ರದ್ದುಪಡಿಸಲಾಗಿದ್ದು, ಗ್ರಾಮಲೆಕ್ಕಿಗರು (ತಲಾಟಿಗಳು) ಕೆಲವು ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇತರ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಹೊಸ ಲೆಕ್ಕಿಗರನ್ನು ಕೆಲವು ಭಾಗಗಳಲ್ಲಿ ನೇಮಕ ಮಾಡಲಾಗಿದ್ದು ಇತರ ಭಾಗಗಳಲ್ಲಿ ನೇಮಕಾತಿಗಳನ್ನು ಮಾಡಲಾಗುತ್ತಿದೆ. ಇನ್ನೂ ಕೆಲವು ಸ್ಥಳಗಳಲ್ಲಿ ಅವರು ನ್ಯಾಯಾಲಯಕ್ಕೆ ಹೋಗಿರುವುದರಿಂದ ಆ ವಿಷಯ ಅಷ್ಟಕ್ಕೇ ನಿಂತಿದೆ.

**ಶ್ರೀ ಎನ್.ಎಂ. ಗುರೆಡ್ಡಿ** – ಆನುವಂಶಿಕ ಗ್ರಾಮನೌಕರರಲ್ಲಿ ತಳವಾರ ವಾಲೆಕಾರ ಇವರೆಲ್ಲಾ ಸೇರಿದ್ದಾರೆ. ಅವರಿಗೆ ಯಾವ ಒಂದು ಸಂಭಾವನೆಯನ್ನೂ ಕೊಡದಂತೆ ಕೆಲಸ ಮಾಡಿಸಿಕೊಳ್ಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ನಿಸ್ಸಂದೇಹವಾಗಿ ಅವರು ಇಷ್ಟರಲ್ಲೇ ಸೇವೆಯಿಂದ ಬಿಡುಗಡೆಯಾಗಲಿದ್ದಾರೆ. ಈ ಮಧ್ಯೆ, ಅವರನ್ನು ಗ್ರಾಮ ನೌಕರರು ರದ್ದಾಗುವುದಕ್ಕೆ ಮುಂಚೆ ಅವರು ಕೆಲಸ ಮಾಡುತ್ತಿದ್ದಂಥದೇ ನಿಬಂಧನೆಗಳ ಮೇಲೆ ಕೆಲಸ ಮಾಡಲು ಅವಕಾಶ ನೀಡಲಾಗಿದೆ. ಅವರು ಹಿಂದೆ ಪಡೆಯುತ್ತಿದ್ದ ಮೊಟಗಿಯನ್ನು ಮುಂದೆಯೂ ಪಡೆಯುತ್ತಾರೆ.

**ಶ್ರೀ ಎ.ಎಲ್. ಶಿವಪ್ಪ** – ಇವರ ಪರಿಹಾರದ ಬಗ್ಗೆ ಬಾಂಡುಗಳನ್ನು ಕೊಡುವುದಾಗಿ ಹೇಳಿದ್ದರು. ಅದನ್ನು ಕೊಟ್ಟಿಲ್ಲ. ಮೇಲಾಗಿ ಎರಡು ಸಾರ್ತಿ ಇವರ ಪರಿಹಾರಕ್ಕಾಗಿ ತಂದ ಹಣ ಮತ್ತೆ ಸರ್ಕಾರಕ್ಕೆ ವಾಪಸ್ ಬಂದಿದೆ. ಇವರಿಗೆ ಯಾವಾಗ ಪರಿಹಾರ ನೀಡುತ್ತೀರಾ?

**ಶ್ರೀ ಹೆಚ್. ವಿ. ಕೌಜಲಗಿ** – ಸ್ವಾಮಿ, ಮೊಟಗಿಯನ್ನು ಸಂದಾಯ ಮಾಡುವುದಕ್ಕಾಗಿ ಕಾಲಕಾಲಕ್ಕೆ ಅವಧಿಯನ್ನು ವಿಸ್ತರಿಸಲಾಗಿದೆ. ಈಗ ಆ ವಿಷಯವನ್ನು ತ್ವರಿತಗೊಳಿಸಲಾಗುತ್ತಿದೆ.

**ಶ್ರೀ ಹೆಚ್. ಸಿದ್ಧವೀರಪ್ಪ** – ಗ್ರಾಮಲೆಕ್ಕಿಗರನ್ನು ನೇಮಕಾತಿ ಮಾಡಿಕೊಳ್ಳುವಾಗ, ನೇಮಕಗೊಂಡಿರುವ ಬಹುತೇಕ ಪ್ರಕರಣಗಳಲ್ಲಿ ಕಾಂಗ್ರೆಸ್ ಪಕ್ಷದ ಮತ್ತು ಕಾಂಗ್ರೆಸ್ ಸರ್ಕಾರದ ಏಜೆಂಟರುಗಳನ್ನು ಮಾತ್ರ ನೇಮಕ ಮಾಡಿಕೊಂಡಿರುವುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ? ಇಡೀ ಪಕ್ಷವನ್ನು ಅಧಿಕಾರದಲ್ಲಿ ಉಳಿಸುವ ದೃಷ್ಟಿಯಿಂದಲೇ ಅವರನ್ನು ನೇಮಕ ಮಾಡಲಾಗಿದೆ.

**ಶ್ರೀ ಹೆಚ್.ವಿ. ಕೌಜಲಗಿ** – ಸ್ವಾಮಿ, ನೇಮಕಾತಿಗಳನ್ನು ಜಿಲ್ಲಾಧಿಕಾರಿಗಳು ಮಾಡಿದ್ದಾರೆ. ಈ ನೇಮಕಗಳನ್ನು ರಾಜಕೀಯ ಪರಿಗಣನೆಯ ಮೇಲೆ ಮಾಡಲಾಗಿದೆಯೆಂಬುದನ್ನು ನಾನು ಒಪ್ಪುವುದಿಲ್ಲ.

**ಶ್ರೀ ಹೆಚ್. ಸಿದ್ಧವೀರಪ್ಪ** – ಈ ಸಂಬಂಧ ಯಾವುವೇ ದೂರುಗಳನ್ನು ನಾನು ಲಿಖಿತದಲ್ಲಿ ಕೊಟ್ಟಿಲ್ಲವೇ?

**ಮಾನ್ಯ ಸಭಾಧ್ಯಕ್ಷರು** – ಆ ಪ್ರಶ್ನೆ ಬೇರೆಯಾಯಿತು. ಮತ್ತೊಬ್ಬ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಜಿ. ಚಂದ್ರಕಾಂತ್** – ಈ ಗ್ರಾಮ ಲೆಕ್ಕಿಗರನ್ನು ಹೈದರಾಬಾದ್ ಕರ್ನಾಟಕ ಪ್ರದೇಶದ ಎಷ್ಟು ಸ್ಥಳಗಳಲ್ಲಿ ನಿಯೋಜಿಸಲಾಗಿದೆಯೆಂದು ತಿಳಿಯಬಹುದೇ? ನೇಮಕಾತಿಗಳನ್ನು ಮಾಡುವಾಗ ಅನೇಕ ಸ್ಥಳಗಳಲ್ಲಿ ಜಿಲ್ಲಾಧಿಕಾರಿಗಳನ್ನು ಅಧೀನದಲ್ಲಿಟ್ಟುಕೊಂಡು ಮಾರ್ಗದರ್ಶನ ನೀಡುತ್ತಿರುವುದು ಕಾಂಗ್ರೆಸ್ಸಿನವರೇ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಹೆಚ್. ವಿ. ಕೌಜಲಗಿ** – ಇಲ್ಲಿ ಎರಡು ಪ್ರಶ್ನೆಗಳಿವೆ. ಮೊದಲನೇ ಪ್ರಶ್ನೆಗೆ ಸಂಬಂಧಪಟ್ಟಂತೆ, ನನಗೆ ಕರಾರುವಾಕ್ಕಾದ ಅಂಕಿಸಂಖ್ಯೆಗಳು ಗೊತ್ತಿಲ್ಲ. ಎರಡನೇ ಪ್ರಶ್ನೆಗೆ ಸಂಬಂಧಿಸಿದಂತೆ ನಾನು ಈ ಎಲ್ಲಾ ಆಪಾದನೆಗಳನ್ನು ನಿರಾಕರಿಸುತ್ತೇನೆ.

**ಶ್ರೀ ಎಸ್. ಬಂಗಾರಪ್ಪ** – ಆನುವಂಶಿಕ ಗ್ರಾಮಾಧಿಕಾರಿಗಳ ಮತ್ತು ಶ್ಯಾನುಭೋಗರುಗಳ ಹುದ್ದೆಗಳನ್ನು ರದ್ದುಮಾಡಿ ಬರೀ ಟ್ರೈನಿಂಗ್ ಆಗಿರುವವರನ್ನು ನೇಮಕ ಮಾಡುವ ಪರಿಸ್ಥಿತಿ ಬಂದಿದೆ. ಈಗಾಗಲೇ ಒಂದು ಲಿಸ್ಟ್ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ನೇಮಕ ಮಾಡಿದ್ದಾರೆ. ಆ ರೀತಿ ಇನ್ನೂ ಅನೇಕ ಕಡೆಗಳಲ್ಲಿ ಮಾಡಲಿಲ್ಲವೆಂದು ಹೇಳುತ್ತಾರೆ. ಆ ಶ್ಯಾನುಭೋಗರು ತಮಗೆ ಸೇರಿದ ರೆಕಾರ್ಡ್‌ಗಳನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡು ತಮ್ಮ ಹುದ್ದೆಗಳು ಹೋಗುತ್ತವೆಂದು ಮನಸ್ಸಿಗೆ ಬಂದ ಹಾಗೆ ಬರೆಯುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಲಿಸ್ಟ್ ಪ್ರಕಾರ ಕೂಡಲೇ ಆ ಹುದ್ದೆಗಳನ್ನು ಭರ್ತಿ ಮಾಡುತ್ತೀರಾ ಮತ್ತು ಆ ಶ್ಯಾನುಭೋಗರಿಂದ ಕೂಡಲೇ ಸರ್ಕಾರದ ವಶಕ್ಕೆ ಆ ರೆಕಾರ್ಡ್‌ಗಳನ್ನು ಪಡೆಯುತ್ತೀರಾ?

**ಶ್ರೀ ಹೆಚ್. ವಿ. ಕೌಜಲಗಿ** – ಸರ್ಕಾರವು ಹೊಸ ಗ್ರಾಮಲೆಕ್ಕಿಗರನ್ನು ಬಹಳ ಬೇಗ ನೇಮಕ ಮಾಡಲು ತುಂಬಾ ಕಾತುರವಾಗಿದೆ ಮತ್ತು ಆ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ನೇಮಕಾತಿಗಳನ್ನು ಇಷ್ಟರಲ್ಲೆ ಮಾಡಲಾಗುವುದೆಂಬ ಭರವಸೆ ನನಗಿದೆ. ಕೆಲವು ಪ್ರಕರಣಗಳಲ್ಲಿ ಆ ವಿಷಯವನ್ನು ಉಚ್ಚ ನ್ಯಾಯಾಲಯಕ್ಕೆ ಕೊಂಡೊಯ್ಯಲಾಗಿದೆ. ಅಂಥ ಪ್ರಕರಣಗಳಲ್ಲಿ ಮಾತ್ರ ಅದು ವಿಳಂಬವಾಗಿದೆ. ಹಳೆಯ ಶ್ಯಾನುಭೋಗರು ದಫ್ತರ ಮುಂತಾದವುಗಳನ್ನು ನಿರ್ವಹಿಸುತ್ತಿಲ್ಲವೆಂಬ ಕೆಲವು ಆಪಾದನೆಗಳು ಕೂಡ ಸರ್ಕಾರಕ್ಕೆ ಬಂದಿವೆ. ಇರಬಹುದು, ಸರ್ಕಾರ ಎಲ್ಲಾ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿದೆ.

**ಶ್ರೀ ಎಂ. ಮಲ್ಲಪ್ಪ** – ಬಹಳಷ್ಟು ಪ್ರಕರಣಗಳಲ್ಲಿ, ಸರ್ಕಾರವು ಆನುವಂಶಿಕ ಶ್ಯಾನುಭೋಗರನ್ನು ನೇಮಕ ಮಾಡಿ, ಅವರನ್ನು ಅವರು ಎಲ್ಲ ಕೆಲಸ ಮಡುತ್ತಿದ್ದರೋ ಅದೇ ಸ್ಥಳಕ್ಕೆ ನಿಯೋಜಿಸಲಾಗಿದ್ದು, ಜನರ ಪರಿಸ್ಥಿತಿ ಅತಂತ್ರವಾಗಿದೆ. ಆ ಹಳೆ ಶ್ಯಾನುಭೋಗರು ಗ್ರಾಮಲೆಕ್ಕಿಗನಾಗಿ ಆಗಲಿ ಅಥವಾ ಪಂಚಾಯತಿಯ ಕಾರ್ಯದರ್ಶಿಯಾಗಿ ಆಗಲಿ ತಮ್ಮ ಕೆಲಸವನ್ನು ನಿರ್ವಹಿಸುತ್ತಿಲ್ಲ. ಕೆಲಸ ಹಿನ್ನಡೆಲ್ಲಿದೆ. ಅವರ ಜಾಗದಲ್ಲಿ ಗ್ರಾಮಲೆಕ್ಕಿಗರಾಗಿ ಬೇರೆಯವರನ್ನು ನೇಮಕ ಮಾಡಲು ಸಾಧ್ಯವಿಲ್ಲವೆ?

**ಶ್ರೀ ಹೆಚ್. ವಿ. ಕೌಜಲಗಿ** – ನಿಯಮಗಳನುಸಾರ ಹಳೆ ಶ್ಯಾನುಭೋಗರು ಕೂಡ ಗ್ರಾಮ ಲೆಕ್ಕಿಗರಾಗಿ ನೇಮಕವಾಗಲು ಅರ್ಹರಾಗಿರುತ್ತಾರೆ. ವಾಸ್ತವವಾಗಿ, ಕೆಲವು ಪ್ರಕರಣಗಳಲ್ಲಿ ಅವರ ವಯಸ್ಸು ಮತ್ತು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಕೆಲವು ಸಡಿಲಿಕೆಗಳನ್ನು ಮಾಡಲಾಗಿದೆ. ಹೊಸ ನೌಕರರಾಗಿ ಅವರು ನೇಮಕವಾದ ನಂತರ, ಅವರ ಕೆಲಸಕಾರ್ಯಗಳು ಇಲಾಖೆಗೆ ತೃಪ್ತಿಕರವಾಗುವಂತಿದೆ.

(ದಿನಾಂಕ: 21.8.1969)

## ಟಿಪ್ಪಣಿ

ಶಾಸಕರಾದ ಶ್ರೀ ಕೆ.ಆರ್. ನಾಡಗೌಡರು ಕೇಳಿದ ಪ್ರಶ್ನಾವಳಿಯಲ್ಲಿ ಪಾರಂಪರಿಕ ಗ್ರಾಮಾಧಿಕಾರಿಗಳ ಸ್ಥಾನಮಾನದ ಬಗ್ಗೆ ಮತ್ತು ಗ್ರಾಮಲೆಕ್ಕಿಗರನ್ನು ನೇಮಿಸುವ ಬಗ್ಗೆ ಸರ್ಕಾರದಿಂದ ವಿವರಗಳನ್ನು ಬಯಸಿದ್ದರು. ಅದಕ್ಕೆ ಉತ್ತರಿಸಿದ ಎಚ್.ವಿ. ಕೌಜಲಗಿಯವರು ಪಾರಂಪರಿಕ ಗ್ರಾಮಾಧಿಕಾರಿಗಳ ಹುದ್ದೆಗಳನ್ನು ರದ್ದುಪಡಿಸಲಾಗಿದೆ. ಅವರ ಸ್ಥಾನದಲ್ಲಿ ಪಂಚಾಯಿತಿ ಕಾರ್ಯದರ್ಶಿಗಳನ್ನಾಗಿ ಗ್ರಾಮ ಲೆಕ್ಕಿಗರನ್ನು ನೇಮಿಸಲಾಗುವುದು ಎಂದು ತಿಳಿಸಿದರು.

**ಶ್ರೀ ಹೆಚ್.ವಿ. ಕೌಜಲಗಿ** – ಸರ್ಕಾರ ದುಡ್ಡು ಖರ್ಚು ಮಾಡುವ ಮೊದಲು ಅಲ್ಲಿ ಆದಾಯವೆಷ್ಟು ಬರುತ್ತದೆ. ಅದರಿಂದ ಎಷ್ಟು ಜನರಿಗೆ ಉಪಯೋಗವಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. ತಾವು ಹೇಳಿದಂತೆ ಸರ್ಕಾರದ ದುಡ್ಡನ್ನು ಖರ್ಚು ಮಾಡತಕ್ಕಂಥದ್ದು ಸದ್ಯಕ್ಕೆ ಮುಂದಕ್ಕೆ ಹಾಕಲಾಗಿದೆ.

**ಶ್ರೀ ಎನ್. ಹುಚ್ಚಮಾಸ್ತಿಗೌಡ** – ಈ ಛತ್ರವನ್ನು ಕಟ್ಟುವುದು ಸ್ವಲ್ಪ ನಿಧಾನ ಮಾಡಿ ಕಾವೇರಿ ಕಣಿವೆಯಲ್ಲಿ ನೀರು ಒದಗಿಸತಕ್ಕ ಕಡೆ ಸರ್ಕಾರ ಗಮನ ಕೊಡಬೇಕಾಗಿರುವುದರಿಂದ, ಮುಖ್ಯ ಮಂತ್ರಿಯವರು ಇತ್ತ ಕಡೆ ಹೆಚ್ಚು ಗಮನ ಕೊಟ್ಟು ಛತ್ರಗಳನ್ನು ಕಟ್ಟಿಸುವುದನ್ನು ನಿಲ್ಲಿಸುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಈಗ ಯಾವುದೂ ಹೊಸದು ತೆಗೆದುಕೊಂಡಿಲ್ಲ. ಶ್ರೀ ಶೈಲ ಮಾತ್ರ ತೆಗೆದುಕೊಂಡಿದ್ದೇವೆ. ಬಾಕಿ ಎಲ್ಲಾ ಮುಂದಕ್ಕೆ ಹಾಕಿದ್ದೇವೆ. ಎಲ್ಲೆಲ್ಲಿ ಖರ್ಚು ಮಾಡುತ್ತೇವೆ, ಅಲ್ಲಿ ಎಷ್ಟು ಆದಾಯ ಬರುತ್ತದೆಂಬುದನ್ನೂ ನೋಡಿಕೊಳ್ಳುತ್ತೇವೆ.

**ಶ್ರೀ ಎಂ. ಮಲ್ಲಪ್ಪ** – ವಾರಣಾಸಿಯಲ್ಲಿ ಒಂದು ಛತ್ರ ಇದೆ. ಅಲ್ಲಿರತಕ್ಕ ಕೋಣೆಗಳು ಕಡಿಮೆ ಮತ್ತು ಸೌಕರ್ಯವೂ ಇಲ್ಲ. ಆದ್ದರಿಂದ ಅಲ್ಲಿ ಹೆಚ್ಚಿನ ಕೋಣೆಗಳನ್ನು ಒದಗಿಸಿ ಹೆಚ್ಚು ಸೌಕರ್ಯವನ್ನು ಒದಗಿಸುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಇಲ್ಲಿ ನಮ್ಮ ಜನ ಹೋಗುವಂಥವರು ಬಹಳ ಕಡಿಮೆ, ಮತ್ತು ಅಲ್ಲಿ ಈಗ ಒಂದು ಕರ್ನಾಟಕ ಹೌಸ್ ಎಂದು ಕಟ್ಟಿದ್ದಾರೆ. ಅಲ್ಲಿರತಕ್ಕ ಸೌಕರ್ಯ ಇದೆ. ಇದರಿಂದ ಬೇರೆ ಕಟ್ಟುವ ಅವಶ್ಯಕತೆ ಇಲ್ಲ.

**ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ** – ಕೇವಲ ಉತ್ಪಾದನಾ ಬಾಬುಗಳಿಗೆ ಹಣ ಹಾಕಲು ಸರ್ಕಾರ ನಿಲುವು ತೆಗೆದುಕೊಂಡಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ದೇವಸ್ಥಾನದಿಂದ ಬಂದಂತಹ ದುಡ್ಡು ಮತ್ತು ಪಬ್ಲಿಕ್ ಕಾಂಟ್ರಿಬ್ಯೂಷನ್ ಇದರಿಂದ ನಾವು ಛತ್ರಗಳನ್ನು ಕಟ್ಟಿಸುತ್ತಿದ್ದೇವೆ; ಅಷ್ಟೆ.

(ದಿನಾಂಕ: 28.1.1970)

# ಬೂಕಿನ ಕೆರೆ ಭೂ ಸ್ವಾಧೀನ

1970

**ಶ್ರೀ ಎಂ.ಕೆ. ಬೊಮ್ಮೇಗೌಡ (ಕೆ.ಆರ್. ಪೇಟೆ)** ಮಾನ್ಯ ಸಚಿವರು ದಯವಿಟ್ಟು ಈ ವಿಷಯಗಳ ಬಗ್ಗೆ ಉತ್ತರಿಸುವಿರಾ:–

(ಎ) ಕೃಷ್ಣರಾಜ ಸಾಗರದಡಿಯಲ್ಲಿ ಮುಳುಗಡೆಯಾದ ಪ್ರದೇಶಗಳ ಜನರಿಗೆ ಹಂಚಿಕೆ ಮಾಡುವುದಕ್ಕಾಗಿ ಕೃಷ್ಣರಾಜಪೇಟೆಯ ಬೂಕಿನಕೆರೆಯಲ್ಲಿ ಸ್ವಾಧೀನಪಡಿಸಿಕೊಂಡ ಜಮೀನನ್ನು ಆ ಜನರಿಗೆ ಹಂಚಿಕೆ ಮಾಡಲಾಗಿದೆಯೇ ;

(ಬಿ) ಇಲ್ಲದಿದ್ದರೆ, ವಿಳಂಬಕ್ಕೆ ಕಾರಣಗಳೇನು;

(ಸಿ) ಪದೇಪದೇ ವಶಕ್ಕೊಪ್ಪಿಸುವಂತೆ ತಗಾದೆ ಮಾಡುತ್ತಿರುವ ಬೂಕಿನಕೆರೆ ಗ್ರಾಮ ಪಂಚಾಯತಿಗೆ ಸ್ವಾಧೀನಪಡಿಸಿಕೊಂಡ ಜಮೀನನ್ನು ಒಪ್ಪಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇದೆಯೇ?

**ಶ್ರೀ ಹೆಚ್. ವಿ. ಕೌಜಲಗಿ – (ಕಂದಾಯ ಸಚಿವರು):–**

(ಎ) ಹೌದು, 7 ಎಕರೆ 18 ಗುಂಟೆಗಳನ್ನು ಬಿಟ್ಟು.

(ಬಿ) ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳಾಂತರಗೊಂಡ ರೈತರು ಮನೆಗಳನ್ನು ಕಟ್ಟುವುದಕ್ಕೆ ಭೂಮಿಯ ಹಂಚಿಕೆಗಾಗಿ ಮುಂದೆ ಬರದಿರುವುದರಿಂದ 7 ಎಕರೆ 18 ಗುಂಟೆ ವಿಸ್ತೀರ್ಣದ ಭೂಮಿಯು ಹಂಚಿಕೆಯಾಗದೆ ಉಳಿದಿದೆ.

(ಸಿ) ಪಂಚಾಯತಿಯ ಕೋರಿಕೆ ಪರಿಶೀಲನೆಯಲ್ಲಿದೆ.

**ಶ್ರೀ ಎಂ.ಕೆ. ಬೊಮ್ಮೇಗೌಡ** – ಈ ಜಮೀನು ಯಾವಾಗ ಅಕ್ವೈರ್ ಆದುದು, ಅರ್ಜಿ ಬಂದುದು ಯಾವಾಗ ಎಂದು ಹೇಳುತ್ತೀರಾ?

**ಶ್ರೀ ಹೆಚ್. ವಿ. ಕೌಜಲಗಿ** – ಇದು ಕೃಷ್ಣರಾಜಸಾಗರ ಯೋಜನೆಯ ಮೇರೆಗೆ ಮುಳುಗಡೆಯಾದ ಪ್ರದೇಶದ ಜನರಿಗೆ ಬೇಕಾದ ಜಮೀನು ಅಕ್ವೈರ್ ಮಾಡಿದ್ದು, ಇದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳಿಂದ 1918–20ರ ಕಾಲಕ್ಕೆ ತೆಗೆದುಕೊಂಡದ್ದು ಎಂದು ತಿಳಿದು ಬಂದಿದೆ.

**ಶ್ರೀ ಎಂ.ಕೆ. ಬೊಮ್ಮೇಗೌಡ** – 18–20 ವರ್ಷಗಳಿಂದಲೂ ಆ ಜಮೀನಿನಲ್ಲಿ ಯಾವ ಕೆಲಸ ಕಾರ್ಯವೂ ನಡೆಯದೆ ಇದುವರೆಗೂ ವೇಕೆಂಟ್ ಆಗಿ ಬಿಟ್ಟಿರುವುದಕ್ಕೆ ಕಾರಣವೇನು? ಮನೆ ಕಟ್ಟುವುದಕ್ಕೆ ಗ್ರಾಮ ಪಂಚಾಯಿತಿಯವರು ಆಗಾಗ್ಯೆ ಹೇಳಿದರೂ ಉದಾಸೀನ ಮಾಡಲು ಕಾರಣವೇನು?

**ಶ್ರೀ ಹೆಚ್. ವಿ. ಕೌಜಲಗಿ** – ಇದರಲ್ಲಿ ಯಾವುದೇ ತರದ ಉದಾಸೀನವಾಗಿಲ್ಲ. 1918–20ನೇ ಇಸವಿಯ ಕಾಲಕ್ಕೆ ಮನೆಗಳನ್ನು ಕಟ್ಟುವುದಕ್ಕೆ ಯಾವ ಕೊರತೆಯೂ ಇರಲಿಲ್ಲ. ಆಗಿನ ಸರ್ಕಾರದವರು ಬೇಕಾದಷ್ಟು ಕೊಡುತ್ತಿದ್ದರು. ಪಂಚಾಯಿತಿಯವರೂ ಇಲ್ಲಿ ಕೊಡಬೇಕೆಂದು ಕೇಳುತ್ತಿದ್ದಾರೆ.

**ಶ್ರೀ ಬಿ. ದೊಡ್ಡಬೋರೇಗೌಡ** – 7 ಎಕರೆ 18 ಗುಂಟೆ ಪ್ರದೇಶದ ಜಮೀನನ್ನು ಯಾರಿಗಾದರೂ ದರಖಾಸ್ತು ಕೊಡುವ ಬಗ್ಗೆ ಸರ್ಕಾರದವರು ಯೋಜನೆ ಮಾಡಿದ್ದಾರೆಯೇ?

**ಶ್ರೀ ಹೆಚ್. ವಿ. ಕೌಜಲಗಿ** – ಅದನ್ನು ಪಿ.ಡಬ್ಲ್ಯು.ಡಿ ಯವರು ಅಕ್ವೈರ್ ಮಾಡಿದ್ದು ಯಾರಿಗೂ ಕೊಡುವಂತೆ ವಿಚಾರ ಬಂದಿಲ್ಲ. ಅಂತಹ ಪ್ರಶ್ನೆ ಇಲ್ಲ. ಪಂಚಾಯಿತಿಯವರು ಮಾತ್ರ ಮನೆ ಕಟ್ಟಿಕೊಳ್ಳುವುದಕ್ಕೆ ಅರ್ಜಿ ಕೊಟ್ಟಿದ್ದಾರೆ.

**ಶ್ರೀ ಎಂ.ಕೆ. ಬೊಮ್ಮೇಗೌಡ** – ಈ ವಿಚಾರವಾಗಿ ಪದೇ ಪದೇ ಪಂಚಾಯಿತಿಯವರು ತಮ್ಮ ಊರಿನ ಬಡಾವಣೆಗೋಸ್ಕರ ಅದು ಬಹಳ ಅಗತ್ಯವಿದೆ.

# ಭೂ ಸುಧಾರಣಾ ನ್ಯಾಯಾಧಿಕರಣ ಕುರಿತು

1970

**ಶ್ರೀ ಎಲ್. ಶ್ರೀಕಂಠಯ್ಯ** – ಲ್ಯಾಂಡ್ ರಿಫಾರ್ಮ್ಸ್ ಟ್ರಿಬ್ಯುನಲ್ಸ್ ಕಾನ್‌ಸ್ಟಿಟ್ಯೂಟ್ ಆಗುವುದಕ್ಕೆ ಮುನ್ನ ಅರ್ಜಿಗಳನ್ನು ನೇರವಾಗಿ ಮುನಸೀಫ್ ಕೋರ್ಟಿಗೆ ಕೊಟ್ಟರು. ಟ್ರಿಬ್ಯುನಲ್ಸ್ ಆದ ಮೇಲೆ ಅರ್ಜಿಗಳು ರಿಜಿಸ್ಟರ್ ಅಗುವುದಕ್ಕೆ ಆರು ತಿಂಗಳಾಯಿತು. ಈಗ ಹೊಸದಾಗಿ ಮುನಸೀಫ್ ಕೋರ್ಟಿಗೆ ಜೂರಿಸ್ ಡಿಕ್ಷನ್ ಕೊಟ್ಟಿದ್ದೀರಿ. ಹೀಗೆ ರಿಜಿಸ್ಟರಾಗಲು ಆರು ತಿಂಗಳು ಒಂದು ವರ್ಷವೆಂದರೆ ಯಾವ ಕಾಲಕ್ಕೆ ಒಂದು ಲಕ್ಷ 54 ಸಾವಿರ ಅರ್ಜಿಗಳು ಇತ್ಯರ್ಥವಾಗುತ್ತವೆ ಎಂದು ಅಪ್ಪಣೆ ಕೊಡಿಸುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಕಾಲಮಿತಿಯನ್ನು ನೀಡುವುದಕ್ಕೆ ತುಂಬಾ ಕಷ್ಟವಾಗುತ್ತದೆ. ಆದರೆ ವಿಚಾರಣೆಯನ್ನು ಶೀಘ್ರಗೊಳಿಸುವ ಉದ್ದೇಶದಿಂದ ಈ ನ್ಯಾಯಮಂಡಲಿಗಳನ್ನು ಹೆಚ್ಚಿಸಲಾಗಿದೆ.

**ಶ್ರೀ ಕೆ.ಎಚ್. ರಂಗನಾಥ್** – 82838 ಅರ್ಜಿಗಳು ರಿಸಂಪ್ಷನ್‌ಗೆ ಬಂದಿವೆ ಎಂದು ಹೇಳಿದ್ದಾರೆ. ಇದರಲ್ಲಿ ಡಿಸ್‌ಪೋಸ್ ಆಗಿರುವ ಅರ್ಜಿಗಳೆಷ್ಟು?

**ಶ್ರೀ ಹೆಚ್. ವಿ. ಕೌಜಲಗಿ** – ಆ ಮಾಹಿತಿಯನ್ನು ಕೂಡ ಈ ಕೊನೆಯಲ್ಲಿ ನೀಡಲಾಗಿದೆಯೆಂದು ಭಾವಿಸುತ್ತೇನೆ.

**ಶ್ರೀ ಎಂ.ಎಂ. ಜಾಲಸೆಟ್ಟಿ** – ಸಕಾಲದಲ್ಲಿ ಸರಿಯಾದ ರೇಟ್ ಪ್ರೊಕ್ಲಮೇಶನ್ ಕೊಡದೆ ಉತ್ತರ ಕನ್ನಡ ಜಿಲ್ಲೆಯಲ್ಲಿ 34,825, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 29048 ಈ ತರಹ ಅಪ್ಲಿಕೇಶನ್‌ಗಳು ಪೆಂಡಿಂಗ್ ಇದೆ. ಈ ತರಹ ಆಗದೆ ಇರಲು ಇನ್ನು ಮುಂದಾದರೂ ಸಕಾಲದಲ್ಲಿ ರೇಟ್ ನೋಟಿಫಿಕೇಶನ್ ಹೊರಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಕೆಲವು ಬಾಗದಲ್ಲಿ ನೋಟಿಫಿಕೇಷನ್‌ಗಳಲ್ಲಿ ಸ್ವಲ್ಪ ತಪ್ಪಾಗಿ ಕೊಟ್ಟಿದ್ದು ನಿಜ. ಅದರ ಮೇಲೆ ಕೆಲವು ರಿಟ್‌ಗಳು ಹೈಕೋರ್ಟಿಗೆ ಬಂದು ಆ ತರಹ ತಪ್ಪುಗಳಾಗದಂತೆ ನೋಡಿಕೊಳ್ಳಲು ಸೂಚನೆ ಕೊಟ್ಟಿದ್ದೇವೆ.

**ಶ್ರೀ ಎಸ್.ಆರ್. ಬೊಮ್ಮಾಯಿ** – ಈಚೆಗೆ ನಡೆದ ಎಲ್ಲಾ ಮಾನ್ಯ ಮುಖ್ಯಮಂತ್ರಿಗಳ ಸಭೆಯಲ್ಲಿ ಗೇಣಿ ಪದ್ಧತಿಯನ್ನು 1970ರ ಅಂತ್ಯದೊಳಗೆ ಕೊನೆಗೊಳಿಸಬೇಕು ಎಂಬುದಾಗಿ ನಿರ್ಣಯ ಮಾಡಲಾಗಿದೆ ಎಂದು ಕೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಇದು ಅಮಲಿನಲ್ಲಿ ಬರಬೇಕಾದರೆ ಒಂದು ದಿವಸವನ್ನು ನಿರ್ಣಯ ಮಾಡಿ ಅಷ್ಟರೊಳಗೆ ಎಲ್ಲ ಅರ್ಜಿಗಳನ್ನೂ ನಿಕಾಲಿ ಮಾಡುವುದಕ್ಕೆ ಆದೇಶ

ಕೊಡುತ್ತೀರಾ? ಇಲ್ಲದೆ ಹೋದರೆ ಇದೇ ರೀತಿಯಲ್ಲಿ ಮುಂದುವರೆದರೆ ಇನ್ನು ಹತ್ತು ವರ್ಷವಾದರೂ ಈ ಪ್ರಶ್ನೆ ಬಗೆ ಹರಿಯದೆ ಮುಂದು ಹೋಗುತ್ತದೆ. ಆದ್ದರಿಂದ ಒಂದು ನಿರ್ದಿಷ್ಟವಾದ ಅವಧಿಯನ್ನು ಸರ್ಕಾರದವರು ಗೊತ್ತು ಮಾಡುವುದಕ್ಕೆ ಒಪ್ಪುತ್ತಾರೆಯೇ?

**ಶ್ರೀ ಹೆಚ್. ವಿ. ಕೌಜಲಗಿ** – ಒಂದು ನಿರ್ದಿಷ್ಟ ಅವಧಿ ಅಥವಾ ತಾರೀಖು ಕೊಡಲಿಕ್ಕೆ ಬರುವುದಿಲ್ಲ. ಆದರೆ ತೀವ್ರ ಅದರ ವಿಚಾರ ಆಗಬೇಕೆಂದು ಮಾತ್ರ ನಾನು ಅವರಿಗೆ ವಿನಂತಿ ಮಾಡಿಕೊಂಡಿದ್ದೇವೆ. ಕೆಲವರು ಅಪೀಲ್ ಹೋಗುತ್ತಾರೆ. ರಿವಿಷನ್ನಿಗೆ ಹೋಗುತ್ತಾರೆ. ಹೈಕೋರ್ಟಿಗೆ ಸಹಿತ ಹೋಗುತ್ತಾರೆ. ಆದ್ದರಿಂದ ನಿರ್ದಿಷ್ಟ ಅವಧಿ ಹಾಕುವುದು ಕಷ್ಟ.

**ಶ್ರೀ ಎ.ಆರ್. ಬದ್ರಿನಾರಾಯಣ್** – ಒಟ್ಟು 1,94,198 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಭೂಮಿಯನ್ನು ವಾಪಸು ಪಡೆಯಲು ಒಟ್ಟು 82,838 ಅರ್ಜಿಗಳು ಬಂದಿವೆ. ಬಾಕಿ ಇಡುವುದು 1,12,000. ಇಡೀ ಭೂ ಪ್ರದೇಶವನ್ನು ಮರಳಿ ಸ್ವಾಧೀನತೆಯನ್ನು ಪಡೆಯದ ಪ್ರದೇಶವೆಂದು ಅಧಿಸೂಚಿಸುವವರೆಗೂ ಎಲ್ಲ ವ್ಯವಹರಣೆಗಳಿಗೂ ತಡೆಯೊಡ್ಡಿರುವುದೇಕೆ? ಇತರ ವ್ಯವಹರಣೆಗಳನ್ನು ಮುಂದುವರಿಸಬಾರದೇಕೆ? ಅಧಿನಿಯಮಕ್ಕೆ ತಿದ್ದುಪಡಿ ತರಬಾರದೇಕೆ?

**ಶ್ರೀ ಹೆಚ್.ವಿ. ಕೌಜಲಗಿ** – ಭೂಮಿಯ ಮರಳಿ ಸ್ವಾಧೀನತೆ ಕೋರಿ ಒಟ್ಟು 82,000 ಕ್ಕೂ ಹೆಚ್ಚು ಅರ್ಜಿಗಳು ಬಂದಿವೆ. ಆದರೆ ಇತರ ಅರ್ಜಿಗಳು ಗೇಣಿ ಅವಧಿಯ ಮುಂದುವರಿಕೆ, ಬಾಡಿಗೆಯನ್ನು ಇತ್ಯರ್ಥಪಡಿಸುವಿಕೆ ಮೊದಲಾದವುಗಳಿಗೆ ಸಂಬಂಧಪಟ್ಟವುಗಳಾಗಿವೆ. ಯಾವುದೇ ಭೂಮಿಯನ್ನು ಹಿಂದಕ್ಕೆ ಪಡೆಯಲಾಗಿಲ್ಲ. ನಾವು ಹೆಚ್ಚುವರಿ ಮುನ್ಸೀಫರನ್ನು ನೇಮಕ ಮಾಡಿದ್ದೇವೆ. ಜಮೀನನ್ನು ಸ್ವಾಧೀನತೆಗೆ ತೆಗೆದುಕೊಳ್ಳುವ ಅಧಿಕಾರವನ್ನು ತಹಸೀಲ್ದಾರರವರಿಗೆ ನೀಡಲಾಗಿದೆ.

**ಶ್ರೀ ಎ.ಆರ್. ಬದ್ರಿನಾರಾಯಣ್** – ನನ್ನ ಪ್ರಶ್ನೆ ಅರ್ಥವಾಗಿಲ್ಲ. ಹಿಂದಕ್ಕೆ ಪಡೆಯುವ ಎಲ್ಲ ಪ್ರಕರಣಗಳು ಇತ್ಯರ್ಥವಾಗುವವರೆಗೆ ಒಂದು ನಿರ್ದಿಷ್ಟ ಕಾರ್ಯ ವ್ಯಾಪ್ತಿಯಲ್ಲಿ ಇತರ ವ್ಯವಹರಣೆಗಳನ್ನು ನಡೆಸಲಾಗದು. ಹೀಗಾಗಿ ಅಧಿನಿಯಮಕ್ಕೆ ತಿದ್ದುಪಡಿಯನ್ನು ಏಕೆ ತರಬಾರದು?

**ಶ್ರೀ ಹೆಚ್.ವಿ. ಕೌಜಲಗಿ** – ಅಂಥ ಪ್ರಮೇಯ ಇಲ್ಲ. ಅಂತಹ ಭೂಮಿಯನ್ನು ವಶಕ್ಕೆ ತೆಗೆದುಕೊಂಡು ಅದನ್ನು ಹಂಚಿಕೆ ಮಾಡಬಹುದು.

**ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ** – ಅನುಬಂಧ (ಸಿ)ಯಲ್ಲಿ, ಒಂದು ತಾಲೂಕಿನಲ್ಲಿ ವಿಲೇಯಾಗಬೇಕಿರುವ ಅರ್ಜಿಗಳ ಸಂಖ್ಯೆ 5,000ಕ್ಕೂ ಹೆಚ್ಚಿರುವುದನ್ನು ಕಾಣಬಹುದು. ಹೀಗಾಗಿ ವಾಸ್ತವವಾಗಿ ಒಬ್ಬರು ಹೊರುವುದಕ್ಕಿಂತಲೂ ಹೆಚ್ಚಿನ ಕಾರ್ಯಭಾರವೆಂಬುದು ನಿಜ ಸಂಗತಿಯಲ್ಲವೆ? ಆದ್ದರಿಂದ ಸರ್ಕಾರವು ಅಂತಹ ಪ್ರಕರಣಗಳಲ್ಲಿ ಮತ್ತೊಂದು ನ್ಯಾಯಾಧಿಕರಣವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಆಲೋಚನೆ ನಡೆಸಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಈ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವ ಸಂದರ್ಭದಲ್ಲಿ ಈ ಅಂಕಿಅಂಶಗಳನ್ನು ನೀಡಲಾಗಿತ್ತು. ಪ್ರಸ್ತುತ ಈ ಪ್ರಕರಣಗಳ ಬಗ್ಗೆ ವ್ಯವಹರಿಸುವ ಅಧಿಕಾರವನ್ನು ಎಲ್ಲ ಮುನ್ಸೀಫರಿಗೂ ನೀಡಲಾಗಿದೆ. ಹೀಗಾಗಿ ಈ ಅರ್ಜಿಗಳನ್ನು ವಿವಿಧ ನ್ಯಾಯಾಲಯಗಳಿಗೆ ಹಂಚಿಕೆ ಮಾಡಲಾಗುವುದು.

**ಶ್ರೀಮತಿ ವಿನ್ನಿಫ್ರೆಡ್ ಎಸ್. ಫರ್ನಾಂಡಿಸ್** – ಕೊಂಡಾಪುರದಲ್ಲಿ, ಸ್ವೀಕರಿಸಲಾದ 8680 ಅರ್ಜಿಗಳ ಪೈಕಿ, ಕೇವಲ 920 ಅರ್ಜಿಗಳನ್ನು ಮಾತ್ರ ವಿಲೆ ಮಾಡಲಾಗಿದ್ದು 7760 ಅರ್ಜಿಗಳು ವಿಲೆಯಾಗಬೇಕಿದೆ. ಪ್ರಕರಣಗಳನ್ನು ವಿಲೆ ಮಾಡುವುದಕ್ಕೆ ಮೂರು ವರ್ಷಗಳ ಸುದೀರ್ಘ ವಿಳಂಬಕ್ಕೆ ಕಾರಣಗಳೇನು?

**ಶ್ರೀ ಹೆಚ್.ವಿ. ಕೌಜಲಗಿ** – ಇದ್ದರೂ ಇರಬಹುದು, ಅದಕ್ಕೆ ನಾನು ಯಾವ ಕಾರಣಗಳನ್ನು ನೀಡಲಾರೆ. ವಿಳಂಬವಾಗಿದೆ. ಆದರೆ ಈ ಮುನ್ಸೀಫರು ಕೆಲವು ನ್ಯಾಯಾಲಯಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರಗಳನ್ನು ಚಲಾಯಿಸುತ್ತಾರೆಂಬ ವಿಷಯ ಮಾನ್ಯ ಸದಸ್ಯರಿಗೆ ತಿಳಿದಿರಬಹುದು.

**ಶ್ರೀ ಎಂ. ನಾಗಪ್ಪ** – ಮಾನ್ಯ ಮಂತ್ರಿಗಳು ಹೇಳಿದಂತೆ ಅಪೀಲ್ ಹೋಗುತ್ತಾರೆ. ರಿವಿಷನ್‌ಗೆ ಹೋಗುತ್ತಾರೆ. ಈ ಕೇಸ್‌ಗಳನ್ನು ಮುನಸೀಫರ ಕೋರ್ಟಿನಲ್ಲಿ ಪ್ರತಿನಿತ್ಯ ವಿಚಾರಣೆ ಮಾಡುವಂಥ ತಿದ್ದುಪಡಿ, ಅಪೀಲನ್ನು ಎರಡು ಮೂರು ತಿಂಗಳಲ್ಲಿ ಮುಗಿಸತಕ್ಕ ತಿದ್ದುಪಡಿ, ರಿವಿಷನ್‌ನಲ್ಲಿ ಸಹಿತ ಇಂತಿಷ್ಟು ಅವಧಿಯಲ್ಲಿ ಆ ಕೇಸ್‌ಗಳನ್ನು ಇತ್ಯರ್ಥ ಮಾಡಬೇಕು ಎನ್ನುವ ತಿದ್ದುಪಡಿ ಇವುಗಳನ್ನು ತಂದರೆ ಆದಷ್ಟು ತೀವ್ರವಾಗಿ ಈ ಕೇಸುಗಳು ಇತ್ಯರ್ಥವಾಗುವುದಕ್ಕೆ ಅನುಕೂಲವಾಗುತ್ತದೆ. ಅಂಥ ತಿದ್ದುಪಡಿಯನ್ನು ತಂದು ಆದಷ್ಟು ತೀವ್ರ ಕೇಸುಗಳನ್ನು ಇತ್ಯರ್ಥ ಮಾಡುವುದಕ್ಕೆ ಸಹಕಾರ ಮಾಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಆ ತರಹ ತಿದ್ದುಪಡಿಗಳನ್ನು ತರುವುದು ಅವಶ್ಯವೆನಿಸುವುದಿಲ್ಲ. ಎಲ್ಲ ಮುನಸೀಫರಿಗೂ ಈ ತರಹ ಅರ್ಜಿಗಳನ್ನು ಚೌಕಾಸಿ ಮಾಡಲಿಕ್ಕೆ ಅಧಿಕಾರ ಕೊಟ್ಟಿದೆ ಮತ್ತು ನಾವು ಅವರಿಗೆ ತೀವ್ರವಾಗಿ ಚೌಕಾಸಿ ಮಾಡಿ ವಿಲೇವಾರಿ ಮಾಡಬೇಕೆಂದು ಹೇಳಿದ್ದೇವೆ. ನಮ್ಮ ಮುಂದಿನ ಅನುಭವದಿಂದ ಯಾವ ರೀತಿ ಮಾಡಬೇಕೆಂದು ನೋಡಬೇಕು.

**ಶ್ರೀ ಬೋಳರಘುರಾಮ ಶೆಟ್ಟಿ** – ಕೋರ್ಟಿನಲ್ಲಿ ರೆಂಟ್ ರಿಕವರಿ ಆಗಬೇಕಾದರೆ ಅದಕ್ಕೆ ಅಸಿಸ್ಟೆಂಟ್ ಕಮೀಶನರ್ ಮತ್ತು ತಹಶೀಲ್ದಾರರು ನೋಟಿಫಿಕೇಶನ್ ಹೊರಡಿಸಬೇಕು. ಈ ಮೊದಲು ಆದಂಥ ನೋಟಿಫಿಕೇಶನ್ ಕ್ಯಾನ್ಸಲ್ ಆಗಿ ಐದು ವರ್ಷದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿ ವಸೂಲು ಆಗಿಲ್ಲ. ಆದ್ದರಿಂದ ಇಂಟೆರೀಂ ಆಗಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಗೇಣಿಯನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಲಾಗುವುದೇ?

**ಶ್ರೀ ಹೆಚ್.ವಿ. ಕೌಜಲಗಿ** – ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿದ್ದು ನೋಟಿಫಿಕೇಶನ್‌ನಲ್ಲಿ ಕೆಲವು ತಪ್ಪುಗಳು ಆದುದರಿಂದ ಮತ್ತು ಆ ವಿಷಯಗಳು ಹೈಕೋರ್ಟಿಗೆ ಹೋದುದರಿಂದ ಕೆಲವು ಮಟ್ಟಿಗೆ ನಿಧಾನವಾಗಿದೆ. ಆದರೆ ಸೆಕ್ಷನ್ನು 8ನ್ನು ತಿದ್ದುಪಡಿ ಮಾಡಬೇಕು ಎನ್ನುವ ವಿಚಾರ ಸರ್ಕಾರಕ್ಕೆ ಇಲ್ಲ.

**ಶ್ರೀಮತಿ ಕೆ. ಲೀಲಾವತಿ ರೈ** – ಬಂಡವಾಳದಲ್ಲಿ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಡಿಸ್‌ಪೋಸಲ್ 21, ಪೆಂಡಿಂಗ್ ಕೇಸಸ್ 1153. ಇದು ಈ ತಾರೀಖಿನವರೆಗಿನ ಅಂಕಿಅಂಶಗಳೋ ಅಥವಾ ಯಾವ ತಾರೀಖಿನವರೆಗೆ ಕೊಡಲಾಗಿದೆ.

**ಶ್ರೀ ಹೆಚ್.ವಿ. ಕೌಜಲಗಿ** – ಪ್ರಶ್ನೆ ಕೇಳಿದ ತಾರೀಖಿನ ತನಕ ಕೊಟ್ಟಿದೆ.

**ಶ್ರೀ ಎಚ್. ಸಿದ್ಧವೀರಪ್ಪ** – ನೋಟಿಫಿಕೇಶನ್ ತಪ್ಪು ಕೊಟ್ಟುದರಿಂದ ಈ ಕಾರ್ಯ ಹಿಂದಕ್ಕೆ ಹೋಯಿತು ಎಂದು ಹೇಳಿದ್ದಾರೆ. ಹೈಕೋರ್ಟಿನಲ್ಲಿ ಚಾಲೆಂಜ್ ಮಾಡಿದರು ಎಂದು ಹೇಳಿದ್ದಾರೆ. ನೋಟಿಫಿಕೇಶನ್ ಹೊರಡಿಸುವುದರಲ್ಲಿ ಯಾರು ತಪ್ಪು ಮಾಡಿದರು ಏತಕ್ಕೋಸ್ಕರ ಮಾಡಿದರು? ಹಾಗೆ ಮಾಡಿದ್ದರಿಂದ ಭೂ ಸುಧಾರಣೆ ಕೆಲಸ ಹಿಂದಕ್ಕೆ ಹೋಯಿತು ಎಂದರೆ ಏಕೆ ಹೋಯಿತು ಎನ್ನುವುದನ್ನು ತನಿಖೆ ಮಾಡಿದ್ದೀರಾ? ಭೂ ಸುಧಾರಣೆಯ ಕಾರ್ಯವನ್ನು ಐದು ವರ್ಷಗಳಲ್ಲಿ ಪೂರೈಸತಕ್ಕ ಭರವಸೆ ಇದೆ ಎಂದು ಹೇಳಿದ್ದಾರೆ. ಆ ರೀತಿ ಹೇಳಿದ್ದಾರೆಯೇ, ಇಲ್ಲವೇ ಎನ್ನುವುದನ್ನು ತಿಳಿಸುತ್ತಾರೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ನೋಟಿಫಿಕೇಶನ್‌ನಲ್ಲಿ ತಪ್ಪು ಇದ್ದುದ್ದು ಮತ್ತು ನಿಧಾನವಾದುದು ಇಲ್ಲ. ರೆಂಟ್ ರಿಕವರಿ ಸಂಬಂಧದಲ್ಲಿ ರೆಸಂಪ್‌ಷನ್ ಅಪ್ಲಿಕೇಶನ್ ವಿಚಾರದಲ್ಲಿ ತಪ್ಪೂ ಆಗಿಲ್ಲ, ತಡವೂ ಆಗಿಲ್ಲ. ಕೆಲವರಿಗೆ ಕಾಯಿದೆ ಅರ್ಥ ಮಾಡಿಕೊಳ್ಳಲು ಆಗದ್ದರಿಂದ ಕೆಲವು ತಹಸೀಲ್ದಾರರು ತಪ್ಪು ನೋಟಿಫಿಕೇಶನ್ ಕೊಟ್ಟಿದ್ದರು. ರಿಸೆಂಪ್‌ಷನ್ ಅಪ್ಲಿಕೇಶನ್‌ಗಳೇನಿವೆ ಅವುಗಳನ್ನು ಸಾಧ್ಯವಾದಷ್ಟೂ ಐದು ವರ್ಷದೊಳಗೆ ವಿಲೇವಾರಿ ಮಾಡುತ್ತೇವೆ ಎಂದು ಹೇಳಿದ್ದು ಸತ್ಯವಿದೆ. ಆ ರೀತಿ ಮಾಡಲು ಸಾಧ್ಯವಿದೆ ಎಂದು ಈಗಲೂ ಕೂಡ ಹೇಳುತ್ತೇವೆ.

**ಶ್ರೀ ಬಿ.ಎಂ. ಇದಿನಬ್ಬ** – ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರ್ಜಿಗಳ ವಿಲೇವಾರಿ ಆಗಲಿಕ್ಕೆ ಐದು, ಹತ್ತು ವರ್ಷಗಳಾಗಬಹುದು ಅಲ್ಲವೇ?

**ಶ್ರೀ ಹೆಚ್.ವಿ. ಕೌಜಲಗಿ** – ಹಾಗೆ ಆಗುವುದಿಲ್ಲ. ಬೇಗನೆ ತೀರ್ಮಾನ ಮಾಡುವುದಕ್ಕೆ ಹೆಚ್ಚು ಕೋರ್ಟುಗಳನ್ನು ಮಾಡಿದೆ.

**ಶ್ರೀ ಅಜೀಜ್ ಶೇಠ್** – ಸ್ವಾಮಿ ಈ ಲ್ಯಾಂಡ್ ರಿಫಾರ್ಮ್ಸ್ ಪ್ರಕಾರ ಜಾಯಿಂಟ್ ಫ್ಯಾಮಿಲಿ ಲ್ಯಾಂಡ್ಸ್ ರಿಜ್ಯೂಮ್ ಮಾಡಿಕೊಂಡರೆ ಪಾರ್ಟಿಶನ್ ಸೂಟ್‌ಕೇಸುಗಳು ತಪ್ಪಿಸಿಕೊಳ್ಳುತ್ತವೆ ಎಂಬುದನ್ನು ಯೋಜನೆ ಮಾಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಅದು ಕಾಯಿದೆ ಪ್ರಶ್ನೆ. ಅದಕ್ಕೆ ಉತ್ತರ ಕೊಡುವುದು ಸಾಧ್ಯವಿಲ್ಲ.

**ಶ್ರೀ ಡಿ.ಬಿ. ಕಲ್ಮಣಕರ್** – ಕಳೆದ ಐದು ವರ್ಷಗಳಲ್ಲಿ 54.585 ಅರ್ಜಿಗಳನ್ನು ಮಾತ್ರ ವಿಲೆ ಮಾಡಲಾಗಿದೆಯೆಂದು ಹೇಳಲಾಗಿದೆ. ಇದೇ ರೀತಿ ಮುಂದುವರಿದರೆ ಉಳಿದ 1,39,613 ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ಎಷ್ಟು ವರ್ಷಗಳಾಗಬಹುದು ಮತ್ತು ಸರ್ಕಾರ ಭೂರಹಿತರಿಗೆ ಪುನಃ ಸ್ವಾಧೀನತೆ ಪಡೆಯಲಾಗದ ಜಮೀನು ವಿತರಿಸುವುದಕ್ಕಾಗಿ ಯಾವಾಗ ವಶಪಡಿಸಿಕೊಳ್ಳುವುದು?

**ಶ್ರೀ ಹೆಚ್.ವಿ. ಕೌಜಲಗಿ** – ನಾನು ಆಗಲೇ ಹೇಳಿದ ಹಾಗೆ ಆರಂಭದಲ್ಲಿ ಸ್ವಲ್ಪ ತಡ ಆಗಿದೆ. ಆದರೆ ಆಮೇಲೆ ಕೆಲಸ ಬ್ರಿಸ್ಕಾಗಿ ನಡೆದಿದೆ. ಐದು ವರ್ಷಗಳಲ್ಲಿ ಈ ಕೆಲಸ ಮುಗಿಸಲು ಸಾಧ್ಯವಾಗಬಹುದು

**ಶ್ರೀ ಡಿ. ದೇವರಾಜ್ ಅರಸ್** – ಇತ್ತೀಚೆಗೆ ದೆಹಲ್ಲಿಯಲ್ಲಿ ಮುಖ್ಯ ಮಂತ್ರಿಗಳ ಸಮ್ಮೇಳನ ನಡೆಯಿತು. ಸಾಧ್ಯವಾದಷ್ಟು ಬೇಗನೆ ಭೂಸುಧಾರಣೆಗಳನ್ನು ಅನುಷ್ಠಾನಗೊಳಿಸಬೇಕೆಂದು ಆ ಸಮ್ಮೇಳನದಲ್ಲಿ ನಿರ್ಣಯಿಸಿದ್ದು ನಿಜವಲ್ಲವೇ? ಅನುಷ್ಠಾನಗೊಳಿಸುವುದಕ್ಕೆ ಐದು ವರ್ಷಗಳು ಬೇಕಾಗುತ್ತದೆ ಎಂದು ಕೊಟ್ಟಿರುವ ಉತ್ತರಕ್ಕೆ ಅನುಸಾರವಾಗಿ ಅತೀ ಶೀಘ್ರಸಾಧ್ಯ ಕಾಲದೊಳಗೆ ಭೂಸುಧಾರಣೆಗಳನ್ನು ಅನುಷ್ಠಾನಗೊಳಿಸುತ್ತೇವೆನ್ನುವ ಕಾಲ ಐದು ವರ್ಷಗಳು ಎಂದು ಭಾವಿಸೋಣವೇ?

**ಶ್ರೀ ಹೆಚ್.ವಿ. ಕೌಜಲಗಿ** – ಆ ಕಾನ್‌ಫರನ್ಸ್‌ನಲ್ಲಿ ಆದಷ್ಟು ಜಾಗ್ರತೆಯಾಗಿ ಈ ಕಾಯಿದೆ ಪ್ರತಿಯೊಂದು ಪ್ರಾಂತದಲ್ಲಿ ಅಮಲ ಬಜವಾಣಿ ಮಾಡಬೇಕೆಂದು ನಿರ್ಣಯವಾಗಿದ್ದು ನಿಜ. ಆದರೆ ಬಾಕಿ ಸ್ಟೇಟ್‌ಗಳೊಡನೆ ನಮ್ಮ ರಾಜ್ಯವನ್ನು ಕಂಪೇರ್ ಮಾಡಿ ನೋಡಿದರೆ ನಾವು ಎಲ್ಲರಿಗಿಂತ ಬಹಳ ಮುಂದುವರಿದಿದ್ದೇವೆ ಎಂದು ಅನ್ನಿಸುತ್ತದೆ. ನಾಲ್ಕೈದು ವರ್ಷಳಲ್ಲಿ ಈ ಕೆಲಸ ಮುಗಿಸಲು ಸಾಧ್ಯವಾಗುತ್ತದೆ.

**ಶ್ರೀ ವಿ.ಎನ್. ಪಾಟೀಲ್** – ಮುಖ್ಯ ಮಂತ್ರಿಯವರು ನೀಡಿರುವ ಹೇಳಿಕೆಯನ್ನು ಓದಿರುವುದು ನನಗೆ ನೆನಪಿದೆ. ಅವರು ಮೈಸೂರಿನಲ್ಲಿ ಎರಡು ವರ್ಷದೊಳಗೆ ಭೂಸುಧಾರಣೆಗಳನ್ನು ಜಾರಿಗೊಳಿಸುತ್ತೇವೆಯೆಂದು ಹೇಳಿರುತ್ತಾರೆ. ಆದರೆ, ಕಂದಾಯ ಸಚಿವರು ಐದು ವರ್ಷಗಳನ್ನು ತೆಗೆದುಕೊಳ್ಳುತ್ತದೆಯೆಂದು ಹೇಳುತ್ತಿದ್ದಾರೆ. ಒಂದು ವೇಳೆ ತ್ವರಿತ ವಿಧಾನವನ್ನು ಅಳವಡಿಸಿಕೊಂಡರೆ, ಇಡೀ ಭೂಮಿ ಸರ್ಕಾರದಲ್ಲಿ ನಿಹಿತವಾಗಿದ್ದರೆ, ಕೇರಳದಲ್ಲಿ ಮಾಡಿದಂತೆ ಒಂದು ವರ್ಷದಲ್ಲಿ ಇಡೀ ಭೂಮಿಯನ್ನು ಹಂಚಿಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

**ಶ್ರೀ ಹೆಚ್.ವಿ. ಕೌಜಲಗಿ** – ಮುಖ್ಯ ಮಂತ್ರಿಯವರು ಸರ್ಕಾರೀ ಬಂಜರು ಭೂಮಿಯನ್ನು ಎರಡು ವರ್ಷದೊಳಗೆ ಹಂಚಿಕೆ ಮಾಡಲಾಗುತ್ತದೆ ಎಂದು ಹೇಳಿರುತ್ತಾರೆ. ಮತ್ತು ಅವರು ಸಂಪೂರ್ಣ ಕಾರ್ಯವನ್ನೇ ಎರಡು ವರ್ಷದೊಳಗೆ ಜಾರಿಗೊಳಿಸಲಾಗುವುದೆಂದು ಹೇಳಿರುತ್ತಾರೆ ಎಂದು ನಾನು ಭಾವಿಸುವುದಿಲ್ಲ.

(ದಿನಾಂಕ: 28.1.1970)

## ಟಿಪ್ಪಣಿ

ಭೂಸುಧಾರಣೆ ಕಾಯಿದೆ ಜಾರಿಗೆ ಬಂದಾಗಿನಿಂದ ಸಾವಿರಾರು ಅರ್ಜಿಗಳು ಭೂಸುಧಾರಣಾ ನ್ಯಾಯಧಿಕರಣಕ್ಕೆ ಸಲ್ಲಿಸಲ್ಪಟ್ಟವು. ಈ ಅರ್ಜಿಗಳ ವಿಲೇವಾರಿ ತಡವಾಗುತ್ತಿದ್ದುದರ ಬಗ್ಗೆ ಸರ್ಕಾರದ ಗಮನ ಸೆಳೆಯಲು ಶಾಸಕ ಶ್ರೀ ಎಲ್. ಶ್ರೀಕಂಠಯ್ಯನವರು ಪ್ರಶ್ನೆ ಕೇಳಿದರು. ಅದಕ್ಕೆ ಉತ್ತರಿಸಿದ ಶ್ರೀ **ಎಚ್.ವಿ. ಕೌಜಲಗಿಯವರು** ಈ ತಕರಾರುಗಳು ಮತ್ತು ಮನವಿಗಳ ಇತ್ಯರ್ಥಕ್ಕೆ ಕಾಲಮಿತಿ ನಿಗದಿಪಡಿಸುವುದು ಕಷ್ಟ. ಆದರೆ ಅವುಗಳ ಶೀಘ್ರ ವಿಲೇವಾರಿಗಾಗಿ ನ್ಯಾಯಾಧಿಕರಣಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ ಎಂದು ತಿಳಿಸಿದರು. ಈ ವಿಷಯ ಕುರಿತು ಚರ್ಚೆಯಲ್ಲಿ ಪಾಲ್ಗೊಂಡ

# ಭೂರಹಿತ ರೈತರಿಗೆ ವಿತರಿಸಲು ಲಭ್ಯವಿರುವ ಭೂಮಿ

1970

**ಶ್ರೀ ಎಂ.ಎಸ್. ಕೃಷ್ಣನ್ (ಮಲ್ಲೇಶ್ವರಂ)** – ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳಿಗೆ ಉತ್ತರಿಸುವರೇ?

ಎ) ರಾಜ್ಯದಲ್ಲಿ ಭೂರಹಿತ ರೈತರಿಗೆ ವಿತರಿಸುವುದಕ್ಕೆ ಲಭ್ಯವಿರುವ ಸರ್ಕಾರಿ ಜಮೀನು ಎಷ್ಟು ಇದೆ? (ಜಿಲ್ಲಾವಾರು ಅಂಕಿಗಳನ್ನು ನೀಡಬೇಕು);

ಬಿ) ಕಳೆದ ಮೂರು ವರ್ಷಗಳಲ್ಲಿ ಭೂರಹಿತರಿಗೆ ಹಾಗು ಕೃಷಿ ಕಾರ್ಮಿಕರಿಗೆ ಎಷ್ಟು ಎಕರೆ ಜಮೀನನ್ನು ವಿತರಿಸಲಾಗಿದೆ? (ವಾರ್ಷಿಕವಾರು ಮತ್ತು ಜಿಲ್ಲಾವಾರು ಅಂಕಿಗಳನ್ನು ನೀಡಬೇಕು);

ಸಿ) ಕೃಷಿ ಕಾರ್ಮಿಕರಲ್ಲಿ ಕೆಲವೇ ಕೆಲವರಿಗೆ ಮಾತ್ರ ಸರ್ಕಾರ ಜಮೀನು ಮಂಜೂರು ಮಾಡಿರುವ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ, ಆ ಜಮೀನನ್ನು ಭೂರಹಿತರಿಗೆ ಹಾಗೂ ವಿಶೇಷವಾಗಿ ಕೃಷಿ ಕಾರ್ಮಿಕರಿಗೆ ವಿತರಣೆಯಾಗುವಂತೆ ನೋಡಿಕೊಳ್ಳುವ ಸಲುವಾಗಿ ಸರ್ಕಾರ ತೆಗೆದುಕೊಳ್ಳಲು ಉದ್ದೇಶಿಸಿರುವ ಅಥವಾ ತೆಗೆದುಕೊಂಡಿರುವ ಕ್ರಮಗಳೇನು?

(ಡಿ) ಭೂರಹಿತರಿಗೆ ಜಮೀನನ್ನು ಜಂಟಿಯಾಗಿ ವಿತರಿಸಲು ಸರ್ಕಾರ ಈಗ ರೂಪಿಸಿದ ಕಾರ್ಯತಂತ್ರವೇನು ಮತ್ತು ಈ ಸಂಬಂಧದಲ್ಲಿ ಈಗಾಗಲೇ ತೆಗೆದುಕೊಂಡ ಕ್ರಮಗಳೇನು?

**ಶ್ರೀ ಹೆಚ್.ವಿ. ಕೌಜಲಗಿ (ಕಂದಾಯ ಸಚಿವರು)** –

(ಎ) ಮತ್ತು (ಬಿ)ಗೆ – ಲಗತ್ತಿಸಿರುವ ವಿವರಣೆಗಳನ್ನು ನೋಡಿ;

(ಸಿ) ಇಲ್ಲ. ಸರ್ಕಾರಿ ಜಮೀನು ವಿತರಣೆಯಲ್ಲಿ ಬಡವರಿಗೆ ಹಾಗೂ ಭೂರಹಿತ ವ್ಯಕ್ತಿಗಳಿಗೆ ಮತ್ತು ಅರ್ಹ ಪ್ರಕರಣಗಳಲ್ಲಿ ಗರಿಷ್ಠ 500 ರೂಪಾಯಿಗಳವರೆಗೆ ನಿಗದಿತ ಕನಿಷ್ಠ ಬೆಲೆಯನ್ನು ಮನ್ನಾ ಮಾಡಲು ಹೆಚ್ಚಿನ ಆದ್ಯತೆ ನೀಡಲಾಗಿದೆ.

(ಡಿ) ತ್ವರಿತ ಭೂ ವಿಲೇವಾರಿಯಾಗುವಂತೆ ಮಾಡುವ ಸಲುವಾಗಿ ಭೂ ನೀಡಿಕೆ ನಿಯಮಗಳನ್ನು ಸರಳೀಕರಿಸಲಾಗಿದೆ ಮತ್ತು ಮೈಸೂರು ಭೂ ನೀಡಿಕೆ ನಿಯಮಗಳು, 1969ರಲ್ಲಿ ತಾಲ್ಲೂಕು ಮಟ್ಟದಲ್ಲಿ ಸರ್ಕಾರಿ ಹಾಗೂ ಸರ್ಕಾರೇತರ ಸದಸ್ಯರಿಬ್ಬರನ್ನು ಒಳಗೊಂಡಿರುವ ಸಮಾಲೋಚಕ ಸಮಿತಿಯನ್ನು ರಚಿಸುವುದಕ್ಕಾಗಿ ಉಪಬಂಧ ಕಲ್ಪಿಸಲಾಗಿದೆ. ಈ ಸಮಿತಿಗಳನ್ನು ಶೀಘ್ರದಲ್ಲಿಯೇ ರಚಿಸಲಾಗುವುದು.

## ವಿವರಣಾ ಪಟ್ಟಿ

## ರಾಜ್ಯದಲ್ಲಿ ವಿಲೇವಾರಿಗಾಗಿ ಲಭ್ಯವಿರುವ ಬಂಜರು ಭೂಮಿಯ ವಿಸ್ತೀರ್ಣವನ್ನು ತೋರಿಸುವ ವಿವರಣಾ ಪಟ್ಟಿ

| ಕ್ರ.ಸಂ. | ಜಿಲ್ಲೆ | ಲಭ್ಯವಿರುವ ಜಮೀನು ಎಕರೆ + ಗುಂಟೆ |
|---|---|---|
| 1. | ಬೆಳಗಾವಿ | 2,930–13 |
| 2. | ಬಿಜಾಪುರ | 487–12 |
| 3. | ಹಾಸನ | 46,992–09 |
| 4. | ತುಮಕೂರು | 1,29,434–03 |
| 5. | ಧಾರವಾಡ | 2,462–15 |
| 6. | ರಾಯಚೂರು | 34,829–16 |
| 7. | ಮೈಸೂರು | 144,255–16 1/2 |
| 8. | ಚಿತ್ರದುರ್ಗ | 77,047–23 |
| 9. | ಬಳ್ಳಾರಿ | 52,703–23 |
| 10. | ಕೋಲಾರ | 1,27,585–32 1/2 |
| 11. | ಚಿಕ್ಕಮಗಳೂರು | 1,25,490–07 |
| 12. | ಬೀದರ್ | 14,097–23 |
| 13. | ದಕ್ಷಿಣ ಕನ್ನಡ | 1,70,716–29 |
| 14. | ಮಂಡ್ಯ | 79,610–09 |
| 15. | ಗುಲ್ಬರ್ಗಾ | 9,120–33 |
| 16. | ಬೆಂಗಳೂರು | 30,907–11 |
| 17. | ಕೊಡಗು | 40,714–26 |
| 18. | ಶಿವಮೊಗ್ಗ | 94,786–24 |
| 19. | ಉತ್ತರ ಕನ್ನಡ | 10,937–22 |

ಜಿಲ್ಲೆಯ ಜಿಲ್ಲಾಧಿಕಾರಿಗಳು ಮಾಡಿದ ವರದಿಗನುಸಾರವಾಗಿ ಲಭ್ಯವಿರುವ ಒಟ್ಟು ವಿಸ್ತೀರ್ಣ ಹನ್ನೊಂದು ಲಕ್ಷದ ತೊಂಬತ್ತೈದು ಎಕರೆ, ಇಪ್ಪತ್ತೇಳು ಗುಂಟೆಗಳು ಮಾತ್ರ. ಈ ವಿವರಗಳು ಕೇವಲ ಪ್ರಾಯೋಗಿಕವಾಗಿವೆ ಮತ್ತು ಇದರಲ್ಲಿ ಸಾಗುವಳಿಗೆ ಯೋಗ್ಯವಲ್ಲದ ಹಾಗೂ ಮೀಸಲು ಭೂಮಿಯು ಸೇರಿರಬಹುದು. ಜಿಲ್ಲಾಧಿಕಾರಿಗಳು ಒದಗಿಸಿದ ವಿಲೇವಾರಿಗಾಗಿ ಲಭ್ಯವಿರುವ ಜಮೀನಿನ

ವಿಸ್ತೀರ್ಣವನ್ನು ಪರಿಶೀಲಿಸಿ ದೃಢೀಕರಿಸುವಂತೆ ಅವರನ್ನು ಕೋರಲಾಗಿದೆ. ತಾಲ್ಲೂಕಾ ತಹಶೀಲ್ದಾರರು ಮೈಸೂರು ಭೂ ಕಂದಾಯ ಅಧಿನಿಯಮ, 1964ರ 71ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿರುವ ಭೂಮಿಯನ್ನು ಮೀಸಲಿರಿಸಿದ ತರುವಾಯ ವಿಲೇವಾರಿಗಾಗಿ ಲಭ್ಯವಿರುವ ಜಮೀನುಗಳ ಪಟ್ಟಿಯನ್ನು ಸಿದ್ಧಿಪಡಿಸುವಂತೆ ಮತ್ತು ಅದನ್ನು ಮೈಸೂರು ಭೂ ನೀಡಿಕೆ ನಿಯಮಗಳು 1969ರ 3ನೇ ನಿಯಮದ ಪ್ರಕಾರ ತಾಲ್ಲೂಕು ಕಚೇರಿಯಲ್ಲಿ, ಗ್ರಾಮ ಚಾವಡಿಯಲ್ಲಿ, ಮತ್ತು ಪಂಚಾಯತ್ ಕಚೇರಿಯಲ್ಲಿ ಅಧಿಸೂಚಿಸುವಂತೆ ಅಗತ್ಯಪಡಿಸಲಾಗಿದೆ.

## ವಿವರಣಾ ಪಟ್ಟಿ

| ಕ್ರ.ಸಂ. | ಜಿಲ್ಲೆ | 1966-67 | 1967-68 | 1968-69 |
|---|---|---|---|---|
| 1. | ಕೋಲಾರ | 2,207–01 | 1,454–00 | 1,888–04 |
| 2. | ಗುಲ್ಬರ್ಗಾ | 2,037–27 | 857.27 | 153.19 |
| 3. | ಹಾಸನ | 1,481–38 | 1,466–29 | 1,335–36 |
| 4. | ತುಮಕೂರು | 2,738–07 | 1,460–38 | 1,538–02 |
| 5. | ಚಿಕ್ಕಮಗಳೂರು | 2,089–00 | 1,593–29 | 1,119–00 |
| 6. | ಮಂಡ್ಯ | 3,249–37½ | 1,712.09 | 1,438.09 |
| 7. | ಬೆಳಗಾವಿ | 900.25 | 735.39 | 613.00 |
| 8. | ಕೊಡಗು | 1,311.17 | 1655.13 | 1,795.51 |
| 9. | ಶಿವಮೊಗ್ಗ | 1,784.30 | 2690.25 | 1,609.15 |
| 10. | ಚಿತ್ರದುರ್ಗ | 2,329.13 | 1352.35 | 1,429.30 |
| 11. | ಬಳ್ಳಾರಿ | 320.38 | 394.99 | 903.85 |
| 12. | ಧಾರವಾಡ | 236.03 | 247.02 | 480.17 |
| 13. | ಉತ್ತರ ಕನ್ನಡ (ಕಾರವಾರ) | 271.15 | 337.386 | 348.310½ |
| 14. | ಬಿಜಾಪುರ | ಇಲ್ಲ | ಇಲ್ಲ | 107.39 |
| 15. | ಬೆಂಗಳೂರು | 1,34.04 | 590.37 | 921.29 |
| 16. | ಮೈಸೂರು | 4,194.00 | 1914.09 | 1,649.30 |
| 17. | ದಕ್ಷಿಣ ಕನ್ನಡ | 501.24 | 1156.36 | 1,342.98 |
| 18. | ರಾಯಚೂರು | 46.14 | 681.10 | ಇಲ್ಲ |
| 19. | ಬೀದರ್ | ... | ... | ... |

**ಶ್ರೀ ಎಂ.ಎಸ್. ಕೃಷ್ಣನ್** – (ಸಿ) ಪ್ರಶ್ನೆಗೆ ಉತ್ತರವಾಗಿ ಬಡವರಿಗೆ ಮತ್ತು ಭೂರಹಿತರಿಗೆ ಜಮೀನು ಕೊಡುವುದರಲ್ಲಿ ಆದ್ಯತೆ ನೀಡಲಾಗಿದೆ ಎಂದು ಉತ್ತರವಿದೆ. ಪುಟ 16ರಲ್ಲಿರುವ ಸ್ಟೇಟ್‌ಮೆಂಟ್ ಮತ್ತು ಪುಟ 15ರಲ್ಲಿರುವ ಸ್ಟೇಟ್‌ಮೆಂಟ್ ಕಂಪೆರ್ ಮಾಡಿದರೆ ಕೊಟ್ಟಿರುವ ಉತ್ತರ ವಿರೋಧವಾಗುವುದಿಲ್ಲವೇ? ತುಮಕೂರು ಜಿಲ್ಲೆಯಲ್ಲಿ 1,29,434 ಎಕರೆ 3 ಗುಂಟೆ ಜಮೀನು ವೇಸ್ಟ್‌ಲ್ಯಾಂಡ್ ಇದೆ ಎಂದು 15ನೇ ಪುಟದಲ್ಲಿ ತಿಳಿಸಿ 16ನೇ ಪುಟದಲ್ಲಿ ಸುಮಾರು 5 ಸಾವಿರ ಎಕರೆ ಹಂಚಲಾಗಿದೆ ಎಂದು ತಿಳಿಸಲಾಗಿದೆ. ಸುಮಾರು ಒಂದು ಲಕ್ಷ ಚಿಲ್ಲರೆ ಎಕರೆಯಲ್ಲಿ 3 ವರ್ಷಗಳಲ್ಲಿ 5 ಸಾವಿರ ಎಕರೆ ಹಂಚಿದೆ, ಇದೇ ರೀತಿ ಬೇರೆ ಜಿಲ್ಲೆಗಳಲ್ಲೂ ಮಾಡಿದೆ. ಬಿಜಾಪುರ ಜಿಲ್ಲೆಯಲ್ಲಿ 487 ಎಕರೆಇರುವುದರಲ್ಲಿ 107 ಎಕರೆ ಹಂಚಲಾಗಿದೆ. ಹೀಗಿರುವುದರಿಂದ ಯಾವ ರೀತಿ ಹೈಯಸ್ಟ್ ಪ್ರಯಾರಿಟಿ ಕೊಟ್ಟಿದೆ ಎಂಬುದನ್ನು ಹೇಳುವಿರಾ?

**ಶ್ರೀ ಹೆಚ್.ವಿ. ಕೌಜಲಗಿ** – ಉತ್ತರದಲ್ಲಿ ಹಂಚಿರುವುದು ಮತ್ತು ಸರಕಾರದಲ್ಲಿರುವುದು ತಿಳಿಸಿದೆ. ಉತ್ತರ ಕೊಟ್ಟಾಗ ಆ ತಾರೀಖಿನಲ್ಲಿ ಎಷ್ಟು ಎಕರೆ ಸರಕಾರದಲ್ಲಿದೆ ಮತ್ತು ಎಷ್ಟು ಹಂಚಿದೆ ಎಂಬುದನ್ನು ತಿಳಿಸಿದೆ.

**ಶ್ರೀ ಎಂ.ಎಸ್. ಕೃಷ್ಣನ್** – ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ಇರುವುದು ಮತ್ತು ಹಂಚುವುದು ಕೊಟ್ಟ ಮೇಲೆ ಕೊಟ್ಟಿದ್ದೇವೆಂದು ಹೇಳುವುದು ವಿರೋಧಭಾಸವಾಗುವುದಿಲ್ಲವೆ?

**ಶ್ರೀ ಹೆಚ್.ವಿ. ಕೌಜಲಗಿ** – ಇಲ್ಲ.

**ಶ್ರೀ ಜೆ.ಪಿ. ಸರ್ವೇಶ್** – ಜಿಲ್ಲಾಧಿಕಾರಿಯವರು ಈಗಾಗಲೇ ಹಲವಾರು ವರ್ಷಗಳಿಂದ ಕೃಷಿ ಜಮೀನಿನ ಸ್ವಾಧೀನತೆ ಹೊಂದಿರುವ ವ್ಯಕ್ತಿಗಳಿಗೆ ಜಮೀನನ್ನು ನೀಡುವುದರ ಬದಲಾಗಿ, ಆ ಜಿಲ್ಲಾದಿಕಾರಿಯು ಅವರ ಜಮೀನುಗಳಲ್ಲಿ ಬೆಳೆದು ನಿಂತಿರುವ ಬೆಳೆಯನ್ನು ಜಪ್ತಿ ಮಾಡುತ್ತಿದ್ದಾರೆಂದು ಅವರ ವಿರುದ್ಧ ಹಲವಾರು ಟೆಲಿಗ್ರಾಮ್‌ಗಳ ಮೂಲಕ ದೂರು ಕಳುಹಿಸಿರುವುದನ್ನು ಸನ್ಮಾನ್ಯ ಸಚಿವರು ಗಮನಿಸಬೇಕು. ಬೀದರ್ ಜಿಲ್ಲೆಯಲ್ಲಿ 1966–67ರಲ್ಲಿ ಯಾವುದೇ ಭೂಮಿ ನೀಡಿರುವುದಿಲ್ಲ; 1967–68ರಲ್ಲಿಯೂ ಕೂಡ ನೀಡಿರುವುದಿಲ್ಲ; 1968–69ರಲ್ಲಿಯೂ ಸಹ ಯಾವುದೇ ಜಮೀನು ನೀಡಿರುವುದಿಲ್ಲ. ಅದೇ ರೀತಿ 1968–69ರಲ್ಲಿ ರಾಯಚೂರಿನಲ್ಲಿಯೂ ಅದೇ ರೀತಿಯಾಗಿದೆ. ಬೀದರ್, ರಾಯಚೂರು ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯವರು ಭೂರಹಿತರಿಗೆ ಯಾವುದೇ ಭೂಮಿಯನ್ನು ವಿತರಿಸಿರುವುದಿಲ್ಲ. ಯಾಕೆ?

**ಶ್ರೀ ಹೆಚ್.ವಿ. ಕೌಜಲಗಿ** – ಸನ್ಮಾನ್ಯ ಸದಸ್ಯರೇ, ಅನಧಿಕೃತವಾಗಿ ಜಮೀನನ್ನು ಹಿಡುವಳಿ ಮಾಡುತ್ತಿರುವ ವ್ಯಕ್ತಿಗೆ ಅದನ್ನು ಅಧಿಕೃತಗೊಳಿಸಲು ಇಂದಿನವರೆಗೆ ಯಾವುದೇ ಉಪಬಂಧ ಕಲ್ಪಿಸಿಲ್ಲ. ನಾವು ಇತ್ತೀಚೆಗೆ ಭೂ ಕಂದಾಯ ಅಧಿನಿಯಮದ 94ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಿ, ಅದರಡಿಯಲ್ಲಿ ನಿಯಮಗಳನ್ನು ರಚಿಸಲಾಗುವುದು. ಈಗಿರುವ ಉಪಬಂಧಗಳಿಗನುಸಾರವಾಗಿ ಯಾರೇ ಆಗಲಿ ಕೃಷಿ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದು, ಅದು ಅನಧಿಕೃತವಾಗಿದ್ದರೆ, ಆತನನ್ನು ಅವಶ್ಯವಾಗಿ ಒಕ್ಕಲೆಬ್ಬಿಸಲಾಗುವುದು.

**ಶ್ರೀ ಎಸ್. ಬಂಗಾರಪ್ಪ** – ಕೊನೆಯ ಪ್ರಶ್ನೆಗೆ ಜಮೀನನ್ನು ಹಂಚಲು ಒಂದು ಸಮಿತಿಯನ್ನು ರಚಿಸಲಾಗುವುದು ಎಂದು ಉತ್ತರ ಕೊಡಲಾಗಿದೆ. ಆ ಸಮಿತಿಯಲ್ಲಿ ಅಧಿಕಾರಗಳಿರುವುದರಿಂದ ಇತರ ಪ್ರತಿನಿಧಿಗಳ ಮಾತಿಗೆ ಬೆಲೆ ಇರುವುದಿಲ್ಲ. ಇದು ಬರೇ ಅಡ್ವೈಜರಿ ಬಾಡಿ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಈಗಿರುವ ನಿಯಮಗಳಗನುಸಾರ ಇದೊಂದು ಸಲಹಾ ಸಮಿತಿ. ಸಮಿತಿಯು ನೀಡುವ ಸಲಹೆಯನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗುತ್ತದೆ.

**ಶ್ರೀ ವಿ. ಎಸ್. ಪಾಟೀಲ್** – ಭೂಸುಧಾರಣೆ ಜಾರಿಗೆ ತರುವಾಗ ಜಮೀನು ಕೊಡುವಾಗ ಉತ್ತೇಜನ ಕೊಡಬೇಡವೇ? 10–15 ಎಕರೆ ಇರುವವರಿಗೆ ಅಥವಾ ಇನ್ನೂ ಕಡಿಮೆ ಇರುವವರಿಗೆ ಉಚಿತವಾಗಿ ಜಮೀನು ಕೊಡುವುದು ಯುಕ್ತವಲ್ಲವೇ?

**ಶ್ರೀ ಹೆಚ್.ವಿ. ಕೌಜಲಗಿ** – ನಾವು ಕಾನೂನು ನಿಷ್ಠೆಯುಳ್ಳ ವ್ಯಕ್ತಿ ಮತ್ತು ಕಾನೂನನ್ನು ಉಲ್ಲಂಘಿಸುವ ವ್ಯಕ್ತಿಯ ನಡುವೆ ಅಂತರ ಇಡಬೇಕು. ಕಾನೂನು ನಿಷ್ಠೆಯುಳ್ಳ ವ್ಯಕ್ತಿಗೆ ಸಾಮಾನ್ಯವಾಗಿ ರಿಯಾಯಿತಿ ತೋರಿಸಬೇಕಾಗುತ್ತದೆ.

**ಶ್ರೀ ವಿ.ಎಸ್. ಪಾಟೀಲ್** – ಜಮೀನಿನ ಅಧಿಭೋಗದಲ್ಲಿದ್ದು ಅದನ್ನು ಸಾಗುವಳಿ ಮಾಡಿದ ವ್ಯಕ್ತಿಯು ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಸರ್ಕಾರಕ್ಕೆ ನೆರವಾಗಿದ್ದಾನೆ. ಆತನು ರಾಷ್ಟ್ರದ ಅಗತ್ಯತೆಯನ್ನು ಪೂರೈಸಿದ್ದಾನೆ. ಸರ್ಕಾರ ಹೆಚ್ಚು ಆಹಾರವನ್ನು ಬೆಳೆಯುವ ಆತನ ಪ್ರಯತ್ನಗಳಿಗೆ ಮೆಚ್ಚಿ, ಉದಾರ ಭಾವನೆಯಿಂದ ಆತನ ಅಧಿಭೋಗಕ್ಕೆ ಜಮೀನನ್ನು ಮಂಜೂರು ಮಾಡಬಾರದೇಕೆ?

(ಉತ್ತರವಿಲ್ಲ)

**ಶ್ರೀ ಎಸ್. ಬಂಗಾರಪ್ಪ** – ಜಮೀನನ್ನು ಸ್ವಾಧೀನಪಡಿಸಿಕೊಂಡಿರುವ ವ್ಯಕ್ತಿಗಳ್ಯಾರು ನಂಬಿಕೆದ್ರೋಹ ಮಾಡಿಲ್ಲ. ಅದಕ್ಕೆ ಬದಲಾಗಿ ಸರ್ಕಾರವೇ ನಂಬಿಕೆದ್ರೋಹದ ಹಾಗೂ ಕಾನೂನು ಉಲ್ಲಂಘನೆಯ ದೋಷಿಯಾಗಿದೆ. ಏಕೆಂದರೆ ಅವರು ಭೂರಹಿತರಿಗೆ ಜಮೀನನ್ನು ಮಂಜೂರು ಮಾಡಿಲ್ಲ.

**ಶ್ರೀ ಹೆಚ್.ವಿ. ಕೌಜಲಗಿ** – ನನ್ನ ಸನ್ಮಾನ್ಯ ಸ್ನೇಹಿತರು ಎತ್ತಿರುವ ಪ್ರಶ್ನೆಗೆ ನಾನು ಉತ್ತರ ನೀಡಲಾರೆ. ನನ್ನ ಸ್ನೇಹಿತರಾದ ಶ್ರೀ ಬಂಗಾರಪ್ಪನವರಿಗೆ ಯಾವುದೇ ನಿರ್ದಿಷ್ಟ ಉತ್ತರ ಹೇಳಿದರೆ ಅವರು ತಮ್ಮ ವಿಷಯವನ್ನು ಇನ್ನೊಂದು ರೀತಿಯಲ್ಲಿ ಪ್ರಸ್ತಾಪಿಸಬಹುದು.

**ಶ್ರೀ ವಿ.ಎಸ್. ಪಾಟೀಲ್** – ನನ್ನ ಪ್ರಶ್ನೆಗೆ ಪೂರ್ಣವಾಗಿ ಉತ್ತರ ಕೊಡಲಿಲ್ಲ.

**ಶ್ರೀ ಹೆಚ್.ವಿ. ಕೌಜಲಗಿ** – ಒತ್ತುವರಿದಾರರ ಸಂದರ್ಭದಲ್ಲಿ ಬೆಲೆ ಎರಡರಷ್ಟಾಗಿದೆ. ಆದರೆ ಅದು ವಿಧಿಸಬಹುದಾದಂಥ ಗರಿಷ್ಠ ದರವಾಗಿದೆ.

**ಶ್ರೀ ಎಚ್.ಬಿ. ಜ್ವಾಲನಯ್ಯ** – ಭೂಮಿಯನ್ನು ಹಂಚುವುದಕ್ಕೋಸ್ಕರವಾಗಿ ತಾಲ್ಲೂಕುಮಟ್ಟದಲ್ಲಿ ಸಲಹಾ ಸಮಿತಿಗಳನ್ನು ಮಾಡುತ್ತಿರುವುದಾಗಿ ಹೇಳಿದ್ದಾರೆ. ಹಾಸನ, ಅರಕಲಗೂಡು, ಸಕಲೇಶಪುರ, ಆಲೂರು ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಅಂದರೆ ಹೇಮಾವತಿ ಪ್ರದೇಶಗಳಲ್ಲಿ ಮುಳುಗಡೆಯಾಗುವ ಜಮೀನಿನ ರೈತರಿಗೆ ಜಮೀನು ಕೊಡುವುದಕ್ಕೋಸ್ಕರ ರಿಹ್ಯಾಬಿಲಿಟೇಷನ್ ಕಮಿಟಿಗಳನ್ನು ಮಾಡಿ ಅಲ್ಲಿರುವಂಥ ಎಲ್ಲ ಜಮೀನುಗಳನ್ನು ಹಾಗೆಯೇ ಇಡಬೇಕು, ಇತರರಿಗೆ ಕೊಡಬಾರದು ಎಂದು ಆರ್ಡರ್ ಕೂಡ ಮಾಡಿದ್ದಾರೆ. ಈಗ ಸಲಹಾ ಸಮಿತಿಗಳನ್ನು ಮಾಡುವುದಾದರೆ ಆ ಕಮಿಟಿಗಳಿಗೆ ಏನು ಕೆಲಸವಿರುತ್ತದೆ? ಎಲ್ಲ ಜಮೀನನ್ನೂ ಇಟ್ಟುಕೊಂಡಿರಬೇಕೇ ಅಥವಾ ಕಮಿಟಿಗಳು ಹಂಚಬೇಕೆ? ಏನು ಅಧಿಕಾರವಿರುತ್ತದೆ.

**ಶ್ರೀ ಹೆಚ್.ವಿ. ಕೌಜಲಗಿ** – ನಿಯಮಗಳನ್ನು ರಚಿಸುವುದಕ್ಕೆ ಮೊದಲೇ ಮೀಸಲು ಆದೇಶವನ್ನು ಜಾರಿಗೊಳಿಸಲಾಗಿರುತ್ತದೆ. ಬಡಜನರಿಗಾಗಿ ಎಲ್ಲಾ ಪ್ರದೇಶಗಳನ್ನು ಮೀಸಲಿಡಬೇಕಾಗಿಲ್ಲ ಮತ್ತು ಕೆಲವು ಜಮೀನುಗಳನ್ನು ಅವರಿಗಾಗಿಯೇ ನೀಡಬೇಕೆಂದು ಕೋರುವ ಕೆಲವು ಮನವಿಗಳನ್ನು ನಾನು ಸ್ವೀಕರಿಸಿದ್ದೆ. ಆ ಬಗ್ಗೆ ನಾನು ಪುನರ್ವಸತಿ ಸಮಿತಿಯ ಶಿಫಾರಸ್ಸನ್ನು ನಿರೀಕ್ಷಿಸುತ್ತಿದ್ದೇನೆ. ಅವರು ಶಿಫಾರಸು ಮಾಡಿದ್ದರೆ ಆ ಬಗ್ಗೆ ಪರಿಗಣಿಸಲಾಗುವುದು.

**ಶ್ರೀ ಹೆಚ್.ಬಿ. ಜ್ವಾಲನಯ್ಯ**– ಸಲಹಾ ಸಮಿತಿಗಳನ್ನು ಮಾಡುವುದಾದರೆ, ರೀಹ್ಯಾಬಿಲಿಟೇಷನ್ ಕಮಿಟಿಯವರ ಅಡ್ವೈಸ್ ಅಥವಾ ಡೈರಕ್ಷನ್ ಪ್ರಕಾರ ರೂಲ್ಸ್ ಕೆಲಸ ಮಾಡಬೇಕೆ?

**ಶ್ರೀ ಹೆಚ್.ವಿ. ಕೌಜಲಗಿ** – ಪ್ರಶ್ನೆ ಹೀಗಿದೆ: ಪುನರ್ವಸತಿ ಸಮಿತಿಯು ಎಲ್ಲಾ ಜಮೀನುಗಳನ್ನು ಮೀಸಲಿಡಬೇಕಾಗಿಲ್ಲ ಮತ್ತು ಕೆಲವು ಜಮೀನುಗಳನ್ನು ಇದಕ್ಕಾಗಿ ನೀಡಬೇಕೆಂದು ಶಿಫಾರಸು ಮಾಡಿರುತ್ತಾರೆ. ಹಾಗಾಗಿ, ಹಾಗೆ ಬಿಡುಗಡೆ ಮಾಡಲಾಗುವ ಜಮೀನುಗಳನ್ನು ನೀಡಲಾಗುವುದು.

**ಶ್ರೀ ಎಂ. ನಾಗಪ್ಪ** – 15ನೇ ಪುಟದಲ್ಲಿ ಎಷ್ಟೆಷ್ಟು ಎಕರೆ ಜಮೀನಿದೆ ಎನ್ನುವ ಅಂಕಿ– ಅಂಶಗಳನ್ನು ಕೊಡಲಾಗಿದೆ. ಯಾವ ತಾರೀಖಿನವರೆಗೆ ಅಥವಾ ಯಾವ ತಾರೀಖಿನಿಂದ ತೆಗೆದುಕೊಳ್ಳಲಾಗಿದೆ? ರಾಯಚೂರು ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಉತ್ತರದಲ್ಲಿ 34,829 ಎಕರೆ 16 ಗುಂಟೆ ಎಂದು ಇದೆ. ಇದು ಸರಿಯಾದುದಲ್ಲ. ಇದಕ್ಕಿಂತ ಹಿಂದೆ ಅನೇಕ ಸಲ ಕೆಲವು ಸರ್ಕಾರಿ ಜಮೀನುಗಳನ್ನು ಅನೇಕ ಜನರಿಗೆ ಪಟ್ಟಾ ಮಾಡಿ ಕೊಟ್ಟಿದ್ದಾರೆ. ಆದ್ದರಿಂದ ಸರಿಯಾದ ಲೆಕ್ಕವನ್ನು ತೆಗೆದುಕೊಂಡು ಹಂಚಲು ಪ್ರಯತ್ನ ಮಾಡುತ್ತಾರೆಯೇ?

**ಶ್ರೀ ಹೆಚ್.ವಿ. ಕೌಜಲಗಿ**: ಈ ಅಂಕಿಅಂಶಗಳನ್ನು 1969ನೇ ವರ್ಷದಲ್ಲಿ ಪಡೆಯಲಾಗಿದೆ. ಈ ಅಂಕಿಗಳು ಸರಿಯೆಂದು ನಾನು ಹೇಳುವುದಿಲ್ಲ. ಇದೊಂದು ಸ್ಥೂಲವಾದ ಅಂದಾಜು ಅಷ್ಟೆ.

**ಶ್ರೀ ಜಿ. ಚಂದ್ರಕಾಂತ್:** ತಾಲ್ಲೂಕು ಮಟ್ಟದಲ್ಲಿ ಸಲಹಾ ಸಮಿತಿಗಳನ್ನು ರಚಿಸಲಾಗಿದೆಯೆ ಮತ್ತು ಹಾಗೆ ರಚಿಸಲಾಗಿದ್ದರೆ ರಾಜ್ಯದ ಯಾವ ಪ್ರದೇಶದಲ್ಲಿ ಅವರು ಸಭೆ ಸೇರಿದ್ದಾರೆಯೇ? ಮತ್ತು ಅವರು ಭೂರಹಿತ ಜನರಿಗಾಗಿ ಜಮೀನುಗಳನ್ನು ಹಂಚಿಕೆ ಮಾಡಿದ್ದಾರೆಯೇ ಎಂಬುದನ್ನು ನಾನು ತಿಳಿಯಬಹುದೆ?

**ಶ್ರೀ ಹೆಚ್.ವಿ. ಕೌಜಲಗಿ:** ಸಮಿತಿಯನ್ನು ಇನ್ನೂ ರಚಿಸಿರುವುದಿಲ್ಲ ಮತ್ತು ಆದಷ್ಟು ಬೇಗ ರಚಿಸಲಾಗುವುದು.

**ಶ್ರೀ ಬಿ. ಭಾಸ್ಕರ್ ಶೆಟ್ಟಿ:** ಸಲಹಾ ಸಮಿತಿಗಳಲ್ಲಿ ಅಧಿಕಾರಿಗಳು ಮತ್ತು ಅಧಿಕಾರೇತರರು ಯಾರು ಇರುತ್ತಾರೆ ಮತ್ತು ಒಟ್ಟು ಎಷ್ಟು ಜನರಿರುತ್ತಾರೆ?

**ಶ್ರೀ ಹೆಚ್.ವಿ. ಕೌಜಲಗಿ:** – ಈಗಾಗಲೇ ನಾನು ಹೇಳಿರುವಂತೆ ಸರ್ಕಾರೇತರ ಅಧಿಕಾರಿಗಳಿಗೆ ಸಂಬಂಧಿಸಿದಂತೆ ತಾಲ್ಲೂಕಿನ ಎಂಎಲ್ಎ, ತಾಲ್ಲೂಕು ಮಂಡಳಿಯ ಅಧ್ಯಕ್ಷರು ಮತ್ತು ಒಬ್ಬ ಹರಿಜನ ವ್ಯಕ್ತಿ ಮತ್ತು ಎಂಎಲ್‌ಸಿಗಳಾಗಿರುತ್ತಾರೆ. ಅಧಿಕಾರಿಗಳಿಗೆ ಸಂಬಂಧಿಸಿದಂತೆ ತಹಸೀಲ್ದಾರ್, ಅರಣ್ಯಾಧಿಕಾರಿ ಮತ್ತು ಸರ್ವೆ ಮತ್ತು ಲೋಕೋಪಯೋಗಿ ಇಲಾಖೆಯ ಕೆಲವರು, ಅವರಿಗೆ ಸಹಾಯಕರಾಗಿರುತ್ತಾರೆ.

**ಶ್ರೀ ಎನ್.ಹೆಚ್. ಪುಟ್ಟರಂಗನಾಥ್** – ಕೊಟ್ಟಿರುವ ಅಂಕಿ–ಅಂಶಗಳಲ್ಲಿ ಎನ್‌ಕ್ರೋಚ್ ಆಗಿರುವುದನ್ನು ಸೇರಿಸಲಾಗಿದೆಯೇ ಅಥವಾ ಇಲ್ಲವೇ? ಎನ್‌ಕ್ರೋಚ್ ಮಾಡಿದ್ದಾರೆಂದು ಹೇಳುತ್ತಾರೆ. ಇದರ ಬಗ್ಗೆ ಪರಿಶೀಲನೆ ಮಾಡಿ ಅವರಿಗೇ ಜಮೀನನ್ನು ಕೊಡಬೇಕೆಂದು ಕಮಿಟಿಯನ್ನು ಮಾಡಿಕೊಂಡಿದ್ದಾರೆ. ಜಾಸ್ತಿ ಜಮೀನು ಇರುವವರು ಎನ್‌ಕ್ರೋಚ್ ಮಾಡಿರುತ್ತಾರೆ. ಬಡವರಿಗೆ ಜಮೀನು ಸಿಕ್ಕುವುದಿಲ್ಲವೆನ್ನುವುದನ್ನು ಗಮನದಲ್ಲಿಟ್ಟುಕೊಂಡು ಎಷ್ಟು ಜಮೀನು ಇದೆ, ಯಾರು ಅದಕ್ಕೆ ಅರ್ಹರು ಎಂದು ಪರಿಶೀಲನೆ ಮಾಡುತ್ತಾರೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಕೊಟ್ಟ ಅಂಕಿ–ಸಂಖ್ಯೆಯಲ್ಲಿ ಎನ್‌ಕ್ರೋಚ್ ಆಗಿರುವ ಜಮೀನುಗಳ ಲೆಕ್ಕವೂ ಸಮಾವೇಶವಾಗಿದೆ. ಅಜಮಾಯಿಷಿಯಂತೆ 2 ಲಕ್ಷ ಎಕರೆ ಎನ್‌ಕ್ರೋಚ್ ಆದಂಥ ಭೂಮಿ ಇದೆ. ಯಾರಾದರೂ ಬಡವರು ಇದ್ದರೆ ಅವರಿಗೇ ಕೊಡಬೇಕು ಎಂದು ಮಸೂದೆಯ 94ನೇ ವಿಧಿ ಚರ್ಚೆಯಾಗುವ ಕಾಲದಲ್ಲಿ ಹೇಳಲಾಗಿದೆ. ಅದಕ್ಕೆ ಸಂಬಂಧಪಟ್ಟ ರೂಲ್ಸ್ ಮಾಡಲಾಗುತ್ತಿದೆ. ಅದನ್ನು ಮಾಡಿ ಕೂಡಲೇ ಸಭೆಯ ಮುಂದೆ ಇಡುತ್ತೇವೆ. ಆ ಕಾಲಕ್ಕೆ ಮಾನ್ಯ ಸದಸ್ಯರ ಸೂಚನೆಗಳನ್ನು ಗಮನದಲ್ಲಿ ತೆಗೆದುಕೊಳ್ಳುತ್ತೇವೆ.

**ಶ್ರೀ ಬಾಪು ಗೌಡ** – ಕೆಲವು ಪ್ರದೇಶಗಳು ಕೃಷ್ಣಾ ಯೋಜನೆ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಗೆ ಬರುತ್ತವೆ. ಈ ಸಂಬಂಧದಲ್ಲಿ ಸರ್ಕಾರವು ಭೂರಹಿತರಿಗೆ ಜಮೀನನ್ನು ಹಂಚಿಕೆ ಮಾಡಬಾರದೆಂದು ತಿಳಿಸುವ ಅಧಿಸೂಚನೆಯನ್ನು ಹೊರಡಿಸಿದೆ. ಈ ದೃಷ್ಟಿಯಿಂದಾಗಿ ಈ ಸಮಿತಿಗಳ ಕೆಲಸ ಏನು?

**ಶ್ರೀ ಹೆಚ್.ವಿ. ಕೌಜಲಗಿ** – ಹೌದು, ಯೋಜನೆಗಳ ಕಾರಣದಿಂದಾಗಿ ತೊಂದರೆಗೊಳಗಾಗಿರುವ ವ್ಯಕ್ತಿಗಳಿಗೆ, ಕೆಲವು ಜಮೀನುಗಳನ್ನು ಮೀಸಲಿಡಬೇಕಾಗುತ್ತದೆ ಮತ್ತು ಭೂ ಮಂಜೂರಾತಿ ನಿಯಮಗಳಲ್ಲಿ ಇದಕ್ಕೆ ಅವಕಾಶ ಕಲ್ಪಿಸಿದೆ. ಜಮೀನನ್ನು ಮೀಸಲಿಟ್ಟ ಮೇಲೆ, ಹೆಚ್ಚಿನ ಜಮೀನುಗಳನ್ನು ಸಮಿತಿಯು ಹಂಚಿಕೆ ಮಾಡುವುದಕ್ಕೆ ಅನುಮತಿ ನೀಡಲಾಗುವುದು.

**ಶ್ರೀ ಎನ್.ಇ. ಚನ್ನೇಗೌಡ** – ಎಷ್ಟೆಷ್ಟು ಜಮೀನು ಹಂಚುವುದಕ್ಕೆ ಇದೆ ಎನ್ನುವುದನ್ನು ತಹಸೀಲ್ದಾರರು ಅನೌನ್ಸ್ ಮಾಡಬೇಕು ಎಂದು ಇದೆ. ಎಲ್ಲಾ ತಹಸೀಲ್ದಾರರೂ ಈ ರೀತಿ ಮಾಡಿದ್ದಾರೆಯೋ ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡಲಾಗಿದೆಯೋ? ಮಂಡ್ಯ ಜಿಲ್ಲೆಯಲ್ಲಿ 3 ವರ್ಷಗಳಲ್ಲಿ ಸುಮಾರು 66 ಎಕರೆ ಜಮೀನನ್ನು ಹಂಚಿದ್ದಾರೆ. ಇದರಲ್ಲಿ ಎಷ್ಟು ಜನ ಭೂಹೀನರಿಗೆ ಕೊಟ್ಟಿದ್ದಾರೆ. ಇತರೆಯವರಿಗೆ ಎಷ್ಟು ಕೊಟ್ಟಿದ್ದಾರೆ. ಸರ್ಕಾರದಿಂದ ಜಮೀನು ಪಡೆದು ಮಾಡಿಕೊಳ್ಳುವವರಿಗೆ ವ್ಯಾಪಾರಗಾರರಿಗೆ ಎಷ್ಟು ಜನರಿಗೆ ಕೊಟ್ಟಿದ್ದಾರೆ?

**ಶ್ರೀ ಹೆಚ್.ವಿ. ಕೌಜಲಗಿ** – ಈ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಬಡವರಿಗೆ ಎಷ್ಟು ಕೊಟ್ಟಿದೆ ವ್ಯಾಪಾರ ಮಾಡುವವರಿಗೆ ಎಷ್ಟು ಕೊಟ್ಟಿದೆ ಎನ್ನುವ ವಿವರಗಳನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅವು ಇದರೊಳಗೆ ಬರುವುದಿಲ್ಲ.

**ಶ್ರೀಮತಿ ವಿನ್ನಿಫ್ರೆಡ್ ಎಫ್. ಫರ್ನಾಂಡಿಸ್**– ತಾಲ್ಲೂಕು ಮಟ್ಟದಲ್ಲಿ ಸಲಹಾ ಸಮಿತಿಯ ರಚನೆಯಾಗದ ಹೊರತು ವಿಲೆ ಮಾಡಲಾಗುವುದಿಲ್ಲ ಎಂಬ ಕಾರಣದಿಂದ ಎರಡು ಅಥವಾ ಮೂರು ವರ್ಷಗಳಿಂದ ಸಂಬಂಧಪಟ್ಟ ತಹಸೀಲ್ದಾರ್ ಬಳಿ ನೂರಾರು ಅರ್ಜಿಗಳು ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಸರ್ಕಾರವು ತಾಲ್ಲೂಕು ಸಮಿತಿಗಳನ್ನು ರಚಿಸಲು ನಿರ್ಧಾರ ಕೈಗೊಂಡಾಗ ಯಾವುದೇ ಭೂಮಿಯನ್ನು ಬೇರೆಯವರು ಹಂಚಿಕೆ ಮಾಡತಕ್ಕುದಲ್ಲ. ಸಮಿತಿಯೇ ಜಮೀನನ್ನು ಹಂಚಿಕೆ ಮಾಡಬೇಕು ಎಂದು ನಾನು ಸೂಚನೆ ನೀಡಿದೆ.

**ಶ್ರೀ ಬಿ. ದೊಡ್ಡಬೋರೇಗೌಡ** – ಕಳೆದ ಮೂರು ವರ್ಷಗಳಲ್ಲಿ ಸುಮಾರು ನಾಲ್ಕೂವರೆಯಿಂದ ಐದು ಸಾವಿರ ಎಕರೆ ಜಮೀನು ಮಂಡ್ಯ ಜಿಲ್ಲೆಯಲ್ಲಿ ಹಂಚಿದೆ ಎಂದು ಉತ್ತರದಲ್ಲಿ ಕೊಟ್ಟಿದೆ. ಆದರೆ ನಿಮ್ಮ ಪಾರ್ಟಿಯ ಸ್ಥಳೀಯ ಮುಖಂಡರ ಆದೇಶದ ಮೇರೆಗೆ ರಿಕಾರ್ಡಿನಲ್ಲಿ ಬಡವರಿಗೆ ಸಾಗುವಳಿ ಚೀಟಿ ಕೊಡಿಸಿ ಆ ನಂತರ ಭೂಮಿ ಕ್ರಯ ಆಗಿದ್ದು, ಅದನ್ನು ತಡೆಯುವುದಕ್ಕೆ ಆಕ್ಷೇಪ ಮಾಡುತ್ತೀರಾ?

**ಉಪಾಧ್ಯಕ್ಷರು** – ಈ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

**ಶ್ರೀ ಈ. ನಾರಾಯಣಗೌಡ** – ಷೆಡ್ಯೂಲ್ ಕಾಸ್ಟ್ ಮತ್ತು ಟ್ರೈಬ್ಸ್‌ನವರಿಗೆ ಜಮೀನು ಉಚಿತವಾಗಿ ಕೊಡುತ್ತಿದ್ದರು. ಈಗ ಕಿಮ್ಮತ್ತು ಹೆಚ್ಚು ಮಾಡಿರುವುದರಿಂದ ಜಮೀನು ಕೊಟ್ಟರೂ ಅದನ್ನು ಪಡೆಯತಕ್ಕಂಥ ಶಕ್ತಿ ಬಡ ಜನರಲ್ಲಿ ಇಲ್ಲ. ಆದುದರಿಂದ ಕಿಮ್ಮತ್ತು ಕಡಿಮೆ ನಿಗದಿ ಮಾಡಲು ತಾಲ್ಲೂಕು ಸಮಿತಿಗೆ ನೇಮಿಸುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ತಾಲ್ಲೂಕು ಸಮಿತಿಯು ತನ್ನ ಅಭಿಪ್ರಾಯವನ್ನು ತಹಸೀಲ್ದಾರರಿಗೆ ಹೇಳಬಹುದು.

**ಶ್ರೀ ಎಂ. ರಾಮಪ್ಪ** – ಈ ಸಮಿತಿ ರಚಿಸುವಲ್ಲಿ ಅತಿಯಾದ ಮತ್ತು ಅನಗತ್ಯ ವಿಳಂಬವಾಗಿರುವುದು ಮತ್ತು ಈ ಕಾರಣದಿಂದಾಗಿ ಕಳೆದ ಹಲವಾರು ವರ್ಷಗಳಿಂದ ಭೂ ಹಂಚಿಕೆಯಾಗದೇ, ಹೆಚ್ಚು ಕಡಿಮೆ ನಿಂತೇ ಹೋಗಿರುವುದು ಸರ್ಕಾರಕ್ಕೆ ತಿಳಿದಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ವಿಳಂಬವು ಹೆಚ್ಚು ವರ್ಷಗಳದ್ದಲ್ಲ. ಸರ್ಕಾರವು ಸಮಿತಿ ರಚಿಸಲು ಒಂದು ತೀರ್ಮಾನ ತೆಗೆದುಕೊಂಡಿತ್ತು ಮತ್ತು ಸಮಿತಿಯ ಸದಸ್ಯರ ಹೆಸರುಗಳನ್ನು ತಿಳಿಸುವುದರಲ್ಲಿತ್ತು. ವಿಧಾನ ಪರಿಷತ್ತಿನ ಸದಸ್ಯರು, ಈ ಸಮಿತಿಯಲ್ಲಿ ತಾವೂ ಇರಬೇಕೆಂದು ಮನವಿ ಸಲ್ಲಿಸಿದ್ದಾಗಿ, ಸರ್ಕಾರವು ಅವರನ್ನು ಸಮಿತಿಯಲ್ಲಿ ಸೇರಿಸಿಕೊಳ್ಳಲು ನಿರ್ಧಾರವನ್ನು ತೆಗೆದುಕೊಂಡಿರುತ್ತದೆ. ಸಮಿತಿಯ ಸದಸ್ಯರುಗಳ ಹೆಸರುಗಳನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು.

**ಶ್ರೀ ಬೋಳ ರಘುರಾಮಶೆಟ್ಟಿ** – ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ಕುಮಕಿ ಲ್ಯಾಂಡ್ಸ್ ವಿಸ್ತೀರ್ಣ ಎಷ್ಟು?

**ಶ್ರೀ ಹೆಚ್.ವಿ. ಕೌಜಲಗಿ** – ಕುಮಕಿ ಭೂಮಿಗಳನ್ನು ಇದರಲ್ಲಿ ಸೇರಿಸಿರುವುದಿಲ್ಲ.

**ಶ್ರೀ ಡಿ.ಬಿ. ಕಲ್ಮಣಕರ್** – ಬೀದರ್ ಜಿಲ್ಲೆಯಲ್ಲಿ 14,000 ಎಕರೆಗಳಷ್ಟು ಭೂಮಿ ಹಂಚಿಕೆಗಾಗಿ ಇದೆ. ಆದರೆ, ಇದುವರೆವಿಗೂ ಬೀದರ್ ಜಿಲ್ಲೆಯಲ್ಲಿ ಒಂದೇ ಒಂದು ಎಕರೆ ಭೂಮಿಯನ್ನು ಹಂಚಿಕೆ ಮಾಡಿರುವುದಿಲ್ಲ. ಇದಕ್ಕೆ ಕಾರಣಗಳೇನು ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಹೆಚ್.ವಿ. ಕೌಜಲಗಿ** – ಅಲ್ಲಿಯೇ ಸ್ವಲ್ಪ ಭೂಮಿಯನ್ನು ಹಂಚಿಕೆ ಮಾಡಲಾಗಿದೆ. ಆ ಭೂಮಿಯ ಹಂಚಿಕೆ ಬಗ್ಗೆ ಮಾಹಿತಿಯನ್ನು ನಾನು ಪಡೆದಿರುವುದಿಲ್ಲ.

**ಶ್ರೀ ಎಂ. ಎಸ್. ಕೃಷ್ಣನ್** – ಕಳೆದ 23 ವರ್ಷಗಳಲ್ಲಿ ಈ ಜಮೀನು ಹಂಚಿಲ್ಲ. ಈ ಜಮೀನು ಹಂಚುವುದಕ್ಕೆ ಇನ್ನೂ ಎಷ್ಟು ವರ್ಷ ಈ ಕಾಂಗ್ರೆಸ್ ಸರಕಾರಕ್ಕೆ ಬೇಕು? ಕನ್ಸಲ್ಟೇಟಿವ್ ಕಮಿಟಿಯಲ್ಲಿ ಎಂ.ಎಲ್.ಎ., ಎಂ.ಎಲ್.ಸಿ., ಟಿ.ಡಿ.ಬಿ. ಪ್ರೆಸಿಡೆಂಟ್ಸ್, ಹರಿಜನ ಮೆಂಬರ್ ಇರುವುದಲ್ಲವೇ? ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಇರುವ ಹಾಗೆ ಇಲ್ಲಿ ರಾಜಕೀಯ ಪಕ್ಷಗಳನ್ನೊಳಗೊಂಡ ಯಾವ ಒತ್ತಡ ಇಲ್ಲದೆ ಹಂಚುವ ಹಾಗೆ ಮಾಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಇದುವರೆಗೂ ಭೂಮಿಗಳ ಹಂಚಿಕೆಗೆ ಸಂಬಂಧಿಸಿದಂತೆ, ಸಾಧ್ಯವಾದಷ್ಟು ಬೇಗ ಹಂಚಿಕೆ ಮಾಡಲಾಗುವುದು. ಈಗ ಸಮಿತಿಯು ರಚನೆಯಾಗಿದೆ ಮತ್ತು ಹಂಚಿಕೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳು ಅದರ ವ್ಯಾಪ್ತಿಗೆ ಬರುತ್ತದೆ. ಇಲ್ಲಿಯವರೆಗೆ ಅಧಿಕಾರಿಗಳು ಭೂಮಿಗಳ ಹಂಚಿಕೆ ಮಾಡುತ್ತಿದ್ದರು. ಮುಖ್ಯಮಂತ್ರಿಗಳು ಎರಡು ವರ್ಷಗಳೊಳಗೆ ಭೂಮಿಗಳ ಹಂಚಿಕೆಯನ್ನು ಮಾಡಲಾಗುವುದೆಂದು ತಿಳಿಸಿರುತ್ತಾರೆ. ಭೂಮಿಗಳ ಹಂಚಿಕೆಯನ್ನು ರಾಜಕೀಯೇತರ ಪಕ್ಷಗಳವರಿಗೆ ಭೂಮಿಗಳ ಹಂಚಿಕೆಯನ್ನು ರಾಜಕೀಯೇತರ ಪಕ್ಷಗಳವರಿಗೆ ವಹಿಸಿಕೊಡಬೇಕೆಂಬ ಸಲಹೆಯನ್ನು ನಾನು ಒಪ್ಪುವುದಿಲ್ಲ.

**ಶ್ರೀ ಎಂ.ಎಚ್. ಜಯಪ್ರಕಾಶ ನಾರಾಯಣ** – ಅರಣ್ಯ ಇಲಾಖೆಯಿಂದ ಜಮೀನು ರಿಲೀಜ್ ಮಾಡಿ ಕಲ್ಟಿವೇಶನ್ನಿಗೆ ಒದಗಿಸಿಕೊಡಬೇಕು ಎಂದು ಇರುವ ಸರಕಾರಿ ಆರ್ಡರ್ ಜಾರಿಗೆ ತರಲಿಲ್ಲವೇ?

**ಶ್ರೀ ಹೆಚ್.ವಿ. ಕೌಜಲಗಿ** – ಇದರಲ್ಲಿ ಅರಣ್ಯ ಪ್ರದೇಶ ಸೇರಿರುವುದಿಲ್ಲ.

## ಟಿಪ್ಪಣಿ

ಕಮ್ಯೂನಿಸ್ಟ್ ಪಕ್ಷದ ಶಾಸಕರಾದ ಶ್ರೀ ಎಂ.ಎಸ್. ಕೃಷ್ಣನ್‌ರವರು ಭೂರಹಿತರಿಗೆ ಸರ್ಕಾರಿ ಭೂಮಿಯನ್ನು ಬಗ್ಗೆ ಕೂಲಂಕಷ ವಿವರಗಳನ್ನು ಕೇಳಿದರು. ಅವರು ಕೇಳಿದ ವಿವರಗಳು ಹೀಗಿವೆ:

# ಭೂ ಸುಧಾರಣಾ ಅಧಿನಿಯಮ ಅನುಷ್ಠಾನ ಕುರಿತು ಚರ್ಚೆ

1970

**ಶ್ರೀ ಡಿ.ಬಿ. ಕಲ್ಮಣ್‌ಕರ್** (ಅಳಂದ) – ಕಂದಾಯ ಸಚಿವರು ಈ ಮುಂದಿನವುಗಳ ಬಗ್ಗೆ ದಯವಿಟ್ಟು ತಿಳಿಸುವರೆ:–

(ಎ) 1969ರ ನವೆಂಬರ್ ತಿಂಗಳಲ್ಲಿ, ನವದೆಹಲಿಯಲ್ಲಿ ನಡೆದ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಒಪ್ಪಿಕೊಂಡಿದ್ದಾರೆಂದು ಈ ಮುಂಚೆ ವರದಿಯಾದಂತೆ ಮೈಸೂರು ಭೂ ಸುಧಾರಣೆ ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಗೊಳಿಸಲು ಕೈಗೊಂಡ ಕ್ರಮಗಳು ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳು

(ಬಿ) ವಾಸ್ತವವಾಗಿ ಉಳುವವನಿಗೆ ಭೂಮಿಯ ಒಡೆತನದ ಹಕ್ಕುಗಳನ್ನು ನೀಡಲು ಸರ್ಕಾರಕ್ಕೆ ಸಾಧ್ಯವಾಗುವಂತೆ ಭೂಸುಧಾರಣಾ ಅಧಿನಿಯಮಕ್ಕೆ ತಿದ್ದುಪಡಿ ತರುವ ಪ್ರಸ್ತಾವ ಏನಾದರೂ ಸರ್ಕಾರದ ಮುಂದೆ ಇದೆಯೇ?

**ಶ್ರೀ ಹೆಚ್.ವಿ. ಕೌಜಲಗಿ (ಕಂದಾಯ ಸಚಿವರು)** –

ಎ) ಸಮ್ಮೇಳನದ ಅಧಿಕೃತ ವ್ಯವಹರಣೆಗಳನ್ನು ನಿರೀಕ್ಷಿಸಲಾಗಿದೆ. ಆದರೆ, ಇನ್ನುಳಿದ ವಿಶೇಷ ಹಕ್ಕು ಕೋರಿಕೆಗಳ ರದ್ದಿಯಾತಿ, ಭೂ ಸುಧಾರಣೆ ಪ್ರಕರಣಗಳ ವಿಲೇವಾರಿಯನ್ನು ಹೆಚ್ಚಿಸುವ ಬಗ್ಗೆ ನಿರೀಕ್ಷಿತ ಕ್ರಮ ಪ್ರಾರಂಭಿಸಲಾಗಿದೆ.

(ಬಿ) ಗೇಣಿದಾರರಿಗೆ ಭೂ ಒಡೆತನ ನೀಡುವ ಸಲುವಾಗಿ, ಮೈಸೂರು ಭೂಸುಧಾರಣಾ ಅಧಿನಿಯಮ, 1961ರ 3ನೇ ಅಧ್ಯಾಯದಲ್ಲಿ ಈಗಾಗಲೇ ಉಪಬಂಧಗಳು ಇವೆ.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಸಮ್ಮೇಳನದ ಅಧಿಕೃತ ವ್ಯವಹರಣೆಗಳನ್ನು ನಿರೀಕ್ಷಿಸಲಾಗಿದೆ ಎಂದು ನೀವು ಉತ್ತರಿಸಿದ್ದೀರಿ. ವಾಸ್ತವವಾಗಿ ಯಾವ ವ್ಯವಹರಣೆಗಳು ನಡೆದವು? ಮತ್ತು ಭೂ ಸುಧಾರಣೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಕೈಗೊಳ್ಳಲಾದ ಮಹತ್ತರ ನಿರ್ಧಾರಗಳು ಯಾವುವು ಎಂಬುದನ್ನು ನಾನು ತಿಳಿದುಕೊಳ್ಳಬಹುದೇ?

**ಶ್ರೀ ಹೆಚ್.ವಿ. ಕೌಜಲಗಿ** – ತೀರ್ಮಾನಗಳು ಅಂದರೆ, ಮೊದಲನೆದಾಗಿ ಮಧ್ಯವರ್ತಿಗಳನ್ನು ದೂರಮಾಡುವುದು. ಎರಡನೆದಾಗಿ ಬಾಡಿಗೆ ನಿಗದಿಪಡಿಸುವುದು ಮತ್ತು ಮೂರನೆದಾಗಿ ಚಾಲ್ತಿಯಲ್ಲಿರುವ ಗರಿಷ್ಠ ಮಿತಿ, ಇತ್ಯಾದಿಗಳನ್ನು ಕಡಿಮೆ ಮಾಡುವುದು. ಗರಿಷ್ಠ ಮಿತಿಗೆ ಸಂಬಂಧಿಸಿದಂತೆ, ಅದು ಸ್ಥಳದಿಂದ ಸ್ಥಳಕ್ಕೆ ಮತ್ತು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಾಗಬಹುದು.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಮುಖ್ಯ ಮಂತ್ರಿಗಳ ಸಮ್ಮೇಳನದ ವ್ಯವಹರಣೆಗಳ ದೃಷ್ಟಿಯಿಂದ, ನಮ್ಮ ರಾಜ್ಯದಲ್ಲಿರುವ ಹಿಡುವಳಿಗಳ ಗರಿಷ್ಠ ಮಿತಿಯನ್ನು ಕಡಿಮೆಗೊಳಿಸುವುದು ಅವಶ್ಯಕವೆಂದು ಸರ್ಕಾರ ಭಾವಿಸುತ್ತದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಹೌದು, ಪರ್ಯಾಲೋಚನೆ ಮತ್ತು ಸಮಾಲೋಚನೆಗಳ ತರುವಾಯ ಗರಿಷ್ಠ ಮಿತಿಯನ್ನು ನಿಗದಿಪಡಿಸಬೇಕಾಗಿದೆ. ಏಕೆಂದರೆ, ಇದು ಸ್ಥಳದಿಂದ ಸ್ಥಳಕ್ಕೆ ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಾಗುತ್ತದೆ.

**ಶ್ರೀ ಎಂ. ನಾಗಪ್ಪ** – ಸ್ವಾಮಿ, ಭಾರತ ದೇಶದ ಅನೇಕ ರಾಜ್ಯಗಳಲ್ಲಿ ಇರತಕ್ಕಂಥ ಸೀಲಿಂಗ್ ಯೋಚನೆ ಮಾಡಿ ನಮ್ಮಲ್ಲಿಯ ಸೀಲಿಂಗ್ ಗೊತ್ತುಮಾಡಿದೆ ಎಂದು ಈಗ ತಾವು ಹೇಳಿದಿರಿ. ನಮ್ಮ ರಾಜ್ಯದಲ್ಲಿ ಈ ಸೀಲಿಂಗ್ ಹೆಚ್ಚು ಇದೇ ಎಂದು ತಾವು ಒಪ್ಪುತ್ತೀರಿ. ಅದನ್ನು ಪರಿವರ್ತನೆ ಮಾಡಿ ಬೇರೆ ರಾಜ್ಯಗಳಲ್ಲಿ ಇರತಕ್ಕಂಥ ಕನಿಷ್ಠ ಸೀಲಿಂಗ್ ನಮ್ಮ ರಾಜ್ಯದಲ್ಲಿ ಜಾರಿಗೆ ತರಲು ಯೋಚನೆ ಮಾಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಇದು ಸನ್ಮಾನ್ಯ ಸದಸ್ಯರ ಪ್ರಾಮಾಣಿಕ ಅಭಿಪ್ರಾಯವಾಗಿರುತ್ತದೆ. ಈ ಅಂಶವನ್ನು ಪರಿಗಣಿಸಬೇಕಾಗಿದೆ.

**ಶ್ರೀ ಎಂ.ಎಸ್. ಕೃಷ್ಣನ್** – ಸಣ್ಣ ಗೇಣಿದಾರರಿಗೆ ಜಮೀನನ್ನು ನೀಡುವ ಬಗ್ಗೆ ಭೂಸುಧಾರಣಾ ಅಧಿನಿಯಮದಲ್ಲಿನ ಲೋಪದೋಷದಿಂದಾಗಿ, ಭೂ ಸುಧಾರಣಾ ಅಧಿನಿಯಮವನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ ಎಂಬುದು ತಮಗೆ ತಿಳಿದಿದೆಯೇ? ಕೇರಳ ಸರ್ಕಾರದ ಮಾದರಿಯಲ್ಲಿಯೇ ಇಲ್ಲಿಯೂ ಲೋಪದೋಷಗಳನ್ನು ತೆಗೆದುಹಾಕಲು ನೀವು ತಯಾರಿದ್ದೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಭೂ ಸುಧಾರಣಾ ಅಧಿನಿಯಮಕ್ಕೆ ಸಂಬಂಧಪಟ್ಟಂತೆ ಇದುವರೆವಿಗೂ ಯಾವುದೇ ಲೋಪದೋಷಗಳಿಲ್ಲ. ಸನ್ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಯಾವುದೇ ನಿರ್ದಿಷ್ಟ ಉಪಬಂಧಗಳಲ್ಲಿ ಅಂಥ ದೋಷಗಳಿದ್ದರೆ, ಅದನ್ನು ನಾನು ಮತ್ತೊಮ್ಮೆ ಪರಿಶೀಲಿಸುತ್ತೇನೆ.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಸರ್ಕಾರವು, ಈಗಾಗಲೇ ಒಕ್ಕಲೆಬ್ಬಿಸಿರುವ ಗೇಣಿದಾರರ ಸಂಖ್ಯೆಯನ್ನು ಮತ್ತು ಈ ಅಧಿನಿಯಮವನ್ನು ಪೂರ್ಣವಾಗಿ ಅನುಷ್ಠಾನಗೊಳಿಸಿದಾಗ ಒಕ್ಕಲೆಬ್ಬಿಸುವ ಗೇಣಿದಾರರ ಸಂಖ್ಯೆಯನ್ನು ಸಂಗ್ರಹಿಸಿದೆಯೇ? ಈ ಬಗ್ಗೆ ನಾನು ತಿಳಿದುಕೊಳ್ಳಬಹುದೇ?

**ಶ್ರೀ ಹೆಚ್.ವಿ. ಕೌಜಲಗಿ** – ಸ್ವಾಮಿ ಎಷ್ಟು ಮಂದಿ ಗೇಣಿದಾರರನ್ನು ಒಕ್ಕಲೆಬ್ಬಿಸಲಾಗಿದೆ ಮತ್ತು ಎಷ್ಟುಮಂದಿಯನ್ನು ಒಕ್ಕಲೆಬ್ಬಿಸಲಾಗುವುದೆಂಬ ಬಗ್ಗೆ ಸರ್ಕಾರವು ಪಟ್ಟಿ ಮಾಡಿಲ್ಲ. ಆದರೂ, ಯಾರೇ ಗೇಣಿದಾರನನ್ನು ಒಕ್ಕಲೆಬ್ಬಿಸಿದರೆ, ಅವನು, ಅದರ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪರಿಹಾರವನ್ನು ಕೋರಬಹುದೆಂಬುದಕ್ಕೆ ಈ ಅಧಿನಿಯಮದಲ್ಲಿ ಅವಕಾಶವಿದೆ. ಈ ಅಧಿನಿಯಮವನ್ನು ಇನ್ನೂ ಜಾರಿಗೊಳಿಸಬೇಕಾಗಿರುವುದರಿಂದ ಎಷ್ಟು ಮಂದಿ ಗೇಣಿದಾರರನ್ನು ಒಕ್ಕಲೆಬ್ಬಿಸಲಾಗುವುದೆಂದು ಹೇಳಲು ಸಾಧ್ಯವಿಲ್ಲ.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಭೂ ಸುಧಾರಣಾ ಅಧಿನಿಯಮ 1961ರ ಅಧ್ಯಾಯ ೩೩೩ರ ಪ್ರಕಾರ, ಉಳುವವನಿಗೆ ಭೂ ಮಾಲೀಕತ್ವದ ಹಕ್ಕುಗಳನ್ನು ವಹಿಸಿಕೊಡುವುದಕ್ಕೆ ಚಾಲ್ತಿಯಿರುವ ಉಪಬಂಧಗಳ ಪ್ರಕಾರ ಕೊನೆಯಪಕ್ಷ 15ರಿಂದ 20 ವರ್ಷಗಳಾಗಬಹುದು. ಈ ಬಗ್ಗೆ ಸರ್ಕಾರವು ಸಂಬಂಧಪಟ್ಟ ಉಪಬಂಧಗಳಿಗೆ ತಿದ್ದುಪಡಿ ತಂದು, ಆದಷ್ಟು ಬೇಗ ಗೇಣಿದಾರರಿಗೆ ಭೂ ಮಾಲೀಕತ್ವದ ಹಕ್ಕು ವಹಿಸಿಕೊಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುವುದೇ?

**ಶ್ರೀ ಹೆಚ್.ವಿ. ಕೌಜಲಗಿ** – ಮಾಲೀಕತ್ವದ ಹಕ್ಕುಗಳ ಸ್ಥಿರೀಕರಣವನ್ನು ನೀಡುವುದಕ್ಕಾಗಿ 15ರಿಂದ 20 ವರ್ಷಗಳು ಬೇಕಾಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ, ಇದಕ್ಕೆ ಅಧಿನಿಯಮವನ್ನು ಜಾರಿಗೆ ತಂದ ನಂತರ 4ರಿಂದ 5 ವರ್ಷಗಳು ಬೇಕಾಗಬಹುದು.

**ಶ್ರೀ ಸಿ.ಆರ್. ರಂಗೇಗೌಡ** – ಸ್ವಾಮಿ, ಜಮೀನುದಾರರು ಟೆನೆಂಟ್ಸ್‌ಗಳಿಗೆ ತೊಂದರೆ ಕೊಡುತ್ತಾರೆ. ಹರಿಜನ ಗಿರಿಜನರ ಹತ್ತಿರ ಹಣ ಇಲ್ಲದಿರುವುದರಿಂದ ಕೋರ್ಟು ವ್ಯವಹಾರ ನಡೆಸಲು ಅವರಿಗೆ ಸಾಧ್ಯವಿಲ್ಲ. ಕೋರ್ಟು ಆಫ್ ಲಾಕ್ಕೆ ಹೋಗಲು ಅವರಿಗೆ ಚೈತನ್ಯವಿಲ್ಲ. ತಾಲ್ಲೂಕು ರಿಕಾರ್ಡ್ಸ್ ತರಿಸಿಕೊಂಡು ಏನಾದರೂ ಕ್ರಮ ತೆಗೆದುಕೊಂಡು ಟೆನೆಂಟ್ಸ್‌ಗಳಿಗೆ ಸೌಲಭ್ಯ ಒದಗಿಸಿಕೊಡಲು ವ್ಯವಸ್ಥೆ ಮಾಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಅಂಥ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇ ಆದರೆ, ಸರ್ಕಾರವು ಕ್ರಮ ತೆಗೆದುಕೊಳ್ಳುತ್ತದೆ.

**ಶ್ರೀ. ಎಸ್.ಎಂ. ಗುರೆಡ್ಡಿ** – ಭೂ ಸುಧಾರಣಾ ಕಾನೂನು ಪ್ರಕಾರ ನಮ್ಮ ರಾಜ್ಯದಲ್ಲಿ ಹಂಚುವುದಕ್ಕೆ ಎಷ್ಟು ಭೂಮಿ ಇದೆ, ಜನರಿಗೆ ಹಂಚುವುದಕ್ಕೆ ಎಷ್ಟು ಸಾಧ್ಯವಿದೆ ಎನ್ನುವುದಕ್ಕೆ ಅಂಕಿಅಂಶಗಳು ಇವೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ನನ್ನ ಹತ್ತಿರ ವಿವರಗಳಿಲ್ಲ.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಈ ಸದನಕ್ಕೆ ಗೊತ್ತಿರುವಂತೆ ಸಣ್ಣಹಿಡುವಳಿದಾರರು ಅಧಿನಿಯಮದ ಉಪಬಂಧಗಳಿಂದ ಯಾವುದೇ ಅಪೇಕ್ಷಿತ ಪ್ರಯೋಜನವನ್ನು ಪಡೆದಿರುವುದಿಲ್ಲ. ಸರ್ಕಾರವು ಸಣ್ಣ ಹಿಡುವಳಿದಾರರಿಗೆ ಪ್ರಯೋಜನಗಳನ್ನು ಹೆಚ್ಚಿಸಲು ಆಲೋಚಿಸಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಸಣ್ಣ ಹಿಡುವಳಿದಾರರು ಪ್ರಸಕ್ತ ಅಧಿನಿಯಮದಡಿಯಲ್ಲಿ ಗರಿಷ್ಠ ಪ್ರಮಾಣದ ಪ್ರಯೋಜನವನ್ನು ಪಡೆದಿದ್ದಾರೆ. ಆದ್ದರಿಂದ ಯಾವುದೇ ಹೆಚ್ಚಿನ ರಿಯಾಯಿತಿಯನ್ನು ನೀಡಲಾಗುವುದಿಲ್ಲ.

**ಶ್ರೀ ಸಿ.ಕೆ. ರಾಜಯ್ಯ ಶೆಟ್ಟಿ** – ಭೂ ಸುಧಾರಣಾ ಅಧಿನಿಯಮವನ್ನು ಸಾಧ್ಯವಾದಷ್ಟು ಬೇಗನೆ ಅನುಷ್ಠಾನಗೊಳಿಸುವುದಾಗಿ ಹೇಳುತ್ತಿದ್ದೀರಿ. ಸರ್ಕಾರವು ಜಮೀನುಗಳ ಸ್ವಾಧೀನತೆಯನ್ನು

ತೆಗೆದುಕೊಳ್ಳದೆ ಅವುಗಳನ್ನು ನಂತರ ಗೇಣಿದಾರರಿಗೆ ಕೊಡುತ್ತದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬೇಕು. ಆಗ ಬಡ ಗೇಣಿದಾರರಿಗೆ ಯಾವುದೇ ಭಯವಿರುವುದಿಲ್ಲ.

**ಶ್ರೀ ಹೆಚ್.ವಿ. ಕೌಜಲಗಿ** – ಅಧಿನಿಯಮದ ಉಪಬಂಧಗಳ ಪ್ರಕಾರ, ಸರ್ಕಾರವು ಅನೇಕ ಪ್ರಕರಣಗಳಲ್ಲಿ ಪ್ರತಿಫಲ ಕೊಡಬಹುದು.

**ಶ್ರೀ ಎಸ್.ಎ. ಚನ್ನೇಗೌಡ** – ಒಂದು ನಿರ್ದಿಷ್ಟ ಅವಧಿಯಲ್ಲಿ ಈ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಜಾರಿಗೆ ಕೊಡಲು ನಿಷ್ಕರ್ಷಿಸಿ ಕಾನೂನು ಜಾರಿಗೆ ಕೊಡಲು ಏರ್ಪಾಡು ಮಾಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಇದಕ್ಕೆ ಕಾಲವನ್ನು ನಿಗದಿಪಡಿಸಲು ಸಾಧ್ಯವಿಲ್ಲ, ಯಾಕೆಂದರೆ ಇದಕ್ಕೆ ಮೊದಲನೆಯದಾಗಿ ಮನವಿ ಮಾಡಿಕೊಳ್ಳಲಾಗುವುದು. ಎರಡನೆಯ ಮನವಿ ಹಾಗೂ ಈ ಎಲ್ಲಾ ವಿಷಯಗಳು ಮುಂದುವರಿಯುವುವು. ಇದನ್ನು ಇಡೀಯಾಗಿ ಪಕ್ಷದ ಇಚ್ಛೆಗೆ ಬಿಟ್ಟಿರುತ್ತದೆ.

**ಶ್ರೀ ಬಿ. ದೊಡ್ಡಬೋರೇಗೌಡ** – ಸ್ವಾಮಿ, ಭೂಸುಧಾರಣಾ ಪ್ರಕರಣ ವಿಲೇವಾರಿ ಮಾಡಲು ಪೂರ್ವಭಾವಿ ಕ್ರಮ ಪ್ರಾರಂಭವಾಗುತ್ತದೆ. ಪೂರ್ವಭಾವಿ ಕ್ರಮ ಪ್ರಾರಂಭವಾಗಿ ಕೋರ್ಟಿಗೆ ಹೋಗುವಾಗ ಸಾಮಾನ್ಯವಾಗಿ ವಕೀಲರಿಗೆ ಫೀಜ್ ಕೊಡಲಿಕ್ಕೆ ಬಡ ರೈತರಿಗೆ ಸಹಾಯ ಮಾಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಮಾನ್ಯರೆ, ಅಂಥ ಬಡಜನರಿಗೆ ಉಚಿತ ಕಾನೂನು ನೆರವನ್ನು ನೀಡಲಾಗಿದೆ. ಮತ್ತೆ ಇವರು ಯಾವುದೇ ನ್ಯಾಯಾಲಯ ಶುಲ್ಕ ಮತ್ತು ಸ್ಟಾಂಪ್ ಶುಲ್ಕವನ್ನು ಕೊಡಬೇಕಾಗಿಲ್ಲ. ಕೊಟ್ಟಿರುವಂತಹ ಎಲ್ಲಾ ರಿಯಾಯಿತಿಗಳನ್ನು ಬಗ್ಗೆ ಅಧಿನಿಯಮದಲ್ಲಿ ಹೇಳಲಾಗಿದೆ.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಈ ಎಲ್ಲಾ ರಿಯಾಯಿತಿಗಳು ಅಂದರೆ ನ್ಯಾಯಾಲಯ ಶುಲ್ಕ ವಕೀಲರ ಶುಲ್ಕ ಇತ್ಯಾದಿಗಳನ್ನು ನೀಡುವುದು ಕೇವಲ ಕಾಗದದ ಮೇಲೆ ಇದ್ದು ಇದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ನ್ಯಾಯಾಲಯ ಶುಲ್ಕದ ರಿಯಾಯಿತಿಗೆ ಸಂಬಂಧಿಸಿದಂತೆ, ತೀರ್ಮಾನವನ್ನು ತೀರ ಇತ್ತೀಚೆಗೆ ಅಂದರೆ ಸುಮಾರು 2 ತಿಂಗಳುಗಳ ಹಿಂದೆಯಷ್ಟೇ ತೆಗೆದುಕೊಳ್ಳಲಾಗಿದೆ. ಕಾನೂನು ನೆರವಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಇದಕ್ಕೆ ಅವಕಾಶವಿರುತ್ತದೆ, ಆದರೆ, ಇದು ಇದಕ್ಕಾಗಿ ಪಕ್ಷವು ಕೇಳಿದಾಗ ಮಾತ್ರ ಉದ್ಭವಿಸುತ್ತದೆ. ಆದರೆ, ದುರಾದೃಷ್ಟವಶಾತ್ ಒಬ್ಬ ಬಡವನೇ ಆಗಿರಬಹುದು, ಈತ ವಕೀಲರ ಹತ್ತಿರ ಹೋಗಿ ಇವರು ತಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವರೆಂದು ಯೋಚಿಸಿ ಹಣವನ್ನು ನೀಡುತ್ತಾನೆ.

**ಶ್ರೀ ಬಿ. ಭಾಸ್ಕರ್ ಶೆಟ್ಟಿ** – ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಇನ್ನೂ ನ್ಯಾಯಗೇಣಿಯನ್ನು (ಫೇರ್ ರೆಂಟನ್ನು) ನಿಗದಿ ಮಾಡಿಲ್ಲ ಅದನ್ನು ಯಾವಾಗ ನಿಗದಿ ಮಾಡುತ್ತೀರಿ?

**ಶ್ರೀ ಹೆಚ್.ವಿ. ಕೌಜಲಗಿ** – ದಕ್ಷಿಣ ಕನ್ನಡಕ್ಕೆ ಸಂಬಂಧಪಡುವ ಗೇಣಿ ಅರ್ಜಿಗಳನ್ನು, ತಹಸೀಲ್ದಾರರು ಹೊರಡಿಸಿರುವ ಅಧಿಸೂಚನೆಗಳಲ್ಲಿ ನ್ಯೂನತೆಗಳು ಕಂಡುಬಂದಿದ್ದು ಇವುಗಳನ್ನು ಅನೇಕ ರಿಟ್ ಅರ್ಜಿಗಳಲ್ಲಿ ತಳ್ಳಿಹಾಕಿರುವುದರಿಂದ, ಇನ್ನೂ ವಿಲೇವಾರಿ ಮಾಡಲಾಗಿಲ್ಲ. ಈಗ ಸರ್ಕಾರವು ಇವರುಗಳಿಗೆ ನಿರ್ದೇಶನಗಳನ್ನು ನೀಡಿದ್ದು ತಹಸೀಲ್ದಾರರುಗಳಿಂದ ಅಧಿಸೂಚನೆಗಳನ್ನು ಸರಿಯಾಗಿ ಹೊರಡಿಸಲಾಗಿರುತ್ತದೆ ಹಾಗೂ ಎಲ್ಲಾ ಅರ್ಜಿಗಳನ್ನು ವಿವಿಧ ನ್ಯಾಯಾಲಯಗಳಿಂದ ವಿಲೇವಾರಿ ಮಾಡಲಾಗಿದೆ.

(ದಿನಾಂಕ 9.3.1970)

## ಟಿಪ್ಪಣಿ

ಭೂ ಸುಧಾರಣೆ ಕಾಯಿದೆ ಜಾರಿಗೆ ಬಂದದ್ದು ಅಂದು ಮಹತ್ವದ ವಿಷಯವಾಗಿತ್ತು. 1960ರ ಉತ್ತರಾರ್ಧದಲ್ಲಿ ಈ ಬಗ್ಗೆ ಸಾರ್ವಜನಿಕರಲ್ಲೂ ಸರ್ಕಾರದಲ್ಲೂ ವ್ಯಾಪಕ ಚರ್ಚೆಗಳಾಗುತ್ತಿದ್ದವು.

**ಶ್ರೀ ಬೋಳರಘುರಾಮ ಶೆಟ್ಟಿ** – ಭೂ ಮಸೂದೆಯನ್ನು ಅವಸರದಿಂದ ತರಲಾಗಿದೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ವಿಶೇಷ ಪರಿಸ್ಥಿತಿ ಎಂದರೆ ಅಳಿಯ ಸಂತಾನ ಪದ್ಧತಿ ಮತ್ತು ರೈತವಾರಿ ಪದ್ಧತಿ ಏನಿದೆ ಅದಕ್ಕೆ ಅನ್ಯಾಯವಾಗಿದೆ ಎಂದು ಬಹಳ ಸಮಯದಿಂದ ಚಳುವಳಿ ಮಾಡುತ್ತಿದ್ದಾರೆ. ಮೊನ್ನೆ ಅಲ್ಲಿ ಧರಣಿ ಮುಷ್ಕರ ಕೂಡ ಮಾಡಿದ್ದಾರೆ. ರಾಜ್ಯಮಟ್ಟದಲ್ಲಿ ಕೂಡ ಆಗಬಹುದು. ಅವರಿಗೆ ಶೀಘ್ರವಾಗಿ ಪರಿಹಾರ ಒದಗಿಸುತ್ತೀರಾ?

**ಶ್ರೀ ಎಚ್.ವಿ ಕೌಜಲಗಿ** – ಕಾಯಿದೆಯನ್ನು ಅವಸರದಲ್ಲಿ ತಂದಿಲ್ಲ. 1962ರಲ್ಲಿ ಪಾಸಾಗಿ 1965ರಲ್ಲಿ ಅಮಲಿನಲ್ಲಿ ಬಂದಿದೆ. ಅಳಿಯ ಸಂತಾದನ ವಿಚಾರ ಇದರೊಳಗೆ ಬರುವುದಿಲ್ಲ. ಭೂ ಮಾಲೀಕ ಮತ್ತು ಗೇಣಿದಾರರಿಗೆ ಇರುವ ಸಂಬಂಧದ ಬಗ್ಗೆ ಮಾತ್ರ ನಮ್ಮ ಮುಂದೆ ಇದೆ.

**ಶ್ರೀ ಡಿ.ಬಿ. ಕಲ್ಮಣ್‌ಕರ್** – ಈ ಕ್ರಮಗಳು ಗ್ರಾಮಗಳಲ್ಲಿರುವ ಭೂಸುಧಾರಣೆಗಳ ಸಮಸ್ಯೆಗಳನ್ನು ಎದುರಿಸಲು ಸಾಕಾಗುತ್ತದೆ ಅಥವಾ ಇದಕ್ಕೆ ಕೆಲವು ಕಠಿಣ ಕ್ರಮಗಳ ಅಗತ್ಯವಿದೆಯೆಂದು ಸರ್ಕಾರ ಆಲೋಚಿಸಿದೆಯೇ ಎಂಬ ಬಗ್ಗೆ ನಾನು ತಿಳಿದುಕೊಳ್ಳಬಹುದೇ?

**ಶ್ರೀ ಹೆಚ್.ವಿ. ಕೌಜಲಗಿ** – ಸರ್ಕಾರಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಪ್ರಸಕ್ತ ಕ್ರಮವು ಸಾಕು, ಮಾನ್ಯ ಸದಸ್ಯರು ಯಾವುದೇ ಇತರ ಕ್ರಮದ ಬಗ್ಗೆ ಸಲಹೆ ಮಾಡಿದರೆ, ಅದನ್ನು ಪರಿಗಣಿಸಲಾಗುವುದು.

**ಶ್ರೀ ಬಿ.ಪಿ. ಗಂಗಾಧರ** – ವಾರ್ ಫೂಟಿಂಗ್‌ನಲ್ಲಿ ಮಾಡಬೇಕು ಎಂದು ಶ್ರೀ ಕೃಷ್ಣನ್ ಅವರು ಹೇಳುತ್ತಿದ್ದಾರೆ. ಪ್ರತಿ ಹಳ್ಳಿಯಲ್ಲಿಯೂ ಕೂಡ ಪವರ್‌ಫುಲ್ ಆಗಿರುವ ಜನ ಗೇಣಿದಾರರನ್ನು ತಪ್ಪಿಸಿ. ಪಹಣೆಯಲ್ಲಿ ತಮ್ಮ ಹೆಸರನ್ನು ಬರೆಸಿಕೊಂಡು ವಾರ್‌ಫೂಟಿಂಗ್ ಮೇಲೆ ಎವಿಕ್ಟ್ ಮಾಡುತ್ತಿದ್ದಾರೆ. ಅಂತವರಿಗೆ ಏನಾದರೂ ರಕ್ಷಣೆಯನ್ನು ಸರ್ಕಾರ ಕೊಡುವುದೇ?

ಶ್ರೀ **ಹೆಚ್.ವಿ. ಕೌಜಲಗಿ** – ವಾರ್ ಪೂಟಿಂಗ್ ಎಂದರೆ ಪದಕ್ಕೆ ಅದು ಅರ್ಥವಲ್ಲ. ಹೆಚ್ಚು ಜಾಗ್ರತೆಯಾಗಿ ಆಗಬೇಕು ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳುವಂಥದ್ದು ಏನೂ ಆಗಿಲ್ಲ.

ಶ್ರೀ **ಎಂ. ನಾಗಪ್ಪ** – ಅನೇಕ ತಾಲ್ಲೂಕು ಕೋರ್ಟುಗಳಲ್ಲಿ 800, ಒಂದು ಸಾವಿರ, ಎರಡು ಸಾವಿರ ಹೀಗೆ ಅರ್ಜಿಗಳು ಪೆಂಡಿಂಗ್ ಇವೆ. ಒಂದು ದಿವಸಕ್ಕೆ ಒಂದು ಅಪ್ಲಿಕೇಶನ್ ಇತ್ಯರ್ಥ ಮಾಡಿದರೂ ಸಹಿತ ಎಷ್ಟು ವರ್ಷಗಳಾಗುತ್ತವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ದೃಷ್ಟಿಯಿಂದ ವಾರ್‌ಪೂಟಿಂಗ್ ಮೇಲೆ ಮಾಡಿದರೂ 20 ವರ್ಷಕಾಲ ಹಿಡಿಯುತ್ತದೆ ಎನ್ನುವುದನ್ನು ಒಪ್ಪುತ್ತಾರೆಯೇ? ಇಲ್ಲ ಎಂದರೆ ಎಷ್ಟು ವರ್ಷದೊಳಗೆ ಭೂಸುಧಾರಣಾ ಕಾಯಿದೆಯನ್ನು ಪೂರ್ತಿಯಾಗಿ ಕಾರ್ಯಗತ ಮಾಡುತ್ತಾರೆ ಎಂದು ಸಮಯವನ್ನು ನಿಗದಿ ಮಾಡಿದ್ದಾರೆಯೇ?

ಶ್ರೀ **ಹೆಚ್.ವಿ. ಕೌಜಲಗಿ** – ಮಾನ್ಯ ಸದಸ್ಯರು ಎಲ್ಲೋ ಒಂದೆರಡು ಕೋರ್ಟಿನ ಉದಾಹರಣೆಯನ್ನು ಹೇಳುತ್ತಿದ್ದಾರೆ. ಕೆಲವು ಕಡೆ ಸಿವಿಲ್‌ಗೆ ಸಂಬಂಧಪಟ್ಟ ಕೇಸುಗಳಿಲ್ಲ.

| | | | |
|---|---|---|---|
| 12. | ಮಂಡ್ಯ | 307–07 | 1284–34 |
| 13. | ಚಿಕ್ಕಮಗಳೂರು | 304–28 | 849–27 |
| 14. | ರಾಯಚೂರು | 629–02 | 985–27 |
| 15. | ದ.ಕ.ಜಿಲ್ಲೆ | 174–06 | 1228–32 |
| 16. | ಬೆಂಗಳೂರು | 215–301/2 | 410–39 |
| 17. | ಗುಲ್ಬರ್ಗ | 59–18 | 38–00 |
| 18. | ಮೈಸೂರು | 479–08 | 1344–04 |
| 19. | ಧಾರವಾಡ | 48–14 | 342–39 |

ಶ್ರೀ **ಎಂ.ಎಚ್. ಜಯಪ್ರಕಾಶ್ ನಾರಾಯಣ್** – ತಾವು ಪರಿಶಿಷ್ಟದಲ್ಲಿ ಒದಗಿಸಿರತಕ್ಕಂಥ ಅಂಶಗಳನ್ನು ನೋಡಿದರೆ ಅಲ್ಲಿ ಭೂಮಿ ಹಂಚಿಕೆ ಹರಿಜನ ಗಿರಿಜನರಿಗೆ ಕೊಟ್ಟಿರತಕ್ಕ ಭೂಮಿಗಿಂತ 4–5 ಪಟ್ಟು ಹೆಚ್ಚು ಭೂಮಿಯನ್ನು ಬೇರೆ ಜನಾಂಗದವರುಗಳಿಗೆ ಕೊಟ್ಟಿರುವುದನ್ನು ನೋಡಿದಾಗ ಈ ಹರಿಜನ ಗಿರಿಜನ ಉದ್ಧಾರವೆಲ್ಲಾ ಬರೀ ಕಾಗದದ ಮೇಲೆಯೇ ಎಂದು ಕಂಡುಬರುವುದಿಲ್ಲವೇ? ಇದನ್ನು ತಾವು ಒಪ್ಪುತ್ತೀರಾ?

ಶ್ರೀ **ಹೆಚ್.ವಿ. ಕೌಜಲಗಿ** – ಪರಿಸ್ಥಿತಿಯು ಈ ರೀತಿ ಅಂದರೆ, 19 ಜಿಲ್ಲೆಗಳ ಪೈಕಿ, 8 ಜಿಲ್ಲೆಗಳಲ್ಲಿ ಇರುವ ಜಮೀನುಗಳ ಪೈಕಿ ಶೇ.50 ಅಥವಾ ಹೆಚ್ಚು ಜಮೀನುಗಳನ್ನು ಹಂಚಿಕೆ

1757-12

ಮಾಡಲಾಗಿದೆ. 3 ಅಥವಾ 4 ಜಿಲ್ಲೆಗಳಲ್ಲಿ ಸರಿಸುಮಾರು ಮೂರನೆ ಒಂದರಷ್ಟನ್ನು ಹಂಚಿಕೆ ಮಾಡಲಾಗಿದೆ ಹಾಗೂ ಇತರ ಜಿಲ್ಲೆಗಳಲ್ಲಿ ನನಗೆ ಮಾಹಿತಿ ದೊರೆತಿರುವ ಮಟ್ಟಿಗೆ ಅನೇಕ ಅರ್ಜಿಗಳು ಇನ್ನೂ ಇತ್ಯರ್ಥದಲ್ಲಿದ್ದು ಜಮೀನುಗಳನ್ನು ವಿಲೇವಾರಿ ಮಾಡಲಾಗಿರುವುದಿಲ್ಲ, ಇನ್ನು ಕೆಲವು ಪ್ರಕರಣಗಳಲ್ಲಿ ಜಮೀನುಗಳನ್ನು ಮಂಜೂರು ಮಾಡಲಾಗಿದ್ದು, ಆದರೆ ಮಲ್ಕಿಯನ್ನು ತೆಗೆದುಹಾಕಿಲ್ಲ. ಹಾಗೆಯೇ ಇನ್ನು ಕೆಲವು ಪ್ರಕರಣಗಳಲ್ಲಿ, ಇದಕ್ಕೆ ಬಂದಿರುವ ಅರ್ಜಿಗಳು ತುಂಬಾ ಕಡಿಮೆ ಇದ್ದರೂ ಕೂಡ ಇವರಿಗಾಗೆಯೇ ಜಮೀನುಗಳನ್ನು ಇನ್ನೂ ಮೀಸಲಾಗಿಡಲಾಗಿರುತ್ತದೆ.

ಶ್ರೀ **ಎಂ.ಎಚ್. ಜಯಪ್ರಕಾಶ ನಾರಾಯಣ್** – ಮುಂದೆ ಕಮಿಟಿಗಳನ್ನು ಮಾಡಿ ರಾಜ್ಯದಲ್ಲಿರತಕ್ಕ 11 ಲಕ್ಷ ಎಕರೆ ಭೂಮಿಯನ್ನು ಭೂರಹಿತರಿಗೆ ಹಂಚತಕ್ಕ ಕಾಲದಲ್ಲಿ ಹರಿಜನ ಗಿರಿಜನರಿಗೆ ಅದರಲ್ಲಿ 5 ಲಕ್ಷ ಎಕರೆಗಳನ್ನು ಮೀಸಲಾಗಿಡತಕ್ಕ ಭರವಸೆಯನ್ನು ಕೊಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಸ್ವತಃ ನಿಯಮದಲ್ಲಿ ಸೇರಿಸಲಾಗಿರುವಂತಹವುಗಳ ಬಗ್ಗೆ ಯಾವುದೇ ಭರವಸೆಯನ್ನು ನೀಡುವ ಪ್ರಶ್ನೆಯೇ ಇರುವುದಿಲ್ಲ.

**ಶ್ರೀ ಎಂ. ನಾಗಪ್ಪ** -- ತಾವು ಕೊಟ್ಟಿರತಕ್ಕ ಉತ್ತರವನ್ನು ನೋಡಿದರೆ ಸರ್ಕಾರದವರು ವಿಜಾಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ಹರಿಜನ ಗಿರಿಜನರಿಗೆ ಯಾರಿಗೂ ಭೂಮಿಯನ್ನು ಒಂದು ಎಕರೆ ಸಹಿತ ಕೊಟ್ಟಿಲ್ಲ. ಅದಕ್ಕೆ ಕಾರಣ ಇಲ್ಲಿ ಯಾರು ಭೂಮಿಗಾಗಿ ಅರ್ಜಿಯನ್ನು ಹಾಕಿಲ್ಲವೋ ಅಥವಾ ಅಲ್ಲಿ ಹರಿಜನರೇ ಇಲ್ಲವೋ ಅಲ್ಲಿ ಇವರಿಗೆ ಕೊಡುವುದಕ್ಕೆ ಜಮೀನೇ ಇಲ್ಲವೋ? ಮತ್ತು ಈ ಭೂಮಿ ಹಂಚಿಕೆಯನ್ನು 1972 ರಲ್ಲಿ ಮಹಾ ಚುನಾವಣೆಗಳು ಬರುವುದಕ್ಕೆ ಮುನ್ನ 1971 ರಲ್ಲಿ ಹಂಚುವುದರ ಬದಲು ಈಗಾಗಲೇ ಹಂಚುವುದಕ್ಕಾಗುವುದಿಲ್ಲವೇ?

**ಶ್ರೀ ಹೆಚ್.ವಿ. ಕೌಜಲಗಿ** – ಮೊದಲನೆಯ ಪ್ರಶ್ನೆಗೆ ಸಂಬಂಧಪಡುವಷ್ಟರ ಮಟ್ಟಿಗೆ, ಬಿಜಾಪುರ ಜಿಲ್ಲೆಯಲ್ಲಿ ಸಾಗುವಳಿಗೆ ಯೋಗ್ಯವಾದ ಜಮೀನುಗಳು ಇರಲಿಲ್ಲ. ಬೀದರ್ ಜಿಲ್ಲೆಗೆ ಸಂಬಂಧಪಡುವಷ್ಟರ ಮಟ್ಟಿಗೆ, ಮಾಹಿತಿಯು ಈಗ ಲಭ್ಯವಿರುವುದಿಲ್ಲ, ಆದ್ದರಿಂದ ಬೀದರ್ ಜಿಲ್ಲೆಯಲ್ಲಿ ಜಮೀನುಗಳನ್ನು ಹಂಚಿಕೆ ಮಾಡಿಲ್ಲ. ಕೆಲವು ಜಮೀನುಗಳನ್ನು ಹಂಚಿಕೆ ಮಾಡಲಾಗಿದೆ ಎಂಬುದಾಗಿ ನಾನು ಹೇಳುವಂತಿಲ್ಲ. ಎರಡನೆಯ ಪ್ರಶ್ನೆಗೆ ಸಂಬಂಧಪಡುವಷ್ಟರಮಟ್ಟಿಗೆ, ಬೇರೊಂದು ದಿನ, ನಾನು ಸಮಿತಿಗಳನ್ನು ತಕ್ಷಣವೇ ರಚಿಸಲಾಗುವುದೆಂದು ಹೇಳಿದ್ದೇನೆ.

**ಶ್ರೀ ಎಂ.ಎಚ್. ಜಯಪ್ರಕಾಶ ನಾರಾಯಣ್** – ಸ್ವಾಮಿ, ಈಗ ಒಂದು ಸಮಿತಿ ಮೂಲಕ ಜಮೀನು ಹಂಚಿಕೆ ಮಾಡತಕ್ಕ ಬಗ್ಗೆ ತಾಲ್ಲೂಕು ಬೋರ್ಡ್‌ನಿಂದ ಚುನಾಯಿತ ಆದ ಒಬ್ಬ ಪ್ರತಿನಿಧಿ ಇರುತ್ತಾನೆ ಎಂದು ಹೇಳಿದಿರಿ. ಅವರಿಗೆ ಜಮೀನು ಹಂಚಿಕೆ ಮಾಡುವುದಕ್ಕೆ ಆಯಾಯ ಡಿಸ್ಟ್ರಿಕ್ಟ್‌ನಲ್ಲಿ ಯಾರು ಯಾರು ಎಂ.ಎಲ್.ಎ. ಎಂ.ಎಲ್.ಸಿ ಆಗಿರುತ್ತಾರೋ ಅವರನ್ನು ಆ ಕಮಿಟಿಗೆ ಎಕ್ಸ್ ಅಫಿಸಿಯೋ ಮೆಂಬರ್ ಆಗಿ ಹಾಕಿದರೆ ಅವರಿಗೆ ಸಾಕಷ್ಟು ರಕ್ಷಣೆ ಕೊಡುವುದಕ್ಕೆ ಅವಕಾಶವಾಗುತ್ತದೆ. ಆ ರೀತಿ ಮಾಡಿ ಕೊಡುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಹಾಗೆ ಮಾಡಿದರ ತೊಂದರೆಯಾಗುತ್ತದೆ. ಏತಕ್ಕೆಂದರೆ ಒಂದು ತಾಲ್ಲೂಕಿನ ಪ್ರತಿನಿಧಿಗೆ ಇನ್ನೊಂದು ತಾಲ್ಲೂಕಿನ ಪರಿಸ್ಥಿತಿ ಏನೆಂದು ತಿಳಿದುಕೊಂಡು ಅಲ್ಲಿ ಬೇಕಾದ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಅಲ್ಲಲ್ಲಿ ಇರುವವರನ್ನೇ ಮಾಡುವುದು ಯೋಗ್ಯ ಎಂದು ನನಗೆ ಅನ್ನಿಸುತ್ತದೆ.

**ಶ್ರೀ ಹೆಚ್. ಸಿದ್ಧವೀರಪ್ಪ** – ಸರ್ಕಾರವು ಜಮೀನನ್ನು ಹಂಚಿಕೆ ಮಾಡಿರುವುದನ್ನು ತೋರಿಸುವ ಕೆಲವು ಅಂಕಿಅಂಶಗಳನ್ನು ನೀಡಿರುತ್ತದೆ ಮತ್ತು ಆ ವಿವರಣೆಪತ್ರದಿಂದ ಪರಿಶಿಷ್ಟ ಜಾತಿಯ ಜನರು ಸರ್ಕಾರವು ನೀಡಿರುವಂತಹ ವರ್ಷದ ಅಂಕಿಅಂಶಗಳಿಗಿಂತ ಕಡಿಮೆ ಎಕರೆ ಜಮೀನು ಪಡೆದಿರುವುದು ಕಂಡುಬರುತ್ತಿದೆ. ಆದ್ದರಿಂದ ಈ ಜಮೀನುಗಳನ್ನು ಯಾವ ಅವಧಿಯಿಂದ ನೀಡಲಾಗಿದೆ ಎಂಬುದನ್ನು ನಾನು ತಿಳಿದುಕೊಳ್ಳಬಯಸುತ್ತೇನೆ.

**ಶ್ರೀ ಹೆಚ್.ವಿ. ಕೌಜಲಗಿ** – ಈ ಅಂಕಿ ಅಂಶಗಳು 1968ರ ಹಿಂದಿನ ಮೂರು ವರ್ಷಗಳ ಅವಧಿಯದು ಆಗಿರುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ – ಹಾಸನದಲ್ಲಿ 1673 ಎಕರೆ 4 ಗುಂಟೆ ಶಿವಮೊಗ್ಗದಲ್ಲಿ 820 ಎಕರೆ 24 ಗುಂಟೆ ಇಷ್ಟು ಜಮೀನು ವಿತರಣೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಅಲ್ಲಿ ಸತ್ಯಾಗ್ರಹ ಮಾಡಿ ಯಾರು ಯಾರು ಅರ್ಜಿ ಕೊಟ್ಟಿದ್ದರೋ ಅವರಿಗೆ ಆ ಜಮೀನು ಸ್ಯಾಂಕ್ಷನ್ ಆಗಿದೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಎಲ್ಲಿ ಸತ್ಯಾಗ್ರಹ ಮಾಡಿದರೋ ಯಾವ ಸತ್ಯಾಗ್ರಹಿಗೆ ಕೊಟ್ಟರೋ ನನಗೆ ಗೊತ್ತಿಲ್ಲ.

**ಅಧ್ಯಕ್ಷರು** – ಮಾನ್ಯ ಅರಕೇರಿಯವರ ಪ್ರಶ್ನೆ ನಂ:484, ಮಾನ್ಯ ಜಯಪ್ರಕಾಶ್ ನಾರಾಯಣ ಅವರು ಹಾಕಲು ನಾನು ಅನುಮತಿ ಕೊಟ್ಟಿದ್ದೇನೆ.

(ದಿನಾಂಕ: 14 ಮಾರ್ಚ್ 1970)

**ಶ್ರೀ ಹೆಚ್.ವಿ. ಕೌಜಲಗಿ** – ವಾಟರ್ ರೇಟಿಗೆ ಕಾಯಿದೆ ಇದೆ. ಕಾಯಿದೆ ಬಿಟ್ಟುಹೋಗಲಿಕ್ಕೆ ಬರುವುದಿಲ್ಲ. ಯಾರು ಯಾರು ನೀರು ತೆಗೆದುಕೊಂಡಿಲ್ಲವೋ ಎನ್‌ಕ್ವೈರಿ ಮಾಡಿ ಎಂದು ಹೇಳಿದ್ದೇನೆ. ನೀರು ಕೊಟ್ಟಿಲ್ಲ ಎಂದರೆ ಮಾತ್ರ ಬಿಡಬೇಕಾಗುತ್ತದೆ.

**ಶ್ರೀ ಆರ್. ಮುನಿಸ್ವಾಮಯ್ಯ** – ರೈತರು ಕಾಯಿದೆಗೆ ವಿರೋಧವಾಗಿ ಹೋಗುವುದಿಲ್ಲ. ಮಳೆ ಬಂದಿಲ್ಲದೇ ಇದ್ದುದರಿಂದ ಕೆರೆಗಳು ತುಂಬಿಲ್ಲ. ಆದುದರಿಂದ ನೀರು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ರೈತರಿಗೆ ಅಪೀಲು ಮಾಡಲು ಶಕ್ತಿ ಸಾಲದೆ ಅಪೀಲು ಮಾಡಿಲ್ಲ. ಆದ್ದರಿಂದ ರೈತರಿಗೆ ಅಪೀಲು ಮಾಡುವುದಕ್ಕೆ ಕಾಲ ಕೊಡಬೇಕು ಎಂದು ಹೇಳುತ್ತೇನೆ.

**ಶ್ರೀ ಬಿ.ಎಂ. ಇದಿನಬ್ಬ** – ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ನೀರನ್ನು ಉಪಯೋಗಿಸಿಕೊಂಡಿದ್ದರೂ ತೆರಿಗೆ ನೋಟಿಸ್ ಬಂದಿದೆ. ಅವರ ವಿಚಾರ ಹೇಳಬೇಕು.

**ಶ್ರೀ ಹೆಚ್.ವಿ. ಕೌಜಲಗಿ** – ಎಷ್ಟು ಮಾತ್ರ ಹೇಳುತ್ತೇನೆ. ಅಪೀಲು ಮಾಡದಿದ್ದರೂ ಅಸಿಸ್ಟೆಂಟ್ ಕಮಿಷನರ್, ಅಸಿಸ್ಟೆಂಟ್ ಇಂಜಿನಿಯರ್ ಹತ್ತಿರ ಹೋದರೆ ಅವರು ಚೌಕಾಸಿ ಮಾಡುತ್ತಾರೆ ಎಂದು ಹೇಳಿದ್ದೇನೆ.

**ಶ್ರೀ ಡಿ. ದೇವರಾಜ್ ಅರಸ್** – ಯಾವುದೇ ರೀತಿಯ ಬಾಕಿಗಳು ಇದ್ದರೆ ಅವುಗಳನ್ನು ಸಂದಾಯ ಮಾಡುವಂತೆ ತಾಲ್ಲೂಕು ಮಟ್ಟದಲ್ಲಿ ಜನರಿಗೆ ಕಿರುಕುಳ ಕೊಡಲಾಗುತ್ತಿದೆ ಅಥವಾ ಒತ್ತಾಯಪಡಿಸಲಾಗುತ್ತಿದೆ, ಆದ್ದರಿಂದ ಜನರಿಗೆ ಕಿರುಕುಳ ಕೊಡಕೂಡದೆಂದು ತಾವು ಸ್ಥಳೀಯ ಅಧಿಕಾರಿಗಳಿಗೆ ಹೇಳಬೇಕೆಂದು ತಮ್ಮಲ್ಲಿ ನಾವು ವಿನಂತಿಸಿಕೊಳ್ಳುತ್ತೇವೆ. ನೀರನ್ನು ಬಿಡದಿರುವ ಅಥವಾ ಬೆಳೆಗಳು ವಿಫಲವಾಗಿರುವ ಕಡೆಗಳಲ್ಲೆಲ್ಲಾ ಇವರು ಸ್ಥಳಕ್ಕೇ ಹೋಗಿ ತನಿಖೆ ಮಾಡಬೇಕು. ಇವರು ತಮ್ಮ ಕಚೇರಿಗಳಲ್ಲಿ ಕುಳಿತುಕೊಂಡು ನೀರನ್ನು ಕೊಡಲಾಗಿದೆಯೇ ಅಥವಾ ಕೊಡಲಾಗಿಲ್ಲವೇ ಎಂಬುದಾಗಿ ಹೇಳಿರುವ ಕೆಲವು ವರದಿಯನ್ನು ಬರೆಯಬಾರದು. ಇವರು ಸ್ಥಳ ಪರಿಶೀಲನೆ ಮಾಡಬೇಕು ಮತ್ತು ಪಂಚನಾಮದ ನಂತರ ನೀರನ್ನು ಬಿಡಬೇಕೆ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಬೇಕು.

**ಶ್ರೀ ಹೆಚ್.ವಿ. ಕೌಜಲಗಿ** – ಮಾನ್ಯ ಸದಸ್ಯರು **ನಿಮ್ಮ ಅಧಿಕಾರಿಗಳು ಸ್ಥಳದಿಂದ ಸ್ಥಳಕ್ಕೆ ಏತಕ್ಕೆ ಹೋಗಬಾರದು** ಎಂದು ಕೇಳಿದರು. **ನಾನು ಈಗಾಗಲೇ ಈ ಕ್ರಮವನ್ನು ಅಳವಡಿಸಿಕೊಂಡಿದ್ದೇನೆ.** ಅಪೀಲು ಮಾಡಲಿ, ಮಾಡದೇ ಇರಲಿ ಹರಾಸ್ ಮಾಡಬೇಕು ಎನ್ನುವ ಉದ್ದೇಶವಿಲ್ಲ.

**ಶ್ರೀ ಎಸ್. ಶಿವಪ್ಪ** – ಅಧಿಕಾರಿಗಳು ಹೇಳುತ್ತಾರೆ ವಿಲೇಜ್ ಅಕೌಂಟೆಂಟ್ಸ್ ಇಲ್ಲದ್ದರಿಂದ ಲೆಕ್ಕ ಇಡುವುದು ಎಲ್ಲಿಂದ ಬಂತು ಎಂದು. **ಯಾರೇ ಶಾನುಭೋಗರೂ ಇರುವುದಿಲ್ಲ.** 3 ವರ್ಷದಿಂದ, ಎಲ್ಲೆಲ್ಲಿ ಅಭಾವ ಪರಿಸ್ಥಿತಿ ಬಂದಿದೆ ಅಲ್ಲೆಲ್ಲಾ ವಾಜಾ ಮಾಡುತ್ತೇವೆ ಎಂದು ಹೇಳಿ.

**ಶ್ರೀ ಹೆಚ್.ವಿ. ಕೌಜಲಗಿ** – ಎಲ್ಲೆಲ್ಲಿ ನೀರು ತೆಗೆದುಕೊಂಡಿದ್ದೇವೆ ಎಂದು ಹೇಳುತ್ತಾರೋ ಅಲ್ಲಿ ತೆಗೆದುಕೊಂಡಿದ್ದೇವೆ.

**ಶ್ರೀ ಎಚ್. ಸಿದ್ಧವೀರಪ್ಪ** – ಪಾಯಿಂಟ್ ಆಫ್ ಆರ್ಡರ್, ಅನುಮಾನ ಬಂದಾಗ ಫೈಲನ್ನು ಕೇಳಿದರೆ ನೋಡಲು ಕೊಡುತ್ತೀರಾ? ಮಾನ್ಯರೆ, ಒಂದುವೇಳೆ ಕೆಲವು ವಿವರಣೆ ಇತ್ಯಾದಿಗಳಿಗಾಗಿ ನಮಗೆ ಕಡತವು ಬೇಕಾದಾಗ, ಮಾನ್ಯ ಮಂತ್ರಿಯವರು ಆ ಕಡತವನ್ನು ಕೊಡಲು ಒಪ್ಪುತ್ತಾರೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಈ ನಿರ್ದಿಷ್ಟವಾದ ವಿಷಯದಲ್ಲಿ ಮಾತ್ರ ನನ್ನ ಪ್ರಾಮಾಣಿಕತೆಯನ್ನು ತೋರಿಸುವ ದೃಷ್ಟಿಯಿಂದ ನಾನು ಈ ಕಡತವನ್ನು ನೀಡಲು ಸಿದ್ಧನಿದ್ದೇನೆ ಮಾನ್ಯ ಸದಸ್ಯರು ಇದನ್ನು

ಪರಿಶೀಲಿಸಬಹುದೆಂದು ನಾನು ಹೇಳಿದ್ದೇನೆ. ದೇವರಾಜ ಅರಸಿನವರು ಎರಡು ವಿಚಾರ ಹೇಳಿದ್ದಾರೆ. ಅದು ನಾನು ಬರುವುದಕ್ಕೆ ಮುಂಚೆ ಗ್ರಾಂಟ್ ಆಗಿರುವುದಕ್ಕೆ ಸಂಬಂಧಪಟ್ಟಿದೆ. ರಾಜಯ್ಯ ಶೆಟ್ಟರು ಹೇಳಿದ ವಿಚಾರವನ್ನು ಎನ್‌ಕ್ವೈರಿ ಮಾಡುತ್ತೇನೆಂದು ಹೇಳಿದ್ದೇನೆ.

**ಶ್ರೀ ಬಿ.ಪಿ. ಗಂಗಾಧರ್** – ಹಿಂದಿನ ಚುನಾವಣೆಯಾದ ಮೇಲೆ ಬೇರೆ ಸರ್ಕಾರ ಬರುವುದಕ್ಕೆ ಮುಂಚೆ ಬೆಂಗಳೂರು ಕಾರ್ಪೋರೇಷನ್ ಪ್ರದೇಶದಲ್ಲಿ ಕೊಟ್ಟಿರುವ ಲ್ಯಾಂಡ್ ಗ್ರಾಂಟ್ಸ್ ವಿಚಾರದಲ್ಲಿ ಸ್ಟೇ ಆರ್ಡರನ್ನು ಕೊಡಲಾಗಿದೆಯೆಂದು ನಿಜಲಿಂಗಪ್ಪನವರು ಹೇಳಿದ್ದ ವಿಚಾರವೇನಾಯ್ತು?

**ಶ್ರೀ ಹೆಚ್.ವಿ. ಕೌಜಲಗಿ** – ನಿಜಲಿಂಗಪ್ಪನವರು ಕೆಲವು ಕೇಸುಗಳಲ್ಲಿ ಸ್ಟೇ ಆರ್ಡರ್ ಕೊಟ್ಟು ಎಗ್ಸಾಮಿನ್ ಅಂಡ್ ಅಡ್ವೈಜ್ ಎಂದು ಬರೆದಿದ್ದರು. ಅಷ್ಟರಲ್ಲೇ ವೀರೇಂದ್ರ ಪಾಟೀಲರು ಬಂದರು. ನಾನು ಲಾ ಪೋರ್ಟ್ ಪೋಲಿಯೋ ತೆಗೆದುಕೊಂಡಿದ್ದೆ. ಬಹಳ ಗ್ರಾಂಟುಗಳು ಇಲ್ಲೀಗಲ್ ಆಗಿದ್ದವು. ಸೆಟ್ ಅಸೈಡ್ ಮಾಡಿ ಸರ್ಕಾರದ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಅವುಗಳನ್ನು ಡಿಸ್ಪೋಸ್ ಮಾಡಬೇಕೆಂದು ಡಿ.ಸಿ.ಗೆ ಕಳುಹಿಸಲಾಯ್ತು. ಅದರಲ್ಲಿ ಶೇಕಡ 90, ಇಲ್ಲೀಗಲ್ ಗ್ರಾಂಟ್ಸ್ ಆಗಿದ್ದವು.

**ಶ್ರೀ ಎಂ.ಎಸ್. ಕೃಷ್ಣನ್** – ಬೇರೆ ವಿಷಯಗಳಲ್ಲಿ ನಿಜಲಿಂಗಪ್ಪನವರು ಒಪ್ಪಿಕೊಂಡು ಕೊಡಬಹುದೆಂದು ಬರೆದಿದ್ದರು. ನೀವು ತಿದ್ದುಪಾಟು ಮಾಡಿ ಬೇರೆಯವರಿಗೆ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಇಲ್ಲ ಇಲ್ಲೀಗಲ್ ಎಂದ ಮೇಲೆ ಆಯಿತು.

(ದಿನಾಂಕ 18–3–1970)

**ತಪಶೀಲು**

ಚಿಕ್ಕಮಗಳೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ವಿಲೇವಾರಿಗಾಗಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಈ ಮುಂದಿನಂತಿದೆ:

| | | |
|---|---|---|
| 1) | ಚಿಕ್ಕಮಗಳೂರು | 3,984 |
| 2) | ಮೂಡಿಗೆರೆ | 1,619 |
| 3) | ಕಡೂರು | 6,665 |
| 4) | ತರೀಕೆರೆ | 7,501 |
| 5) | ಕೊಪ್ಪ | 973 |
| 6) | ಎನ್. ಆರ್. ಪುರ | 1,141 |
| 7) | ಶೃಂಗೇರಿ | 570 |

ಶ್ರೀ **ಕೆ.ಎಚ್. ರಂಗನಾಥ್** – ಚಿಕ್ಕಮಗಳೂರು ಜಿಲ್ಲೆಯಲ್ಲಿ 3984 ಕೇಸುಗಳು ಪೆಂಡಿಂಗ್‌ನಲ್ಲಿವೆ ಎಂದು ಹೇಳಿದ್ದೀರಿ? ಇವುಗಳಲ್ಲಿ ಎಷ್ಟು ಕೇಸುಗಳು ಆರ್ಡರು ಸ್ಟೇಜಿನಲ್ಲಿವೆ ಮತ್ತು ಎಷ್ಟು ಕೇಸುಗಳು ಮಂಜೂರಾಗಿವೆ?

ಶ್ರೀ **ಹೆಚ್.ವಿ. ಕೌಜಲಗಿ** – ನಾನು ಈ ಅಂಕಿಅಂಶಗಳನ್ನು ಸುಮಾರು ಆರು ಅಥವಾ ಎಂಟು ತಿಂಗಳುಗಳಷ್ಟು ಹಿಂದೆಯೇ ಪಡೆದುಕೊಂಡಿರುವುದಾಗಿ ಭಾವಿಸಿಲ್ಲ ಹಾಗೂ ಸ್ಥಳೀಯ ಸಮಿತಿಗಳನ್ನು ರಚಿಸಬೇಕಾಗಿರುವುದರಿಂದ ಅಂತಹ ಜಮೀನುಗಳ ವಿಲೇವಾರಿಯನ್ನು ತಡೆಹಿಡಿಯುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಾವು ಸೂಚನೆಗಳನ್ನು ನೀಡಿದ್ದೇವೆ.

ಶ್ರೀ **ಕೆ.ಎಚ್. ರಂಗನಾಥ್** – 3933 ಕೇಸುಗಳು ಇನ್ನೂ ಮಂಜೂರಾಗುವ ಸ್ಟೇಜಿಗೆ ಬಂದಿಲ್ಲ ಎಂದು ಹೇಳಿದರೆ ಇವುಗಳ ಬಗ್ಗೆ ಯಾವಾಗ ತೀರ್ಮಾನ ಮಾಡಬೇಕೆಂದು ಸರ್ಕಾರ ಉದ್ದೇಶಿಸಿದೆ?

ಶ್ರೀ **ಹೆಚ್.ವಿ. ಕೌಜಲಗಿ** – ಇದಕ್ಕೆ ಉತ್ತರಿಸಲು ತುಂಬಾ ಕಷ್ಟವಾಗಿರುತ್ತದೆ. ಯಾಕೆಂದರೆ ಅರ್ಜಿಗಳು ಪ್ರತಿದಿವಸವು ಬರುತ್ತಲೇ ಇವೆ.

ಶ್ರೀ **ಕೆ.ಎಚ್. ರಂಗನಾಥ್** – 3993 ಕೇಸುಗಳಲ್ಲಿ ಎಷ್ಟು ಮಂಜೂರಾಗಿವೆ ಮತ್ತು ಮಂಜೂರಾಗದೆ ಉಳಿದಿರುವ ಕೇಸುಗಳು ಎಷ್ಟು?

ಶ್ರೀ **ಹೆಚ್.ವಿ. ಕೌಜಲಗಿ** – ಸಾಮಾನ್ಯ ಆದೇಶವನ್ನು ಹೊರಡಿಸಿದ ತರುವಾಯ ನಾವು, ಪರಿಶಿಷ್ಟ ಜಾತಿಗಳು ಮತ್ತು ಬಡಜನತೆಯ ಸಂದರ್ಭದಲ್ಲಿ, ಜಮೀನುಗಳನ್ನು ಹಂಚಿಕೆ ಮಾಡಬೇಕೆಂದು ಆದರೆ ಇತರರ ಸಂದರ್ಭಗಳಲ್ಲಿ ತಡೆಹಿಡಿಯಬಹುದೆಂದು ಸೂಚನೆಗಳನ್ನು ನೀಡಿದ್ದೇವೆ.

ಶ್ರೀ **ಕೆ.ಎಚ್. ರಂಗನಾಥ್** – ಚಿಕ್ಕಮಗಳೂರು ಜಿಲ್ಲೆಯಲ್ಲಿ 3984 ಕೇಸುಗಳು ಪೆಂಡಿಂಗ್‌ನಲ್ಲಿವೆ ಎಂದು ಹೇಳಿದ್ದೀರಿ? ಇವುಗಳಲ್ಲಿ ಎಷ್ಟು ಕೇಸುಗಳು ಆರ್ಡರು ಸ್ಟೇಜಿನಲ್ಲಿವೆ ಮತ್ತು ಎಷ್ಟು ಕೇಸುಗಳು ಮಂಜೂರಾಗಿವೆ?

ಶ್ರೀ **ಹೆಚ್.ವಿ. ಕೌಜಲಗಿ** – ನಾನು ಈ ಅಂಕಿ–ಅಂಶಗಳನ್ನು ಸುಮಾರು ಆರು ಅಥವಾ ಎಂಟು ತಿಂಗಳುಗಳಷ್ಟು ಹಿಂದೆಯೇ ಪಡೆದುಕೊಂಡಿರುವುದಾಗಿ ಭಾವಿಸಿಲ್ಲ ಹಾಗೂ ಸ್ಥಳೀಯ ಸಮಿತಿಗಳನ್ನು ರಚಿಸಬೇಕಾಗಿರುವುದರಿಂದ ಅಂತಹ ಜಮೀನುಗಳ ವಿಲೇವಾರಿಯನ್ನು ತಡೆಹಿಡಿಯುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಾವು ಸೂಚನೆಗಳನ್ನು ನೀಡಿದ್ದೇವೆ.

ಶ್ರೀ **ಕೆ.ಎಚ್. ರಂಗನಾಥ್** – 3933 ಕೇಸುಗಳು ಇನ್ನೂ ಮಂಜೂರಾಗುವ ಸ್ಟೇಜಿಗೆ ಬಂದಿಲ್ಲ ಎಂದು ಹೇಳಿದರೆ ಇವುಗಳ ಬಗ್ಗೆ ಯಾವಾಗ ತೀರ್ಮಾನ ಮಾಡಬೇಕೆಂದು ಸರ್ಕಾರ ಉದ್ದೇಶಿಸಿದೆ?

**ಶ್ರೀ ಹೆಚ್.ವಿ. ಕೌಜಲಗಿ** – ಇದಕ್ಕೆ ಉತ್ತರಿಸಲು ತುಂಬಾ ಕಷ್ಟವಾಗಿರುತ್ತದೆ, ಯಾಕೆಂದರೆ ಅರ್ಜಿಗಳು ಪ್ರತಿದಿನವೂ ಬರುತ್ತಲೇ ಇವೆ.

ಶ್ರೀ ಕೆ.ಎಚ್. ರಂಗನಾಥ್ -- 3993 ಕೇಸುಗಳಲ್ಲಿ ಎಷ್ಟು ಮಂಜೂರಾಗಿವೆ ಮತ್ತು ಮಂಜೂರಾಗದೆ ಉಳಿದಿರುವ ಕೇಸುಗಳು ಎಷ್ಟು?

**ಶ್ರೀ ಹೆಚ್.ವಿ. ಕೌಜಲಗಿ** – ಸಾಮಾನ್ಯ ಆದೇಶವನ್ನು ಹೊರಡಿಸಿದ ತರುವಾಯ ನಾವು, ಪರಿಶಿಷ್ಟ ಜಾತಿಗಳು ಮತ್ತು ಬಡಜನತೆಯ ಸಂದರ್ಭದಲ್ಲಿ, ಜಮೀನುಗಳನ್ನು ಹಂಚಿಕೆ ಮಾಡಬೇಕೆಂದು ಆದರೆ ಇತರರ ಸಂದರ್ಭಗಳಲ್ಲಿ ತಡೆಹಿಡಿಯಬಹುದೆಂದು ಸೂಚನೆಗಳನ್ನು ನೀಡಿದ್ದೇವೆ.

**ಶ್ರೀ ಹಂಜಿ ಶಿವಣ್ಣ** – ತರೀಕೆರೆ ತಾಲ್ಲೂಕಿನಲ್ಲಿ 7501 ಕೇಸುಗಳು ಪೆಂಡಿಂಗ್‌ನಲ್ಲಿವೆ ಎಂದು ಹೇಳಿದ್ದೀರಿ. ಇದರಲ್ಲಿ ಮಂಜೂರಾತಿಗೆ ಬಂದಿರುವ ಕೇಸುಗಳು ಎಷ್ಟು ಮತ್ತು ಮಂಜೂರಾಗದೇ ಇರುವುದು ಎಷ್ಟು? ಅಲ್ಲದೆ ಇದರಲ್ಲಿ ಮಂಜೂರಾಗಿರುವುದೆಲ್ಲ ಬಹುತೇಕ ಸರಕಾರದಲ್ಲಿರುವ ಇಲಾಖೆ ನೌಕರರುಗಳ ಸಂಬಂಧಿಕರುಗಳಿಗೇ ಆಗಿದೆ ಮತ್ತು ಇನ್ನು ಕೆಲವು ಹೆಚ್ಚು ದುಡ್ಡು ಕೊಟ್ಟವರಿಗೆ ಮಾತ್ರ ಕೊಡುತ್ತಾರೆ. ಹೀಗೆ ಇವುಗಳನ್ನೆಲ್ಲಾ ಸರಿಯಾಗಿ ತನಿಖೆ ಮಾಡಿ ಯಾವ ಅಧಿಕಾರಿಗಳು ಲ್ಯಾಂಡು ಗ್ರಾಂಟು ರೂಲ್ಸ್ ಪ್ರಕಾರ ಮಾಡದೇ ಅಧಿಕಾರವನ್ನು ದುರುಪಯೋಗಪಡಿಸಿದ್ದಾರೋ ಅಂತಹವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೇ? ಮತ್ತು ಲ್ಯಾಂಡ್ ಗ್ರಾಂಟು ಕಮಿಟಿ ಮಾಡುತ್ತೇವೆಂದು ಹೇಳಿ ಇನ್ನೂ ಮಾಡದೇ ಇರಲು ಕಾರಣವೇನು?

**ಶ್ರೀ ಹೆಚ್.ವಿ. ಕೌಜಲಗಿ** – ಮಾನ್ಯ ಸದಸ್ಯರು ಕಮಿಟಿಗಳನ್ನು ಏಕೆ ಮಾಡಲಿಲ್ಲ ಎಂದು ಕೇಳಿದ್ದಾರೆ. ತಾಲ್ಲೂಕು ಕಮಿಟಿಗಳನ್ನು ಬೇಗನೆ ಮಾಡಿ ಸದಸ್ಯರೂ ಇದರಲ್ಲಿ ಇರಬೇಕೆಂದು ಮಾಡುವುದರಲ್ಲಿದ್ದೇನೆ.

**ಶ್ರೀ ಎಂ.ಎಚ್. ಜಯಪ್ರಕಾಶ ನಾರಾಯಣ್** – ಇಲ್ಲಿ ಕೊಟ್ಟಿರತಕ್ಕ ಅಂಕಿ-ಅಂಶಗಳನ್ನು ನೋಡಿದರೆ ಸಮಿತಿಗಳನ್ನು ಮಾಡುವವರೆಗೆ ಯಾವ ತಕರಾರುಗಳಿಗೂ ಅವಕಾಶ ಕೊಡದೇ ತೀರ್ಮಾನ

**ಶ್ರೀ ಸಿ.ಎಂ.ಎಸ್. ಶಾಸ್ತ್ರಿ** – ಇಲ್ಲಿ ಹೇಳಿರುವಂತೆ 3993 ಕೇಸುಗಳು ಆರ್ಡರು ಮಾಡುವ ಸ್ಟೇಜಿನಲ್ಲಿದೆ ಎಂದು ಹೇಳುತ್ತಾರೆ. ಇದನ್ನು ಯಾವಾಗ ಮಾಡಬೇಕು ಎಂದು ಸರಕಾರ ಇದೆ ಎನ್ನುವುದನ್ನು ತಿಳಿಸುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಇದನ್ನು ಬೇಗನೇ ಮಾಡುವುದರಲ್ಲಿದ್ದೇವೆ. ನಾಳೆ ಕಮಿಟಿ ಮಾಡುವಾಗ ಮಾನ್ಯ ಸದಸ್ಯರೂ ಇದರಲ್ಲಿರುತ್ತಾರೆ. ಈಗ ಅವರಿಗೆ ಇವೆಲ್ಲಾ ಗೊತ್ತಾಗುತ್ತದೆ.

**ಶ್ರೀ ಜೆ.ಪಿ. ಸರ್ವೇಶ್** – ಕಡತಗಳನ್ನು ಸಿದ್ಧಪಡಿಸುವ ಕಾರ್ಯವಿಧಾನವು ತುಂಬಾ ದೀರ್ಘ ಕಾಲವು ಆಗಿರುತ್ತದೆ. ನೂರಾರು ಪ್ರಕರಣಗಳು ತಹಸೀಲು ಮಟ್ಟದಲ್ಲಿ ವಿಲೇವಾರಿಯಾಗಿ ಇತ್ಯರ್ಥದಲ್ಲಿರುವುದರಿಂದ. ಸರ್ಕಾರವು ಈ ಕಾರ್ಯವನ್ನು ಗಮನಿಸಿ ಈ ಕಾರ್ಯವಿಧಾನವು

ಸಂಪೂರ್ಣಗೊಂಡು ಜಮೀನುಗಳನ್ನು ಒಂದು ವರ್ಷದೊಳಗಾಗಿ ಮಂಜೂರು ಮಾಡುವಂತೆ ನೋಡಿಕೊಳ್ಳಲು ಹೆಚ್ಚುವರಿ ಸಿಬ್ಬಂದಿಯನ್ನು ನೇಮಕ ಮಾಡುವ ಇಚ್ಛೆಯನ್ನು ತೋರಿಸುತ್ತವೆಯೇ?

**ಶ್ರೀ ಹೆಚ್.ವಿ. ಕೌಜಲಗಿ** – ಲೋಕಲ್ ಕಮಿಟಿಯವರು ಸರಕಾರಕ್ಕೆ ಅವರ ಅಭಿಪ್ರಾಯ ತಿಳಿಸಿದರೆ ಆಗ ಸರಕಾರ ಇದರ ಬಗ್ಗೆ ಯೋಚನೆ ಮಾಡಬಹುದು.

**ಶ್ರೀ ಬಿ. ದೊಡ್ಡಬೋರೇಗೋಡ** – 3993 ಕೇಸುಗಳು ಆರ್ಡರಿಗಾಗಿ ಕಾದಿವೆ ಎಂದು ಹೇಳಿದಿರಿ. ಆದರೆ ಇದರ ಬಗ್ಗೆ ಅಧಿಕಾರಿಗಳು ಇಂತಹ ದರಖಾಸ್ತುಗಳನ್ನು ಮಂಜೂರು ಮಾಡಬೇಡಿ ಎಂದು ಒತ್ತಾಯ ತರುತ್ತಿದ್ದಾರೆಯೇ? ಮತ್ತು ತಾಲ್ಲೂಕು ಕಮಿಟಿಗಳನ್ನು ಕೊಡಬೇಕೆಂದು ಹೇಳುತ್ತಾ ಇನ್ನು ಮಾಡದೇ ತಡ ಮಾಡುತ್ತಿರುವುದಕ್ಕೆ ಕಾರಣಗಳೇನು?

## ಟಿಪ್ಪಣಿ

ಶಾಸಕರಾದ ಶ್ರೀ ಕೆ.ಎಚ್. ರಂಗನಾಥ್‌ರವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ವಿಲೇವಾರಿಯಾಗದಿರುವ ದರಖಾಸ್ತು ಅರ್ಜಿಗಳ ಬಗ್ಗೆ ವಿವರಗಳನ್ನು ಕೇಳಿ ಪ್ರಶ್ನೆಗಳನ್ನು ಕಳುಹಿಸಿದ್ದರು. ಸರ್ಕಾರದ ಉತ್ತರಗಳನ್ನು ಪರಿಶೀಲಿಸಿದ ರಂಗನಾಥ್‌ರವರು ವಿಲೆವಾರಿಗಾಗಿ ಬಾಕಿ ಇರುವ ಕಡತಗಳಲ್ಲಿ ಎಷ್ಟು ಆದೇಶದ ಹಂತದಲ್ಲಿವೆ; ಎಷ್ಟು ಮಂಜೂರಾಗಿವೆ ಎಂದು ಕೇಳಿದ ಉಪಪ್ರಶ್ನೆಗೆ ಉತ್ತರವಾಗಿ ಸಚಿವರು ಸ್ಥಳೀಯ ಸಮಿತಿಗಳನ್ನು ನೇಮಿಸುತ್ತಿರುವುದರಿಂದ ಜಿಲ್ಲಾಧಿಕಾರಿಗಳಿಗೆ ಉಳಿದ ಕಡತಗಳನ್ನು ವಿಲೇವಾರಿ ಮಾಡದೆ ಅಮಾನತ್ತಿನಲ್ಲಿಡುವಂತೆ ತಿಳಿಸಿರುವುದಾಗಿ ಹೇಳಿದರು. ಎಷ್ಟು ಕಾಲ ಹೀಗೆ ಮಂಜೂರು ಮುಂದೂಡುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಅನುಸೂಚಿತ ಜಾತಿಗಳು ಮತ್ತು ಬಡವರಿಗೆ ಸಂಬಂಧಿಸಿದ ಕಡತಗಳನ್ನು ವಿಲೇವಾರಿ ಮಾಡಿ ಜಮೀನನ್ನು ಹಂಚಲು ಸೂಚನೆ ನೀಡಿರುವುದಾಗಿ ಸಚಿವರು ತಿಳಿಸಿದರು. ಇಂತಹ ವಿವೇಕದ ನಿರ್ಣಯಗಳು ಸಚಿವರ ದೂರದೃಷ್ಟಿಯನ್ನು ಪ್ರತಿಬಿಂಬಿಸುವವಿದ್ದವು.

# ಕೋಲಾರ ಜಿಲ್ಲೆಯಲ್ಲಿ ಭೂಕಂದಾಯ ಮಾಫಿ

1970

**ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ)** – ಮಾನ್ಯ ಕಂದಾಯ ಮಂತ್ರಿಗಳು ದಯವಿಟ್ಟು ಈ ವಿಷಯಗಳ ಬಗ್ಗೆ ಉತ್ತರಿಸುವರೆ?

ಎ) ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿ ಇಡೀ ಕೋಲಾರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಗೆ ಭೂಕಂದಾಯವನ್ನು ಮಾಫಿ ಮಾಡುವುದಕ್ಕಾಗಿ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆಯೇ;

ಬಿ) ಹಾಗಿದ್ದರೆ, ಈ ವಿಷಯದಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮ

**ಶ್ರೀ ಹೆಚ್.ವಿ. ಕೌಜಲಗಿ – (ಕಂದಾಯ ಮಂತ್ರಿ)**

ಎ) ಜಿಲ್ಲಾಧಿಕಾರಿ, ಕೋಲಾರ ಇವರು ಬೆಳೆಗಳು ವಿಫಲವಾಗಿರುವ ಗ್ರಾಮಗಳ ಸಂಬಂಧದಲ್ಲಿ 1965–66, 1966–67 ಹಾಗೂ 1967–68ರ ಸಾಲಿಗಾಗಿ ಭೂಕಂದಾಯವನ್ನು ಮಾಫಿ ಮಾಡಲು ಶಿಫಾರಸು ಮಾಡಿದ್ದಾರೆ.

ಬಿ) ಜಿಲ್ಲಾಧಿಕಾರಿಯ ಶಿಫಾರಸನ್ನು ಒಪ್ಪಿಕೊಳ್ಳಲಾಗಿದೆ. ಈ ವಿಷಯವಾಗಿ ಅವಶ್ಯಕ ಆದೇಶಗಳನ್ನು ರಾಜ್ಯಪತ್ರದಲ್ಲಿ ಹೊರಡಿಸಲಾಗುವುದು.

**ಶ್ರೀ ಪಿ. ವೆಂಕಟಗಿರಿಯಪ್ಪ** – ಕಳೆದ 3 ವರ್ಷಗಳಲ್ಲಿ ಎಲ್ಲ ಗ್ರಾಮಗಳಲ್ಲಿ ಬೆಳೆ ಹೋಗಿರಲಿಲ್ಲವೆ? ಎಷ್ಟು ಗ್ರಾಮಗಳಿಗೆ ರೆಮಿಷನ್ ಕೊಡುವುದು ಅನ್ವಯಿಸುತ್ತದೆ?

**ಶ್ರೀ ಹೆಚ್.ವಿ. ಕೌಜಲಗಿ** –

| | | | | |
|---|---|---|---|---|
| 1965–66ನೇ ವರ್ಷದಲ್ಲಿ | 3,037 ಹಳ್ಳಿಗಳಿಗೆ | | 15,23,459 ರೂ. | ರೆಮಿಷನ್ ಕೊಟ್ಟಿದೆ |
| 1966–67 | 1,027 | " | 4,61156 ರೂ. | " |
| 1967–68 | 1,515 | " | 6,78,306 ರೂ. | " |

1968–69ನೇ ವರ್ಷದ ಪ್ರಪೋಜಲ್ಸ್ ಬಂದಿಲ್ಲ ನಿರೀಕ್ಷಣೆ ಮಾಡುತ್ತಿದ್ದೇವೆ.

**ಶ್ರೀ ವೆಂಕಟಗಿರಿಯಪ್ಪ** – ಜಿಲ್ಲಾಧಿಕಾರಿಗಳಿಂದ ಶಿಫಾರಸು ಬಂದಿದೆ ಎಂದು ಒಪ್ಪಿಕೊಂಡಿದ್ದೀರಿ ಮತ್ತು ಗೆಜೆಟ್ಟಿನಲ್ಲಿ ಪ್ರಕಟಿಸುತ್ತೇವೆ ಎಂದು ಒಪ್ಪಿಕೊಂಡ ಮೇಲೆ ಅದನ್ನು ಪ್ರಕಟಿಸಲು ಡಿಲೇಯಾಗಿರುವುದರಿಂದ ಪರಿಹಾರ ಕೊಡದೇ ಕಂದಾಯ ವಸೂಲು ಮಾಡಿಬಿಟ್ಟಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಗೆಜೆಟ್ಟಿನಲ್ಲಿ ಪ್ರಕಟಿಸಲು ಆದೇಶ ಕಳುಸುತ್ತೀರಾ?

**ಶ್ರೀ ಹೆಚ್.ವಿ. ಕೌಜಲಗಿ** – ಯಾವ ಕಾಲಕ್ಕೆ ಡೆಪ್ಯೂಟಿ ಕಮೀಶನರು ಸರಕಾರಕ್ಕೆ ರಿಪೋರ್ಟ್ ಮಾಡುತ್ತಾರೋ ಆ ಕಾಲಕ್ಕೆ ವಸೂಲು ಮಾಡುವುದು ಬಂದ್ ಆಗುತ್ತದೆ. ಕಂದಾಯ ವಸೂಲು ಮಾಡುವುದಿಲ್ಲ. ಅಂಥ ಉದಾಹರಣೆ ತೋರಿಸಿಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೇವೆ.

# ಭೂ ಕಂದಾಯ ನಿಗದಿ ಕುರಿತು

1970

ಶ್ರೀ ಎಚ್.ವಿ. ಕೌಜಲಗಿ (ಕಂದಾಯ ಖಾತೆಯ ಮಂತ್ರಿಗಳು) – ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರು ಇವತ್ತಿನ ದಿವಸ ಈ ವಿಷಯಕ್ಕೆ ಸಂಬಂಧಿಸಿದ ಬಗ್ಗೆ ತಮ್ಮ ತಮ್ಮ ಭಾಷಣವನ್ನು ಮಾಡಿದ್ದಾರೆ. ಅಷ್ಟೇ ಅಲ್ಲದೆ ತಮ್ಮ ತಮ್ಮ ಜಿಲ್ಲೆಯಲ್ಲಿ ಲ್ಯಾಂಡ್ ರೆವಿನ್ಯೂ ವಸೂಲಿ ಬಗ್ಗೆ ಮತ್ತು ವಾಟರ್ ರೇಟ್ ವಸೂಲಿ ಬಗ್ಗೆ ರೈತರಿಗೆ ಏನೇನು ತೊಂದರೆಯಾಗುತ್ತಿದೆ ಎನ್ನುವುದರ ಬಗ್ಗೆ ಅನೇಕ ವಿಷಯಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಸಭೆಯ ಮುಂದೆ ಈಗಿರತಕ್ಕಂಥ ವಿಷಯಗಳು ಒಂದೇ ಆಗಿದ್ದರೂ ಕೂಡ ಇದರಲ್ಲಿ ಈಗ ಇದ್ದಂಥ ಕಾಯಿದೆ ಪ್ರಕಾರ ಲ್ಯಾಂಡ್ ರೆವಿನ್ಯೂ ಪದ್ಧತಿ ಮತ್ತು ವಾಟರ್ ಲೆವಿ ಪದ್ಧತಿ ಬಗ್ಗೆ ಇದರಲ್ಲಿ ಅನೇಕ ಲೋಪದೋಷಗಳು ಇವೆ. ಇದು ತಿದ್ದುಪಡಿ ಆಗಬೇಕು ಅನ್ನತಕ್ಕಂಥ ಒಂದು ಸೂಚನೆಯನ್ನು ಸಹ ಈ ಸಭೆಯ ಮುಂದೆ ಇಟ್ಟಿದ್ದಾರೆ. ಲ್ಯಾಂಡ್ ರೆವಿನ್ಯೂ ಆಕ್ಟಿನಲ್ಲಿ ಏನು ತೊಂದರೆಗಳಿವೆ ಎನ್ನುವುದು ಬಜೆಟ್ ಸೆಷನ್ ಕಾಲದಲ್ಲಿ ವಿರೋಧ ಪಕ್ಷದ ನಾಯಕರು ಹೇಳಿದಂತೆ ಅದು ಪಾಸಾಯಿತು. 1967 ರಲ್ಲಿ ಇದು ಮಾನ್ಯ ಸಭೆಯಲ್ಲಿ ಇಡೀ ಪ್ರಾಂತ್ಯಕ್ಕೆ ಸಂಬಂಧಪಟ್ಟಂತೆ ರೀಸೆಟಲ್‌ಮೆಂಟ್ ಪಾಸ್ ಆಯಿತು. ಸುದೈವದಿಂದ ವಿರೋಧ ಪಕ್ಷದ ನಾಯಕರೂ ಸಹಿತ ಅದನ್ನು ಒಪ್ಪಿಕೊಂಡರು. ಆವಾಗ ಆ ದೋಷಗಳು ತಿಳಿಯಲಿಲ್ಲ. ಈಗ ಆ ದೋಷಗಳು ತಿಳಿಯಲಿಕ್ಕೆ ಸಾಧ್ಯವಾಯಿತು. ಇದರಲ್ಲಿ ಟೆಕ್ನಿಕಲ್ ಪಾಯಿಂಟ್ ಇವೆ. ಇದನ್ನು ಯಾರು ಪ್ರತ್ಯೇಕವಾಗಿ ಅಭ್ಯಾಸ ಮಾಡುತ್ತಾರೋ ಅವರಿಗೆ ಇದರ ವಿಷಯ ತಿಳಿಯುತ್ತದೆ. ಇಲ್ಲದಿದ್ದರೆ ತಿಳಿಯಲು ಕಠಿಣವಾಗುತ್ತದೆ. ಆ ರೀತಿ ಅಭ್ಯಾಸ ಮಾಡಿದ ನಂತರ ಇದರಲ್ಲಿ ಕೆಲವು ದೋಷಗಳು ಇವೆ. ಅವನ್ನು ತೆಗೆಯಬೇಕೆಂದು ಬಯಸಿತು. ಹಾಗೇ ಮಾನ್ಯ ಮನೆಯಲ್ಲಿ 114 ಮತ್ತು 128ನೇ ನಿಯಮವನ್ನು ನಾವು ಜಾರಿಗೆ ಮಾಡಿದೆವು. ಎಲ್ಲೆಲ್ಲಿ ಏನೇನಾಗಿದೆ ಎನ್ನುವುದನ್ನು ಮಾನ್ಯ ಶಿವಪ್ಪನವರು ಮತ್ತು ಅನೇಕ ಮಾನ್ಯ ಸದಸ್ಯರು ಕೂಡ ಹೇಳಿದ್ದಾರೆ. ಇದರ ಬಗ್ಗೆ ಗಾರ್ಡನ್ ಲ್ಯಾಂಡ್ ಇರುವುದು ಇದೆ ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಿದೆ. ಕ್ಲಾಸಿಫಿಕೇಷನ್ ಒಳಗೆ ಸ್ವಲ್ಪ ತೊಡಕುಗಳು ಇರುವುದರಿಂದ ಜನರಿಗೆ ಸ್ವಲ್ಪ ತೊಂದರೆಯಾಗಿದೆ. ಈ ತೊಂದರೆಯನ್ನು ದೂರ ಮಾಡಬೇಕು ಎನ್ನುವ ಕಾರಣದಿಂದ ಮತ್ತು ರೈತರ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ನಾವು ಈ ಎರಡು ನಿಯಮಗಳನ್ನು ದುರಸ್ತು ಮಾಡಿದೆವು. ಆ ನಿಯಮದ ಪ್ರಕಾರ ಕೆಲಸ ನಡೆದಿದೆ. ದುರಸ್ತು ಏನು ನಡೆದಿಲ್ಲ ಎಂದು ಹೇಳುವ ಹಾಗಿಲ್ಲ. 114ನೇ ಕಾಲಂನ ಪ್ರಕಾರ ತುಮಕೂರು, ಚಿಕ್ಕಮಗಳೂರು ಮತ್ತು ಹಾಸನ ಈ ಭಾಗದಲ್ಲಿ ಕೆಲಸ ನಡೆದಿದೆ. ಮತ್ತು ಬಿಜಾಪುರ 6ನೇ ಜೋನ್ ಮತ್ತು ಶಿವಮೊಗ್ಗದಲ್ಲಿ 1ನೇ ಜೋನಿನಲ್ಲೂ ಕೆಲಸ ನಡೆದಿದೆ. 114ನೇ ನಿಯಮದ ಪ್ರಕಾರ ಅವರಿಗೆ ಒಟ್ಟಿಗೆ ಆಗಲಿಕ್ಕೆ ಅಲ್ಲಿ ನೋಟೀಸು ಕಳಿಸಿದೆವು. ಬಾಕಿ ಭಾಗಗಳಲ್ಲಿ ಕಾಯಿದೆಯ 122ನೇ ನಿಯಮದ ಪ್ರಕಾರ ನೋಟೀಸ್ ಕೊಟ್ಟರು. ಕೆಲವು ಕಡೆ ನೋಟೀಸ್ ಕೊಡಲಿಕ್ಕೆ ಪತ್ರಿಕೆ ಈ ರೀತಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಏನಾದರೂ ತೊಂದರೆ ಇದ್ದರೆ

ಸರಿಪಡಿಸಿ ಮಾಡಲಿಕ್ಕೆ ಅವರಲ್ಲಿ ಕಾಲಂ ಪ್ರಕಾರ ಅವಕಾಶ ಇದೆ. ಆ ಉದ್ದೇಶ ಇಟ್ಟುಕೊಂಡು ಕಾಯಿದೆ ಮಾಡಿದೆವು. ಆ ಕಾಯಿದೆಗೆ ಸರಿಯಾದ ರೀತಿಯಲ್ಲಿ ನಡೆದಿದೆ. ಶ್ರೀಮಾನ್ ದೇವೇಗೌಡರು ನಮ್ಮ ಭಾಗದಲ್ಲಿ ನಡೆದಿದೆ ಎಂದು ಹೇಳಿದರು. ಅಲ್ಲಿ ನೋಟೀಸ್ ಕೆಲಸ ನಡೆದಿದೆ. 4ನೇ ಜೋನ್‌ನಲ್ಲಿ ಈ ಪ್ರಕಾರ ಮಾಡಬೇಕು ಎಂದು ಏನು ಇಟ್ಟುಕೊಂಡಿದ್ದೇವೋ ಅದರಂತೆ ಕೆಲಸ ಮಾಡಿದೆವು.

**ಶ್ರೀ ಹೆಚ್.ಡಿ. ದೇವೇಗೌಡ** -- ನಾವು ಹೇಳಿದ್ದು ಕೊಡದೆ ಕಲೆಕ್ಷನ್ ಮಾಡುತ್ತಿದ್ದಾರೆ ಎಂದು.

**ಶ್ರೀ ಹೆಚ್.ವಿ. ಕೌಜಲಗಿ** – ಯಾವ ಪ್ರಕಾರವೇ ಇರಲಿ 114ನೇ ನಿಯಮದ ಪ್ರಕಾರ ನೋಟೀಸ್ ನೀಡುತ್ತಾರೆ. ಎಲ್ಲೆಲ್ಲಿ ತಕರಾರು ಇವೆ ಅಂಥ ಕಡೆ 112ರ ಪ್ರಕಾರ ನೋಟೀಸ್ ಕೊಡುತ್ತಾರೆ. ಹಳೆಯ ಮೈಸೂರಿನಲ್ಲಿ ಹಳೆಯ ಕಂದಾಯವನ್ನು ವಸೂಲ್ಮಾಡುವುದಕ್ಕೆ ಹೇಳಿದೆವು. ಹೊಸ ಕಂದಾಯವನ್ನು ಬರುವುದಿಲ್ಲ.

**ಶ್ರೀ ಎಲ್. ಶ್ರೀಕಂಠಯ್ಯ** – ನೀವು ಕೊಟ್ಟ ಹಣವನ್ನು ಉಳಿಸಿಕೊಳ್ಳಿ.

**ಶ್ರೀ ಹೆಚ್.ವಿ. ಕೌಜಲಗಿ** – ಅರಿಯರ್ಸ್ ವಸೂಲ್ಮಾಡುವುದು ನಮ್ಮ ಕರ್ತವ್ಯ. ಅದರಿಂದ ವಸೂಲ್ಮಾಡುತ್ತೇವೆ.

**ಶ್ರೀ ಎಲ್. ಶ್ರೀಕಂಠಯ್ಯ** – ಬಹುಶಃ ಇದರಿಂದ 6 ಕೋಟಿ ರೂಪಾಯಿ ವರಮಾನ ಬರಬಹುದು. ಇದನ್ನು ಬೇರೆ ಯಾವ ತರಹದಿಂದಲೂ ವಸೂಲ್ಮಾಡಬಾರದು. ಆದುದರಿಂದ ಈ ಕಂದಾಯವನ್ನು ವಜಾ ಮಾಡಿರಿ.

**ಶ್ರೀ ಹೆಚ್.ವಿ. ಕೌಜಲಗಿ** – ಮಾನ್ಯ ಮಂತ್ರಿಗಳು [illegible] ಮೊನ್ನೆ ದಿವಸ ಇದಕ್ಕೆ ಉತ್ತರ ಕೊಟ್ಟಿದ್ದಾರೆ.

**ಶ್ರೀ ಎನ್.ಎ. ಚೆನ್ನೇಗೌಡ** – ತಮಗೆ ಗೊತ್ತಿದ್ದ ಹಾಗೆ ಈಗ ಬಾಕೀ ಇರತಕ್ಕಂಥ ಕಂದಾಯ ಹೆಚ್ಚುವರಿ ಎಂದು ಅನೇಕ ಸದಸ್ಯರು ಹೇಳಿದರು. 5 ವರ್ಷದಷ್ಟು ಹಿಂದಿನ ತೆರಿಗೆ ವಸೂಲ್ಮಾಡುವುದು ಕಷ್ಟ. ಏನೂ ಕೊಡುವ ಸ್ಥಿತಿಯಲ್ಲಿಲ್ಲ. ರೈತರಿಗೆ ತೊಂದರೆಯಾಗುತ್ತದೆ. ಇದಕ್ಕೆ ನೀವೇ ಕಾನೂನು ಮಾಡಿದರೆ ಗೊತ್ತಾಗುವುದಿಲ್ಲ. ಆದುದರಿಂದ ಇದಕ್ಕೆ ತಜ್ಞರುಗಳ ಒಂದು ಕಮಿಟಿ ಮಾಡಿ ರೈತರಿಗೆ ಏನೇನು ತೊಂದರೆ ಇದೆ ಎಂದು ಗೊತ್ತಾಗುತ್ತದೆ ಆ ರೀತಿ ಮಾಡಿ.

**ಶ್ರೀ ಹೆಚ್.ವಿ. ಕೌಜಲಗಿ** – ಲ್ಯಾಂಡ್ ವಸೂಲಿ ಬಗ್ಗೆ ದುರಸ್ತು ಮಾಡಿದೆವು. ನಿಯಮಗಳ ಪ್ರಕಾರ ಕೆಲಸ ನಡೆಯಿತು. ತಮ್ಮ ಭಾಗದಲ್ಲಿ ಏನಾದರೂ ತೊಂದರೆ ಆಗಿದ್ದರೆ ಅದನ್ನು ಹೇಳಿದರೆ ಅದನ್ನು ಸರಿಪಡಿಸಲಿಕ್ಕೆ ಸಾಧ್ಯವಾಗುತ್ತದೆ. ಇದರ ಬಗೆ ಬಹಳ ಶೀಘ್ರವಾದ ಕಾರ್ಯಕ್ರಮ

ಕೈಗೊಳ್ಳುವುದಕ್ಕೆ ಇದರ ಡಿಪಾರ್ಟ್‌ಮೆಂಟನ್ನು ವಿಸ್ತರಿಸಿ ಇನ್ನೂ ಹೆಚ್ಚಿನ ದಕ್ಷತೆ ಇರತಕ್ಕಂಥ ತಜ್ಞರನ್ನು ನೇಮಿಸಿ ತೀವ್ರ ಕೆಲಸ ಮಾಡಬೇಕು ಎನ್ನುವ ಕಾರ್ಯ ನಡೆಯುತ್ತಿದೆ. ಆದುದರಿಂದ ತಮ್ಮ ತಮ್ಮ ಕಾನ್ಸ್ಟಿಟ್ಯೂಯನ್ಸಿನಲ್ಲಿ ನೋಟೀಸ್ ಬರುತ್ತದೆ ಅದು ಫೈನಲ್ ಅಲ್ಲ. ಈಗ ಕೆಲಸ ಸರಿಯಾಗಿ ನಡೆಯುತ್ತಾ ಇದೆ. ಇದರಲ್ಲಿ ಏನಾದರೂ ಅಡಚಣೆ ಇದ್ದರೆ ಅದನ್ನು ಸರಿಮಾಡಲಿಕ್ಕೆ ಸಿದ್ಧರಾಗಿದ್ದಾರೆ. ನಾವು ರೈತರಿಗೆ ತೊಂದರೆ ಮಾಡಬೇಕು ಎನ್ನುವುದೇನೂ ಇಲ್ಲ ಮತ್ತು ಅವರಿಗೆ ಹೆಚ್ಚಿನ ಕಂದಾಯ ಹಾಕಬೇಕು ಎನ್ನುವ ಉದ್ದೇಶವೂ ಇಲ್ಲ.

ಇನ್ನು ಕಳೆದ 4 ವರ್ಷದಿಂದಲೂ ರಾಜ್ಯದಲ್ಲಿ ಕೆಲವು ಕಡೆ ಮಳೆ ಆಗಿಲ್ಲದೆ ಬೆಳೆಯೂ ಆಗಿಲ್ಲ. ಇದರಿಂದ ಸಾಕಷ್ಟು ವಸೂಲಿಯೂ ಆಗಿಲ್ಲ ಎಂದು ಹೇಳಿದ್ದೇನೆ. 1968ನೇ ಇಸವಿಯಲ್ಲಿ ಎಲ್ಲೆಲ್ಲಿ ಮಳೆ ಆಗಿಲ್ಲವೋ ಆ ಕಡೆ ರೆಮಿಷನ್ ಕೊಡಬೇಕೆಂದು ನಿಯಮಗಳನ್ನು ಮಾಡಿ ರೆಟ್ರಾಸ್ಪೆಕ್ಟೀವ್ ಎಫೆಕ್ಟಿನಿಂದ ನೀಡಬೇಕೆಂದು ಮಾಡಿದೆವು. ಆ ಪ್ರಕಾರ ಎಲ್ಲೆಲ್ಲಿ ಮಳೆ ಆಗಿಲ್ಲವೋ ಅಲ್ಲಿ ರೆಮಿಷನ್ ಕೊಡಬೇಕೆಂದು ಹೇಳಿದ್ದೆವು. ಮತ್ತು ಅಲ್ಲೆಲ್ಲಾ ಡೆಪ್ಯೂಟಿ ಕಮೀಷನರನ್ನು ಪ್ರಪೋಸಲ್ಸ್ ಕಳುಹಿಸಬೇಕೆಂದು ಹೇಳಿದ್ದೇನೆ. ಕೆಲವು ಕಡೆ ಪ್ರಪೋಸೆಲ್ಸ್ ಬಂದಿದೆ. ಅಂತಹ ಕಡೆ ರೆಮಿಷನ್ ಕೊಟ್ಟಿದ್ದೇನೆ. ಇನ್ನೂ ಪ್ರಪೋಸೆಲ್ಸ್ ಬರುವುದು ಇದೆ. ಪ್ರಪೋಸೆಲ್ಸ್ ಬಂದು ಬಂದಾಗಲೆಲ್ಲಾ ರೆಮಿಷನ್ ಕೊಡುತ್ತಿದ್ದೇನೆ. ತಾವು ವಿಚಾರ ಮಾಡಬಹುದು. ಕೆಲವು ಫಿಗರ್ಸ್ ಬೇಕಾದರೆ ಹೇಳುತ್ತೇನೆ. ಕೋಲಾರದಲ್ಲಿ 1965–66ಕ್ಕೆ 15½ ಲಕ್ಷ ಕೊಟ್ಟಿದೆ. 1966–67ಕ್ಕೆ 5 ಲಕ್ಷ ಕೊಟ್ಟಿದೆ. 1967–68ಕ್ಕೆ 7 ಲಕ್ಷ ಕೊಟ್ಟಿದೆ. ಇನ್ನು 1968–69 ರ ಪ್ರಪೋಸಲ್ಸ್ ಕೂಡ ಬಂದಿದೆ. ತುಮಕೂರಿನಿಂದ ಮೊನ್ನೆ ತಾನೇ ಪ್ರಪೋಸಲ್ಸ್ ಬಂದಿದೆ. ಇನ್ನು ಚಿತ್ರದುರ್ಗ, ರಾಯಚೂರು, ಗುಲ್ಬರ್ಗ, ಬೆಂಗಳೂರು ಈ ಕಡೆಗಳಿಂದ ಪ್ರಪೋಸಲ್ಸ್ ಕೂಡ ಬಂದಿದೆ. ಹಾಸನದಿಂದ ಪ್ರಪೋಸಲ್ಸ್ 65–66ರದ್ದು ಬಂದಿದೆ. ಅಲ್ಲಿ ಒಂದು ವರ್ಷಕ್ಕೆ 10 ಲಕ್ಷ ರೂಪಾಯಿ ಆಗುತ್ತದೆ. ಎಷ್ಟೋ ಕಡೆ ಶ್ಯಾನುಭೋಗರು ಇಲ್ಲದ ಲೆಕ್ಕ ಸರಿಯಾಗಿ ಕೊಟ್ಟಿಲ್ಲ. ಆದರೂ ಸಹಿತ ಡೆಪ್ಯೂಟಿ ಕಮಿಷನರ್‌ಗೆ ಸೂಚನೆ ಕೊಟ್ಟಿವು. ಏಕೆಂದರೆ ಎಲ್ಲಿ ಮಳೆ ಬೆಳೆ ಆಗಿಲ್ಲವೋ ಅಲ್ಲಿಗೆ ಹೋಗಿ ರೈತರನ್ನು ಕಳುಹಿಸಬೇಕು ಎಂದು ಅವರಿಗೆ ಸೂಚನೆ ಕೊಟ್ಟಿವು. 1965ನೇ ಇಸವಿಯಲ್ಲಿ ಯಾರು ಯಾರು ಅಪೀಲು ಮಾಡಿದರೋ ಅವರಿಗೆಲ್ಲಾ ರೆಮಿಷನ್ ಕೊಟ್ಟಿವು. ಆ ಪ್ರಪೋಸಲ್ಸ್ ಕೂಡ ಇದೆ. ಬೇಕಾದರೆ ಕೊಡುತ್ತೇನೆ. ಆದುದರಿಂದ ಸದಸ್ಯರು ಯಾರು ಕೂಡ ಅನ್ಯಾಯ ಮಾಡಿದ್ದಾರೆ. ಅನೇಕ ತೊಂದರೆ ಕೊಟ್ಟು ವಸೂಲ್ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳಬಾರದು. ಸರ್ಕಾರದವರು ಏನು ಕೆಲಸ ಮಾಡಬೇಕೋ ಅದನ್ನು ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳಿಂದ ಯಾವ ಯಾವ ಕಾಲಕ್ಕೆ ಪ್ರಪೋಸಲ್ಸ್ ಬರುತ್ತದೋ ಆ ರೀತಿ ಬಂದಂತೆಲ್ಲಾ ವಸೂಲಿ ಬಂದ್ ಆಗುತ್ತದೆ. ಇಲ್ಲದಿದ್ದರೆ ವಸೂಲಿಯನ್ನು ಬಂದ್ ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಹಂಜಿ ಶಿವಣ್ಣ** – ನಮ್ಮ ಭಾಗದ್ದು ಬರಗಾಲ ಪ್ರದೇಶ. ಅದರ ಬಗ್ಗೆ ತಾವೂ ಏನೂ ಹೇಳಲಿಲ್ಲ.

**ಶ್ರೀ ಎಚ್.ವಿ. ಕೌಜಲಗಿ** – ತಮಗೆ ವಾಸ್ತವವಾಗಿ ಯಾವ ವರ್ಷ ರೆಮಿಷನ್ ಸಿಕ್ಕಬೇಕಾಗಿತ್ತು. ಅದನ್ನು ಸರ್ಕಾರದವರು ಮಾಡಿಕೊಡಲಿಲ್ಲ ಎಂದು ಸರ್ಕಾರದ ಗಮನಕ್ಕೆ ತಂದರೆ ಅ ಷ್ಟು ಎಕ್ಸಾಮಿನ್ ಮಾಡುತ್ತೇವೆ.

**ಶ್ರೀ ಬಿ.ಎಸ್. ರಾಮೇಗೌಡ** – ಸ್ವಾಮಿ, ಗುಬ್ಬಿ ತಾಲ್ಲೂಕು ವಿಷಯವಾಗಿ ರೆಮಿಷನ್ ಬಗ್ಗೆ ಏನೂ ಹೇಳಲಿಲ್ಲ.

**ಶ್ರೀ ಎಚ್.ವಿ. ಕೌಜಲಗಿ** – ತುಮಕೂರು ಡಿಸ್ಟ್ರಿಕ್ಟ್ ಪ್ರಪೋಸೆಲ್ಸ್ ಈಗ ಬಂದಿದೆ. ಅದರಲ್ಲಿ ನಿಮ್ಮ ಗುಬ್ಬಿ ತಾಲ್ಲೂಕು ಸೇರಿರುತ್ತದೆ.

ಅಧಿಕಾರಿಗಳು ಕೊಟ್ಟಿರುವ ಅಂಕಿ ಸಂಖ್ಯೆಗಳು ಹೀಗಿವೆ:–

66–67ರಲ್ಲಿ 1365000, 68–69 ರಲ್ಲಿ 1769000 ಮತ್ತು 1969 ರಲ್ಲಿ 8 ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಬೇಕಾಗಿತ್ತು. ಇದರಲ್ಲಿ ಇಲ್ಲಿಯವರೆಗೆ ಇನ್ನೂ ವಸೂಲು ಮಾಡಿಲ್ಲ ಎಂದು ಡಿ.ಸಿ. ಕಡೆಯಿಂದ ನಮಗೆ ರಿಪೋರ್ಟ್ ಬಂದಿದೆ.

**ಶ್ರೀ ಎಸ್.ಎ. ಚನ್ನೇಗೌಡ** – ಆದರೆ ಅಧಿಕಾರಿಗಳು ಇನ್ನು ವಸೂಲು ಮಾಡುತ್ತಲೇ ಇದ್ದಾರೆ.

**ಶ್ರೀ ಎಚ್.ವಿ. ಕೌಜಲಗಿ** – ಒಂದು ತಾಲ್ಲೂಕಿನಲ್ಲಿ ಇರುವ ನೂರು ಹಳ್ಳಿಗಳಲ್ಲಿ 60–70 ಹಳ್ಳಿಗಳಲ್ಲಿ ಕಂದಾಯ ಮಾಫಿ ಮಾಡಬೇಕೆಂದು ಸಲಹೆ ಬಂದರೆ ಇತರ ಉಳಿಕೆ ಹಳ್ಳಿಗಳಲ್ಲಿಯೂ ಕೂಡ ಅಧಿಕಾರಿಗಳು ಕಂದಾಯವನ್ನು ವಸೂಲು ಮಾಡಲಿಕ್ಕೆ ಬರುವುದಿಲ್ಲ.

**ಶ್ರೀ ಎಸ್.ಎ. ಚನ್ನೇಗೌಡ** – ನಾಗಮಂಗಲದ ತಾಲ್ಲೂಕಿನಲ್ಲಿ 123 ಹಳ್ಳಿಗಳಿಗೆ ನೀರಿಲ್ಲದೆ ಬೆಳೆ ಆಗಿಲ್ಲ. ಇಲ್ಲಿನ ಜನರಿಗೆ ಕಷ್ಟವಾಗಿದೆ ಮತ್ತು ಇದಕ್ಕೆ ಪರಿಹಾರ ಕೊಡಿಸಬೇಕು ಎಂದು ಜಿಲ್ಲಾಧಿಕಾರಿಗಳ ಕಡೆಗೆ ಕಾಗದ ಬರೆದಿದ್ದರೂ ಅದನ್ನು ಅವರು ಪ್ರಪೋಸಲ್‌ನಲ್ಲಿ ಸೇರಿಸಿ ಇನ್ನೂ ಕಳುಹಿಸಿಲ್ಲ.

**ಶ್ರೀ ಎಚ್.ವಿ. ಕೌಜಲಗಿ** – ಯಾವುದಾದರೂ ನಿರ್ದಿಷ್ಟವಾದ ಕಡೆಯಲ್ಲಿ ಅನಾನುಕೂಲಗಳಾಗಿಲ್ಲ ಎನ್ನುವುದನ್ನು ನನ್ನ ಗಮನಕ್ಕೆ ತಂದರೆ ನಾನು ಅದನ್ನು ಪುನಃ ರೀ ಎಕ್ಸಾಮಿನ್ ಮಾಡಿಸುತ್ತೇನೆ. ಸರಕಾರದವರು ಒತ್ತಾಯದಿಂದ ಎಲ್ಲಾ ವಸೂಲು ಮಾಡಿಲ್ಲ ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ನಿಮಗೆ ಹೋದ ವರ್ಷದಲ್ಲಿ ಏನು ಫಿಗರ್ಸ್ ಇತ್ತು ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ನಮಗೇನು ವಸೂಲಿ ಬರಬೇಕಾಗಿತ್ತು ಅದರಲ್ಲಿ ಸುಮಾರು ಒಂದು ಕೋಟಿಯಷ್ಟು ಹಣ ಕಡಿಮೆ ಬಂದಿದೆ. ಇದರಿಂದ ನಾವು ಎಲ್ಲೂ ಯಾರಿಂದಲೂ ಕಡ್ಡಾಯವಾಗಿ ವಸೂಲು ಮಾಡಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ – 1965ನೇ ಇಸವಿಯಿಂದ ಏನು ಕಂದಾಯ ಎಂದು ನಿಗದಿಯಾಗಿತ್ತೋ ಅದರಂತೆ ಏಕೆ ಇಲ್ಲಿಯವರೆಗೆ ವಸೂಲು ಮಾಡಲಿಲ್ಲ?

ಶ್ರೀ ಎಚ್.ವಿ. ಕೌಜಲಗಿ – ಏಕೆ ವಸೂಲು ಮಾಡಲಿಲ್ಲ ಎನ್ನುವುದಕ್ಕೆ ಕಾರಣ ಬೇರೆ ಇತ್ತು. 1968 ರಲ್ಲಿ ಬೇರೆ ಕಾನೂನು ಇತ್ತು. ಮತ್ತು ಇದರಂತೆ ಹೊಸ ಸವಲತ್ತುಗಳನ್ನು ಕೊಡಬೇಕಾಗಿತ್ತು. ರಿಟ್ರಾಸ್ಪೆಕ್ಟೀವ್ ವಿಚಾರ ಹೇಳಿ ಪುನಃ ಇದರ ಬಗ್ಗೆ ಮತ್ತೆ ಹೇಳಿದರೆ ನಾವೇನು ಇದಕ್ಕೆ ಹೇಳುವುದು.

ಶ್ರೀ ಕೆ.ಎಚ್. ರಂಗನಾಥ್ – ಈ ವಿಚಾರದಲ್ಲಿ ನಾನು ಹೇಳುವುದು ಹಳೆಯ ಮೈಸೂರಿನಲ್ಲಿ ಇರುವ ಎಂಟು ಜಿಲ್ಲೆಗಳಲ್ಲಿ 1961 ರಲ್ಲಿ ರೀಸೆಟಲ್‌ಮೆಂಟು ಸರ್ವೆ ಮಾಡುತ್ತೇವೆಂದು ಹೇಳಿದ್ದರು. ಇದರಂತೆ ಮಾಡಿ ಇಲ್ಲಿ ಸ್ಟಾಂಡರ್ಡ್ ರೇಟು ಎನ್ನುವುದನ್ನು ತರಿ, ಖುಷ್ಕಿ ಹಾಗೂ ಬಾಗಾಯಿತು ರೇಟು ಏನು ಎನ್ನುವುದು ನಿಗದಿ ಮಾಡಲಾಗಿದ್ದರೂ ಇಲ್ಲಿರುವ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದಂತೆ ರೇಟುಗಳನ್ನು ಚಾರ್ಜು ಮಾಡುತ್ತಾ ಇರುವುದರಿಂದ ಇಷ್ಟು ಕಷ್ಟವಾಗಿದೆ ಮತ್ತು 65–66 ರಲ್ಲಿ ವಾಟರು ರೇಟು ಏನು ಎನ್ನುವುದನ್ನು ನಿಗದಿ ಮಾಡಿರುವಾಗ ಅಧಿಕಾರಿಗಳು ಇಷ್ಟ ಬಂದಂತೆ ವಸೂಲು ಮಾಡುವುದು ರೂಲ್ಸ್‌ಗೆ ವಿರುದ್ಧವಾಗುತ್ತದೆ. ಆದರೆ ತಾವು ಸರಕಾರದ ವತಿಯಿಂದ ಒಂದು ಸರ್ಕ್ಯೂಲರು ಬೇರೆ ಕಳುಹಿಸಿ ಕಂದಾಯ ವಸೂಲು ಮಾಡಬೇಕೆಂದು ಹೇಳಿದರೆ ಇದು ಸರಿಯಾಗುತ್ತದೆಯೇ? ಇದನ್ನು ಸರಿ ಮಾಡಬೇಕೆಂದು ನಾವು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಎಚ್.ವಿ. ಕೌಜಲಗಿ – ಹಾಗೇನಾಗಿಲ್ಲ. 66–67, 67–68 ಹಾಗೂ 68–69 ಈ ಮೂರು ವರ್ಷಗಳಲ್ಲಿ ಏನು ರಿಮಿಷನ್ ಆಗಬೇಕು ಎಂದು ವಿಚಾರ ಮಾಡುವ ಸಲುವಾಗಿ ಜಿಲ್ಲಾಧಿಕಾರಿಗಳಿಂದ ಎಲ್ಲಾ ರಿಕಾರ್ಡುಗಳನ್ನು ತರಿಸಿ ಪರಿಶೀಲನೆ ಮಾಡಿ ನೋಡಲಾಗಿದೆ. ಯಾವ ಕಡೆಯಿಂದಲೂ ಕೂಡ ಒತ್ತಾಯದಿಂದ ವಾಟರ್ ರೇಟನ್ನು ವಸೂಲು ಮಾಡದ ವಿಚಾರ ಬಂದಿಲ್ಲ. ಇದರ ಬಗ್ಗೆ ಬೇಕಾದರೆ ಪುನಃ ನೋಡೋಣ. ನನಗೆ ತಿಳಿದ ಹಾಗೆ ಈ ಮಾರ್ಚಿ ತಿಂಗಳೊಳಗೆ ಯಾವ ಕಡೆಯಲ್ಲೂ ಒತ್ತಾಯದಿಂದ ಕಂದಾಯವನ್ನು ವಸೂಲು ಮಾಡಿಲ್ಲ. ವಾಟರು ರೇಟು ವಿಚಾರ ಬೇರೆ, ಲ್ಯಾಂಡ್ ರೆವಿನ್ಯೂ ವಿಚಾರವೇ ಬೇರೆ. 1965 ರಲ್ಲಿ ರೀಸಟಲ್‌ಮೆಂಟ್ ಆಗುವುದಕ್ಕೆ ಮುಂಚೆ ಬೇರೆ ರೀತಿಯಾಗಿ ವಾಟರು ರೇಟು ಇತ್ತು.

ಈ ಕಾಯಿದೆ 1968ನೇ ಇಸವಿಯಲ್ಲಿ ಪಾಸು ಆದ ಮೇಲೆ, ರಿಟ್ರಾಸ್‌ಪೆಕ್ಟೀವ್ ಆಗಿ 1ನೇ ಜುಲೈ 1965 ರಿಂದ ಅಮಲಿನಲ್ಲಿ ತರಬೇಕೆಂದು ಇದರ ರೂಲ್ಸು 1968 ರಲ್ಲಿ ಆಯಿತು. ಈ ರೂಲ್ಸುಗಳು ಬಂದ ಮೇಲೆ ಡ್ರೈ ಲ್ಯಾಂಡು ಅಸೆಸ್‌ಮೆಂಟ್ ಬೇರೆ, ವಾಟರು ರೇಟೇ ಬೇರೆ ಎಂದು ಮಾಡಿರುವುದರಿಂದ 1ನೇ ಮೇ 1961 ರಿಂದ ವಾಟರು ರೇಟು ಲೆವಿಯಂತೆ ವಸೂಲು ಮಾಡಲಾಗಲಿಲ್ಲ. ಕೆಲವು ಕಡೆ ಜನರಿಗೆ ತೊಂದರೆಯಾಗಬಹುದು. ಇಲ್ಲೂ ಕೂಡ ಅನೇಕ ಸದಸ್ಯರು ರೈತರು ನೀರು ಉಪಯೋಗಿಸಿಕೊಳ್ಳದೇ ಇದ್ದರೂ ಕೆಲವು ಕಡೆ ಅಧಿಕಾರಿಗಳು ವಾಟರು ರೇಟಿಗಾಗಿ ನೋಟೀಸು

ಕೊಟ್ಟಿದ್ದಾರೆಂದು ಹೇಳಿದರು. ಇದರಲ್ಲಿ ಎಲ್ಲೋ ಪಾಟಿರು ಕಾಯಿದೇ ಪ್ರಕಾರ ದೋಷ ಇರಬಹುದು. ಇದಕ್ಕಾಗಿ ರೆವಿನ್ಯೂ ಖಾತೆಗೆ ಒಂದು ಸೂಚನೆ ಕೊಡಲಾಗಿದೆ. ಇವರಂತೆ ಪ್ರತಿಯೊಂದು ಕಡೆ ಇರುವ ಕೆರೆಗಳಲ್ಲಿ ನೀರು ಇದೆಯೋ ಇಲ್ಲವೋ, ನೀರಿದ್ದರೆ ಯಾವ ಸರ್ವೆ ನಂಬರಿಗೆ ನೀರು ಕೊಟ್ಟಿದ್ದಾರೆ ಮತ್ತು ಎಲ್ಲಿ ಕೊಡಲಿಲ್ಲ ಎನ್ನುವ ರಿಪೋರ್ಟ್ ಕಳುಹಿಸಬೇಕು ಎಂದು ಅಧಿಕಾರಿಗಳಿಗೆ ಹೇಳಲಾಗಿದೆ. ಇವರು ಕೊಟ್ಟ ಮಾಹಿತಿ ಪ್ರಕಾರ ಎಲ್ಲಿ ತಪ್ಪಾಗಿರುತ್ತೋ ಅದನ್ನು ಸರಿ ಮಾಡಲು ಆಯಾ ಡಿವಿಜನ್‌ನಲ್ಲಿರುವ ಅಸಿಸ್ಟೆಂಟು ಕಮಿಷನರವರಿಗೆ ಅವಕಾಶ ಮಾಡಿ ಕೊಡಲಾಗಿದೆ. ಇದರಲ್ಲಿ ಬಡ ಜನರಿಗೆ ಬಹಳ ತೊಂದರೆಗಳಾಗುತ್ತಿವೆ ಎನ್ನುವ ಪ್ರಶ್ನೆ ಇದರಲ್ಲಿ ಬಂತು. ಇದಕ್ಕಾಗಿ ನಾನು ನಿನ್ನೆ ದಿವಸ ಇದರ ಬಗ್ಗೆ ಒಂದು ಉಪಾಯ ಕಂಡುಹಿಡಿದಿದ್ದೇನೆ. ನಿನ್ನೆ ದಿವಸ ನಮ್ಮ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು ಒಂದು ಸಭೆಗಾಗಿ ಇಲ್ಲಿಗೆ ಬಂದಿದ್ದರು. ಅವರಿಗೂ ಕೂಡ ಇದರ ಬಗ್ಗೆ ನಾನು ಸೂಚನೆಗಳನ್ನು ಕೊಟ್ಟಿದ್ದೇನೆ. ಆಯಾ ಜಿಲ್ಲೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಜೊತೆಗೆ ಒಬ್ಬರು ಅಸಿಸ್ಟೆಂಟ್ ಇಂಜನಿಯರನ್ನು ಕೊಟ್ಟು, ಅವರು ಎಲ್ಲ ತಾಲ್ಲೂಕುಗಳಲ್ಲಿರುವ ಕೆರೆಗಳನ್ನು ಅಥವಾ ಕೆರೆ ಆಸರೆ ಇರುವ ಅಥವಾ ಇಲ್ಲದೇ ಇರುವ ಜಾಗಗಳನ್ನೆಲ್ಲಾ ನೋಡಿಕೊಂಡು ಇಲ್ಲಿನ ಜನರಿಗೆ ಏನೇನು ಕಷ್ಟಗಳಿವೆ ಅವನ್ನೆಲ್ಲಾ ಅದೇ ಸ್ಥಳದಲ್ಲೇ ಜನರಿಂದ ಕೇಳಿಕೊಂಡು ಅವರೇ ನಿರ್ಣಯ ಕೊಡಬೇಕೆಂದು ಅವರಿಗೆ ಹೇಳಲಾಗಿದೆ. ಅವರೇ ಇದರ ಬಗ್ಗೆ ಚೌಕಾಸಿ ಮಾಡಿ ಸರಿಯಾದ ಒಂದು ತೀರ್ಮಾನ ಕೊಟ್ಟು ಜನರಿಗೆ ಸಹಾಯ ಮಾಡಬೇಕೆಂದು, ಮತ್ತು ಆಯಾ ಜನರು ಕೊಡುವ ಓರಲ್ ಸ್ಟೇಟ್‌ಮೆಂಟ್‌ಗಳನ್ನು ಅಪೀಲುಗಳೆಂದು ಭಾವಿಸಿ ತೀರ್ಮಾನ ಕೊಡಬೇಕೆಂದೂ ಹೇಳಲಾಗಿದೆ. ಅವರೇ ಇದರ ಬಗ್ಗೆ ಚೌಕಾಸಿ ಮಾಡಿ ಸರಿಯಾದ ಒಂದು ತೀರ್ಮಾನ ಕೊಟ್ಟು ಜನರಿಗೆ ಸಹಾಯ ಮಾಡಬೇಕೆಂದು, ಮತ್ತು ಆಯಾ ಜನರು ಕೊಡುವ ಓರಲ್ ಸ್ಟೇಟ್‌ಮೆಂಟ್‌ಗಳನ್ನು ಅಪೀಲುಗಳೆಂದು ಭಾವಿಸಿ ತೀರ್ಮಾನ ಕೊಡಬೇಕೆಂದು ಹೇಳಲಾಗಿದೆ. ಪ್ರತಿಯೊಬ್ಬ ಅಸಿಸ್ಟೆಂಟ್ ಕಮಿಷನರ್‌ರವರ ಜೊತೆಗೆ ಒಬ್ಬರು ಅಸಿಸ್ಟೆಮಟ್ ಇಂಜನೀಯರವರನ್ನು ಕೂಡಿಸಿಕೊಂಡು ಇಲ್ಲಿ ಒಟ್ಟಾಗಿ ಕೆಲಸ ಮಾಡಿ ಜನರಿಗೆ ಅನುಕೂಲ ಮಾಡಿಕೊಡಲಿ ಎಂದು ಈ ರೀತಿ ಮಾಡಲಾಗಿದೆ. ಇದರಲ್ಲಿ ಎಷ್ಟು ಕೇಸುಗಳು ವಜಾ ಆಗುತ್ತವೆ ಮತ್ತು ಎಲ್ಲಿ ಸರಿಯಾಗಿ ನೋಟೀಸು ಕೊಡಬಹುದು ಎನ್ನುವುದನ್ನು ನೋಡಿಕೊಂಡು ಮುಂದಿನ ವರ್ಷ ನೋಟೀಸು ಕೊಡುವುದಕ್ಕೆ ಕಾಲಾವಕಾಶ ಇದೆ. ಇದಕ್ಕಾಗಿ ಇಂತಹ ಒಂದು ಷಾರ್ಟ್‌ಕಟ್ ದಾರಿ ಮಾಡಬೇಕೆಂದು ಮಾಡಲಾಗಿದೆ. ಆದರೆ ಈ ಪದ್ಧತಿ ತಪ್ಪಾಗುತ್ತದೆ. ಕನ್ಸಾಡೆಲೇಟ್ ಆಗಿ ಕಂದಾಯವನ್ನು ಏತಕ್ಕೆ ವಸೂಲಿ ಮಾಡಬಾರದೆಂದು ಮಾನ್ಯ ಶಿವಪ್ಪನವರು ಕೇಳಿದರು.

**ಶ್ರೀ ಎಲ್. ಶ್ರೀಕಂಠಯ್ಯ** – ಈ ವಿಚಾರದಲ್ಲಿ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಧಿಕಾರಿಯವರು, ಸಬ್ ಡಿವಿಜನ್ ಆಫೀಸರ್, ಸ್ಥಳದ ಎಂ.ಎಲ್.ಎ, ಎಂ.ಎಲ್.ಸಿ ಮತ್ತು ಎಂ.ಪಿ. ಅವರುಗಳನ್ನು ಒಳಗೊಂಡಂತೆ ಲ್ಯಾಂಡ್ ರೆವಿನ್ಯೂ ಅಡ್ವೈಸರಿ ಕಮಿಟಿಯನ್ನು ನೇಮಕ ಮಾಡಿದರೆ ಅವರು ಎಲ್ಲವನ್ನು ವಿಚಾರ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಆ ರೀತಿ ಒಂದು ಸಲಹಾ ಸಮಿತಿಯನ್ನು ನೇಮಕ ಮಾಡುತ್ತೀರಾ?

**ಶ್ರೀ ಎಚ್.ವಿ. ಕೌಜಲಗಿ** – ಆ ಬಗ್ಗೆ ವಿಚಾರ ಮಾಡುತ್ತೇನೆ ಜನರಿಗೆ ತೊಂದರೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಈಗ ರೈತರು ಉಪಯೋಗಿಸಿಕೊಂಡು ನೀರಿಗೆ ಮಾತ್ರ ತೆರಿಗೆ ಕೊಟ್ಟರೆ ಸಾಕಾಗಿದೆ.

**ಶ್ರೀ ಎಸ್.ಎ. ಚನ್ನೇಗೌಡ** – ಹಿಂದಿನ ಬಾಕಿಯನ್ನು ವಸೂಲಿ ಮಾಡುವುದನ್ನು ಕೈ ಬಿಡುತ್ತೀರಾ?

**ಶ್ರೀ ಎಂ.ಕೆ. ಬೊಮ್ಮೇಗೌಡ** – ಈಗ 100 ಎಕರೆಯೊಳಗೆ ಇರುವವರಿಗೂ ಒಂದೇ ರೀತಿ ವಾಟರ್ ರೇಟ್ ಹಾಕುತ್ತಿದ್ದೀರಿ. 100 ಎಕರೆಗಿಂತ ಜಾಸ್ತಿ ಜಮೀನು ಇರುವವರಿಗೂ ಕೂಡ ಒಂದೇ ರೀತಿ ವಾಟರ್ ರೇಟು ಹಾಕುತ್ತಿದ್ದೀರಿ, ಈ ಒಂದು ತಾರತಮ್ಯವಾದರು ಏತಕ್ಕೆ?

**ಶ್ರೀ ಎಂ.ಎಸ್. ರಾಮಣ್ಣ** – ಈ ವಿಚಾರದಲ್ಲಿ ಚೌಕಾಸಿ ಮಾಡಬೇಕಾದ ಪ್ರಶ್ನೆ ಏನೂ ಇಲ್ಲ. ವಾಟರ್ ರೇಟ್ ಬಗ್ಗೆ ತಾವು ತಾಲ್ಲೂಕ್ ಮಟ್ಟದಲ್ಲಿ ಒಂದು ಕಮಿಟಿಯನ್ನು ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ದುಷ್ಪರಿಣಾಮವಾಗುತ್ತದೆ.

**ಶ್ರೀ ಹಂಜಿ ಶಿವಣ್ಣ** – ಈ ವಿಚಾರದಲ್ಲಿ ತಾವು ಪುನರ್ ಪರಿಶೀಲನೆ ಮಾಡುತ್ತೇನೆಂದು ಭರವಸೆ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ವೀರೇಂದ್ರ ಪಾಟೀಲರ ಮಂತ್ರಿ ಮಂಡಲದಲ್ಲಿ ಈ ಖಾತೆಯನ್ನು ಹೊತ್ತಿರುವ ನಿಮಗೆ ರೈತರ ಪಾಪದ ಹೊರೆ ತಟ್ಟುತ್ತದೆ. ಈಗ ರೈತರ ಪರಿಸ್ಥಿತಿ ತುಂಬ ಹದಗೆಟ್ಟಿದೆ ಆದ್ದರಿಂದ ಹಿಂದಿನ ಕಂದಾಯವನ್ನೇ ವಸೂಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಬೋಳಾರಘರಾಮಶೆಟ್ಟಿ** – ನೀರಾವರಿ ಕಾಮಗಾರಿ ಮಾಡಿಸಿರುವ ಕಡೆ ನೀರಾವರಿ ತೆರಿಗೆಯನ್ನು ಹಾಕಬಹುದು. ಆದರೆ ನೀರಾವರಿ ಕಾಮಗಾರಿ ಇಲ್ಲದ ಕಡೆ ಕೂಡ ತೆರಿಗೆಯನ್ನು ಹಾಕುತ್ತಿದ್ದೀರಿ. ಇದನ್ನು ಯಾವ ಕಾನೂನು ಪ್ರಕಾರ ಹಾಕಿದ್ದೀರಿ ಈ ಬಗ್ಗೆ ಸಂಬಂಧಪಟ್ಟ ರೈತರು ಕೋರ್ಟಿಗೆ ಹೋಗಿ ತಮ್ಮ ಹಕ್ಕನ್ನು ಪಡೆಯುವುದಕ್ಕೆ ಅವಕಾಶವಿದೆ. ಆದ್ದರಿಂದ ನೀರಾವರಿ ಕಾಮಗಾರಿ ಮಾಡಿಸದಿರುವ ಕಡೆ ವಾಟರ್ ಟ್ಯಾಕ್ಸ್ ಹಾಕುವುದು ನ್ಯಾಯಬದ್ಧವೆ ಎಂಬುದನ್ನು ಸರ್ಕಾರದವರು ಯೋಜನೆ ಮಾಡಬೇಕು.

**Mr. Deputy Speakery** - In view of the lengthy discussion and the statement made by the Hon'ble Revenue Minister. I am not giving my consent to the adjournment motion. We have discussed the issue fully.

**ಶ್ರೀ ಕೆ.ಎಚ್. ಶ್ರೀನಿವಾಸ್** – ಅಡ್ಜರ್ನ್‌ಮೆಂಟ್ ಮೋಷನ್ ನನ್ನ ಹೆಸರಿನಲ್ಲಿರುವುದರಿಂದ ನನಗೆ ಇನ್ನೊಂದು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಬೇಕು. ಮಾನ್ಯ ಮಂತ್ರಿಯವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಶಿವಮೊಗ್ಗದ ಒಂದನೇ ಜೋನ್‌ನಲ್ಲಿ ಹೊಸ ಕಂದಾಯಕ್ಕೆ ಬದಲು ಹಳೆಯ ಕಂದಾಯವನ್ನೇ ವಸೂಲಿ ಮಾಡುವಂತೆ ಅಲ್ಲಿಯ ಜಿಲ್ಲಾಧಿಕಾರಿಯವರಿಗೆ ಆದೇಶ ಕಳುಹಿಸಿಕೊಡುತ್ತೀರಾ?

(ದಿ: 30–4–1970)


## ಭಾಗ-4

## ಎಚ್.ವಿ. ಕೌಜಲಗಿ


## ಸಂಕ್ಷಿಪ್ತ ಭಾವಚಿತ್ರಗಳು




ಬೆಳಗಾವಿ ಲೋಕಲ್ ಬೋರ್ಡಿಗೆ ಭೇಟಿಕೊಟ್ಟಾಗ ಆಗಿನ
ಜಿಲ್ಲಾ ಲೋಕಲ್ ಬೋರ್ಡಿನ ಛೇರ್‌ಮನ್ ಅವರೊಂದಿಗೆ
ಕಂದಾಯ ಸಚಿವರಾದ ಶ್ರೀ ಎಚ್.ವಿ. ಕೌಜಲಗಿಯವರು.




ಬೆಳಗಾವಿಯ ಗಾಂಧಿ ಭವನಕ್ಕೆ ಸನ್ಮಾನ್ಯ ಮುಖ್ಯಂತ್ರಿಗಳಾದ ಶ್ರೀ ವೀರೇಂದ್ರ
ಪಾಟೀಲರು ಭೇಟಿಕೊಟ್ಟಾಗ ಅವರ ಸಂಗಡ ಪಾಂತೊನಿಯನ್ ಅರ್ಬನ್ ಬ್ಯಾಂಕಿನ
ಛೇರ್‌ಮನ್‌ರಾದ ಶ್ರೀ ಬಿ.ಡಿ. ಸರಾಫ್ ಹಾಗೂ ಗಣ್ಯ ವಾಪಾರಸ್ಥರಾದ
ಶ್ರೀ ವೀರಪ್ಪಣ್ಣಾ ಉಪ್ಪಿನ ಅವರೊಂದಿಗೆ ಕಂದಾಯ ಸಚಿವರಾದ
ದಿ. ಶ್ರೀ ಎಚ್.ವಿ. ಕೌಜಲಗಿಯವರು



ಬೆಳಗಾವಿ ಪಾಂತೋನೀಯನ್ ಅರ್ಬನ್ ಬ್ಯಾಂಕಿಗೆ ಶ್ರೀ ವೀರೇಂದ್ರ ಪಾಟೀಲರು
ಭೇಟಿ ಕೊಟ್ಟಾಗ ಅವರ ಸಂಗಡ ಕಂದಾಯ ಮಂತ್ರಿಗಳಾಗಿದ್ದ
ದಿ. ಶ್ರೀ ಎಚ್.ವಿ. ಕೌಜಲಗಿಯವರು ಹಾಗೂ ಬ್ಯಾಂಕಿನ ಛೇರ್‌ಮನ್‌ರಾದ
ಶ್ರೀ ಜಿ.ಡಿ. ಸರಾಫ್ ಮತ್ತು ನಿರ್ದೇಶಕರ ಜೊತೆಗೆ



ಪೂಜ್ಯ ಶ್ರೀ ಶಿವಬಾಲಯೋಗಿ ಸ್ವಾಮಿಗಳು ಹಾಗೂ ಓರಿಸ್ಸಾ
ಮುಖ್ಯಮಂತ್ರಿಗಳೊಂದಿಗೆ ಕಂದಾಯ ಸಚಿವರಾದ
ದಿ. ಶ್ರೀ ಎಚ್.ವಿ. ಕೌಜಲಗಿಯವರು



ಗದಗ ಲೈನ್ಸ್ ಕ್ಲಬ್ಬಿಗೆ ಕಂದಾಯ ಸಚಿವರಾದ ದಿ. ಶ್ರೀ ಎಚ್.ವಿ. ಕೌಜಲಗಿಯವರು ಭೇಟಿ ಕೊಟ್ಟಾಗ ಲೈನ್ಸ್ ಗವರ್ನರ ಶ್ರೀ ಅಪ್ಪಣ್ಣಾ ಮಾನ್ವಿ ಹಾಗೂ ವ್ಯಾಪಾರಿ ಸಂಘದ ಅಧ್ಯಕ್ಷರಾದ ಶ್ರೀ ಅಂದಾನಪ್ಪ ಮಾನ್ವಿ ಹಾಗೂ ಇತರರು.

1757, 15

# ಪ್ರತಿಭಾವಂತ ಸಂಸದೀಯ ಪಟು ಪುಸ್ತಕ ಮಾಲಿಕೆ

## ಪ್ರಕಟಗೊಂಡ ಪುಸ್ತಕಗಳು

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ದರ |
|---|---|---|---|
| 1. | ಕೆ. ಹನುಮಂತಯ್ಯ | ಪ್ರೊ ಎನ್.ಬಿ. ಪಂಗಣ್ಣಾಯ್ಯ ಹಾಗೂ ಇತರರು | 20.00 |
| 2. | ಎಸ್. ನಿಜಲಿಂಗಪ್ಪ | ಡಾ॥ ಸಂದೀಪ್ ಶಾಸ್ತ್ರಿ | 15.00 |
| 3. | ಶಾಂತವೇರಿ ಗೋಪಾಲ ಗೌಡ | ಪ್ರೊ॥ ಎನ್.ಬಿ. ಪಂಗಣ್ಣಾಯ್ಯ | 15.00 |
| 4. | ವೈಕುಂಠ ಬಾಳಿಗಾ | ಡಾ॥ ಪಿ. ಜೀವನ್ ಕುಮಾರ್ | 20.00 |
| 5. | ವೀರೇಂದ್ರ ಪಾಟೀಲ್ | ಡಾ॥ ಎಸ್.ಹೆಚ್. ಕಮಂಟೆ ಹಾಗೂ ಇತರರು | 20.00 |
| 6. | ಕಡಿದಾಳ್ ಮಂಜಪ್ಪ | ಡಾ॥ ಎಸ್.ಹೆಚ್. ಕಮಂಟೆ ಹಾಗೂ ಇತರರು | 15.00 |
| 7. | ಜಿ.ವಿ. ಹಳ್ಳಿಕೇರಿ | ಡಾ॥ ಆರ್.ಎಂ.ಎಲ್. ಪಾಟೀಲ್ | 15.00 |
| 8. | ಕೆ.ಎಸ್. ನಾಗರತ್ನಮ್ಮ | ಪ್ರೊ॥ ಎಸ್.ಬಿ. ಪಂಗಣ್ಣಾಯ್ಯ ಹಾಗೂ ಇತರರು | 15.00 |
| 9. | ಡಿ. ದೇವರಾಜ ಅರಸು | ಜಿ.ಎಸ್. ಸದಾನಂದ | 15.00 |
| 10. | ಕೆ.ಟಿ. ಭಾಷ್ಯಂ | ಡಾ॥ ವಿಘ್ನೇಶ್ ಎನ್. ಭಟ್ | 15.00 |
| 11. | ಕೆ. ಪುಟ್ಟಸ್ವಾಮಿ | ಜಿ. ದಕ್ಷಿಣಾ ಮೂರ್ತಿ | 15.00 |
| 12. | ಟಿ. ಸಿದ್ದಲಿಂಗಯ್ಯ | ಜಿ. ದಕ್ಷಿಣಾ ಮೂರ್ತಿ | 20.00 |
| 13. | ಜಗಳೂರು ಇಮಾಂ | ಜಿ.ಎಸ್. ಸದಾನಂದ | 15.00 |
| 14. | ಕೆ.ಸಿ. ರೆಡ್ಡಿ | ಡಾ॥ ಸಂಧ್ಯಾರೆಡ್ಡಿ | 20.00 |
| 15. | ಬಿ.ವಿ. ಕಕ್ಕಿಲ್ಲಾಯ | ಎಂ.ಕೆ. ಭಂಡಿ | 20.00 |

| | | | |
|---|---|---|---|
| 16. | ಹೆಚ್.ಎಂ. ಚೆನ್ನಬಸಪ್ಪ | ಪ್ರೊ॥ ಬಿ.ಎನ್. ಚಂದ್ರಯ್ಯ | 20.00 |
| 17. | ಬಿ. ರಾಚಯ್ಯ | ನಂಜಯ್ಯ ಹೊಂಗನೂರ್ | 20.00 |
| 18. | ಎಂ. ನಾಗಪ್ಪ | ಡಾ॥ ಎಂ.ಎಸ್. ಪಾಟೀಲ್ | 15.00 |
| 19. | ಜೆ.ಬಿ. ಮಲ್ಲಾರಾಧ್ಯ | ಡಾ॥ ಹೆಚ್.ಎಂ. ಪಂಚಾಕ್ಷರಯ್ಯ | 15.00 |
| 20. | ಗಂಗಾಧರ್ ನಮೋಶಿ | ಡಾ॥ ಕಮಂಟಿ ಹಾಗೂ ಇತರರು | 15.00 |
| 21. | ಬಿ.ಡಿ. ಜತ್ತಿ | ಕೃಷ್ಣ ಕೊಲ್ಹಾರ ಕುಲಕರ್ಣಿ | 15.00 |
| 22. | ಆರ್. ಗುಂಡೂರಾವ್ | ಈಶ್ವರ ದೈ ತೋಟ | 20.00 |
| 23. | ಕೆ.ಎಚ್. ಪಾಟೀಲ್ | ಎಂ.ಕೆ ಭಂಡಿ | 15.00 |
| 24. | ಅಜೀಜ್ ಸೇಠ್ | ಹೆಚ್.ಕೆ ಬಾಲಸೂರಿ | 15.00 |
| 25. | ಸಿ.ಎಂ. ಆರ್ಮುಗಂ | ಹೆಚ್.ಕೆ ಬಾಲಸೂರಿ | 15.00 |
| 26. | ಜೆ.ಹೆಚ್. ಪಟೇಲ್ | ಶೇಷಚಂದ್ರಿಕ | 30.00 |
| 27. | ಬಿ.ಎಲ್. ಸುಬ್ಬಮ್ಮ | ಡಾ॥ ಡಿ.ಎಸ್. ಜಯಪ್ಪಗೌಡ | 15.00 |
| 28. | ಟಿ.ಆರ್. ಶಾಮಣ್ಣ | ಎಲ್.ಎನ್. ಮುಕುಂದರಾಜ್ | 20.00 |
| 29. | ಎಸ್.ಡಿ. ಗಾಂವಕರ್ | ಮೋಹನ್ ವರ್ಣೇಕರ್ | 20.00 |
| 30. | ಎಂ.ಪಿ.ಎಲ್. ಶಾಸ್ತ್ರಿ | ಉಷಾ ಹಾರೋಗದ್ದೆನಾಯಕ್ | 20.00 |
| 31. | ಎಸ್. ಶಿವಪ್ಪ | ಕೂಡ್ಲಿಗೆರೆ ಮಲ್ಲಿಕಾರ್ಜುನ | 30.00 |
| 32. | ಕಾಗೋಡು ಚಳವಳಿ | ಕೂಡ್ಲಿಗೆರೆ ಮಲ್ಲಿಕಾರ್ಜುನ | 15.00 |
| 33. | ಕೆ.ವಿ. ಶಂಕರಗೌಡ | ಜಗದೀಶ ಕೊಪ್ಪ | 20.00 |
| 34. | ಟಿ.ಎನ್. ನರಸಿಂಹಮೂರ್ತಿ | ಕೆ.ಜೆ. ಸುರೇಶ್ | 25.00 |
| 35. | ಎಸ್.ಆರ್. ಕಂಠಿ | ಮನು ಬಳಿಗಾರ್ | 30.00 |
| 36. | ಎಸ್.ಸಿ. ಮಲ್ಲಯ್ಯ | ಡಾ॥ ಟಿ.ಸಿ. ಪೂರ್ಣಿಮಾ | 20.00 |
| 37. | ಅಬ್ದುಲ್ ನಜೀರ್‌ಸಾಬ್ | ಮನು ಬಳಿಗಾರ್ | 30.00 |

| | | | |
|---|---|---|---|
| 38. | ಪಿ.ಎಂ. ನಾಡಗೌಡ | ಗಂಗಾಧರಯ್ಯ ಹಿರೇಮಠ | 30.00 |
| 39. | ಕೆ. ಪಟ್ಟಾಭಿರಾಮನ್ | ಸಂಜಯ್ ದೊರೆ | 20.00 |
| 40. | ಎಂ.ಎಸ್.ಕೃಷ್ಣನ್ | ಹೆಚ್.ಕೆ. ಬಾಲಸೂರಿ | 20.00 |
| 41. | ಎಂ.ವಿ. ಕೃಷ್ಣಪ್ಪ | ಜಿ.ಜಿ. ನಾಗರಾಜ್ | 15.00 |
| 42. | ಕೆ.ಎಚ್. ರಂಗನಾಥ್ | ಎಲ್.ಎನ್. ಮುಕುಂದರಾಜ್ | 20-00 |
| 43. | ರಾಮಕೃಷ್ಣ ಹೆಗಡೆ | ಶೂದ್ರ ಶ್ರೀನಿವಾಸ್ | 20-00 |
| 44. | ಸಿ. ಬೈರೇಗೌಡ | ಪ್ರಹ್ಲಾದರಾವ್ | 20-00 |
| 45. | ಎಸ್.ಎಂ. ಯಾಹ್ಯಾ | ಬಿ.ಎಂ. ಹನೀಫ್ | 20-00 |
| 46. | ಬಾಪುಗೌಡ ದರ್ಶನಾಪುರ | ಗಂಗಾಧರಯ್ಯ ಹಿರೇಮಠ | 20-00 |
| 47. | ಡಾ॥ ಎಚ್. ನರಸಿಂಹಯ್ಯ | ಪ್ರೊ ಗಂಗಾಧರ ಮೂರ್ತಿ | 20-00 |
| 48. | ಕರ್ನಾಟಕ ಏಕೀಕರಣ ಮತ್ತು ನಾಮಕರಣ | ಡಾ. ಸಿ.ಆರ್. ಗೋವಿಂದರಾಜ್ | 15-00 |
| 49. | ಕರ್ನಾಟಕ ರೈತ ಚಳುವಳಿ–ಸತ್ಯಾಗ್ರಹಗಳು ಸಂಪುಟ–1 | ಡಾ. ಎಂ.ಜಿ. ನಾಗರಾಜ್ | 15-00 |
| 50. | ಕರ್ನಾಟಕ ರೈತ ಚಳುವಳಿ–ಸತ್ಯಾಗ್ರಹಗಳು ಸಂಪುಟ–2 | ಡಾ. ಎಂ.ಜಿ. ನಾಗರಾಜ್ | 25-00 |
| 51. | ಕರ್ನಾಟಕ ರೈತ ಚಳುವಳಿ–ಸತ್ಯಾಗ್ರಹಗಳು ಸಂಪುಟ–3 | ಡಾ. ಎಂ.ಜಿ. ನಾಗರಾಜ್ | 25-00 |
| 52. | ಬಿ.ಎಂ. ಹೊರಕೇರಿ | ಡಾ. ಎಂ.ಎಸ್. ಪಾಟೀಲ | 20-00 |
| 53. | ಕೆ. ಕೆಂಚಪ್ಪ | ಚಂದ್ರಶೇಖರ ತಾಳ್ಯ | 20-00 |
| 54. | ಕೇಶವರಾವ ನಿಟ್ಟೂರಕರ್ | ಡಾ. ಜಿ.ಬಿ. ವಿಸಾಜಿ | 20-00 |
| 55. | ಸರದಾರ ಶರಣಗೌಡ ಇನಾಂದಾರ | ಡಾ. ಬಿ.ವ್ಹಿ. ಮಲ್ಲಾಪುರ | 20-00 |
| 56. | ಬಸವರಾಜೇಶ್ವರಿ | ಪ್ರಹ್ಲಾದ ಬೆಟಗೇರಿ | 20-00 |

| | | | |
|---|---|---|---|
| 57. | ಕೊಲೂರು ಮಲ್ಲಪ್ಪ | ಗಂಗಾಧರಯ್ಯ ಹಿರೇಮಠ,<br>ಡಾ। ದೇ.ಮಾ. ಪಾಟೀಲ | 20-00 |
| 58. | ದೇವೇಂದ್ರಪ್ಪ ಫಾಳಪ್ಪ ಜಮಾದಾರ | ಡಾ. ನಾಗಬಾಯಿ ಬಿ.ಬುಳ್ಳಾ | 20-00 |
| 59. | ಮೊಹಮ್ಮದ್ ಅಲಿ | ಪ್ರೊ ಶಿವರಾಜ ಪಾಟೀಲ | 20-00 |
| 60. | ಬಿ. ಶ್ಯಾಮಸುಂದರ್ | ಗಂಧರ್ವ ಸೇನಾ | 20-00 |
| 61. | ಶಂಕರಶೆಟ್ಟಿ ಪಾಟೀಲ | ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ | 20-00 |

## ಭಾಷಾಂತರ ಪುಸ್ತಕಗಳು

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ದರ |
|---|---|---|---|
| 1. | ಡಾ॥ ಬಿ.ಆರ್. ಅಂಬೇಡ್ಕರ್ | ಭಾಷಾಂತರ ನಿರ್ದೇಶನಾಲಯ | 20.00 |
| 2 | ಡಾ॥ ರಾಂ ಮನೋಹರ ಲೋಹಿಯಾ | ಭಾಷಾಂತರ ನಿರ್ದೇಶನಾಲಯ | 15.00 |
| 3. | ವಿ.ಕೆ. ಕೃಷ್ಣಮೆನನ್ | ರಾಜ್ಯ ಭಾಷಾ ಆಯೋಗದ ಅಧ್ಯಕ್ಷರು | 20.00 |
| 4. | ಡಾ॥ ಶ್ಯಾಂಪ್ರಸಾದ್ ಮುಖರ್ಜಿ | ಭಾಷಾಂತರ ನಿರ್ದೇಶನಾಲಯ | 20.00 |
| 5. | ಶೇಕ್ ಮಹಮದ್ ಅಬ್ದುಲ್ಲಾ | ಭಾಷಾಂತರ ನಿರ್ದೇಶನಾಲಯ | 15.00 |
| 6 | ಡಾ॥ ರಾಜೇಂದ್ರ ಪ್ರಸಾದ್ | ಆರ್.ಕೆ. ಹುಡುಗಿ | 20.00 |
| 7. | ಭೂಪೇಶ್ ಗುಪ್ತ | ಆರ್.ಕೆ. ಹುಡುಗಿ | 20.00 |
| 8 | ಅನಂತಶಯನಂ ಅಯ್ಯಂಗಾರ್ | ಭಾಷಾಂತರ ನಿರ್ದೇಶನಾಲಯ | 15.00 |
| 9. | ರಾಜಕುಮಾರಿ ಅಮೃತ್‌ಕೌರ್ | ಕೆಹೆಚ್. ಸಾವಿತ್ರಿ | 20.00 |
| 10. | ಡಾ॥ ಚಿಂತಾಮನ್ ಡಿ. ದೇಶಮುಖ್ | ಬೇಳೂರು ಸುದರ್ಶನ್ | 20.00 |
| 11. | ಪನಂಪಿಲ್ಲಿ ಗೋವಿಂದ ಮೆನನ್ | ಭಾಷಾಂತರ ನಿರ್ದೇಶಕನಾಲಯ | 15.00 |
| 12. | ಜೈ ಸುಖಲಾಲ್ ಹಾಥಿ | ಎಸ್. ಸುಮಿತ್ರ | 15.00 |
| 13. | ಎಸ್.ಎಂ. ಜೋಷಿ | ಕೆಹೆಚ್. ಸಾವಿತ್ರಿ | 15.00 |
| 14. | ಡಾ॥ ಲಂಕಾ ಸುಂದರಂ | ಜವರಯ್ಯ | 15.00 |

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು-58.